ಸೋಮವಾರ, ಏಪ್ರಿಲ್ 27, 2026| ₹ 7.00
prajavani.net | prajavani | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಅಯೋಧ್ಯೆ: ಭಕ್ತರ ಸಂಖ್ಯೆ ಕಡಿಮೆ

ಅಯೋಧ್ಯೆಯಲ್ಲಿ ಶನಿವಾರ ಗರಿಷ್ಠ ತಾಪಮಾನ 42 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದು, ಇಲ್ಲಿನ ರಾಮಮಂದಿರಕ್ಕೆ ಬರುವ ಭಕ್ತರ ಸಂಖ್ಯೆ ಗಣನೀಯವಾಗಿ ಇಳಿಕೆಯಾಗಿದೆ

ಅಡುಗೆ ಮನೆಯಲ್ಲಿ ಯುದ್ಧ!

ಬೆಂಗಳೂರಿನಲ್ಲಿ ನಡೆದ ‘ಟಿಸಿಎಸ್ ವಿಶ್ವ 10 ಕಿ.ಮೀ ರನ್’ ಮ್ಯಾರಥಾನ್‌ನಲ್ಲಿ ವ್ಯಕ್ತಿಯೊಬ್ಬರು ಭಾಗವಹಿಸಿ ಎಲ್‌ಪಿಜಿ ಕೊರತೆ ಕುರಿತು ಭಾನುವಾರ ವಿಂಡಬನಾತ್ಮಕವಾಗಿ ಮಾಹಿತಿ ದಾಟಿಸಿದರು

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

ಸರ್ಕಾರಿ ಶಾಲಾ - ಕಾಲೇಜು ದಾಖಲಾತಿ ಆರಂಭ

ನಿಮ್ಮ ಮಕ್ಕಳನ್ನು ಯಾವುದೇ ತರಗತಿಗಾದರೂ ಸೇರಿಸಲು ಅವಕಾಶವಿದೆ

ಇದು ಸರ್ಕಾರದ
ಶಿಕ್ಷಣದ ಗ್ಯಾರಂಟಿ

ಕರ್ನಾಟಕ ಮಾದರಿ ಶಾಲಾ ಶಿಕ್ಷಣ!!

3 ವರ್ಷಗಳಲ್ಲಿ ನಮ್ಮದಾಗಲಿದೆ
ದೇಶದಲ್ಲೇ ಅತ್ಯುತ್ತಮ ಸರ್ಕಾರಿ ಶಾಲಾ ವ್ಯವಸ್ಥೆ!!!

ಸರ್ಕಾರ ತನ್ನ ಶಾಲೆಗಳಿಗೆ ಒದಗಿಸಿರುವ ಸೌಕರ್ಯಗಳು

ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಶೂ, ಬಿಸಿಯೂಟ, ಹಾಲು ಇವಿಷ್ಟೇ ಸರ್ಕಾರಿ ಶಾಲೆಗಳ ಸಾಧನೆಯಲ್ಲ! **ಈ ವರ್ಷ ಫಲಿತಾಂಶದಲ್ಲಿ ಭಾರೀ ಹೆಚ್ಚಳ!! ಸರ್ಕಾರಿ ಶಾಲಾ-ಕಾಲೇಜುಗಳಲ್ಲಿ ಇನ್ನೂ ದೊಡ್ಡ ಏರಿಕೆ!!!**

3 ವರ್ಷಗಳಲ್ಲಿ ಗುಣಮಟ್ಟ ಹೆಚ್ಚಿಸುವ 8 ಕ್ರಮಗಳು: ಇವೇ ಶಿಕ್ಷಣದ ಗ್ಯಾರಂಟಿಗಳು

ಗ್ಯಾರಂಟಿ 1
ಶಿಕ್ಷಕರ ಕೊರತೆ ಇನ್ನಿಲ್ಲ : 5ನೇ ತರಗತಿವರೆಗೆ ತರಗತಿಗೊಬ್ಬರು ಹಾಗೂ 6ನೇ ತರಗತಿಯಿಂದ ವಿಷಯಕ್ಕೊಬ್ಬರಂತೆ ಶಿಕ್ಷಕರ ನೇಮಕ.

ಗ್ಯಾರಂಟಿ 2
ಪೋಷಕರು ಬಯಸುವ ಮಾಧ್ಯಮ: ಎಲ್ಲಾ ಶಾಲೆಗಳಲ್ಲೂ ಕನ್ನಡದ ಜೊತೆಗೆ ಇಂಗ್ಲಿಷ್ ಮಾಧ್ಯಮ ಲಭ್ಯ; ಇಂಗ್ಲಿಷ್ ಬೋಧನೆಗಾಗಿ ಶಿಕ್ಷಕರಿಗೆ ವಿಶೇಷ ತರಬೇತಿ.

ಗ್ಯಾರಂಟಿ 3
ಉಚಿತ ಸಾರಿಗೆ ಸೌಲಭ್ಯ: ಕೆ.ಪಿ.ಎಸ್ ವಿದ್ಯಾರ್ಥಿಗಳಿಗೆ ಉಚಿತ ವಾಹನ ವ್ಯವಸ್ಥೆ.

ಗ್ಯಾರಂಟಿ 4
ಡಿಜಿಟಲ್ ಶಿಕ್ಷಣ: 1ನೇ ತರಗತಿಯಿಂದ ಕಂಪ್ಯೂಟರ್ ಹಾಗೂ 3ನೇ ತರಗತಿಯಿಂದಲೇ AI ಕಲಿಕೆ. 3 ವರ್ಷಗಳಲ್ಲಿ ಎಲ್ಲಾ ಕೆ.ಪಿ.ಎಸ್ ಶಾಲೆಗಳಿಗೆ ಕಂಪ್ಯೂಟರ್ ಶಿಕ್ಷಕರ ನೇಮಕ.

2025-2026ನೇ ಸಾಲಿನಲ್ಲಿ ಪರೀಕ್ಷಾ ಫಲಿತಾಂಶದಲ್ಲಿ
ಚಾರಿತ್ರಿಕ ಏರಿಕೆ

ಎಸ್.ಎಸ್.ಎಲ್.ಸಿ ಪರೀಕ್ಷೆ -1
94.10%

ದ್ವಿತೀಯ ಪಿಯುಸಿ ಪರೀಕ್ಷೆ -1
86.48%

ಗ್ಯಾರಂಟಿ 5
ಕಲೆ ಮತ್ತು ದೈಹಿಕ ಶಿಕ್ಷಣ: ಸಂಗೀತ, ಕಲೆ ಮತ್ತು ದೈಹಿಕ ಶಿಕ್ಷಣಕ್ಕೆ ಪ್ರತ್ಯೇಕ ಶಿಕ್ಷಕರ ನೇಮಕ; ಈ ವರ್ಷದಿಂದಲೇ ದೈಹಿಕ ಶಿಕ್ಷಕರ ಭರ್ತಿ ಆರಂಭ.

ಗ್ಯಾರಂಟಿ 6
ಶೈಕ್ಷಣಿಕೇತರ ಹೊರೆ ಮುಕ್ತಿ: ಬೋಧನೆಯ ಹೊರತಾದ ಕೆಲಸಗಳಿಗೆ ಪ್ರತ್ಯೇಕ ಸಿಬ್ಬಂದಿಗಳ ನೇಮಕ; ಶಿಕ್ಷಕರಿಗೆ ಬೋಧನೆಗೆ ಮಾತ್ರ ಆದ್ಯತೆ.

ಗ್ಯಾರಂಟಿ 7
ಮಗುವಿನ ಪ್ರಗತಿ ತಿಳಿಯಲು Lesson Based Assessment ಮತ್ತು ಪ್ರತಿ 2 ತಿಂಗಳಿಗೊಮ್ಮೆ ಕಡ್ಡಾಯ ಪೋಷಕರು-ಶಿಕ್ಷಕರ ಸಭೆ.

ಗ್ಯಾರಂಟಿ 8
ಕೌಶಲ್ಯ ಮತ್ತು ಸ್ಪರ್ಧಾತ್ಮಕ ತರಬೇತಿ: 6ನೇ ತರಗತಿಯಿಂದಲೇ ವೃತ್ತಿ ಕೌಶಲ್ಯ ಶಿಕ್ಷಣ ಮತ್ತು ಭವಿಷ್ಯದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿಶೇಷ ತರಬೇತಿ.

ಈ ಬದಲಾವಣೆಗಳನ್ನು ಯಾವಾಗಿನಿಂದ ಆರಂಭಿಸುತ್ತಿದ್ದೇವೆ?

ಕೆಲವು ಮಹತ್ವದ ಬದಲಾವಣೆಗಳು ಈ ವರ್ಷದಿಂದಲೇ ಜಾರಿಗೆ ಬರುತ್ತವೆ. 2-3 ವರ್ಷಗಳಲ್ಲಿ ಅದರ ಫಲಿತಾಂಶವನ್ನೂ ಕಾಣುತ್ತೀರಿ.

ಐದು ವರ್ಷಗಳಲ್ಲಿ ಇರುವ ಗುರಿ ಏನು?

ದೇಶದ ಅತ್ಯುತ್ತಮ ಸರ್ಕಾರಿ ಶಾಲಾ ವ್ಯವಸ್ಥೆ ನಮ್ಮದಾಗಲಿದೆ! **ಇದು ನಮ್ಮ ಭರವಸೆ!!**
50 ಲಕ್ಷಕ್ಕೂ ಹೆಚ್ಚು ಮಕ್ಕಳು ಸರ್ಕಾರಿ ಶಾಲೆಗಳಿಗೆ ಸೇರುತ್ತಾರೆ! **ಇದು ನಮ್ಮ ವಿಶ್ವಾಸ!**



ಪೋಷಕರ ಧ್ವನಿ

ನಿಮ್ಮೆಲ್ಲರ ಸಲಹೆಗಳಿಗೆ ಸ್ವಾಗತ: ಬೇಕು ಸರ್ವರ ಸಹಕಾರ

ಶಿಕ್ಷಣ ಕ್ರಾಂತಿಯ ಈ ‘ಕರ್ನಾಟಕ ಮಾದರಿ’ಯ ಕುರಿತಂತೆ ಶಿಕ್ಷಣಾಸಕ್ತರು, ಸಂಘ-ಸಂಸ್ಥೆಗಳು, ಪರಿಣಿತರ ಸಲಹೆಗಳನ್ನು ನಾವು ಸ್ವೀಕರಿಸುತ್ತೇವೆ. ಇಲ್ಲಿ ಕೊಡಲಾಗಿರುವ ಇ-ಮೇಲ್ ಮತ್ತು ವಾಟ್ಸಾಪ್ ನಂಬರಿಗೆ ನಿಮ್ಮ ಸಲಹೆಗಳನ್ನು ಕಳಿಸಿಕೊಡಬೇಕೆಂದು ಈ ಮೂಲಕ ಕೋರುತ್ತೇವೆ.

ಸಮಗ್ರ ಶಿಕ್ಷಣ ಕರ್ನಾಟಕ

ಉತ್ತಮ ಕಲಿಕೆ ಉಜ್ವಲ ಭವಿಷ್ಯ

ಹೊಸ ಕೆಪಿಎಸ್ ಪರಿಕಲ್ಪನೆ ಏನು ?
ಇಲ್ಲಿ ಸ್ಕ್ಯಾನ್ ಮಾಡಿ!

ನಿಮ್ಮ ಅಭಿಪ್ರಾಯ ಮತ್ತು ಸಲಹೆಗಳನ್ನು ನೀಡಲು...

ಇ-ಮೇಲ್: edkarnataka@gmail.com | ವಾಟ್ಸಾಪ್ ನಂಬರ್: 94489 99314

ShalaShikshanaKarnataka

ಎಲೆಕ್ಟ್ರಿಕ್ ವಾಹನಗಳಿಗೆ ರಹದಾರಿ ಕಡ್ಡಾಯ

ಖಾಸಗಿ ಬಳಕೆಗೆ ಬೇಕಿಲ್ಲ• ನೋಂದಾಯಿಸಿದ ಇವಿ ಆಟೊಗಳಿಗೂ ಬೇಕು

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಸಾರ್ವಜನಿಕ ಉದ್ದೇಶಕ್ಕೆ ಬಳಸುವ ಎಲ್ಲ ಎಲೆಕ್ಟ್ರಿಕ್ ವಾಹನಗಳಿಗೆ-(ಇವಿ) ಪರವಾನಗಿ ಪಡೆಯುವುದನ್ನು ಸಾರಿಗೆ ಇಲಾಖೆ ಕಡ್ಡಾಯಗೊಳಿಸಿದ್ದು, ಎಲೆಕ್ಟ್ರಿಕ್ ಆಟೊ ಸಹಿತ ಎಲ್ಲ ಇವಿಗಳಿಗೆ ಯಾವುದೇ ಶುಲ್ಕ ಪಾವತಿಸದೇ ರಹದಾರಿ ಪಡೆಯಲು ಅವಕಾಶ ನೀಡಲಾಗಿದೆ.

ಬ್ಯಾಟರಿ ಚಾಲಿತ, ಮಿಥೆನಾಲ್ ಮತ್ತು ಇಥೆನಾಲ್ ಇಂಧನ ಬಳಸಿ ಸಂಚರಿಸುವ ಸಾರಿಗೆ ವಾಹನಗಳಿಗೆ ರಹದಾರಿ (ಪರ್ಮಿಟ್) ಪಡೆಯಬೇಕಾಗಿಲ್ಲ ಎಂದು ಹಿಂದೆ ವಿನಾಯಿತಿ ನೀಡಲಾಗಿತ್ತು. ಕಾನೂನು, ಸುವ್ಯವಸ್ಥೆ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಈ ವಾಹನಗಳಿಗೂ ರಹದಾರಿ ಅಗತ್ಯ ಎಂದು ರಾಜ್ಯ ಸರ್ಕಾರ ನಿರ್ಧರಿಸಿತ್ತು. ಮೋಟಾರು ವಾಹನ ಕಾಯ್ದೆ 1988ರ ಕಲಂ 66(3) (ಎನ್) ಮತ್ತು ಅದೇ ಕಾಯ್ದೆಯ ಕಲಂ 96ರ ಅನ್ವಯಿಸಿ ವಿನಾಯಿತಿಯನ್ನು ಸಾರಿಗೆ ಇಲಾಖೆಯು ಹಿಂಪಡೆದಿದ್ದು, ಶುಲ್ಕರಹಿತವಾಗಿ ರಹದಾರಿ ಮಂಜೂರು ಮಾಡಲು ಆದೇಶ ನೀಡಲಾಗಿದೆ. ಈ ನಿಯಮ ಕಟ್ಟು ನಿಟ್ಟಾಗಿ ಜಾರಿಯಾಗಬೇಕಿದೆ ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿ (ಎಸ್.ಟಿ.ಯು ಮತ್ತು ಆಟೋರಿಕ್ಷಾ) ಕೆ.ಎಸ್. ಸೌಂದರ್ಯ ತಿಳಿಸಿದ್ದಾರೆ.

ಅಂಕಿ ಅಂಶಗಳು

1,856 ರಾಜ್ಯದಲ್ಲಿರುವ ನಾಲ್ಕು ಚಕ್ರದ ಇವಿಗಳು

11,383 ಮೂರು ಚಕ್ರದ ಗೂಡ್ಸ್ ಇವಿಗಳು

18,844 ಎಲೆಕ್ಟ್ರಿಕ್ ಆಟೊಗಳು

2,004 ಇವಿ ಬಸ್‌ಗಳು

ಎಲೆಕ್ಟ್ರಿಕ್ ಆಟೊ ರಿಕ್ಷಾ (ಸಾಂದರ್ಭಿಕ ಚಿತ್ರ)

ಎಲೆಕ್ಟ್ರಿಕ್ ವಾಹನಗಳು ಮುಕ್ತವಾಗಿ ಚಲಿಸಲು ಅವಕಾಶ ನೀಡಲಾಗಿತ್ತು. ಆದರೆ, ಕಾನೂನು ಪಾಲನೆ ಆಗಬೇಕಿದ್ದರೆ ಅದಕ್ಕೊಂದು ನಿಯಮ ಇರಬೇಕು. ಅವಘಡ, ಅಪಹರಣ, ಅಪಘಾತ ಸಹಿತ ಯಾವುದೇ ತೊಂದರೆಗಳು ಉಂಟಾದಾಗ ಕಾನೂನು ಕ್ರಮಗಳನ್ನು ಕೈಗೊಳ್ಳಲು, ಪರಿಹಾರ ನೀಡಲು ಕೆಲವೊಂದು ಸೂತ್ರಗಳಿಗೆ ವಾಹನಗಳು ಒಳಪಡಬೇಕಾಗುತ್ತದೆ. ಸಾರ್ವಜನಿಕ ಸೇವೆಯ ವಾಹನಗಳು ಸುರಕ್ಷತೆಗೆ ಹೆಚ್ಚು ಒತ್ತು ಕೊಡಬೇಕಾಗಿರುತ್ತದೆ ಎಂದು ಸಾರಿಗೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

‘ಸಾರ್ವಜನಿಕ ಉದ್ದೇಶಕ್ಕೆ ಬಳಸುವ ಇವಿಗಳಿಗೆ ಪರವಾನಗಿ ಬೇಕು ಎಂದು ಆದೇಶ ಹೊರಡಿಸಿದ್ದರೂ ಕೆಲವೊಂದು ಶೋರೂಂನವರು ರಹದಾರಿ ಬೇಕಿಲ್ಲ ಎಂದು ಇವಿ ಆಟೊ ಖರೀದಿದಾರರಿಗೆ ತಪ್ಪು ಮಾಹಿತಿ ನೀಡುತ್ತಿದ್ದಾರೆ. ಆಟೊಗಳು ರಹದಾರಿ ಪಡೆಯುವುದು ಕಡ್ಡಾಯ’ ಎಂದು ತಿಳಿಸಿದ್ದಾರೆ.

7.56 ಲಕ್ಷ ವಾಹನಗಳು: ರಾಜ್ಯದಲ್ಲಿ 7.56 ಲಕ್ಷ ಎಲೆಕ್ಟ್ರಿಕ್ ವಾಹನಗಳಿವೆ. ಅದರಲ್ಲಿ 6.28 ಲಕ್ಷ ದ್ವಿಚಕ್ರ ವಾಹನಗಳಾಗಿವೆ. 54,889 ಖಾಸಗಿ ಬಳಕೆಯ ಕಾರುಗಳಿವೆ. ಕೃಷಿ ಬಳಕೆಯ ಟ್ರ್ಯಾಕ್ಟರ್ ಸಹಿತ ಒಟ್ಟು 6.84 ಲಕ್ಷ ವಾಹನಗಳು ಖಾಸಗಿ ಬಳಕೆಯದಾಗಿದ್ದು, ಇವುಗಳಿಗೆ ರಹದಾರಿ ಅಗತ್ಯ ಇಲ್ಲ.

ಟ್ರಕ್, ಲಾರಿ, ಬಸ್, ನಾಲ್ಕು ಚಕ್ರದ ವಾಹನಗಳು, ಮೂರು ಚಕ್ರದ ಗೂಡ್ಸ್ ವಾಹನಗಳು, ಮೋಟಾರು ಕ್ಯಾಬ್, ಮೋಟಾರು ಟ್ಯಾಕ್ಸಿ, ಲಕ್ಸುರಿ ಕ್ಯಾಬ್, ಆಟೊಗಳು, ಇತರ ವಾಹನಗಳು ಸೇರಿ 72,631 ವಾಹನಗಳು ಸಾರಿಗೆಗೆ ಬಳಕೆಯಾಗುತ್ತಿವೆ. ಈ ವಾಹನಗಳಿಗೆ ರಹದಾರಿ ಕಡ್ಡಾಯ ಮಾಡಲಾಗಿದೆ. ಚಾಲನಾ ಪರವಾನಗಿ (ಡಿಎಲ್) ಆಧಾರದಲ್ಲಿ ಪರ್ಮಿಟ್ ನೀಡಲಾಗುವುದು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

> **ಈಗಾಗಲೇ ನೋಂದಣಿಯಾಗಿರುವ ಮತ್ತು ಹೊಸದಾಗಿ ನೋಂದಣಿಯಾಗುವ ಆಟೊ ಸಹಿತ ಎಲ್ಲ ಇವಿ ಸಾರಿಗೆ ವಾಹನಗಳು ರಹದಾರಿ ಪಡೆಯುವುದು ಕಡ್ಡಾಯವಾಗಿದೆ**
> **ಬಿ.ಪಿ. ಉಮಾಶಂಕರ್,** ಸಾರಿಗೆ ಮತ್ತು ರಸ್ತೆ ಸುರಕ್ಷತೆ ಹೆಚ್ಚುವರಿ ಆಯುಕ್ತ (ಆಡಳಿತ)

> **ಒಟ್ಟು ಎಲೆಕ್ಟ್ರಿಕ್ ಆಟೊಗಳಲ್ಲಿ ಅರ್ಧಕ್ಕಿಂತ ಹೆಚ್ಚಿಗೆ ಬೆಂಗಳೂರು ನಗರದಲ್ಲೇ ಇವೆ. ಈ ಆಟೊಗಳು ಕೂಡಲೇ ರಹದಾರಿ ಪಡೆದುಕೊಳ್ಳಬೇಕು**
> **ಕೆ.ಎಸ್. ಸೌಂದರ್ಯ,** ಪ್ರಾದೇಶಿಕ ಸಾರಿಗೆ ಅಧಿಕಾರಿ (ಎಸ್.ಟಿ.ಯು ಮತ್ತು ಆಟೋರಿಕ್ಷಾ)

ಕೇಂದ್ರ– ಲಡಾಖ್: ಮೇ 22ಕ್ಕೆ ಮಾತುಕತೆ ಪುನರಾರಂಭ

• ಜುಲ್ಫಿಕರ್ ಮಜೀದ್

ಶ್ರೀನಗರ: ಕೇಂದ್ರ ಸರ್ಕಾರ ಮತ್ತು ಲಡಾಖ್‌ನ ನಾಗರಿಕ ಸಮಾಜ ಗುಂಪುಗಳ ನಡುವೆ ಮೇ 22ರಂದು ಮಾತುಕತೆ ಪುನರಾರಂಭ ಆಗಲಿದೆ ಎಂದು ಲೆಫ್ಟಿನೆಂಟ್ ಗವರ್ನರ್ ವಿನಯ್ ಕುಮಾರ್ ಸಕ್ಸೇನಾ ಭಾನುವಾರ ಘೋಷಿಸಿದರು.

ಕೇಂದ್ರಾಡಳಿತ ಪ್ರದೇಶದ ರಾಜಕೀಯ ಭವಿಷ್ಯದ ಕುರಿತು ತಿಂಗಳುಗಳ ಕಾಲ ಸ್ಥಗಿತಗೊಂಡಿದ್ದ ಸಂವಾದ ಪ್ರಕ್ರಿಯೆಗೆ ಈ ಮೂಲಕ ಮತ್ತೆ ಚಾಲನೆ ದೊರೆಯಲಿದೆ. ಫೆಬ್ರುವರಿ ಆರಂಭದಲ್ಲಿ ನಡೆದಿದ್ದ ಮಾತುಕತೆ ವಿಫಲವಾಗಿತ್ತು. ಆ ನಂತರ ಯಾವುದೇ ಮಾತುಕತೆಗಳು ನಡೆದಿರಲಿಲ್ಲ.

ಲಡಾಖ್‌ಗೆ ರಾಜ್ಯ ಸ್ಥಾನಮಾನ ನೀಡುವಂತೆ ಒತ್ತಾಯಿಸುವ ಆಂದೋಲನವನ್ನು ಮುನ್ನಡೆಸು-ತ್ತಿರುವ ಕಾರ್ಗಿಲ್ ಡೆಮಾಕ್ರಟಿಕ್ ಅಲಯನ್ಸ್ (ಕೆಡಿಎ) ಮತ್ತು ಲೇಹ್ ಅಪೆಕ್ಸ್ ನಿಯೋಗದ (ಎಲ್‌ಎಬಿ) ಜತೆ ಇದೀಗ ಗೃಹ ಸಚಿವಾಲಯ ಮಟ್ಟದಲ್ಲಿ ಮಾತುಕತೆ ನಡೆಯಲಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಎರಡು ದಿನಗಳ ಲಡಾಖ್ ಭೇಟಿಗೂ ಕೆಲ ದಿನ ಮುನ್ನ ಈ ಘೋಷಣೆ ಹೊರಬಿದ್ದಿದೆ.

ಲಡಾಖ್‌ಗೆ ರಾಜ್ಯದ ಸ್ಥಾನಮಾನ, 6ನೇ ಶೆಡ್ಯೂಲ್ ಅಡಿಯಲ್ಲಿ ಸಾಂವಿಧಾನಿಕ ರಕ್ಷಣೆ, ಪ್ರತ್ಯೇಕ ಲೋಕಸೇವಾ ಆಯೋಗ, ಲೇಹ್ ಮತ್ತು ಕಾರ್ಗಿಲ್‌ಗೆ ಪ್ರತ್ಯೇಕ ಸಂಸದೀಯ ಪ್ರಾತಿನಿಧ್ಯ ಕಲ್ಪಿಸಬೇಕು ಎಂಬುದು ಎಲ್‌ಎಬಿ ಮತ್ತು ಕೆಡಿಎ ಪ್ರಮುಖ ಬೇಡಿಕೆಗಳಾಗಿವೆ.

ಲಡಾಖ್‌ನ ಜನರ ಪರಿಸರ, ಭೂ ಹಕ್ಕುಗಳು, ಉದ್ಯೋಗಾವಕಾಶ ಮತ್ತು ಸಾಂಸ್ಕೃತಿಕ ಗುರುತನ್ನು ರಕ್ಷಿಸಲು ಈ ಕ್ರಮಗಳು ಅಗತ್ಯ ಎಂಬುದು ಕೆಡಿಎ ಮತ್ತು ಎಲ್‌ಎಬಿ ಪ್ರತಿನಿಧಿಗಳ ಪ್ರತಿಪಾದನೆಯಾಗಿದೆ.

ಚೀನಾ ಮತ್ತು ಪಾಕಿಸ್ತಾನದ ಜತೆ ಗಡಿ ಹಂಚಿಕೊಂಡಿರುವ ಲಡಾಖ್‌ನಲ್ಲಿ ಸ್ಥಳೀಯ ಆಕಾಂಕ್ಷೆಗಳಿಗೆ ಒತ್ತು ನೀಡುವ ಉದ್ದೇಶವನ್ನು ಕೇಂದ್ರ ಸರ್ಕಾರ ಹೊಂದಿದ್ದು, ಈ ನಿಟ್ಟನಲ್ಲಿ ಮಾತುಕತೆಗೆ ಮುಂದಾಗಿರುವುದು ಮಹತ್ವದ ಬೆಳವಣಿಗೆಯಾಗಿದೆ.

ಮಹಿಳಾ ಮೀಸಲಾತಿ ವಿಶೇಷ ಅಧಿವೇಶನ

ನವದೆಹಲಿ: ಶಾಸನಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡುವ ವಿಷಯದ ಕುರಿತು ಚರ್ಚಿಸಲು ಬಿಜೆಪಿ ಆಡಳಿತವಿರುವ ಮಧ್ಯ ಪ್ರದೇಶ, ಹರಿಯಾಣ, ದೆಹಲಿ ಮತ್ತು ಒಡಿಶಾ ಸರ್ಕಾರವು ವಿಶೇಷ ಅಧಿವೇಶನ ಕರೆಯಲು ನಿರ್ಧರಿಸಿವೆ. ಎನ್‌ಡಿಎ ಸರ್ಕಾರ ಇರುವ ಆಂಧ್ರ ಪ್ರದೇಶದಲ್ಲಿಯೂ ವಿಶೇಷ ಅಧಿವೇಶನ ಕರೆಯಲಾಗಿದೆ.

ಕ್ಷೇತ್ರ ಮರುವಿಂಗಡಣೆಯನ್ನು ಜೋಡಿಸಿ ಮಹಿಳೆಯರಿಗೆ ಮೀಸಲಾತಿ ನೀಡುವ ಮಸೂದೆಯನ್ನು ಲೋಕಸಭೆಯಲ್ಲಿ ಕೇಂದ್ರ ಸರ್ಕಾರ ಮಂಡಿಸಿತ್ತು. ವಿರೋಧ ಪಕ್ಷಗಳ ವಿರೋಧದ ಕಾರಣ ಈ ಮಸೂದೆಗೆ ಸೋಲಾಗಿತ್ತು. ಈಗ ಬಿಜೆಪಿಯ ತನ್ನ ಆಡಳಿತವಿರುವ ರಾಜ್ಯಗಳಲ್ಲಿ ವಿಶೇಷ ಅಧಿವೇಶನ ಕರೆಯಲಾಗಿದೆ.

ಮಧ್ಯ ಪ್ರದೇಶ ಮತ್ತು ಹರಿಯಾಣದಲ್ಲಿ ಏಪ್ರಿಲ್ 27, ದೆಹಲಿಯಲ್ಲಿ ಏಪ್ರಿಲ್ 28, ಒಡಿಶಾದಲ್ಲಿ ಏಪ್ರಿಲ್ 30ರಂದು ಅಧಿವೇಶನ ಕರೆಯಲಾಗಿದೆ. ಮೇ ತಿಂಗಳಲ್ಲಿ ಆಂಧ್ರದಲ್ಲಿ ಅಧಿವೇಶನ ನಡೆಯಲಿದೆ ಎನ್ನಲಾಗಿದೆ.

ಇನ್ನೊಂದೆಡೆ, ಈ ಕೂಡಲೇ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡಿ ಎಂದು ಕಾಂಗ್ರೆಸ್ ಒತ್ತಾಯಿಸಿದ್ದು, ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ 10 ಲಕ್ಷ ಪತ್ರ ಬರೆಯಲು ಮಹಿಳಾ ಕಾಂಗ್ರೆಸ್ ನಿರ್ಧರಿಸಿದೆ.

ಸಚಿವ ಸುಧಾಕರ್ ಆರೋಗ್ಯ ಸ್ಥಿತಿ ಗಂಭೀರ: ಆಸ್ಪತ್ರೆಗೆ ಡಿಕೆಶಿ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯೋಜನಾ ಮತ್ತು ಸಾಂಖ್ಯಿಕ ಸಚಿವ ಡಿ.ಸುಧಾಕರ್ ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದ್ದು, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಆಸ್ಪತ್ರೆಗೆ ಭಾನುವಾರ ಭೇಟಿ ನೀಡಿ ವೈದ್ಯರ ಜೊತೆ ಚರ್ಚೆ ನಡೆಸಿದರು.

ಡಿ.ಸುಧಾಕರ್

ಮೊಣಕಾಲು ಶಸ್ತ್ರಚಿಕಿತ್ಸೆಗಾಗಿ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದ ಸುಧಾಕರ್ ಅವರಿಗೆ, ಶಸ್ತ್ರಚಿಕಿತ್ಸೆಯ ನಂತರ ಶ್ವಾಸಕೋಶದ ಸೋಂಕು ಉಲ್ಬಣಗೊಂಡಿತ್ತು. ಹೀಗಾಗಿ, ಹೆಚ್ಚಿನ ಚಿಕಿತ್ಸೆಗಾಗಿ ಅವರನ್ನು ಎಲೆಕ್ಟ್ರಾನಿಕ್ ಸಿಟಿಯ ಕೃಷ್ಣ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ (ಕಿಮ್ಸ್ ಆಸ್ಪತ್ರೆ) ಸ್ಥಳಾಂತರಿಸಲಾಗಿದ್ದು, ಪ್ರಸ್ತುತ ಐಸಿಯುನಲ್ಲಿ ವೆಂಟಿಲೇಟರ್ ಬೆಂಬಲದೊಂದಿಗೆ ಚಿಕಿತ್ಸೆ ನೀಡಲಾಗುತ್ತಿದೆ.

ಸುಧಾಕರ್ ಅವರ ಚಿಕಿತ್ಸೆ ಮತ್ತು ಪ್ರಸ್ತುತ ಆರೋಗ್ಯ ಸ್ಥಿತಿಗತಿಯ ಕುರಿತು ವೈದ್ಯರಿಂದ ಮಾಹಿತಿ ಪಡೆದುಕೊಂಡ ಶಿವಕುಮಾರ್, ಸುಧಾಕರ್ ಅವರ ಕುಟುಂಬ ಸದಸ್ಯರೊಂದಿಗೂ ಚರ್ಚೆ ನಡೆಸಿದರು. ಈ ವೇಳೆ ಶಾಸಕ ರಘುಮೂರ್ತಿ ಜೊತೆಗಿದ್ದರು.

‘ಹೆಬ್ಬೆಟ್ಟು ಒತ್ತಿಸಿಕೊಳ್ಳಲು ಸತ್ಯ ಮುಚ್ಚಿಟ್ಟಿದ್ದಾರೆ’

ಚಿತ್ರದುರ್ಗ: ‘ಸಚಿವ ಡಿ.ಸುಧಾಕರ್ ಅವರ ಆರೋಗ್ಯ ವಿಚಾರದಲ್ಲಿ ಕೆಲ ವಿಷಯವನ್ನು ಮುಚ್ಚಿಟ್ಟಿದ್ದಾರೆ. ಎಷ್ಟು ನೋವು ಅನುಭವಿಸುತ್ತಿದ್ದಾನೋ ಆತನಿಗೆ ಗೊತ್ತು. ಹೆಬ್ಬೆಟ್ಟು ಒತ್ತಿಸಿಕೊಳ್ಳಲು ಸತ್ಯವನ್ನು ಮುಚ್ಚಿಡಲಾಗುತ್ತಿದೆ’ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಇಲ್ಲಿ ಆರೋಪಿಸಿದರು.

‘ಕೆಲ ವ್ಯಕ್ತಿಗಳು ಇಂಥ ಸಮಯ ದುರ್ಬಳಕೆ ಮಾಡಿಕೊಳ್ಳುವಲ್ಲಿ ಪರಿಣತರು. ಸತ್ಯವನ್ನೇ ಮುಂದೂಡುತ್ತಿದ್ದಾರೆ. ಯಾಕೆ ಕೆಲ ವಿಷಯ ಮುಚ್ಚಿಟ್ಟಿದ್ದಾರೆ ಎಂಬುದು ಬಹಿರಂಗವಾಗಬೇಕು. ನಾವು ಇತಿಹಾಸ ನೋಡಿದ್ದೇವೆ. ಇಂಥ ವಿಚಾರಗಳನ್ನು ನಾನು ಚರ್ಚೆ ಮಾಡುವುದಿಲ್ಲ’ ಎಂದು ಭಾನುವಾರ ಮಾಧ್ಯಮದವರಿಗೆ ತಿಳಿಸಿದರು.

‘ಇಂತಹ ಸಮಯದಲ್ಲಿ ನಾನು ಜೆಡಿಎಸ್ ಸ್ಥಾನದ ಬಗ್ಗೆ ಚರ್ಚೆ ಮಾಡುವುದಿಲ್ಲ. ಹಿರಿಯೂರು ಅಥವಾ ಬೇರೆ ಕ್ಷೇತ್ರದ ಬಗ್ಗೆ ಮಾತನಾಡುವುದಿಲ್ಲ. ಒಳಗೆ ಏನು ನಡೆಯುತ್ತಿದೆ ಎಂಬುದನ್ನು ನೋಡಬೇಕು’ ಎಂದರು.

ಕೇಕ್ ಹಚ್ಚಿದ್ದಕ್ಕೆ ಮೂವರ ಕೊಲೆ

ಪ್ರಜಾವಾಣಿ ವಾರ್ತೆ

ಲಖನೌ: ಹುಟ್ಟುಹಬ್ಬ ಆಚರಣೆ ವೇಳೆ ಮುಖಕ್ಕೆ ಕೇಕ್ ಬಳಿಯುವ ವಿಚಾರವಾಗಿ ಶುರುವಾದ ವಾಗ್ವಾದ ತೀವ್ರಗೊಂಡು, ಹುಟ್ಟುಹಬ್ಬ ಆಚರಿಸಿಕೊಂಡ ಯುವಕನು ಮೂವರು ಸ್ನೇಹಿತರನ್ನು ಗುಂಡಿಕ್ಕಿ ಕೊಂದ ಘಟನೆ ಉತ್ತರ ಪ್ರದೇಶದ ಬುಲಂದ್‌ಶಹರ್ ಜಿಲ್ಲೆಯಲ್ಲಿ ನಡೆದಿದೆ. ಆರೋಪಿ ಜೀತು ಸೈನಿ ತನ್ನ ಹುಟ್ಟುಹಬ್ಬದ ದಿನ ಜಿಮ್‌ವೊಂದರಲ್ಲಿ ಶನಿವಾರ ರಾತ್ರಿ ಆಯೋಜಿಸಿದ್ದ ಔತಣಕೂಟದ ವೇಳೆ ಈ ಘಟನೆ ನಡೆದಿದೆ.

ಮೃತ ವ್ಯಕ್ತಿಗಳಲ್ಲಿ ಒಬ್ಬರು ಸ್ಥಳೀಯ ಬಿಜೆಪಿ ಮುಖಂಡರ ಸಹೋದರನಾಗಿದ್ದು, ಇನ್ನಿಬ್ಬರು ಅವರ ಸೋದರಳಿಯ ಆಗಿದ್ದರು. ‘ಘಟನೆ ಸಂಬಂಧ ಕೆಲವರನ್ನು ವಶಕ್ಕೆ ಪಡೆಯಲಾಗಿದ್ದು, ಇತರಿಗಾಗಿ ಶೋಧ ನಡೆಸಲಾಗುತ್ತಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಡೆಲಿವರಿ ಬಾಯ್ ಕೊಲೆ: (ನವದೆಹಲಿ ವರದಿ): ಕ್ಷುಲ್ಲಕ ವಿಚಾರಕ್ಕೆ ವಾಗ್ವಾದ ನಡೆದು, ಕುಪಿತಗೊಂಡ ದೆಹಲಿ ಪೊಲೀಸ್ ವಿಶೇಷ ಘಟಕದ ಹೆಡ್‌ಕಾನ್‌ಸ್ಟೆಬಲ್ ಡೆಲಿವರಿ ಬಾಯ್ ಒಬ್ಬರನ್ನು ಗುಂಡಿಕ್ಕಿ ಸಾಯಿಸಿದ್ದಾರೆ. ಪಾಂಡವ್ ಕುಮಾರ್ ಮೃತಪಟ್ಟವರು. ಆರೋಪಿ ನೀರಜ್ ಅವರನ್ನು ಬಂಧಿಸಲಾಗಿದೆ.

ಬಂಗಾಳ: ಪೌರತ್ವ ರದ್ದತಿ ಭಯ– ದಾಖಲೆ ಮತದಾನ

ಒಂದು ಮತಕ್ಕಾಗಿ ₹4 ಸಾವಿರದಿಂದ ₹5 ಸಾವಿರದವರೆಗೆ ಖರ್ಚು ಮಾಡಿದ ವಲಸೆ ಕಾರ್ಮಿಕರು

• ಶೆಮಿನ್ ಜಾಯ್

ನವದೆಹಲಿ: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಂತರ ಬಂಗಾಳದಲ್ಲಿ ನಡೆಯುತ್ತಿರುವ ಮೊದಲ ವಿಧಾನಸಭಾ ಚುನಾವಣೆಯ ಕೊನೆಯ ಮತ ಬುಧವಾರ ಸಂಜೆ ದಾಖಲಾಗಲಿದೆ. ಇದರೊಂದಿಗೆ ಈ ವರ್ಷದ ಚುನಾವಣೆಯ ಚರ್ಚಾ ವಿಷಯವಾಗಿದ್ದ ‘ಎಸ್‌ಐಆರ್’ಗೆ ತಾತ್ಕಾಲಿಕ ಬಿಡುವು ಸಿಗಲಿದೆ.

ಬಂಗಾಳದ ಮತದಾರರಿಗೆ ಒಂದೆಡೆ ‘ಎಸ್‌ಐಆರ್’ ಆತಂಕ. ಇನ್ನೊಂದೆಡೆ, ಈ ಬಾರಿ ಚುನಾವಣೆಯಲ್ಲಿ ಮತ ಚಲಾಯಿಸದಿದ್ದರೆ ಪೌರತ್ವವೇ ರದ್ದಾಗುತ್ತದೆ ಎನ್ನುವ ಭಯ. ಈ ಭಯವು ಬಂಗಾಳದ ಜನರನ್ನು ದಾಖಲೆ ಪ್ರಮಾಣದಲ್ಲಿ ಮತಗಟ್ಟೆಗೆ ತಂದು ನಿಲ್ಲಿಸಿದೆ. ಮೊದಲ ಹಂತದಲ್ಲಿ ದಾಖಲೆ ಪ್ರಮಾಣದಲ್ಲಿ ಮತ ಚಲಾವಣೆಗೊಂಡಿರುವುದಕ್ಕೆ ಪೌರತ್ವ ರದ್ದಾಗುವ ಭಯವೇ ಕಾರಣ ಎಂಬ ವಿಶ್ಲೇಷಣೆಗಳು ನಡೆಯುತ್ತಿವೆ.

ಗುರುಗ್ರಾಮ, ದೆಹಲಿ, ಫರೀದಾಬಾದ್, ನೋಯ್ಡಾ, ಉತ್ತರ ಪ್ರದೇಶದಲ್ಲಿ ಭಾರಿ ಸಂಖ್ಯೆಯಲ್ಲಿ ಬಂಗಾಳಿ ವಲಸಿಗ ಕಾರ್ಮಿಕರು ನೆಲಸಿದ್ದಾರೆ. ಇವರಲ್ಲಿ ವರ್ಷಗಳಿಂದ ಸ್ವಗ್ರಾಮಕ್ಕೆ ಬಾರದೇ ಇದ್ದವರೂ ಈ ಬಾರಿ ಮತ ಚಲಾಯಿಸಲು ಬಂದಿದ್ದಾರೆ. ಕೆಲವರು ತಮ್ಮ ಹಕ್ಕು ಚಲಾಯಿಸಿ, ಪೌರತ್ವ ಉಳಿಸಿಕೊಳ್ಳಲು ₹4 ಸಾವಿರದಿಂದ ₹5 ಸಾವಿರದಷ್ಟು ಖರ್ಚು ಮಾಡಿದ್ದಾರೆ.

ನೊಯ್ಡಾದಲ್ಲಿ ಮನೆಕೆಲಸ ಮಾಡಿಕೊಂಡಿರುವ ಮಹಿಳೆಯೊಬ್ಬರು ಬಂಗಾಳಕ್ಕೆ ಬಂದು ಮತ ಚಲಾಯಿಸಿ ವಾಪಸ್ ನೊಯ್ಡಾಕ್ಕೆ ಹೋಗಲು ₹4 ಸಾವಿರ ಖರ್ಚು ಮಾಡಿದ್ದಾರೆ. ರೈಲಿನಲ್ಲಿ ಸಾಮಾನ್ಯ ದರ್ಜೆಯ ಸ್ಲೀಪರ್ ಟಿಕೆಟ್ ಸಿಗದ ಕಾರಣ ಅವರು ಅನಿವಾರ್ಯವಾಗಿ ಎಸಿ ಕೋಚ್‌ನಲ್ಲಿ ಹೆಚ್ಚುವರಿ ದರ ಪಾವತಿಸಿ ಪ್ರಯಾಣಿಸಿದ್ದಾರೆ. ಈ ಮಹಿಳೆ ತಮ್ಮ ತಿಂಗಳ ದುಡಿಮೆಯ ಅರ್ಧದಷ್ಟನ್ನು ಒಂದು ಮತಕ್ಕಾಗಿ ಖರ್ಚು ಮಾಡಿದ್ದಾರೆ. ಇವರು ಮಾತ್ರವಲ್ಲ, ಪಶ್ಚಿಮ ಬಂಗಾಳದ ಸಾವಿರಾರು ವಲಸೆ ಕಾರ್ಮಿಕರು ಈ ಬಾರಿ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಒಂದು ಮತಕ್ಕಾಗಿ ಸಾವಿರಾರು ರೂಪಾಯಿ ಖರ್ಚು ಮಾಡಿದ್ದಾರೆ.

ಪಟ್ಟಿಯಿಂದ ಕೈಬಿಟ್ಟವರಲ್ಲಿ ಶೇ 34ರಷ್ಟು ಮುಸ್ಲಿಮರು

ಪಶ್ಚಿಮ ಬಂಗಾಳ ಮತ್ತು ಅಸ್ಸಾಂನಲ್ಲಿ ‘ನುಸುಳುಕೋರರ’ ಹೆಸರಿನಲ್ಲಿ ಅಲ್ಪಸಂಖ್ಯಾತರನ್ನು ಗುರಿಯಾಗಿಸಿ ಬಿಜೆಪಿ ಕಾರ್ಯಾಚರಣೆ ನಡೆಸುತ್ತಿದೆ ಎಂಬ ಆರೋಪ ಕೇಳಿಬರುತ್ತಿದೆ. ಇದನ್ನು ಪುಷ್ಟೀಕರಿಸುವಂತೆ ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿಯಿಂದ ಕೈಬಿಟ್ಟವರಲ್ಲಿ ಶೇ 34ರಷ್ಟು ಜನರು ಮುಸ್ಲಿಮರು ಎನ್ನುತ್ತದೆ ಚುನಾವಣಾ ಆಯೋಗದ ಅಂಕಿ ಅಂಶಗಳು.



‘ಎಸ್‌ಐಆರ್ ನಂತರ ಬಂಗಾಳದ ಸುಮಾರು 27 ಲಕ್ಷದಷ್ಟು ಮತದಾರರ ಹೆಸರುಗಳನ್ನು ಚುನಾವಣಾ ಆಯೋಗ ಪಟ್ಟಿಯಿಂದ ಹೊರಗಿಟ್ಟಿದೆ. ಇವರಲ್ಲಿ ಹೆಚ್ಚಿನವರು ಮೇಲ್ಮನವಿ ನ್ಯಾಯ ಮಂಡಳಿಗಳ ಮೊರೆಹೋಗಿದ್ದಾರೆ. ಆದರೆ, ನ್ಯಾಯಮಂಡಳಿಗಳಲ್ಲಿ ಇದುವರೆಗೆ ಸುಮಾರು 650 ಪ್ರಕರಣಗಳ ಪರಿಶೀಲನೆ ನಡೆದಿದ್ದು, ಇದರಲ್ಲಿ 139 ಪ್ರಕರಣಗಳು ಮಾತ್ರ ಇತ್ಯರ್ಥಗೊಂಡಿವೆ. ಬಾಕಿ ಉಳಿದಿರುವ ಪ್ರಕರಣಗಳು ಎರಡನೆಯ ಹಂತದ ಮತದಾನದ (ಏಪ್ರಿಲ್ 29) ಪೂರ್ವದಲ್ಲಿ ಇತ್ಯರ್ಥಗೊಳ್ಳುವುದು ಅನುಮಾನ. ಹಾಗಾಗಿ ನ್ಯಾಯಮಂಡಳಿಗಳಲ್ಲಿ ಇತ್ಯರ್ಥಕ್ಕೆ ಬಾಕಿ ಇರುವ ಎಲ್ಲರಿಗೂ ಮತದಾನಕ್ಕೆ ಅವಕಾಶ ಕಲ್ಪಿಸುವಂತೆ ಸುಪ್ರೀಂ ಕೋರ್ಟ್ ಇತ್ತೀಚೆಗೆ ಸೂಚನೆ ನೀಡಿದೆ.

ಒಂದೆಡೆ ‘ಎಸ್‌ಐಆರ್’ ಗದ್ದಲ. ಇನ್ನೊಂದೆಡೆ, ರಾಜಕೀಯ ಮುಖಂಡರಿಗೆ ನೋಟಿಸ್ ಜಾರಿಗೊಳಿಸುವುದರ ಮೂಲಕ ಚುನಾವಣಾ ಆಯೋಗ ಸುದ್ದಿಯಲ್ಲಿದೆ. ಕಾಂಗ್ರೆಸ್ ಮುಖಂಡ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನಿ ಮೋದಿ ಅವರನ್ನು ‘ಭಯೋತ್ಪಾದಕ’ ಎಂದು ಕರೆದ ಕಾರಣ ಆಯೋಗ ನೋಟಿಸ್ ಜಾರಿಗೊಳಿಸಿದೆ.

ಇತ್ತ ಮೋದಿ ಅವರು ದೇಶವನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ಸಂಸದರನ್ನು ದೂಷಿಸಿದ ವಿಚಾರವಾಗಿ ಆಯೋಗ ಯಾವುದೇ ಕ್ರಮ ಕೈಗೊಂಡಿಲ್ಲ ಎಂಬ ವಿರೋಧ ಪಕ್ಷದ ಟೀಕೆಯನ್ನೂ ಎದುರಿಸುತ್ತಿದೆ. ಈ ವಿಷಯ ಇಟ್ಟುಕೊಂಡು ಮುಖ್ಯ ಚುನಾವಣಾ ಅಧಿಕಾರಿ ಜ್ಞಾನೇಶ್ ಕುಮಾರ್ ಅವರ ಪದಚ್ಯುತಿಗೆ ವಿರೋಧ ಪಕ್ಷ ನೋಟಿಸ್ ಸಲ್ಲಿಸಿದೆ.

ರಾಹುಲ್ ವರಸೆ: ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಬಿಜೆಪಿ ವಿರುದ್ಧ ಮಾತ್ರ ಚುನಾವಣಾ ಸಮರ ಸಾರಿಲ್ಲ, ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್‌ನ ಮಮತಾ ಬ್ಯಾನರ್ಜಿ ಮತ್ತು ಕೇರಳದಲ್ಲಿ ಸಿಪಿಎಂನ ಪಿಣರಾಯಿ ವಿಜಯನ್ ಕೂಡ ಅವರ ವಾಗ್ದಾಳಿಗೆ ತುತ್ತಾಗಿದ್ದಾರೆ. ತಮಿಳುನಾಡಿನಲ್ಲಿ ಡಿಎಂಕೆಯ ಸ್ಟಾಲಿನ್ ಜತೆಗೂ ಅವರು ವೇದಿಕೆ ಹಂಚಿಕೊಂಡಿಲ್ಲ.

prajavani.net prajavani | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಮೊಹ್ಸಿನ್‌ಗೆ 'ಪಂಚಗೊಂಚಲು'

ಲಖನೌ ಸೂಪರ್ ಜೈಂಟ್ಸ್ ತಂಡದ ಬೌಲರ್ ಮೊಹ್ಸಿನ್ ಖಾನ್, ಭಾನುವಾರ ನಡೆದ ಐಪಿಎಲ್ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ಎದುರು ಐದು ವಿಕೆಟ್ ಗಳಿಸಿದರು

ಅನರ್ಹತೆ ಕೋರಿ ಎಎಪಿ ಮನವಿ 9 | 'ಅಹಿಂದಕ್ಕೆ ನಮ್ಮವರಿಂದಲೇ ತೊಡಕು' 4

ಗುಂಡಿನ ದಾಳಿ: ಟ್ರಂಪ್ ಪಾರು

ಶಸ್ತ್ರಸಜ್ಜಿತ ಬಂದೂಕುಧಾರಿಯ ಬಂಧನ ಆರೋಪಿ ಬಳಿ ಹಲವು ಶಸ್ತ್ರಾಸ್ತ್ರ ವಶ

ವಾಷಿಂಗ್ಟನ್ (ಪಿಟಿಐ/ಎಎಫ್‌ಪಿ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾಗವಹಿಸಿದ್ದ ಶ್ವೇತಭವನದ ವರದಿಗಾರರ ವಾರ್ಷಿಕ ಭೋಜನ ಕೂಟದ ವೇಳೆ ಹೋಟೆಲ್ ಹಿಲ್ಟನ್‌ನ 'ಬಾಲ್ ರೂಂ' ಹೊರಗಡೆ ವಿವಿಧ ಶಸ್ತ್ರಾಸ್ತ್ರ ಹೊಂದಿದ್ದ ಬಂದೂಕುಧಾರಿಯೊಬ್ಬ ಗುಂಡುಗಳನ್ನು ಹಾರಿಸಿದ ಘಟನೆ ನಡೆದಿದೆ.

ಕೂಡಲೇ ಸ್ಥಳದಿಂದ ಟ್ರಂಪ್ ಮತ್ತು ಇತರ ಹಿರಿಯ ಅಧಿಕಾರಿಗಳನ್ನು ಸುರಕ್ಷಿತವಾಗಿ ಕರೆದೊಯ್ಯಲಾಯಿತು. ಘಟನೆಯಿಂದ ಕೆಲ ಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಬಂದೂಕುಧಾರಿಯನ್ನು ಹಿಡಿಯುವಲ್ಲಿ ಸೀಕ್ರೆಟ್ ಸರ್ವೀಸಸ್ ಮತ್ತು ಭದ್ರತಾ ಅಧಿಕಾರಿಗಳು ಯಶಸ್ವಿಯಾಗಿದ್ದಾರೆ. ಬಂಧಿತನನ್ನು ಕ್ಯಾಲಿಫೋರ್ನಿಯಾದ 31 ವರ್ಷ ವಯಸ್ಸಿನ ಕೋಲ್ ಥಾಮಸ್ ಅಲೆನ್ ಎಂದು ಗುರುತಿಸಲಾಗಿದೆ. 'ಆತ ನನ್ನ ಹತ್ಯೆ ಮಾಡುವ ಉದ್ದೇಶ ಹೊಂದಿದ್ದ ಎನಿಸುತ್ತದೆ' ಎಂದು ಟ್ರಂಪ್ ಸುದ್ದಿಗೋಷ್ಠಿಯಲ್ಲಿ ಶಂಕಿಸಿದ್ದಾರೆ.

ಘಟನೆಯ ವಿವರ: ಭೋಜನಕೂಟದಲ್ಲಿ ಸ್ವಾಗತ ಭಾಷಣದ ಬಳಿಕ, ಸ್ಥಳೀಯ ಕಾಲಮಾನ ಶನಿವಾರ ರಾತ್ರಿ 8.34ರ (ಭಾರತೀಯ ಕಾಲಮಾನ ಭಾನುವಾರ ಬೆಳಿಗ್ಗೆ 6.04) ಸುಮಾರಿಗೆ ಗುಂಡು ಹಾರಿಸಿದ ಶಬ್ದಗಳು ಕೇಳಿಬಂದವು. ಈ ವೇಳೆ ಟ್ರಂಪ್ ಅವರು ಶ್ವೇತಭವನದ ವರದಿಗಾರರ ಸಂಘದ ಅಧ್ಯಕ್ಷೆ ವೀಜಿಯಾ ಜಿಯಾಂಗ್, ಮನಃಶಾಸ್ತ್ರಜ್ಞ ಓಜ್ ಪರ್ಲ್ಮನ್ ಅವರ ಜತೆ ಸಂಭಾಷಣೆಯಲ್ಲಿ ತೊಡಗಿದ್ದರು.

ಟ್ರಂಪ್ ಪತ್ನಿ ಮೆಲಾನಿಯಾ ಟ್ರಂಪ್, ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್, ಅವರ ಪತ್ನಿ ಉಷಾ ವ್ಯಾನ್ಸ್ ಅವರೂ ಅಲ್ಲಿದ್ದರು. ಗುಂಡಿನ ಶಬ್ದ ಕೇಳುತ್ತಿದ್ದಂತೆ ಸೀಕ್ರೆಟ್ ಸರ್ವೀಸ್‌ನ ಅಧಿಕಾರಿಗಳು ಟ್ರಂಪ್, ವ್ಯಾನ್ಸ್ ಮತ್ತು ಅವರ ಕುಟುಂಬದವರನ್ನು ಸುತ್ತುವರಿದು, ಸಭಾಂಗಣದಿಂದ ಸುರಕ್ಷಿತವಾಗಿ ಹೊರಗೆ ಕರೆದೊಯ್ದರು.

ಈ ಕೂಟದಲ್ಲಿ ಪಾಲ್ಗೊಂಡಿದ್ದ ಪತ್ರಕರ್ತರು, ಹಿರಿಯ ರಾಜಕಾರಣಿಗಳು, ಇತರ ಆಹ್ವಾನಿತರು ಮತ್ತು ಅತಿಥಿಗಳು ಗುಂಡಿನ ಶಬ್ದ ಕೇಳುತ್ತಲೇ ಮೇಜಿನ ಕೆಳಗೆ ಬಾಗಿ ಕುಳಿತು ಆಶ್ರಯ ಪಡೆದರು. ನಂತರ ಹೋಟೆಲ್ ಲಾಬಿ ಮೂಲಕ ಹೊರಗೆ ಬಂದರು. ಈ ದೃಶ್ಯಗಳು ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾಗಿವೆ. ಈ ದಾಳಿ ವೇಳೆ ಯಾವುದೇ ಗಣ್ಯರಿಗೆ, ಅತಿಥಿಗಳಿಗೆ ಹಾನಿಯಾಗಿಲ್ಲ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಭದ್ರತಾ ಸಿಬ್ಬಂದಿಗೆ ಶ್ಲಾಘನೆ: ಘಟನೆ ಬಳಿಕ ಶ್ವೇತಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಟ್ರಂಪ್, 'ಸೀಕ್ರೆಟ್ ಸರ್ವೀಸ್ ಮತ್ತು ಭದ್ರತಾ ಸಿಬ್ಬಂದಿ ಅತ್ಯುತ್ತಮವಾಗಿ ಕೆಲಸ ಮಾಡಿದ್ದಾರೆ. ಅವರು ಕ್ಯಾಲಿಫೋರ್ನಿಯಾದ ಬಂದೂಕುಧಾರಿಯನ್ನು ಸೆರೆಹಿಡಿದಿದ್ದಾರೆ' ಎಂದರು.

▶ 8

ಬಂದೂಕುಧಾರಿ ಕೋಲ್ ಥಾಮಸ್ ಅಲೆನ್ ಅನ್ನು ಬಂಧಿಸಿರುವ ಅಮೆರಿಕದ ಭದ್ರತಾ ಸಿಬ್ಬಂದಿ (ಎಡಚಿತ್ರ), ಶ್ವೇತಭವನದ ವರದಿಗಾರರ ವಾರ್ಷಿಕ ಭೋಜನ ಕೂಟದಲ್ಲಿ ಮೆಲಾನಿಯಾ ಟ್ರಂಪ್, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಶ್ವೇತಭವನದ ವರದಿಗಾರರ ಸಂಘದ ಅಧ್ಯಕ್ಷೆ ವೀಜಿಯಾ ಜಿಯಾಂಗ್ ಭಾಗವಹಿಸಿದ್ದರು —ಎಎಫ್‌ಪಿ ಚಿತ್ರಗಳು

ಟ್ರಂಪ್ ಆಡಳಿತದ ಸದಸ್ಯರು ಗುರಿ

'ಬಂದೂಕುಧಾರಿಯು ನಮ್ಮ ಅಧಿಕಾರಿಗಳನ್ನು ಗುರಿಯಾಗಿಸುವುದಾಗಿ ಈ ಹಿಂದೆಯೇ ಪತ್ರ ಬರೆದಿದ್ದ. ಈ ಕುರಿತು ಆತನ ಕುಟುಂಬದವರು ಪೊಲೀಸರಿಗೆ ದೂರು ನೀಡಿದ್ದರು' ಎಂದು ಟ್ರಂಪ್ ತಿಳಿಸಿದ್ದಾರೆ.

'ಶಂಕಿತನು ಕ್ಯಾಲಿಫೋರ್ನಿಯಾದಿಂದ ಶಿಕಾಗೊಕ್ಕೆ ರೈಲಿನಲ್ಲಿ ಪ್ರಯಾಣಿಸಿ, ಬಳಿಕ ವಾಷಿಂಗ್ಟನ್‌ಗೆ ಬಂದಿದ್ದಾನೆ. ವಾಷಿಂಗ್ಟನ್‌ನಲ್ಲಿ ಶನಿವಾರ ರಾತ್ರಿ ಹೋಟೆಲ್ ಅತಿಥಿಯಾಗಿ ಚೆಕ್ ಇನ್ ಆಗಿದ್ದಾನೆ' ಎಂದು ಅವರು ವಿವರಿಸಿದ್ದಾರೆ. ಘಟನೆ ಕುರಿತು ಸಮಗ್ರ ತನಿಖೆ ನಡೆಯುತ್ತಿದೆ ಎಂದು ಹಂಗಾಮಿ ಅಟಾರ್ನಿ ಜನರಲ್ ಟಾಡ್ ಬ್ಲಾಂಚೆ ಭಾನುವಾರ ಹೇಳಿದರು.

ರಾಷ್ಟ್ರೀಯ ಏಕತೆಗೆ ಕರೆ

'ದೇಶದಲ್ಲಿ ರಿಪಬ್ಲಿಕನ್ನರು, ಡೆಮಾಕ್ರಾಟರು, ಸ್ವತಂತ್ರರು, ಸಂಪ್ರದಾಯವಾದಿಗಳು, ಉದಾರವಾದಿಗಳು ಮತ್ತು ಪ್ರಗತಿಪರರು ಇದ್ದಾರೆ. ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಂಡು, ರಾಷ್ಟ್ರೀಯ ಏಕತೆ ಮೆರೆಯಬೇಕು' ಎಂದು ಟ್ರಂಪ್ ಕರೆ ನೀಡಿದರು

▶ 8

ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಉಪಾಧ್ಯಕ್ಷ ವ್ಯಾನ್ಸ್ ಮತ್ತು ಅವರ ಕುಟುಂಬದವರು ಸುರಕ್ಷಿತರಾಗಿದ್ದಾರೆ ಎಂದು ತಿಳಿದು ಸಮಾಧಾನವಾಯಿತು. ಪ್ರಜಾಪ್ರಭುತ್ವದಲ್ಲಿ ಹಿಂಸಾಚಾರಕ್ಕೆ ಜಾಗವಿಲ್ಲ
ನರೇಂದ್ರ ಮೋದಿ, ಪ್ರಧಾನಿ

ಇದು ಟ್ರಂಪ್ ಮೇಲಿನ ದಾಳಿಯಷ್ಟೇ ಅಲ್ಲ, ಇಡೀ ಅಮೆರಿಕದ ಮೇಲಿನ ದಾಳಿ. ಎಲ್ಲ ಪ್ರಜಾಪ್ರಭುತ್ವಗಳ ಮೇಲಿನ ದಾಳಿಯಾಗಿದ್ದು ಖಂಡನೀಯ
ಬೆಂಜಮಿನ್ ನೆತನ್ಯಾಹು, ಇಸ್ರೇಲ್ ಪ್ರಧಾನಿ

ಅಮೆರಿಕ ಅಧ್ಯಕ್ಷರನ್ನು ಗುರಿಯಾಗಿಸಿ ನಡೆದ ಸಶಸ್ತ್ರ ದಾಳಿ ಸ್ವೀಕಾರಾರ್ಹವಲ್ಲ. ಡೊನಾಲ್ಡ್ ಟ್ರಂಪ್‌ಗೆ ನನ್ನ ಪೂರ್ಣ ಬೆಂಬಲವಿದೆ
ಇಮ್ಯಾನುವೆಲ್ ಮ್ಯಾಕ್ರನ್ ಫ್ರಾನ್ಸ್ ಅಧ್ಯಕ್ಷ

ವಿಶ್ವ 10ಕೆ ಓಟ

ಪ್ರಜಾವಾಣಿ ಚಿತ್ರ: ರಂಜು ಪಿ

ಬೆಂಗಳೂರಿನಲ್ಲಿ ಭಾನುವಾರ ನಡೆದ ಟಿಸಿಎಸ್ ವಿಶ್ವ 10ಕೆ ಓಟದಲ್ಲಿ ಭಾಗವಹಿಸಿದ್ದ ಸ್ಪರ್ಧಿಗಳು

ಆಗಿರುವ ತೀರ್ಮಾನ ಚಾಲ್ತಿಗೆ ಬರಲಿದೆ– ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಕತ್ವ ಬದಲಾವಣೆ, ಸಂಪುಟ ಪುನರ್‌ರಚನೆ ವಿಚಾರ ತೀವ್ರ ಚರ್ಚೆಯಲ್ಲಿರುವ ಮಧ್ಯೆಯೇ, 'ಏನೇನು ತೀರ್ಮಾನ ಆಗಿವೆಯೊ ಅವು ಚಾಲ್ತಿಗೆ ಬರಲಿವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೀಡಿರುವ ಹೇಳಿಕೆ ರಾಜ್ಯ ಕಾಂಗ್ರೆಸ್‌ನಲ್ಲಿ ನಾನಾ ವ್ಯಾಖ್ಯಾನಗಳಿಗೆ ಕಾರಣವಾಗಿದೆ.

ಶಿವಕುಮಾರ್

ನವದೆಹಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜನ ಖರ್ಗೆಯವರ ಜೊತೆ ಸುದೀರ್ಘ ಸಮಾಲೋಚನೆ ನಡೆಸಿ ಮರಳಿರುವ ಡಿ.ಕೆ. ಶಿವಕುಮಾರ್, ಸದಾಶಿವನಗರ ನಿವಾಸದಲ್ಲಿ ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದರು.

'ಹೈಕಮಾಂಡ್ ಯಾವಾಗ ಯಾವ ಸೂಚನೆ ನೀಡುತ್ತದೆಯೊ ಅವಾಗ ಅದನ್ನು ಪಾಲಿಸುತ್ತೇವೆ ಎಂದು ನಾನು ಮತ್ತು ಮುಖ್ಯಮಂತ್ರಿ ಹೇಳಿದ್ದೇವೆ. ಅದರಂತೆ ನಡೆಯುತ್ತೇವೆ' ಎಂದರು.

ನವದೆಹಲಿ ಪ್ರವಾಸದ ಬಗ್ಗೆ ಕೇಳಿದಾಗ, 'ನಮ್ಮಲ್ಲಿ ಯಾವುದೇ ಸಮಸ್ಯೆ ಇಲ್ಲ. ಯಾವ ರಾಜಕೀಯವೂ ಇಲ್ಲ. ಯಾವಾಗ ಏನು ಆಗಬೇಕೊ ಅದು ಆಗುತ್ತದೆ. ಸಮಯ ಬಂದಾಗ ತಾನಾಗಿಯೇ ಗೊತ್ತಾಗುತ್ತದೆ' ಎಂದೂ ಹೇಳಿದರು.

'ಪಕ್ಷದಲ್ಲಿ ಗೊಂದಲಗಳಿವೆ' ಎಂಬ ಸಚಿವ ಸತೀಶ ಜಾರಕಿಹೊಳಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ನಮ್ಮ ಪಕ್ಷದಲ್ಲಿ ಯಾವ ಸಮಯದಲ್ಲಿ ಏನು ಮಾಡಬೇಕೊ ಅದನ್ನು ಪಕ್ಷ ಮಾಡುತ್ತದೆ. ನಮಗೆ ನಮ್ಮ ಪಕ್ಷದ ಮೇಲೆ ವಿಶ್ವಾಸ ಇದೆ. ಏನು ಮಾಡಬೇಕು ಎಂಬುದು ಹೈಕಮಾಂಡ್‌ಗೆ ಗೊತ್ತಿದೆ' ಎಂದರು.

ನಾಯಕತ್ವ ಬದಲಾವಣೆ ಕುರಿತ ಗೊಂದಲದ ಬಗ್ಗೆ ಕೇಳಿದ ಪ್ರಶ್ನೆಗೆ, 'ನಿಮಗೆ (ಮಾಧ್ಯಮಗಳು) ಈ ಬಗ್ಗೆ ಗೊಂದಲ ಇರಬಹುದು. ನಾನು ಈ ಬಗ್ಗೆ ಯಾವತ್ತೂ ಚರ್ಚೆ ಮಾಡುವುದಿಲ್ಲ' ಎಂದರು.

▶ 4

ಸಿಎಂ ಬದಲಾವಣೆ, ಹೈಕಮಾಂಡ್‌ಗೆ ಬಿಟ್ಟದ್ದು: ಸತೀಶ ಜಾರಕಿಹೊಳಿ

ಹುಬ್ಬಳ್ಳಿ: 'ಮುಖ್ಯಮಂತ್ರಿ ಬದಲಾವಣೆ ಕುರಿತು ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳಲಿದೆ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

'ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಮ್ಮ ಇಲಾಖೆಯ ವಿಷಯದ ಕುರಿತು ಚರ್ಚಿಸಲು ಆಗಾಗ ದೆಹಲಿಗೆ ಹೋಗುತ್ತಾರೆ. ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಕುರಿತು ಈವರೆಗೆ ಚರ್ಚೆಯಾಗಿಲ್ಲ. ಅದಕ್ಕೆ ಪಕ್ಷದ ಹಿರಿಯ ನಾಯಕರೇ ಉತ್ತರಿಸಬೇಕು. ಸಚಿವ ಸಂಪುಟ ವಿಸ್ತರಣೆ ನಮ್ಮ ವ್ಯಾಪ್ತಿಯಲ್ಲಿ ಇಲ್ಲ' ಎಂದರು.

ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ಹಿರಿಯ ಸಚಿವರನ್ನು ಕೈಬಿಟ್ಟು ಹೊಸಬರಿಗೆ ಅವಕಾಶ ಕೊಡುವುದು ಅಥವಾ ಬಿಡುವುದು ವರಿಷ್ಠರಿಗೆ ಬಿಟ್ಟ ವಿಷಯ. ಆದರೆ, ಹೈಕಮಾಂಡ್ ನಿರ್ಧಾರಕ್ಕೆ ನಾವೆಲ್ಲ ಬದ್ಧರಾಗಿರಬೇಕು' ಎಂದು ಹೇಳಿದರು.

ಸುಧಾರಣೆಯ ನಿರೀಕ್ಷೆ: ಪಾಟೀಲ

ಗದಗ: 'ಕಾಂಗ್ರೆಸ್‌ನಲ್ಲಿ ಯಾವುದೂ ಕೆಟ್ಟಿಲ್ಲ. ಸುಧಾರಣೆಗೆ ಅವಕಾಶ ಇದೆ. ನಾವೆಲ್ಲರೂ ಸುಧಾರಣೆ ಅವಕಾಶದ ನಿರೀಕ್ಷೆಯಲ್ಲಿ ಇದ್ದೇವೆ' ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಹೇಳಿದರು.

'ಕಾಂಗ್ರೆಸ್‌ನಲ್ಲಿ ಗೊಂದಲವಿದೆ' ಎಂಬ ಸಚಿವ ಸತೀಶ್ ಜಾರಕಿಹೊಳಿ ಮಾತಿಗೆ ಭಾನುವಾರ ಪ್ರತಿಕ್ರಿಯಿಸಿದ ಅವರು, 'ಪಕ್ಷದ ಆಂತರಿಕ ವಿಷಯ ಸರಿಪಡಿಸಬೇಕಿರುವುದು ಪಕ್ಷದ ಹೈಕಮಾಂಡ್ ಜವಾಬ್ದಾರಿ' ಎಂದರು.

ಸಿ.ಎಂ ಬದಲಾವಣೆ ಕುರಿತ ಪ್ರಶ್ನೆಗೆ, 'ಪಕ್ಷದ ಹಿತದೃಷ್ಟಿಯಿಂದ ಈ ಚರ್ಚೆ ಒಳ್ಳೆಯದಲ್ಲ. ಎಐಸಿಸಿ ಅಧ್ಯಕ್ಷರು ಹೇಳಿದ ಬಳಿಕವೂ ಕೆಲ ಮಾತುಗಳು ನಡೆದಿವೆ' ಎಂದು ಹೇಳಿದರು.

'ರಷ್ಯಾ ತೈಲ: ಮಾಹಿತಿ ನೀಡಲ್ಲ'

ನವದೆಹಲಿ (ಪಿಟಿಐ): ರಷ್ಯಾದಿಂದ ಭಾರತವು ಆಮದು ಮಾಡಿಕೊಳ್ಳುವ ಕಚ್ಚಾ ತೈಲ ಕುರಿತ ವಿವರಗಳನ್ನು ನೀಡಲು ಸಾಧ್ಯವಿಲ್ಲ, ಮಾಹಿತಿ ಹಕ್ಕು (ಆರ್‌ಟಿಐ) ಕಾಯ್ದೆಯ ಅಡಿಯಲ್ಲಿ ಇದಕ್ಕೆ ವಿನಾಯಿತಿ ಇದೆ ಎಂದು ಕೇಂದ್ರ ಪೆಟ್ರೋಲಿಯಂ ಯೋಜನೆ ಮತ್ತು ವಿಶ್ಲೇಷಣೆ ಘಟಕ (ಪಿಪಿಎಸಿ) ಹೇಳಿದೆ.

ಈ ಘಟಕವು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಅಧೀನದಲ್ಲಿ ಕೆಲಸ ಮಾಡುತ್ತದೆ. ದೇಶದ ಆರ್ಥಿಕ ಹಿತಾಸಕ್ತಿಗಳ ಕಾರಣ ನೀಡಿ ಘಟಕದ ನಿಲುವನ್ನು ಕೇಂದ್ರ ಮಾಹಿತಿ ಆಯೋಗ (ಸಿಸಿಐ) ಬೆಂಬಲಿಸಿದೆ.

2022ರ ಜೂನ್‌ನಿಂದ 2025ರ ಜೂನ್‌ವರೆಗೆ ರಷ್ಯಾದಿಂದ ಭಾರತಕ್ಕೆ ತರಿಸಿಕೊಂಡ ಕಚ್ಚಾ ತೈಲದ ಕುರಿತ ವಿವರ ನೀಡುವಂತೆ ಕೋರಿ ಆರ್‌ಟಿಐ ಕಾಯ್ದೆಯ ಅಡಿಯಲ್ಲಿ ಅರ್ಜಿಯೊಂದನ್ನು ಸಲ್ಲಿಸಲಾಗಿತ್ತು. ಇಂಡಿಯನ್ ಆಯಿಲ್, ಹಿಂದುಸ್ತಾನ್ ಪೆಟ್ರೋಲಿಯಂ, ಭಾರತ್ ಪೆಟ್ರೋಲಿಯಂ, ಒಎನ್‌ಜಿಸಿ ವಿದೇಶ್, ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ನಯಾರಾ ಎನರ್ಜಿಯಂತಹ ಕಂಪನಿಗಳು ಎಷ್ಟೆಷ್ಟು ಕಚ್ಚಾ ತೈಲ ತರಿಸಿಕೊಂಡಿವೆ ಎಂಬ ವಿವರವನ್ನೂ ಕೋರಲಾಗಿತ್ತು.

ಈ ಮಾಹಿತಿ ಒದಗಿಸಲು ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿ (ಸಿಪಿಐಒ) ನಿರಾಕರಿಸಿದ್ದರು. 'ಯಾವ ದೇಶದಿಂದ ಹಾಗೂ ಯಾವ ಕಂಪನಿಗೆ ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳಲಾಗಿದೆ ಎಂಬುದರ ಕುರಿತ ಮಾಹಿತಿಯು ವಾಣಿಜ್ಯಾತ್ಮಕ ಹಾಗೂ ಗೋಪ್ಯವಾದುದು. ಅದರ ಮಾಹಿತಿ ಒದಗಿಸುವುದಕ್ಕೆ ಆರ್‌ಟಿಐ ಕಾಯ್ದೆ 2005ರ ಸೆಕ್ಷನ್ 8(1)ರ ಅಡಿಯಲ್ಲಿ ವಿನಾಯಿತಿ ಇದೆ. ಆದರೂ, ಕಚ್ಚಾ ತೈಲದ ಒಟ್ಟು ಆಮದು ಪ್ರಮಾಣ ಮತ್ತು ಮೌಲ್ಯದ ಬಗ್ಗೆ ಪಿಪಿಎಸಿ ವೆಬ್‌ಸೈಟ್‌ನಿಂದ ಮಾಹಿತಿ ಪಡೆಯಬಹುದು' ಎಂದು ಸಿಪಿಐಒ ಹೇಳಿದ್ದರು.

▶ 8

ಗುರುಪೀಠ ಟ್ರಸ್ಟಿಗಳ ಉಚ್ಚಾಟನೆ

ಹರಿಹರದ ಪಂಚಮಸಾಲಿ ಮಠ: ತಾರಕಕ್ಕೇರಿದ ವಿವಾದ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಹರಿಹರದ ಪಂಚಮಸಾಲಿ ಗುರುಪೀಠದ ವಚನಾನಂದ ಸ್ವಾಮೀಜಿ ಅವರನ್ನು ಪದಚ್ಯುತಗೊಳಿಸಿದ್ದ ಗುರುಪೀಠದ ಟ್ರಸ್ಟ್‌ನ ಪ್ರಧಾನ ಧರ್ಮದರ್ಶಿ ಸೇರಿ ಮೂವರನ್ನು, ರಾಜ್ಯ ವೀರಶೈವ ಲಿಂಗಾಯತ ಪಂಚಮಸಾಲಿ ಸಂಘವು ಟ್ರಸ್ಟ್‌ನಿಂದ ಉಚ್ಚಾಟಿಸಿದೆ.

'ಸಮುದಾಯದ ಒಳಜಗಳವನ್ನು ಬೀದಿಗೆ ತಂದಿರುವ ಪ್ರಧಾನ ಧರ್ಮದರ್ಶಿ ಬಿ.ಸಿ. ಉಮಾಪತಿ, ಟ್ರಸ್ಟಿ ಚಂದ್ರಶೇಖರ್ ಪೂಜಾರ ಹಾಗೂ ಕಾರ್ಯದರ್ಶಿ ಜ್ಯೋತಿ ಪ್ರಕಾಶ್ ಅವರನ್ನು ಟ್ರಸ್ಟ್‌ನಿಂದ ಉಚ್ಚಾಟಿಸಲಾಗಿದೆ' ಎಂದು ಸಂಘದ ಅಧ್ಯಕ್ಷ ಸೋಮನಗೌಡ ಎಂ.ಪಾಟೀಲ ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಅಕ್ರಮ, ಅವ್ಯವಹಾರ ಹಾಗೂ ಅಪನಂಬಿಕೆ ಮೇಲ್ನೋಟಕ್ಕೆ ಕಂಡುಬಂದ ಕಾರಣ ಮಾರ್ಚ್ 23ರಂದು ಕೊಪ್ಪಳದಲ್ಲಿ ನಡೆದ ಸಂಘದ ಸಭೆಯ ಆಧಾರದ ಮೇರೆಗೆ ಏ.13ರಂದು ಈ ತೀರ್ಮಾನ ಕೈಗೊಳ್ಳಲಾಗಿದೆ. ವೈಯಕ್ತಿಕ ಕಾರಣಕ್ಕೆ ಇದನ್ನು ಘೋಷಿಸುವುದು ವಿಳಂಬವಾಗಿದೆ' ಎಂದು ತಿಳಿಸಿದರು.

'ಏ. 13ರಿಂದ ಅನ್ವಯವಾಗುವಂತೆ ಉಚ್ಚಾಟಿತ ಟ್ರಸ್ಟಿಗಳಿಗೆ ಲೆಕ್ಕಪತ್ರ ನಿರ್ವಹಣೆ, ಬ್ಯಾಂಕ್ ವ್ಯವಹಾರ ಹಾಗೂ ಗುರುಪೀಠಕ್ಕೆ ಸಂಬಂಧಿಸಿದ ನಿರ್ಧಾರ ಕೈಗೊಳ್ಳುವ ಅಧಿಕಾರ ಇಲ್ಲ' ಎಂದು ಸ್ಪಷ್ಟಪಡಿಸಿದರು.

▶ 4

ಸಂಘದ ತೀರ್ಮಾನವಲ್ಲ: ಉಪಾಧ್ಯಕ್ಷ

ಹರಿಹರ: 'ಗುರುಪೀಠದ ಟ್ರಸ್ಟ್ ಪದಾಧಿಕಾರಿಗಳ ಉಚ್ಚಾಟಿಸಲು ರಾಜ್ಯ ವೀರಶೈವ ಲಿಂಗಾಯತ ಪಂಚಮಸಾಲಿ ಸಂಘ ತೀರ್ಮಾನ ಕೈಗೊಂಡಿಲ್ಲ. ಈ ಸಂಬಂಧ ಯಾವುದೇ ಸಭೆ ನಡೆದಿಲ್ಲ' ಎಂದು ಪಂಚಮಸಾಲಿ ಸಂಘದ ರಾಜ್ಯ ಘಟಕದ ಉಪಾಧ್ಯಕ್ಷ ಶಂಕರ ಬಸರಹಳ್ಳಿ ತಿಳಿಸಿದರು.

'ಟ್ರಸ್ಟ್ ಮೇಲೆ ಸಂಘಕ್ಕೆ ಅಧಿಕಾರವಿಲ್ಲ. ಗುರುಪೀಠ ಹಾಗೂ ಟ್ರಸ್ಟ್ ಬಗ್ಗೆ ಸಂಘದಲ್ಲಿ ಚರ್ಚೆ ನಡೆದಿಲ್ಲ. ಇದಕ್ಕೆ ಸಂಬಂಧಿಸಿದ ಸೂಕ್ತ ದಾಖಲೆಗಳು ಕೂಡ ಇಲ್ಲ. ಕೆಲವು ಹಿತಾಸಕ್ತಿಗಳ ಒತ್ತಡಕ್ಕೆ ಮಣಿದು ಸೋಮನಗೌಡ ಪಾಟೀಲ ಹೇಳಿಕೆ ನೀಡಿದ್ದಾರೆ. ಅವರ ವಿರುದ್ಧ ಸಂಘ ಸೂಕ್ತ ಕ್ರಮ ಕೈಗೊಳ್ಳಲಿದೆ' ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

ಮತ್ತೆ ಪಾಕ್‌ಗೆ ಬಂದ ಅರಾಘ್ಚಿ

ಇಸ್ಲಾಮಾಬಾದ್ (ಪಿಟಿಐ): ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರು ಅಮೆರಿಕದೊಂದಿಗಿನ ಎರಡನೇ ಸುತ್ತಿನ ಶಾಂತಿ ಮಾತುಕತೆಯ ಅನಿಶ್ಚಿತತೆಯ ಮಧ್ಯೆ, ಮೂರು ದಿನಗಳಲ್ಲಿ ಪಾಕಿಸ್ತಾನಕ್ಕೆ ಎರಡನೇ ಬಾರಿಗೆ ಭಾನುವಾರ ಬಂದಿಳಿದಿದ್ದಾರೆ.

ಅಬ್ಬಾಸ್ ಅರಾಘ್ಚಿ

ಪ್ರಧಾನಿ ಶೆಹಬಾಜ್ ಷರೀಫ್, ಸೇನಾ ಮುಖ್ಯಸ್ಥ ಹಾಗೂ ಫೀಲ್ಡ್ ಮಾರ್ಷಲ್ ಆಸಿಮ್ ಮುನೀರ್ ಮತ್ತು ಇತರ ಉನ್ನತ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿ ಶನಿವಾರ ಒಮಾನ್‌ಗೆ ಹೋಗಿದ್ದ ಅರಾಘ್ಚಿ, ಅಲ್ಲಿನ ಸುಲ್ತಾನ್ ಹೈಥಮ್ ಬಿನ್ ತಾರಿಖ್ ಅಲ್-ಸೈದ್ ಅವರೊಂದಿಗೆ ಹೊರ್ಮುಜ್ ಜಲಸಂಧಿಯ ಭದ್ರತೆ ಹಾಗೂ ಇರಾನ್– ಅಮೆರಿಕ ನಡುವಿನ ಯುದ್ಧ ವನ್ನು ಕೊನೆಗೊಳಿಸುವ ಸಂಬಂಧದ ರಾಜತಾಂತ್ರಿಕ ಮಾತುಕತೆ ನಡೆಸಿದರು.

ಒಮಾನ್‌ನ ಒಂದು ದಿನದ ಭೇಟಿ ಪೂರ್ಣಗೊಳಿಸಿದ ನಂತರ ಇರಾನ್ ವಿದೇಶಾಂಗ ಸಚಿವರು ರಾವಲ್ಪಿಂಡಿಯ ನೂರ್ ಖಾನ್ ವಾಯುನೆಲೆಗೆ ಬಂದಿಳಿದರು ಎಂದು 'ಡಾನ್' ಪತ್ರಿಕೆ ಮೂಲಗಳನ್ನು ಉಲ್ಲೇಖಿಸಿ ವರದಿ ಮಾಡಿದೆ.

ಪೆಜೆಶ್ಕಿಯಾನ್ -ಶೆಹಬಾಜ್ ಚರ್ಚೆ

ಮಸೂದ್ ಪೆಜೆಶ್ಕಿಯಾನ್



ಶೆಹಬಾಜ್ ಷರೀಫ್

ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಅವರು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿ ಪ್ರಸ್ತುತ ಸ್ಥಿತಿಗತಿಯ ಬಗ್ಗೆ ಚರ್ಚೆ ನಡೆಸಿದರು. ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರು ಇಸ್ಲಾಮಾಬಾದ್‌ಗೆ ಭೇಟಿ ನೀಡಿದ್ದಾಗಲೇ ಶನಿವಾರ ಸಂಜೆ ದೂರವಾಣಿ ಮೂಲಕ ಅವರು ಮಾತುಕತೆ ನಡೆಸಿದರು.

▶ 8

ಚಿನಕುರುಳಿ — ಪ್ರಕಾಶ್ ಶೆಟ್ಟಿ

ಮಹಿಳೆಯರ ಸುರಕ್ಷತೆಗೆ ಬಿಜೆಪಿ ಬದ್ಧ: ಮೋದಿ

ಬಂಗಾಂವ್, (ಪಶ್ಚಿಮ ಬಂಗಾಳ) (ಪಿಟಿಐ): 'ಮಹಿಳೆಯರನ್ನು ಹಿಂಸಿಸುವ ಗೂಂಡಾಗಳಿಗೆ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷವು ಆಶ್ರಯ ನೀಡುತ್ತಿದ್ದು, ಸಂದೇಶ್‌ಖಾಲಿಯ ಸಂತ್ರಸ್ತೆಗೆ ಮತ್ತು ಆರ್.ಜಿ.ಕರ್ ಸಂತ್ರಸ್ತೆಯ ತಾಯಿಗೆ ಬಿಜೆಪಿ ಟಿಕೆಟ್ ನೀಡುವ ಮೂಲಕ ಮಹಿಳೆಯರ ಸುರಕ್ಷತೆಯನ್ನು ಖಾತರಿಪಡಿಸುವ ಪಕ್ಷದ ಬದ್ಧತೆಗೆ ಸಾಕ್ಷಿಯಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ.

ವಿವರ ▶ 9

ಸೂರ್ಯೋದಯ: 6:01 ಸೂರ್ಯಾಸ್ತ : 6:34 | ಚಂದ್ರೋದಯ: ಮ. 2:18 ಚಂದ್ರಾಸ್ತ: ರಾ. 2:16 | ಭಾನುವಾರದ ಉಷ್ಣಾಂಶ : ಗರಿಷ್ಠ 36° ಕನಿಷ್ಠ 23°

ಸೋಮವಾರದ ಉಷ್ಣಾಂಶ 35° ಗರಿಷ್ಠ | 23° ಕನಿಷ್ಠ | ಮಂಗಳವಾರ 35° : 23° | ಬುಧವಾರ 35° : 23° | ಗುರುವಾರ 35° : 23°

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ

ಬಿಸಿಲ ಬೇಗೆಗೆ ಅನಾರೋಗ್ಯದ ಬಾಧೆ

ಉಷ್ಣಾಂಶ ಹೆಚ್ಚಳದಿಂದ ಬೆವರುಗುಳ್ಳೆ, ಬ್ಯಾಕ್ಟೀರಿಯಾ ಸೋಂಕು ಆಸ್ಪತ್ರೆಗಳಲ್ಲಿ ಹೊರರೋಗಿಗಳ ಸಂಖ್ಯೆ ಶೇ 20ರಷ್ಟು ಹೆಚ್ಚಳ

• ವರುಣ ಹೆಗಡೆ

ಬೆಂಗಳೂರು: ನಗರದಲ್ಲಿ ಹೆಚ್ಚುತ್ತಿರುವ ಬಿಸಿಲ ಬೇಗೆಗೆ ಉದರಬೇನೆ, ಬೆವರು ಗುಳ್ಳೆಯಂತಹ ಅನಾರೋಗ್ಯ ಸಮಸ್ಯೆಗಳು ಹೆಚ್ಚಿನವರಲ್ಲಿ ಕಾಣಿಸಿಕೊಳ್ಳುತ್ತಿದ್ದು, ಆಸ್ಪತ್ರೆಗಳಲ್ಲಿನ ಹೊರರೋಗಿಗಳ ಸಂಖ್ಯೆಯಲ್ಲಿ ಶೇ 20ರಷ್ಟು ಹೆಚ್ಚಳವಾಗಿದೆ.

ನಗರದಲ್ಲಿ ಈ ಬಾರಿ ವಾತಾವರಣದಲ್ಲಿ ಉಷ್ಣಾಂಶ ಹೆಚ್ಚಳವಾಗುತ್ತಿದ್ದು, ಮಧ್ಯಾಹ್ನದ ಅವಧಿಯಲ್ಲಿ ಹೊರಗಡೆ ಓಡಾಟ ಕಷ್ಟಸಾಧ್ಯವಾಗುತ್ತಿದೆ. ವಾರದಿಂದ ಗರಿಷ್ಠ ಉಷ್ಣಾಂಶ 36 ಡಿಗ್ರಿ ಸೆಲ್ಸಿಯಸ್‌ನಷ್ಟಿದೆ. ವಾಡಿಕೆಗಿಂತ ಎರಡರಿಂದ ಮೂರು ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚು ವರದಿಯಾಗುತ್ತಿದೆ. ಕನಿಷ್ಠ ಉಷ್ಣಾಂಶ 24 ಡಿಗ್ರಿ ಸೆಲ್ಸಿಯಸ್ ದಾಟಿದೆ. ಮುಂದಿನ ವಾರವೂ ಮಳೆಯಾಗದಿದ್ದಲ್ಲಿ ಗರಿಷ್ಠ ಉಷ್ಣಾಂಶ 37 ಡಿಗ್ರಿ ಸೆಲ್ಸಿಯಸ್ ದಾಟುವ ಸಾಧ್ಯತೆಯಿದೆ. ಈ ಬಿಸಿಲಿಗೆ ಮಕ್ಕಳು ಹಾಗೂ ವೃದ್ಧರು ನಿರ್ಜಲೀಕರಣದಿಂದ ಅಸ್ವಸ್ಥರಾಗುತ್ತಿದ್ದರೆ, ವಯಸ್ಕರು ಸೇರಿ ವಿವಿಧ ವಯೋಮಾನದವರು ಸುಡು ಬಿಸಿಲಿಗೆ ಚರ್ಮದ ಅಲರ್ಜಿ, ಕೆಂಪು ಗುಳ್ಳೆಗಳಂತಹ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ವಾರದ ತಾಪಮಾನ (ಡಿಗ್ರಿ ಸೆಲ್ಸಿಯಸ್‌ನಲ್ಲಿ)		
ದಿನಾಂಕ	ಗರಿಷ್ಠ	ಕನಿಷ್ಠ
ಏ.20	35.8	24.2
ಏ.21	36.2	23.5
ಏ.22	36.5	23.7
ಏ.23	36.6	22.9
ಏ.24	36.4	24.6
ಏ.25	35.6	23.5
ಏ.26	36	24.8

ನಗರದಲ್ಲಿ 2016ರ ಏಪ್ರಿಲ್‌ನಲ್ಲಿ ಗರಿಷ್ಠ ಉಷ್ಣಾಂಶ 39.2 ಡಿಗ್ರಿ ಸೆಲ್ಸಿಯಸ್‌ಗೆ ತಲುಪಿತ್ತು. ಈ ವರ್ಷ ವಾತಾವರಣದಲ್ಲಿ ತೇವಾಂಶ ಕೊರತೆಯಿಂದಾಗಿ ಉಷ್ಣಾಂಶ ಏರುಗತಿ ಪಡೆದಿದೆ. ಉಷ್ಣಾಂಶ ಹೆಚ್ಚಳದಿಂದ ಜ್ವರ, ತಲೆನೋವು, ಊತಗಳು, ಸ್ನಾಯು ಸೆಳೆತ, ಪ್ರಜ್ಞೆ ತಪ್ಪುವಿಕೆ, ಸುಸ್ತು ಸೇರಿ ವಿವಿಧ ಸಮಸ್ಯೆಗಳು ನಗರದ ಜನರಲ್ಲಿ ಕಾಣಿಸಿಕೊಳ್ಳುತ್ತಿರುವ ಬಗ್ಗೆ ವೈದ್ಯರು ಕಳವಳ ವ್ಯಕ್ತಪಡಿಸಿದ್ದಾರೆ.

ಆಸ್ಪತ್ರೆ ಭೇಟಿ ಹೆಚ್ಚಳ: ವಿಕ್ಟೋರಿಯಾ, ಜಯನಗರ ಆಸ್ಪತ್ರೆ, ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆ, ಇಎಸ್‌ಐ ಆಸ್ಪತ್ರೆ, ಕಿಮ್ಸ್, ಮಣಿಪಾಲ್, ಫೋರ್ಟಿಸ್, ಅಪೋಲೊ, ನಾರಾಯಣ ಹೆಲ್ತ್ ಸೇರಿ ಪ್ರಮುಖ ಆಸ್ಪತ್ರೆಗಳಿಗೆ ಭೇಟಿ ನೀಡುತ್ತಿರುವ ಹೊರ ರೋಗಿಗಳಲ್ಲಿ, ಶೇ 10ಕ್ಕಿಂತ ಹೆಚ್ಚು ಮಂದಿ ಉದರಬೇನೆ, ವಿಷಮಶೀತಜ್ವರ, ಬೆವರು ಗುಳ್ಳೆಯಂಥ ಸಮಸ್ಯೆಗಳಿಂದ ಬಳಲುತ್ತಿದ್ದಾರೆ.

'ಉದ್ಯಾನನಗರಿ ಮತ್ತು ನಿವೃತ್ತರ ಸ್ವರ್ಗ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದ ಈ ನಗರ ಸಂಪೂರ್ಣ ವಿರುದ್ಧವಾದ ವಾತಾವರಣವನ್ನು ಈಗ ಹೊಂದಿದೆ. ಈ ಅವಧಿಯಲ್ಲಿ ಮಕ್ಕಳು ಮತ್ತು ವೃದ್ಧರು ಹೆಚ್ಚಿನ ಮುನ್ನೆಚ್ಚರಿಕೆ ವಹಿಸಬೇಕು. ಉಷ್ಣತೆಯು ಜೀರ್ಣಾಂಗವ್ಯೂಹದ ಮೇಲೂ ಪರಿಣಾಮ ಬೀರುತ್ತದೆ. ರಸ್ತೆ ಬದಿಯ ಕತ್ತರಿಸಿದ ಹಣ್ಣುಗಳು ಸುರಕ್ಷಿತವಲ್ಲ. ಇವು ಬೇಸಿಗೆಯಲ್ಲಿ ಹರಡುವ ನೀರು ಆಧಾರಿತ ಜಠರಗರುಳಿನ ಸೋಂಕುಗಳಿಗೆ ಪ್ರಮುಖ ಕಾರಣವಾಗುತ್ತದೆ' ಎಂದು ನಾರಾಯಣ ಹೆಲ್ತ್ ಸಿಟಿಯ ಗ್ಯಾಸ್ಟ್ರೋಎಂಟರಾಲಜಿ ವಿಭಾಗದ ಸಲಹೆಗಾರ ಡಾ. ಕಿರಣ್ ರೆಡ್ಡಿವಾರಿ ತಿಳಿಸಿದರು.

ಕಣ್ಣಿನ ಊತ, ಚರ್ಮದ ಸೋಂಕು

ಅತಿಯಾದ ಬಿಸಿಲಿಗೆ ಕಣ್ಣುರಿ, ಕಣ್ಣಿನಲ್ಲಿ ನೀರು, ತುರಿಕೆ, ಕಣ್ಣು ಕೆಂಪಾಗುವುದು, ಕಣ್ಣಿನ ಊತ ಸೇರಿ ವಿವಿಧ ಸಮಸ್ಯೆಗಳಿಗೆ ಜನ ಆಸ್ಪತ್ರೆಗಳತ್ತ ಮುಖಮಾಡುತ್ತಿದ್ದಾರೆ. ಇದರಿಂದಾಗಿ ನಗರದ ಪ್ರಮುಖ ಕಣ್ಣಿನ ಆಸ್ಪತ್ರೆಗಳಾದ ಮಿಂಟೊ, ನಾರಾಯಣ ನೇತ್ರಾಲಯ, ಡಾ.ಅಗರವಾಲ್ಸ್ ಐ ಹಾಸ್ಪಿಟಲ್, ಶಂಕರ ಕಣ್ಣಿನ ಆಸ್ಪತ್ರೆ ಹಾಗೂ ಬೆಂಗಳೂರು ನೇತ್ರಾಲಯದಲ್ಲಿ ಹೊರ ರೋಗಿಗಳ ಸಂಖ್ಯೆ ಶೇ 10ರಷ್ಟು ಹೆಚ್ಚಳವಾಗಿದೆ.

ಚರ್ಮಕ್ಕೆ ಸಂಬಂಧಿಸಿ ಕೆಂಪು ಗುಳ್ಳೆಗಳು, ಬೆವರು ಗುಳ್ಳೆಗಳು, ಶಿಲೀಂಧ್ರ ಸೋಂಕು, ಬೊಬ್ಬೆಗಳು ಸೇರಿ ವಿವಿಧ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಮಕ್ಕಳಲ್ಲಿ 'ಚಿಕನ್ ಪಾಕ್ಸ್' ದೃಢಪಡುತ್ತಿದೆ ಎಂದು ಚರ್ಮರೋಗ ತಜ್ಞರು ತಿಳಿಸಿದರು.

ವೈದ್ಯರ ಪ್ರಮುಖ ಸಲಹೆಗಳು

- ಬಾಯಾರಿಕೆ ಇಲ್ಲದಿದ್ದರೂ ಆಗಾಗ ನೀರು ಕುಡಿಯಬೇಕು
- ರಸ್ತೆ ಬದಿಯ ಆಹಾರ ಸುರಕ್ಷಿತವಲ್ಲ
- ದ್ರವ ರೂಪದ ಆಹಾರವನ್ನು ಹೆಚ್ಚಾಗಿ ಸೇವಿಸಬೇಕು
- ಕಾಯಿಸಿ, ಆರಿಸಿದ ಶುದ್ಧ ನೀರನ್ನು ಕುಡಿಯಬೇಕು
- ಆಹಾರ ಸೇವಿಸುವ ಮೊದಲು ಕೈಗಳನ್ನು ಸ್ವಚ್ಛವಾಗಿ ತೊಳೆದುಕೊಳ್ಳಬೇಕು
- ತಾಜಾ ಹಾಗೂ ಪೌಷ್ಟಿಕ ಆಹಾರ ಸೇವಿಸಬೇಕು
- ಹತ್ತಿಯ ಬಟ್ಟೆಯನ್ನು ಧರಿಸಬೇಕು

ಬಿಸಿಲ ಧಗೆಗೆ ಬೆವರುಗುಳ್ಳೆ, ಮೊಡವೆ ಸೇರಿ ಚರ್ಮ ಸಂಬಂಧ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಈ ಸಂಬಂಧ ರೋಗಿಗಳ ಸಂಖ್ಯೆ ಹೆಚ್ಚಳವಾಗುತ್ತಿದೆ

ಡಾ.ಎಂ.ಎಸ್. ಗಿರೀಶ್, ಚರ್ಮರೋಗ ವಿಭಾಗದ ಮುಖ್ಯಸ್ಥ, ರಾಜಾಜಿನಗರದ ಇಎಸ್‌ಐ ಆಸ್ಪತ್ರೆ

ತಾಪಮಾನ ಏರಿಕೆಯಿಂದ ನಿರ್ಜಲೀಕರಣ, ಜಠರಗರುಳಿನ ಸಮಸ್ಯೆಗಳು ವರದಿಯಾಗುತ್ತಿವೆ. ಅಧಿಕ ಜ್ವರ, ವಾಂತಿಯಂತಹ ಲಕ್ಷಣಗಳು ಕಂಡಲ್ಲಿ ಕೂಡಲೇ ವೈದ್ಯಕೀಯ ಸಹಾಯ ಪಡೆಯಬೇಕು

ಡಾ.ಸಿಂಧು ಪಿ., ಮಣಿಪಾಲ್ ಆಸ್ಪತ್ರೆ ಸರ್ಜಾಪುರ

ಸುದ್ದಿ 2 ನಿಮಿಷ

ಜೀವ ಬೆದರಿಕೆ ಹಾಕಲು ಯಾರಿಗೂ ಹಕ್ಕಿಲ್ಲ: ನಟ ಚೇತನ್

ಬೆಂಗಳೂರು: ವರನಟ ರಾಜ್‌ಕುಮಾರ್ ಅವರ ಸಮಾಧಿ ವಿಚಾರಕ್ಕೆ ಸಂಬಂಧಿಸಿದಂತೆ ವಿವಾದಾತ್ಮಕ ಪೋಸ್ಟ್ ಮಾಡಿ, ನಂತರ ಕ್ಷಮೆ ಕೇಳಿದ್ದ ನಟ ಚೇತನ್ 'ನನ್ನ ಮಾತಿನಲ್ಲಿ ಸತ್ಯವಿದೆ. ಹೇಳಿದ ವಿಷಯಕ್ಕೆ ಬದ್ಧನಾಗಿದ್ದೇನೆ' ಎಂದು ಭಾನುವಾರ ಹೇಳಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿರುವ ಚೇತನ್, 'ನಾನೂ ರಾಜ್‌ಕುಮಾರ್ ಅವರ ಅಭಿಮಾನಿ. ಆದರೆ ಅಭಿಮಾನಿ ಸಂಘದ ಪಟ್ಟ ಕಟ್ಟಿಕೊಂಡು ದಬ್ಬಾಳಿಕೆ ಮಾಡುತ್ತಿರುವುದನ್ನು ಸಹಿಸಲು ಸಾಧ್ಯವಿಲ್ಲ. ಜೀವ ಬೆದರಿಕೆ ಹಾಕಲು ಯಾರಿಗೂ ಹಕ್ಕಿಲ್ಲ. ಕಾನೂನುಬದ್ಧವಾಗಿರುತ್ತೇವೆ, ನಮ್ಮ ವಿಚಾರಗಳನ್ನು ಎತ್ತಿಹಿಡಿಯುತ್ತೇವೆ. ನಾನು ಯಾರ ಭಾವನೆಗಳಿಗಾದರೂ ಧಕ್ಕೆ ತಂದಿದ್ದರೆ ಕಾನೂನಾತ್ಮಕವಾಗಿ ಕ್ರಮ ತೆಗೆದುಕೊಳ್ಳಲಿ' ಎಂದಿದ್ದಾರೆ.

'ನಾನು 'ಎಕ್ಸ್' ಖಾತೆಯಲ್ಲಿ ಹಾಕಿದ ವಿಷಯಕ್ಕೆ ನೋವಾಗಿದ್ದರೆ ವಿಷಾದ ವ್ಯಕ್ತಪಡಿಸುತ್ತೇನೆ ಎಂದಿದ್ದೆ. ವಿಷಾದ ವ್ಯಕ್ತಪಡಿಸುತ್ತೇನೆ ಎಂದ ಕಾರಣಕ್ಕೆ ನಾನು ಹೇಳಿದ್ದು ಸುಳ್ಳು ಆಗುವುದಿಲ್ಲ. ಆದರೆ ಯಾರಿಗಾದರೂ ನೋವಾಗಿದ್ದರೆ, ಅದು ನನ್ನ ಉದ್ದೇಶವಲ್ಲ. ರಾಜ್‌ಕುಮಾರ್ ಅವರು ಬದುಕಿದ್ದಾಗ ಯಾರಾದರೂ ಸ್ಮಾರಕಕ್ಕೆ ಎರಡೂವರೆ ಎಕರೆ ಜಾಗ ಕೊಡುತ್ತೇನೆ ಎಂದಿದ್ದರೆ ಬೇಡ ಎನ್ನುತ್ತಿದ್ದರು. ಇದು ಪ್ರಚಾರಕ್ಕಾಗಿ ಎತ್ತಿದ ವಿಷಯವಲ್ಲ. ನನಗೆ ಅಣ್ಣಾವ್ರ ಕುಟುಂಬದ ಬಗ್ಗೆ, ಅಭಿಮಾನಿಗಳ ಬಗ್ಗೆ ತಕರಾರಿಲ್ಲ. ರಾಜ್‌ಕುಮಾರ್ ಅವರನ್ನು ಗುರಿಯಾಗಿಸಿಕೊಂಡು ಮಾತನಾಡಿಲ್ಲ' ಎಂದಿದ್ದಾರೆ.

ಅಂಚೆ ವಿಮೆ: ಪ್ರತಿನಿಧಿಗಳ ನಿಯುಕ್ತಿಗೆ ಸಂದರ್ಶನ

ಬೆಂಗಳೂರು: ಅಂಚೆ ಜೀವ ವಿಮೆ ಹಾಗೂ ಗ್ರಾಮೀಣ ಜೀವ ವಿಮೆ ಪಾಲಿಸಿಗಳನ್ನು ಮಾರಾಟ ಮಾಡಲು ಪ್ರತಿನಿಧಿಗಳ ನಿಯುಕ್ತಿಗಾಗಿ ಅಂಚೆ ಇಲಾಖೆಯು ಇದೇ 27ರಂದು (ಸೋಮವಾರ) ಬೆಳಿಗ್ಗೆ 11ಕ್ಕೆ ಅಭ್ಯರ್ಥಿಗಳಿಗೆ ನೇರ ಸಂದರ್ಶನ ಏರ್ಪಡಿಸಿದೆ.

ಅಭ್ಯರ್ಥಿಗಳು ತಮ್ಮ ಇತ್ತೀಚಿನ ಭಾವಚಿತ್ರಗಳೊಂದಿಗೆ ಸ್ವವಿವರ, ಶೈಕ್ಷಣಿಕ ಪ್ರಮಾಣ ಪತ್ರದ ನಕಲು ಪ್ರತಿಗಳೊಂದಿಗೆ ಮಹಾಲಕ್ಷ್ಮಿಪುರ ಪೊಲೀಸ್ ಠಾಣೆ ಬಳಿ ಇರುವ ಬೆಂಗಳೂರು ಪಶ್ಚಿಮ ಅಂಚೆ ವಿಭಾಗ, ವರಿಷ್ಠ ಅಂಚೆ ಅಧೀಕ್ಷಕರ ಕಾರ್ಯಾಲಯದಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು ಎಂದು ಪ್ರಕಟಣೆ ತಿಳಿಸಿದೆ.

ನಿರುದ್ಯೋಗಿಗಳು, ಸ್ವಯಂ ಉದ್ಯೋಗಿಗಳು, ವಿಮಾ ಕಂಪನಿಗಳ ಮಾಜಿ ಏಜೆಂಟರು, ಮಾಜಿ ಸೈನಿಕರು, ಅಂಗನವಾಡಿ ಕಾರ್ಯಕರ್ತೆಯರು, ಗ್ರಾಮ ಪಂಚಾಯಿತಿಗಳ ಮಾಜಿ ಸದಸ್ಯರು, ಮಹಿಳಾ ಮಂಡಲದ ಕಾರ್ಯಕರ್ತೆಯರು ಭಾಗವಹಿಸಬಹುದು. ಅಭ್ಯರ್ಥಿಗಳು 10ನೇ ತರಗತಿ ಉತ್ತೀರ್ಣ ಹೊಂದಿರಬೇಕು, 18 ರಿಂದ 50 ವರ್ಷ ಒಳಗಿನವರಾಗಿರಬೇಕು. ಆಯ್ಕೆಯಾಗುವ ಅಭ್ಯರ್ಥಿಗಳು ರಾಷ್ಟ್ರೀಯ ಉಳಿತಾಯ ಪತ್ರದ ರೂಪದಲ್ಲಿ ₹5,000 ಭದ್ರತಾ ಠೇವಣಿ ಇಡಬೇಕು. ಅಭ್ಯರ್ಥಿಗಳಿಗೆ ವ್ಯವಹಾರಕ್ಕೆ ತಕ್ಕಂತೆ ಕಮಿಷನ್ ನೀಡಲಾಗುವುದು. ವಿವರಗಳಿಗೆ 7975127704 ಸಂಪರ್ಕಿಸುವುದು.

ದುಬಾರಿ ದಂಡ ವಿಧಿಸುವಂತೆ ಸೂಚನೆ

ಒಳಮೀಸಲಾತಿ: 30- 40 ವರ್ಷಗಳಿಂದ ಇದ್ದ ಸಮಸ್ಯೆ ಅನ್ನು ಪರಿಹರಿಸಿದ್ದೇವೆ. ಎಲ್ಲರಿಗೂ ನ್ಯಾಯ ಕೊಡುತ್ತಿದ್ದೇವೆ. ಒಟ್ಟಾಗಿ ಹೋಗಬೇಕು ಅಷ್ಟೇ– ಡಿಕೆಶಿ

ಹುಟ್ಟುಹಬ್ಬಕ್ಕೆ ಫ್ಲೆಕ್ಸ್, ಬ್ಯಾನರ್ ಹಾಕಬೇಡಿ: ಡಿ.ಕೆ. ಶಿವಕುಮಾರ್

ಬೆಂಗಳೂರು: 'ನನ್ನ ಜನ್ಮದಿನದಂದು ಫ್ಲೆಕ್ಸ್ ಹಾಗೂ ಬ್ಯಾನರ್‌ಗಳನ್ನು ಅಳವಡಿಸಿದವರ ವಿರುದ್ಧ ಪಾಲಿಕೆ ವತಿಯಿಂದ ಕ್ರಮ ತೆಗೆದುಕೊಳ್ಳಲು ಸೂಚಿಸುತ್ತೇನೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿ, 'ಅನಧಿಕೃತವಾಗಿ ರಸ್ತೆಯಲ್ಲಿ ಫ್ಲೆಕ್ಸ್ ಹಾಕಿದರೆ ದುಬಾರಿ ದಂಡ ವಿಧಿಸುವಂತೆ ಆಯುಕ್ತರಿಗೆ ಸೂಚಿಸಿದ್ದೇನೆ' ಎಂದು ಹೇಳಿದರು.

ಕೊಟ್ಟ ಮಾತಿನಂತೆ ಒಳಮೀಸಲಾತಿ: 'ಒಳ ಮೀಸಲಾತಿ ಜಾರಿಗೆ ತರುವ ಮೂಲಕ ಪರಿಶಿಷ್ಟ ಜಾತಿಯಲ್ಲಿ ಬಲವಿರಲಿ, ಎಡವಿರಲಿ, ಲಂಬಾಣಿ ಇರಲಿ, ಬೋವಿ ಇರಲಿ ಎಲ್ಲರಿಗೂ ನ್ಯಾಯ ಒದಗಿಸುವ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ' ಎಂದರು.

ಒಳಮೀಸಲಾತಿ ವಿಚಾರವಾಗಿ ಬಿಜೆಪಿ ಟೀಕೆ ಮಾಡಿರುವ ಬಗ್ಗೆ ಕೇಳಿದಾಗ, 'ಬಿಜೆಪಿಯವರ ಕೈಯಲ್ಲಿ ಏನೂ ಮಾಡಲು ಆಗಿಲ್ಲ. ನಾವೇನು ಮಾತು ಕೊಟ್ಟಿದ್ದೆವೋ ಆ ಮಾತಿನ ಪ್ರಕಾರ ನಡೆದಿದ್ದೇವೆ. ಹಿಂದೆ ಶೇ 17ರಷ್ಟು ಮೀಸಲಾತಿ ಇದ್ದಾಗಲೂ ಕೂಡ ನಾವು ಸರಿಯಾಗಿಯೇ ಮಾಡಿದ್ದೆವು. ಈಗಲೂ ಕೂಡ ಬಹಳ ಸರಳವಾಗಿ ಮಾಡಿದ್ದೇವೆ. ಬಲ ಹಾಗೂ ಎಡ ಪಂಗಡಗಳಲ್ಲಿ ಮೊದಲು ಯಾರಿಗೆ, ನಂತರ ಯಾರಿಗೆ ಎಂಬ ಪ್ರಶ್ನೆ ಇತ್ತು. ಅದಕ್ಕೆ ಬೇಕಾದ ಪರಿಹಾರ ದಾರಿ ಕಂಡುಹಿಡಿಯಲಾಗಿದೆ' ಎಂದರು.

ಬಿಜೆಪಿ ಬಿಎಸ್‌ವೈ ಅಭಿಮಾನೋತ್ಸವ ಹಮ್ಮಿಕೊಂಡ ಬಗ್ಗೆ ಕೇಳಿದಾಗ, 'ರಾಜಕೀಯಕ್ಕೆ ವಿದಾಯ ಹೇಳಬೇಕಲ್ಲವೇ. ಅವರ ಸಾಧನೆಗಳನ್ನು ವಿದಾಯವನ್ನು ಅವರು ಹೇಳಬೇಕಲ್ಲವೇ. ಅದಕ್ಕೆ ಈ ಕಾರ್ಯಕ್ರಮ ಮಾಡುತ್ತಿದ್ದಾರೆ. ಅವರ ಪಕ್ಷಕ್ಕೆ ಏನಾದರೂ ಕೊಡುಗೆ ಕೊಡಬೇಕಲ್ವಾ ಅದಕ್ಕಾಗಿ ಮಾಡುತ್ತಿದ್ದಾರೆ' ಎಂದರು.

'ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ನಡೆಸದಿದ್ದರೆ ನ್ಯಾಯಾಂಗ ನಿಂದನೆ ಅರ್ಜಿ ಹಾಕುತ್ತೇವೆ' ಎಂ ಎ.ಪಿ. ರಂಗನಾಥ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಮೊದಲು ಆ ಕೆಲಸ ಮಾಡಲಿ, ಯಾರು ಬೇಡ ಅಂತಿದ್ದಾರೆ? ನಾವೇನು ಚುನಾವಣೆ ಮಾಡುವುದಿಲ್ಲವೆಂದು ಹೇಳಿದ್ದೇವೆಯೇ? ಪಾಲಿಕೆ ಹಾಗೂ ಸ್ಥಳೀಯಸಂಸ್ಥೆಗಳ ಚುನಾವಣೆ ನಡೆಸಲು ನಾವು ಸಿದ್ಧರಿದ್ದೇವೆ' ಎಂದರು.

ಗ್ರಾಹಕರ ಮೇಲಿನ ದಂಡದ ಹೊರೆ ತಪ್ಪಿಸಲು ಜಲಮಂಡಳಿಯಿಂದ ಕ್ರಮ

ಮಳೆ ನೀರು ಸಂಗ್ರಹ ಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಂತ ಕಟ್ಟಡದಲ್ಲಿ ಮಳೆ ನೀರು ಸಂಗ್ರಹ ವ್ಯವಸ್ಥೆ ಅಳವಡಿಸಿಕೊಳ್ಳಲು ಜಾಗದ ಕೊರತೆ ಇರುವವರಿಗೆ ಜಲಮಂಡಳಿಯು ಹೊಸ ತಂತ್ರಜ್ಞಾನವನ್ನು ಪರಿಚಯಿಸಿದೆ. ಶುದ್ಧ ನೀರು ಒದಗಿಸುವ ಜತೆಗೆ ಗ್ರಾಹಕರ ಮೇಲಿನ ದಂಡದ ಹೊರೆಯನ್ನು ಇದು ತಗ್ಗಿಸಲಿದೆ.

'ನಗರದಲ್ಲಿ ಮಳೆನೀರು ಸಂಗ್ರಹ ಅಭಿಯಾನವನ್ನು ಮತ್ತಷ್ಟು ಚುರುಕುಗೊಳಿಸುವ ಉದ್ದೇಶದಿಂದ, ಗ್ರಾಹಕರು ಬಯಸಿದರೆ ಕಟ್ಟಡಗಳಲ್ಲಿ ಜಲಮಂಡಳಿಯೇ ಖುದ್ದಾಗಿ ಅತ್ಯಾಧುನಿಕ ತಂತ್ರಜ್ಞಾನದ ಮಳೆನೀರು ಸಂಗ್ರಹ ವ್ಯವಸ್ಥೆ ಅಳವಡಿಸಲು ಮುಂದಾಗಿದೆ' ಎಂದು ಜಲಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಮಳೆನೀರು ಸಂಗ್ರಹ ಪದ್ಧತಿ ಅಳವಡಿಸಿಕೊಳ್ಳದ ಕಾರಣಕ್ಕೆ ಗ್ರಾಹಕರು ಜಲಮಂಡಳಿಗೆ ಪ್ರತಿ ತಿಂಗಳು ದಂಡ ಪಾವತಿಸುತ್ತಿದ್ದಾರೆ. ಜಲಮಂಡಳಿ ದಂಡದ ರೂಪದಲ್ಲಿಯೇ ಪ್ರತಿ ತಿಂಗಳು ₹3 ಕೋಟಿ ಆದಾಯ ಸಂಗ್ರಹಿಸುತ್ತಿದೆ.

ಈ ಯೋಜನೆಯಡಿ ಇಚ್ಛಿಸುವ ಗ್ರಾಹಕರ ಕಟ್ಟಡಗಳಿಗೆ ಜಲಮಂಡಳಿಯೇ ಮಳೆನೀರು ಸಂಗ್ರಹ ವ್ಯವಸ್ಥೆಯನ್ನು ಅಳವಡಿಸಲಿದೆ. ಇದಕ್ಕಾಗಿ ತಗಲುವ ವೆಚ್ಚವನ್ನು ಗ್ರಾಹಕರು ಪ್ರತಿ ತಿಂಗಳು ಪಾವತಿಸುವ ದಂಡದ ಮೊತ್ತದ ರೂಪದಲ್ಲೇ ಹಂತ ಹಂತವಾಗಿ ವಸೂಲಿ ಮಾಡಲು ನಿರ್ಧರಿಸಲಾಗಿದೆ. ಇದರಿಂದ ಕಾಲಕ್ರಮೇಣ ಗ್ರಾಹಕರಿಗೆ ದಂಡ ಕಟ್ಟುವ ಕಿರಿಕಿರಿ ತಪ್ಪಲಿದೆ. ಮಾಸಿಕ ನೀರಿನ ಬಿಲ್ ಪ್ರಮಾಣ ಕಡಿಮೆಯಾಗಲಿದೆ ಎಂದು ಅವರು ತಿಳಿಸಿದ್ದಾರೆ.

ಪ್ರಾಯೋಗಿಕ ಯೋಜನೆ ಯಶಸ್ವಿ

ಮಳೆನೀರು ಸಂಗ್ರಹ ಪದ್ಧತಿಯನ್ನು ಪ್ರಾಯೋಗಿಕವಾಗಿ 75 ಕಡೆಗಳಲ್ಲಿ ಅಳವಡಿಸಲಾಗಿದ್ದು, ಉತ್ತಮ ಗುಣಮಟ್ಟದ ನೀರು ಲಭ್ಯವಾಗುತ್ತಿರುವುದು ದೃಢಪಟ್ಟಿದೆ. ಭುವನೇಶ್ವರಿ ನಗರದ ಕಟ್ಟಡವೊಂದರಲ್ಲಿ ಅಳವಡಿಸಿರುವ ಮಳೆನೀರು ಸಂಗ್ರಹ ಪದ್ಧತಿ ಯಶಸ್ವಿಯಾಗಿದೆ.

ಹೊಸ ವ್ಯವಸ್ಥೆ ಅಳವಡಿಸಿಕೊಂಡ ನಿವಾಸಿ ಅಶ್ವಥ್, 'ತಾಂತ್ರಿಕ ಹಾಗೂ ವಿಜ್ಞಾನದ ಸಹಾಯದಿಂದ ಮಳೆನೀರನ್ನು ನೇರವಾಗಿ ಉಪಯೋಗಿಸಲು ಹೊಸ ತಂತ್ರಜ್ಞಾನ ಬಳಸುತ್ತಿರುವೆ. ಪ್ರಯೋಗಾಲಯದಲ್ಲಿ ಗುಣಮಟ್ಟದ ಪರೀಕ್ಷೆ ಮಾಡಿಸಿದ್ದೇನೆ. ಫಿಲ್ಟರ್ ಆದ ಮಳೆನೀರು ನಲ್ಲಿ ಹಾಗೂ ಕೊಳದ ನೀರಿಗಿಂತ ಪರಿಶುದ್ಧವಾಗಿದೆ. ಮಳೆನೀರನ್ನು ಮರುಬಳಕೆ ಮಾಡುವುದರಿಂದ ಕಾವೇರಿ ನೀರಿನ ಬಿಲ್ ಕೂಡ ಕಡಿಮೆಯಾಗುತ್ತಿದೆ' ಎಂದರು.

ಜಲಮಂಡಳಿ ಜಾರಿಗೊಳಿಸಲು ಉದ್ದೇಶಿಸಿರುವ ತಂತ್ರಜ್ಞಾನ ಆಧಾರಿತ ಮಳೆ ನೀರು ಸಂಗ್ರಹದ ಪ್ರಾಯೋಗಿಕ ಯೋಜನೆಯನ್ನು ಅಧ್ಯಕ್ಷ ಡಾ.ರಾಮಪ್ರಸಾತ್ ಮನೋಹರ್ ವೀಕ್ಷಿಸಿದರು

ಹೇಗಿರಲಿದೆ ತಂತ್ರಜ್ಞಾನ

ಈ ವ್ಯವಸ್ಥೆಯಲ್ಲಿ ಆ್ಯಂಟಿ-ಚೋಕ್ ನೇಯ್ಗೆ ಹೊಂದಿರುವ ಎಸ್‌ಎಸ್ 316 ಮೆಶ್ ಅನ್ನು ಅಳವಡಿಸಲಾಗಿದೆ. ಫಿಲ್ಟರ್‌ನ ಒಳಗಿರುವ ಸ್ಟ್ರೀಮ್‌ಲೈನರ್ ವಿನ್ಯಾಸವು ಒಳಬರುವ ನೀರಿನ ವೇಗವನ್ನು ಗರಿಷ್ಠಗೊಳಿಸುತ್ತದೆ.

ಗುರುತ್ವಾಕರ್ಷಣೆ ಶಕ್ತಿಯನ್ನು ಬಳಸಿಕೊಂಡು 60 ಮೈಕ್ರಾನ್ ಮೆಶ್‌ನಲ್ಲಿ ಶೇ 90 ಕ್ಕಿಂತ ಹೆಚ್ಚು ನೀರನ್ನು ಮರುಪಡೆಯುವ ಸಾಮರ್ಥ್ಯವನ್ನು ಇದು ಹೊಂದಿದೆ. ಇದರಲ್ಲಿರುವ ರೆಗ್ಯುಲೇಟರಿ ಸಿಸ್ಟಮ್, ಆಟೋಮ್ಯಾಟಿಕ್ ವಿಂಡೋ ಒಟ್ಟಾಗಿ ಕೆಲಸ ಮಾಡಲಿದ್ದು, ನೀರಿನಲ್ಲಿ ಎಷ್ಟೇ ದೊಡ್ಡ ಗಾತ್ರದ ತ್ಯಾಜ್ಯವಿದ್ದರೂ ಅದನ್ನು ತಕ್ಷಣವೇ ಹೊರಹಾಕಿ ಶುದ್ಧ ನೀರನ್ನು ಒದಗಿಸುತ್ತದೆ.

'ಅನುಭವಗಳಿಗೆ ಕಥೆಯ ಚೌಕಟ್ಟು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸುತ್ತಲಿನ ಗ್ರಾಮೀಣ ಪರಿಸರ, ಅಲ್ಲಿನ ಅನುಭವಗಳಿಗೆ ಕಲ್ಪನೆ ಬೆರೆಸಿ ಕಥೆಯ ಚೌಕಟ್ಟು ನೀಡುತ್ತೇನೆ' ಎಂದು ಕಥೆಗಾರ ಅಮರೇಶ್ ನುಗಡೋಣಿ ಹೇಳಿದರು.

ಈ ಹೊತ್ತಿಗೆ ನಗರದಲ್ಲಿ ಹಮ್ಮಿಕೊಂಡಿದ್ದ ತಿಂಗಳ ಪುಸ್ತಕ ಚರ್ಚೆ ಕಾರ್ಯಕ್ರಮದಲ್ಲಿ ಅವರ 'ದಡ ಸೇರಿಸು ತಂದೆ' ಕೃತಿಯ ಬಗ್ಗೆ ಚರ್ಚೆ ನಡೆಯಿತು.

ಅಮರೇಶ್ ಮಾತನಾಡಿ, 'ನಾನು ಕೃತಿ ರಚಿಸುವಾಗ ಯಾವುದೇ ತಾಂತ್ರಿಕ ಕಸರತ್ತುಗಳಿಗೆ ಪ್ರಯತ್ನಿಸಲಿಲ್ಲ. ನನ್ನ ಕಥೆಗಳು ನನ್ನ ಜನರ ಕಥೆಗಳು. ನನ್ನ ಕಥೆಗಳಲ್ಲಿ ಕೇಡು ಮತ್ತು ಒಳಿತು ಎರಡೂ ಇವೆ. ಕೇಡನ್ನು ಹಿಂದಕ್ಕೆ ಹಾಕಿ ಒಳಿತನ್ನು ಮುಂದೆ ಮಾಡುತ್ತೇನೆ. ಹೈದರಾಬಾದ್ ಕರ್ನಾಟಕ ಆರ್ಥಿಕವಾಗಿ ಬಡತನದಿಂದ ಕೂಡಿದ್ದರೂ, ಸಾಹಿತ್ಯ, ಸಾಂಸ್ಕೃತಿಕವಾಗಿ ಶ್ರೀಮಂತವಾಗಿದೆ' ಎಂದರು.

ವಿಮರ್ಶಕ ಬಸವರಾಜ ಕಲ್ಗುಡಿ, 'ಹೈದರಾಬಾದ್ ಕರ್ನಾಟಕ ಭಾಗದ ಪರಿಸ್ಥಿತಿಯನ್ನು ತಮ್ಮದೇಯಾದ ಮುಗ್ಧ ಕಣ್ಣುಗಳಿಂದ ನುಗಡೋಣಿ ಅವರು ಸೆರೆ ಹಿಡಿದಿದ್ದಾರೆ. ಅಲ್ಲಿನ ಧರ್ಮ ಸಮನ್ವಯ ತಾತ್ವಿಕತೆಯು ಕಥೆಗಳಲ್ಲಿ ಎದ್ದು ಕಾಣುತ್ತದೆ. ಸಮಾನತೆಯ ಸಾಮುದಾಯಿಕ ಪ್ರಜ್ಞೆ ಅವರ ಕಥೆಗಳಲ್ಲಿದೆ. ಜೀವನದ ನಿರಂತರ ಹೋರಾಟ ಅವರ ಎಲ್ಲ ಕಥೆಗಳಲ್ಲಿ ಜೀವಜಲದಂತೆ ಬರುತ್ತದೆ' ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಹೊತ್ತಿಗೆಯ ಅಧ್ಯಕ್ಷೆ ಜಯಲಕ್ಷ್ಮಿ ಪಾಟೀಲ್ ಮತ್ತು ಬೀಟಲ್ ಬುಕ್ ಶಾಪ್‌ನ ಧನಂಜಯ ಎನ್. ಉಪಸ್ಥಿತರಿದ್ದರು.

ಯುವ ನಾಯಕತ್ವ ವಿನಿಮಯ ಕಾರ್ಯಕ್ರಮಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಶ್ರೀಶ್ರೀ ರವಿಶಂಕರ್ ಗುರೂಜಿ

ಬೆಂಗಳೂರು: ದಿ ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರದಲ್ಲಿ ಆಯೋಜಿಸಿರುವ ಯುವ ನಾಯಕತ್ವ ವಿನಿಮಯ ಕಾರ್ಯಕ್ರಮಕ್ಕೆ ಶ್ರೀಶ್ರೀ ರವಿಶಂಕರ್ ಗುರೂಜಿ ಚಾಲನೆ ನೀಡಿದರು.

ದಿ ಆರ್ಟ್ ಆಫ್ ಲಿವಿಂಗ್‌ನ 45ನೇ ವರ್ಷದ ಆಚರಣೆಯ ಅಂಗವಾಗಿ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಆಶ್ರಯದಲ್ಲಿ ನಡೆಯುತ್ತಿರುವ ಆರು ದಿನಗಳ ಕಾರ್ಯಕ್ರಮದಲ್ಲಿ ಭಾರತ, ನೇಪಾಳ, ಭೂತಾನ್, ಶ್ರೀಲಂಕಾ, ಮ್ಯಾನ್ಮಾರ್, ಬಾಂಗ್ಲಾದೇಶ ಮತ್ತು ಥಾಯ್ಲೆಂಡ್‌ನ (ಬಿಐಎಂಎಸ್‌ಟಿಇಸಿ) ಯುವ ನಾಯಕರು ಭಾಗವಹಿಸಿದ್ದರು.

ಶ್ರೀಶ್ರೀ ರವಿಶಂಕರ್ ಗುರೂಜಿ ಮಾತನಾಡಿ, 'ಪ್ರಾದೇಶಿಕ ಸ್ನೇಹವನ್ನು ಬೆಳೆಸುವುದು. ಯುವ ನಾಯಕತ್ವ ಬೆಳೆಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ಮುಂದಿನ ತಲೆಮಾರು ಸಂಘರ್ಷಕ್ಕಿಂತ ಸಹಕಾರವನ್ನು ಆಯ್ಕೆ ಮಾಡಿಕೊಂಡು, ಹೆಚ್ಚು ಒಗ್ಗಟ್ಟು ಪ್ರದರ್ಶಿಸಬೇಕು' ಎಂದು ಕರೆ ನೀಡಿದರು.

'ಯುವ ನಾಯಕರು ಬದಲಾವಣೆ ಹಾಗೂ ಜನರ ಹೃದಯಗಳನ್ನು ಒಂದುಗೂಡಿಸಬಹುದು. ರಾಷ್ಟ್ರಗಳು ಪರಸ್ಪರ ಅಸೂಯೆ ಪಡುವುದನ್ನು ಬಿಟ್ಟು ಸಹಕಾರ ಹಾಗೂ ಪ್ರೀತಿಯಿಂದ ಇರಬೇಕು' ಎಂದರು.

ಕಾವೇರಿ ನದಿಪಾತ್ರದ ಮಡ್ಡಿಯಲ್ಲಿ ಅಪಾಯಕಾರಿ ಲೋಹಗಳು ಪತ್ತೆ

• ಚಿರಂಜೀವಿ ಕುಲಕರ್ಣಿ

ಬೆಂಗಳೂರು: ಕಾವೇರಿ ನದಿಪಾತ್ರದ ಮಡ್ಡಿಯಲ್ಲಿ (ಕೆಸರು) ಸೀಸ, ತಾಮ್ರ ಮತ್ತು ಪಾದರಸದಂತಹ ಭಾರಲೋಹಗಳು ಅಪಾಯಕಾರಿ ಮಟ್ಟದಲ್ಲಿ ಇವೆ ಎಂಬುದನ್ನು ಭಾರತೀಯ ವನ್ಯಜೀವಿ ಸಂಸ್ಥೆಯ ವಿಜ್ಞಾನಿಗಳು ಪತ್ತೆ ಮಾಡಿದ್ದಾರೆ.

ಸಂಸ್ಥೆಯ 19 ವಿಜ್ಞಾನಿಗಳು ಕಾವೇರಿ ಕೊಳ್ಳದಲ್ಲಿ ನಡೆಸಿದ ಸಂಶೋಧನಾ ವರದಿಯಲ್ಲಿ ಈ ಮಾಹಿತಿ ಇದೆ. ಒಟ್ಟು 805 ಕಿ.ಮೀ.ನಷ್ಟು ಉದ್ದದ ನದಿಯಲ್ಲಿ 85 ಕಿ.ಮೀ.ನಷ್ಟು ನದಿಪಾತ್ರವನ್ನು ಸಂಶೋಧನೆಗೆ ಆಯ್ಕೆ ಮಾಡಿಕೊಳ್ಳಲಾಗಿತ್ತು. ಈ 85 ಕಿ.ಮೀ.ನಷ್ಟು ನದಿಪಾತ್ರವನ್ನು ತಲಾ 5 ಕಿ.ಮೀ.ನ 17 ಭಾಗಗಳಾಗಿ ವಿಂಗಡಿಸಿಕೊಂಡು ಮಡ್ಡಿಯ ಮಾದರಿಯನ್ನು ಸಂಗ್ರಹಿಸಲಾಗಿತ್ತು. ಈ ಮಡ್ಡಿಯನ್ನು ಪರೀಕ್ಷೆಗೆ ಒಳಪಡಿಸಿದಾಗ ಭಾರಲೋಹಗಳು ಅಪಾಯಕಾರಿ ಮಟ್ಟದಲ್ಲಿ ಇರುವುದು ಪತ್ತೆಯಾಗಿದೆ.

ನದಿಪಾತ್ರುದುದ್ದಕ್ಕೂ ಮಾದರಿ ಸಂಗ್ರಹಿಸಿ ಸಂಶೋಧನೆ ನಡೆಸಿದರೆ ಮತ್ತಷ್ಟು ಅಂಶಗಳು ಪತ್ತೆಯಾಗಬಹುದು

ಸೈಯದ್ ಐನೂಲ್ ಹುಸೇನ್, ಸಂಶೋಧನಾ ತಂಡದ ಮುಖ್ಯಸ್ಥ

ಒಂದು ಕೆ.ಜಿ.ಯಷ್ಟು ಮಡ್ಡಿಯಲ್ಲಿ 59.75 ಮಿಲಿಗ್ರಾಂನಷ್ಟು ಸೀಸ (ಸುರಕ್ಷಿತ ಮಟ್ಟ 35 ಮಿಲಿಗ್ರಾಂ), 97 ಮಿಲಿಗ್ರಾಂನಷ್ಟು ತಾಮ್ರ (ಸುರಕ್ಷಿತ ಮಟ್ಟ 36 ಮಿಲಿಗ್ರಾಂ) ಮತ್ತು 0.37 ಮಿಲಿಗ್ರಾಂನಷ್ಟು ಪಾದರಸ (ಸುರಕ್ಷಿತ ಮಟ್ಟ 0.17 ಮಿಲಿಗ್ರಾಂ) ಇರುವುದು ಪತ್ತೆಯಾಗಿದೆ. ಈ ಎಲ್ಲವೂ ಮಾನವನ ಮೂತ್ರಪಿಂಡ, ಜಠರ, ನರಮಂಡಲದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವಂತಹ ವಸ್ತುಗಳಾಗಿವೆ ಎಂಬುದನ್ನು ಸಂಶೋಧನಾ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಜನಿವಾರ ಪ್ರಕರಣ: ವಿವಿಧ ಸಂಘಟನೆಗಳಿಂದ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿದ್ಯಾರ್ಥಿಗಳು ಧರಿಸುವ ಯಾವುದೇ ವೈಯಕ್ತಿಕ ಧಾರ್ಮಿಕ ಚಿಹ್ನೆಗಳನ್ನು ತೆಗೆಸಬಾರದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮಾರ್ಗಸೂಚಿ ಇದ್ದರೂ ಕೆಲವು ಕಾಲೇಜುಗಳಲ್ಲಿ ಬಲವಂತದಿಂದ ವಿದ್ಯಾರ್ಥಿಗಳ ಜನಿವಾರ ಕಿತ್ತು ಹಾಕಿರುವುದು ಸರಿಯಲ್ಲ' ಎಂದು ಅಖಿಲ ಭಾರತ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆ (ಎಐಡಿಎಸ್‌ಒ) ಖಂಡಿಸಿದೆ.

'ನಾಲ್ಕು ವರ್ಷಗಳ ಹಿಂದೆ ಯುವತಿಯರು ಹಿಜಾಬ್ ಧರಿಸಿದ್ದಕ್ಕಾಗಿ ಅಡ್ಡಿಪಡಿಸಿ ಅವರ ಶಿಕ್ಷಣದ ಹಕ್ಕನ್ನು ಮೊಟಕುಗೊಳಿಸಲಾಯಿತು. ಆ ಘಟನೆಯನ್ನು ನೈಜ ಧರ್ಮ ನಿರಪೇಕ್ಷ ತತ್ವಗಳೊಂದಿಗೆ ನಿರ್ವಹಿಸದ್ದರ ಪರಿಣಾಮ ಇತರ ಧರ್ಮಗಳ ವಿದ್ಯಾರ್ಥಿಗಳ ವಿಷಯದಲ್ಲೂ ಮರುಕಳಿಸುತ್ತಿದೆ. ವೈಯಕ್ತಿಕ ನಂಬಿಕೆಗಳ ಮೇಲೆ ದಾಳಿ ಮಾಡುವುದನ್ನು ಒಪ್ಪಲಾಗದು' ಎಂದು ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ತಿಳಿಸಿದ್ದಾರೆ.

'ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ರಾಜ್ಯ ಸರ್ಕಾರವು ಮಧ್ಯಪ್ರವೇಶಿಸಿ, ಯುವ ವಿದ್ಯಾರ್ಥಿಗಳ ಮನಸ್ಸನ್ನು ಗಾಸಿಗೊಳಿಸುತ್ತಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ.

ಎಬಿವಿಪಿ ಖಂಡನೆ: ಪರೀಕ್ಷೆ ವೇಳೆ ವಿದ್ಯಾರ್ಥಿಗಳಿಗೆ ಜನಿವಾರ ತೆಗೆಯುವಂತೆ ಒತ್ತಾಯಿಸಿರುವುದು ಸ್ವೀಕಾರಾರ್ಹವಲ್ಲ. ಇದು ಸಂವಿಧಾನ ವಿರೋಧಿ ಹಾಗೂ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ಕ್ರಮ ಎಂದು ಎಬಿವಿಪಿ ಖಂಡಿಸಿದೆ.

'ಶೈಕ್ಷಣಿಕ ಸ್ಥಳಗಳಲ್ಲಿ ರಾಜಕೀಯ ಪಕ್ಷಪಾತ ಇಲ್ಲವೇ ಧಾರ್ಮಿಕ ಹಗೆತನಕ್ಕೆ ಸ್ಥಾನವಿಲ್ಲ. ಇಂತಹ ಕ್ರಮಗಳು ರಾಜ್ಯ ಸರ್ಕಾರದ ದ್ವಂದ್ವ ನಿಲುವನ್ನು ಪ್ರತಿಬಿಂಬಿಸುತ್ತದೆ. ಈ ಕುರಿತು ಸಮಗ್ರ ತನಿಖೆಗೆ ಆದೇಶಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು. ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳಬೇಕು' ಎಂದು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ವೀರೇಂದ್ರ ಸಿಂಗ್ ಸೋಲಂಕಿ ಒತ್ತಾಯಿಸಿದ್ದಾರೆ.

ಒಳಮೀಸಲಾತಿ ಸಮಿತಿ ಸ್ವಾಗತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ 35 ವರ್ಷಗಳಿಂದ ಕಗ್ಗಂಟಾಗಿದ್ದ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಕುರಿತಂತೆ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ನ್ಯಾಯ ಸಮ್ಮತವಾದ ತೀರ್ಮಾನವನ್ನು ಕೈಗೊಂಡಿದೆ ಎಂದು ಒಳಮೀಸಲಾತಿ ಹೋರಾಟ ಸಮಿತಿ ತಿಳಿಸಿದೆ.

ಎಡಗೈ ಮತ್ತು ಬಲಗೈ ಸಮುದಾಯಗಳಿಗೆ ಶೇ 5.25 ಹಾಗೂ ಅಲೆಮಾರಿ ಸಮುದಾಯಗಳು ಸೇರಿದಂತೆ ಇತರೆ ಪರಿಶಿಷ್ಟ ಜಾತಿಗಳಿಗೆ ಶೇ 4.5 ಹಂಚಿಕೆ ಸೂತ್ರವು ಎಲ್ಲ ಪರಿಶಿಷ್ಟ ಜಾತಿಗಳಿಗೆ ಅನುಕೂಲವಾಗಲಿದೆ ಎಂದು ಹೋರಾಟ ಸಮಿತಿಯ ಬಸರಾಜ ಕೌತಾಳ್, ಎಸ್.ಮಾರೆಪ್ಪ, ಜೆ.ಬಿ. ರಾಜಣ್ಣ, ಅಂಬಣ್ಣ ಅರೋಲಿಕರ್, ಆರ್. ಮುನಿಯಪ್ಪ, ಬಿ.ಆರ್. ಭಾಸ್ಕರ ಪ್ರಸಾದ್ ತಿಳಿಸಿದ್ದಾರೆ.

ವೈಕುಂಠ ಸಮಾರಾಧನೆ

ಶ್ರೀ ಬಚ್ಚಣ್ಣ ರವರು

ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾದ ಉತ್ತರ ಕ್ರಿಯಾಧಿ ಪುಣ್ಯಾಹ ದಿನಾಂಕ 28-04-2026ನೇ ಮಂಗಳವಾರ ಬೆಳಿಗ್ಗೆ 8:50 ಗಂಟೆಗೆ ವೈಕುಂಠ ಸಮಾರಾಧನೆಯನ್ನು ಸ್ವಗೃಹದಲ್ಲಿ ನಡೆಯುವಂತೆ ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಕುಟುಂಬ ಸಮೇತರಾಗಿ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಶ್ರೀಮತಿ ಭಾಗ್ಯಲಕ್ಷ್ಮೀ ಮತ್ತು ಕುಟುಂಬದವರು ಹಾಗೂ ಬಂಧು -ಮಿತ್ರರು.

ಸ್ಥಳ : # 90, 34ನೇ ಅಡ್ಡರಸ್ತೆ, ಜೂಗನಹಳ್ಳಿ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...
9606038256

'ಸ್ಕೈವಾಕ್: ಲಿಫ್ಟ್ ಸರಿಪಡಿಸಿ'



ಯಶವಂತಪುರದಲ್ಲಿರುವ ಸ್ಕೈವಾಕ್‌ಗೆ ಅಳವಡಿಸಿದ್ದ ಎರಡು ಲಿಫ್ಟ್‌ಗಳು ಕಾರ್ಯನಿರ್ವಹಿಸುತ್ತಿಲ್ಲ. ಇದರಿಂದ ರಸ್ತೆ ದಾಟುವ ಸಾರ್ವಜನಿಕರಿಗೆ ಅದರಲ್ಲೂ ವೃದ್ಧರಿಗೆ, ಮಹಿಳೆಯರಿಗೆ, ಮಕ್ಕಳಿಗೆ ಹಾಗೂ ಅಂಗವಿಕಲರಿಗೆ ತೊಂದರೆ ಆಗುತ್ತಿದೆ. ಸಾರ್ವಜನಿಕರ ಅನುಕೂಲಕ್ಕಾಗಿ ಅಳವಡಿಸಿದ್ದ ಲಿಫ್ಟ್‌ಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಈ ಸಮಸ್ಯೆಗೆ ಕೂಡಲೇ ಪರಿಹಾರ ಕಲ್ಪಿಸಬೇಕು.

ವಿಶಾಲಾಕ್ಷಿ, ಶಂಕರನಗರ

'ಸಂಚಾರಿ ವಿದ್ಯುತ್ ಪರಿವರ್ತಕ ತೆರವುಗೊಳಿಸಿ'

ಮೂಡಲಪಾಳ್ಯದ ಸಂಜೀವಿನ ನಗರದ ಆರನೇ ಕ್ರಾಸ್‌ನಲ್ಲಿ ಸಂಚಾರಿ ವಿದ್ಯುತ್ ಪರಿವರ್ತಕ ನಿಲ್ಲಿಸಲಾಗಿದೆ. ಇದರಿಂದ ವಾಹನ ಸಂಚಾರಕ್ಕೆ ಅನನುಕೂಲವಾಗಿದೆ. ಸಂಚಾರ ದಟ್ಟಣೆಯೂ ಆಗುತ್ತಿದೆ. ಆರು ತಿಂಗಳ ಹಿಂದೆ ಇಲ್ಲಿದ್ದ ವಿದ್ಯುತ್ ಪರಿವರ್ತಕ ಸುಟ್ಟು ಹೋಗಿತ್ತು. ಅದರ ಬದಲಾಗಿ ಬೆಸ್ಕಾಂ ಸಿಬ್ಬಂದಿ ತಾತ್ಕಾಲಿಕವಾಗಿ ತಂದು ನಿಲ್ಲಿಸಿದ್ದ ಸಂಚಾರಿ ವಿದ್ಯುತ್ ಪರಿವರ್ತಕವನ್ನು ಇದುವರೆಗೂ ತೆಗೆದುಕೊಂಡು ಹೋಗಿಲ್ಲ.

ಕುಮಾರ್, ಮೂಡಲಪಾಳ್ಯ

'ಖಾಲಿ ನಿವೇಶನದಲ್ಲಿ ಕಸದ ರಾಶಿ'

ವಿಜಯನಗರದ ಮೂರನೇ ಮುಖ್ಯ ರಸ್ತೆಯ ಖಾಲಿ ನಿವೇಶನದಲ್ಲಿ ಕಸದ ರಾಶಿ ಹಾಕಲಾಗಿದೆ. ವಿಜಯ ನಗರ ಕ್ಲಬ್ ಸಮೀಪವಿರುವ ಈ ರಸ್ತೆಯಲ್ಲಿ ಜೆ.ಜೆ.ಅಪಾರ್ಟ್‌ಮೆಂಟ್ ಸೇರಿ ಮೂರು ಅಪಾರ್ಟ್‌ಮೆಂಟ್‌ಗಳು ಹಾಗೂ ಅಂಬೇಡ್ಕರ್ ಕಾಲೊನಿ ಇದೆ. ಸ್ಥಳೀಯರು ತಮ್ಮ ಮನೆಗಳಲ್ಲಿ ಉತ್ಪತ್ತಿಯಾಗುವ ಕಸವನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿಕೊಂಡು ಈ ಖಾಲಿ ನಿವೇಶನದಲ್ಲಿ ಎಸೆದು ಹೋಗುತ್ತಿದ್ದಾರೆ. ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಎದುರಾಗಿದೆ. ಇದರ ಜೊತೆಗೆ ಸೊಳ್ಳೆಗಳ ಕಾಟವೂ ಹೆಚ್ಚಾಗಿದೆ.

ವಿಜಯನಗರದ ನಿವಾಸಿಗಳು

'ಬಾಗಿದ ಮರ ತೆರವುಗೊಳಿಸಿ'

ಬಿಡಿಎ ಕಚೇರಿ ಬಳಿಯ ಮುಖ್ಯರಸ್ತೆಯಲ್ಲಿ ಮರವೊಂದು ಬಾಗಿದೆ. ಇದರಿಂದ ವಾಹನ ಸವಾರರಿಗೆ ತೊಂದರೆ ಆಗುತ್ತಿದೆ. ಮರ ಬಿದ್ದು ಏನಾದರೂ ಅನಾಹುತ ಸಂಭವಿಸುವ ಮುನ್ನ ಇದನ್ನು ತೆರವುಗೊಳಿಸಬೇಕು. ಈ ಬಗ್ಗೆ ಸಂಬಂಧಪಟ್ಟ ಪಾಲಿಕೆ ಸಿಬ್ಬಂದಿಗೆ ದೂರು ನೀಡಿದರೂ ಸ್ಪಂದಿಸುತ್ತಿಲ್ಲ.

ಚಂದ್ರಶೇಖರ ಎಚ್.ಎಸ್., ವಾಹನ ಸವಾರ



ಬೆಸ್ಕಾಂ: ದತ್ತಾಂಶ ರಕ್ಷಣೆಗೆ ಸೈಬರ್ ಭದ್ರತಾ ಕಾರ್ಯಾಚರಣೆ ಕೇಂದ್ರ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ಕೇಂದ್ರ ಕಚೇರಿಯಲ್ಲಿ ಸ್ಥಾಪಿಸಲು ಸಿದ್ಧತೆ

• ಎ.ಎಂ.ಸುರೇಶ

ಬೆಂಗಳೂರು: ಗ್ರಾಹಕರ ದತ್ತಾಂಶ ರಕ್ಷಣೆ ಮತ್ತು ಸೈಬರ್ ದಾಳಿಯಿಂದ ಸಿಬ್ಬಂದಿಯ ಲ್ಯಾಪ್‌ಟಾಪ್, ಕಂಪ್ಯೂಟರ್‌ಗಳನ್ನು ರಕ್ಷಿಸುವ ಉದ್ದೇಶದಿಂದ ಸೈಬರ್ ಭದ್ರತಾ ಕಾರ್ಯಾಚರಣೆ ಕೇಂದ್ರವನ್ನು ಆರಂಭಿಸಲು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ಮುಂದಾಗಿದೆ.

ತನ್ನ ಪ್ರಮುಖ ಐ.ಟಿ ಮೂಲ ಸೌಕರ್ಯ ಹಾಗೂ ಡಿಜಿಟಲ್ ಕಾರ್ಯಾಚರಣೆ ವ್ಯವಸ್ಥೆಯ ರಕ್ಷಣೆಗಾಗಿ ಬೆಸ್ಕಾಂನ ಕಾರ್ಪೊರೇಟ್ ಕಚೇರಿಯಲ್ಲಿ ಈ ಕೇಂದ್ರವನ್ನು ಸ್ಥಾಪಿಸುತ್ತಿದ್ದು ಈಗಾಗಲೇ ಟೆಂಡರ್ ಕರೆಯಲಾಗಿದೆ.

ಈ ಯೋಜನೆಗೆ ಸುಮಾರು ₹30 ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ. ಈ ಕೇಂದ್ರದ ಪ್ರಾಥಮಿಕ ವ್ಯವಸ್ಥೆಗೆ ಹಾಗೂ ಅಧಿಕೃತ ಪರವಾನಗಿ ಪಡೆಯಲು ₹3.6 ಕೋಟಿ, ಕೇಂದ್ರದ ನಿರ್ವಹಣೆ ಮತ್ತು ತಾಂತ್ರಿಕ ಚಂದಾದಾರಿಕೆ ವ್ಯವಸ್ಥೆಗಾಗಿ ₹16.1 ಕೋಟಿ ಹಾಗೂ ಮಾನವ ಸಂಪನ್ಮೂಲಕ್ಕೆ ₹9.9 ಕೋಟಿ ವೆಚ್ಚವಾಗುವ ಸಾಧ್ಯತೆ ಇದೆ.

ಸೈಬರ್ ಭದ್ರತಾ ಕಾರ್ಯಾಚರಣೆ ಕೇಂದ್ರವು ಬೆಸ್ಕಾಂನ ಐ.ಟಿ ಮೂಲ ಸೌಕರ್ಯಗಳಾದ ಮೊಬೈಲ್ ಮತ್ತು ವೆಬ್ ಅಪ್ಲಿಕೇಶನ್ ಹಾಗೂ ಕ್ಲೌಡ್‌ನಲ್ಲಿರುವ ಸೇವೆಗಳೊಂದಿಗೆ ಸಂಯೋಜನೆಗೊಳ್ಳಲಿದೆ. ಟೆಂಡರ್ ದಾಖಲೆಯ ಪ್ರಕಾರ, ಈ ಕೇಂದ್ರವು ಪೋರ್ಟ್ ಮತ್ತು ಅನುಮಾನಾಸ್ಪದ ಸ್ಕ್ಯಾನಿಂಗ್, ಪಾಸ್‌ವರ್ಡ್ ಹ್ಯಾಕಿಂಗ್‌ಗೆ ಯತ್ನ, ಅನಧಿಕೃತವಾಗಿ ಸಿಸ್ಟಂ ನಿಯಂತ್ರಣ, ಸಿಸ್ಟಂ ಸ್ಥಗಿತಗೊಳಿಸುವ ಪ್ರಯತ್ನ ಹಾಗೂ ಸೈಬರ್ ದಾಳಿಯಂತಹ ಪ್ರಕರಣಗಳ ಬಗ್ಗೆ ನಿಗಾವಹಿಸಿ, ಅವುಗಳನ್ನು ತಡೆಯಲಿದೆ.

ಮುಖ್ಯಾಂಶಗಳು

- ವಿದ್ಯುತ್ ಪೂರೈಕೆ ಜಾಲ ಸಂರಕ್ಷಣೆ
- ಆಟೊಮೇಷನ್ ಹ್ಯಾಕ್ ಆಗದಂತೆ ತಡೆಯಲು ಕ್ರಮ
- ಗ್ರಾಹಕರ ವೈಯಕ್ತಿಕ ಮಾಹಿತಿ ರಕ್ಷಣೆ

ಸೈಬರ್ ದಾಳಿ, ವಂಚನೆ, ಬೆದರಿಕೆಯಂಥ ಅಪಾಯಗಳನ್ನು ಪತ್ತೆಹಚ್ಚಿ ಅದನ್ನು ತಡೆಯುವುದು ಇದರ ಮುಖ್ಯ ಉದ್ದೇಶವಾಗಿದ್ದು, ಕೃತಕ ಬುದ್ಧಿಮತ್ತೆ ಮತ್ತು ಮಷಿನ್ ಲರ್ನಿಂಗ್ ತಂತ್ರಜ್ಞಾನದ ನೆರವಿನೊಂದಿಗೆ ಈ ಕೇಂದ್ರ ಕಾರ್ಯನಿರ್ವಹಿಸಲಿದೆ. ಸೈಬರ್ ದಾಳಿ ತಡೆಗೆ ಈ ರೀತಿಯ ಕೇಂದ್ರವನ್ನು ತೆರೆಯುವಂತೆ ಕೇಂದ್ರ ವಿದ್ಯುತ್ ಪ್ರಾಧಿಕಾರ (ಸಿಇಎ) ಕೂಡ ಎಸ್ಕಾಂಗಳಿಗೆ ನಿರ್ದೇಶನ ನೀಡಿತ್ತು.

‘ಬೆಸ್ಕಾಂ ಲಕ್ಷಾಂತರ ಗ್ರಾಹಕರನ್ನು ಹೊಂದಿದ್ದು ಅವರ ದತ್ತಾಂಶಗಳನ್ನು ರಕ್ಷಿಸುವುದು ನಮ್ಮ ಜವಾಬ್ದಾರಿಯಾಗಿದೆ. ಗ್ರಾಹಕರು ಮಾಸಿಕ ಬಿಲ್ ಅನ್ನು ಆನ್‌ಲೈನ್ ಅಥವಾ ಮೊಬೈಲ್ ಅಪ್ಲಿಕೇಷನ್ ಮೂಲಕ ಪಾವತಿಸುತ್ತಿದ್ದು, ಇದರಲ್ಲಿ ಯಾವುದೇ ರೀತಿಯ ವಂಚನೆ ಆಗದಂತೆ ನೋಡಿಕೊಳ್ಳಲು ಇದು ಸಹಕಾರಿಯಾಗಲಿದೆ’ ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಎನ್.ಶಿವಶಂಕರ್ ಅಭಿಪ್ರಾಯಪಟ್ಟರು.

ವಿದ್ಯುತ್ ಸಂಪರ್ಕ ಪಡೆಯುವಾಗ ಗ್ರಾಹಕರು ವಿಳಾಸ ದಾಖಲೆಗೆ ಆಧಾರ್ ಕಾರ್ಡ್, ಭಾವಚಿತ್ರ, ಕಟ್ಟಡದ ವಿವರ ಇತ್ಯಾದಿ ಮಾಹಿತಿ ಒದಗಿಸಿರುತ್ತಾರೆ. ಅದನ್ನು ರಕ್ಷಿಸುವುದು ಬಹಳ ಮುಖ್ಯ. ಸ್ಮಾರ್ಟ್ ಮೀಟರ್ ಅಳವಡಿಕೆ ಬಳಿಕ ಗ್ರಾಹಕರಿಗೆ ಎಲ್ಲ ಮಾಹಿತಿಗಳು ಸುಲಭವಾಗಿ ಸಿಗುತ್ತಿವೆ. ಇವುಗಳ ರಕ್ಷಣೆಯಲ್ಲಿ ಈ ಕೇಂದ್ರವು ಮಹತ್ವದ ಪಾತ್ರ ನಿರ್ವಹಿಸಲಿದೆ ಎಂದು ತಿಳಿಸಿದರು.

ಬಹು ಹಂತದ ಭದ್ರತಾ ವ್ಯವಸ್ಥೆಯನ್ನು ಕೇಂದ್ರ ಒಳಗೊಂಡಿರಲಿದೆ. ಹತ್ತು ಜನರ ತಂಡವು ಬೆಸ್ಕಾಂನ ಎರಡು ಸಾವಿರ ಕಂಪ್ಯೂಟರ್‌ಗಳ ಮೇಲೆ ನಿಗಾವಹಿಸಲಿದೆ. ಬೆದರಿಕೆ ಅಥವಾ ಸೈಬರ್ ದಾಳಿ ಕೆಲವೊಮ್ಮೆ ಸಣ್ಣ ಪ್ರಮಾಣದಾಗಿರಬಹುದು. ಆದರೆ, ಅದರಿಂದ ಆಗುವ ಪರಿಣಾಮದ ಬಗ್ಗೆಯೂ ಯೋಚಿಸಬೇಕಾಗುತ್ತದೆ. ಜನರಿಗೆ ಅಗತ್ಯ ಸೇವೆಗಳನ್ನು ಒದಗಿಸುವಾಗ, ಅದಕ್ಕೆ ಯಾವುದೇ ರೀತಿಯ ತೊಂದರೆ ಆಗದಂತೆ ಮುನ್ನೆಚ್ಚರಿಕೆ ವಹಿಸುವುದು ಕೂಡ ಮುಖ್ಯವಾಗಿರುತ್ತದೆ ಎಂದರು.

ಮುಂದಿನ ತಿಂಗಳು ಟೆಂಡರ್ ಅಂತಿಮ

ಈಗಾಗಲೇ ಟೆಂಡರ್ ಪರಿಶೀಲನೆ ಕಾರ್ಯ ನಡೆದಿದ್ದು, ಮೇ ತಿಂಗಳ 15ರ ವೇಳೆಗೆ ಅಂತಿಮಗೊಳಿಸುವ ಸಾಧ್ಯತೆ ಇದೆ. ಟೆಂಡರ್ ಅಂತಿಮಗೊಂಡ ನಂತರ, ಅನುಷ್ಠಾನಕ್ಕೆ ಆರು ತಿಂಗಳು ಕಾಲಾವಕಾಶ ನೀಡಲಾಗುತ್ತದೆ.

ಗೃಹ ಇಲಾಖೆ, ಬ್ಯಾಂಕಿಂಗ್, ಐ.ಟಿ ವಲಯ ಇತ್ಯಾದಿ ಕ್ಷೇತ್ರಗಳಲ್ಲಿ ಸೈಬರ್ ಭದ್ರತಾ ಕಾರ್ಯಾಚರಣೆ ಕೇಂದ್ರ ಇದೆ. ಇಂಧನ ಇಲಾಖೆಯಲ್ಲಿ ಆರಂಭ ಮಾಡುತ್ತಿರುವುದು ಇದೇ ಮೊದಲು. ಬೆಸ್ಕಾಂನಲ್ಲಿ ಶುರುವಾಗುವ ಈ ಕೇಂದ್ರದ ಸಾಧಕ–ಬಾಧಕಗಳನ್ನು ನೋಡಿಕೊಂಡು ಬೇರೆ ಕಂಪನಿಗಳು ಕೂಡ ಈ ರೀತಿಯ ಕೇಂದ್ರವನ್ನು ಆರಂಭಿಸುವ ಸಾಧ್ಯತೆ ಇದೆ.

‘ಸುಪ್ರೀಂ’ಗೆ ಅರ್ಜಿ ಸಲ್ಲಿಸಿದ ಖೇರಾ

ನವದೆಹಲಿ (ಪಿಟಿಐ): ತಮಗೆ ನಿರೀಕ್ಷಣಾ ಜಾಮೀನು ನಿರಾಕರಿಸಿದ್ದ ಗುವಾಹಟಿ ಹೈಕೋರ್ಟ್‌ನ ತೀರ್ಪಿನ ವಿರುದ್ಧ ಕಾಂಗ್ರೆಸ್ ನಾಯಕ ಪವನ್ ಖೇರಾ ಅವರು ಭಾನುವಾರ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಆದಾಗ್ಯೂ, ಕೋರ್ಟ್ ಅರ್ಜಿಯನ್ನು ಯಾವುದೇ ಪೀಠಕ್ಕೆ ಈವರೆಗೆ ವಿಚಾರಣೆಗೆ ನೀಡಿಲ್ಲ.

‘ಸವಾಲು ಎದುರಿಸಲು ಜ್ಞಾನಸೃಷ್ಟಿ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಕಾಲೀನ ಜಗತ್ತಿನ ಜಟಿಲತೆ ಮತ್ತು ಅದು ಒಡ್ಡುತ್ತಿರುವ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಬೌದ್ಧಿಕ ಧೈರ್ಯ ಅತ್ಯಗತ್ಯ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ.

ಅಗಸ್ತ್ಯ ಇಂಟರ್‌ನ್ಯಾಷನಲ್ ಪ್ರತಿಷ್ಠಾನವು ಶನಿವಾರ ಆಂಧ್ರಪ್ರದೇಶದ ಕುಪ್ಪಂನಲ್ಲಿ ಏರ್ಪಡಿಸಿದ್ದ ವಾರ್ಷಿಕ ಸಭೆ ‘ಪ್ರೇರಣಾ-2026’ರಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ವಿಜ್ಞಾನಿ ರಾಮಜಿ ರಾಘವನ್ ಸ್ಥಾಪಿಸಿರುವ ಪ್ರತಿಷ್ಠಾನ ಸಮರ್ಥವಾಗಿ ಕೆಲಸ ಮಾಡುತ್ತಿದೆ’ ಎಂದರು.

ಕರ್ನಾಟಕವು ಇದುವರೆಗೂ ಐಟಿ ಹಬ್ ಆಗಿತ್ತು. ಈಗ ರಾಜ್ಯವು ಡೀಪ್ ಟೆಕ್ ತಂತ್ರಜ್ಞಾನದ ತಾಣವಾಗಿದೆ. ದೇಶದಲ್ಲಿರುವ ಅಗಾಧ ಜನಸಂಖ್ಯೆಯನ್ನು ಸಂಶೋಧನೆ ಮತ್ತು ಆವಿಷ್ಕಾರಗಳಿಗಾಗಿ ಸದ್ಬಳಕೆ ಮಾಡಿಕೊಳ್ಳುವುದು ಪ್ರತಿಭಾವಂತ ಯುವಜನರ ಕೈಯಲ್ಲಿದೆ. ಕರ್ನಾಟಕವು ತಂತ್ರಜ್ಞಾನ, ಇಎಎಸ್‌ಡಿಎಂ, ಏರೋಸ್ಪೇಸ್ ಮುಂತಾದ ವಲಯಗಳಲ್ಲಿ ದೇಶದಲ್ಲೇ ಅಗ್ರಸ್ಥಾನದಲ್ಲಿದೆ. ಜತೆಗೆ ಬೆಂಗಳೂರು ನಗರವೊಂದರಲ್ಲೇ 900 ಜಿಸಿಸಿ ಕೇಂದ್ರಗಳಿವೆ ಎಂದು ವಿವರಿಸಿದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ‘ಎ.ಐ, ರೋಬೋಟಿಕ್ಸ್, ಸೆಮಿಕಂಡಕ್ಟರ್ ಮುಂತಾದವು ಹಳ್ಳಿಯ ಮಕ್ಕಳಿಗೂ ಸಿಗಬೇಕು. ಉದ್ಯಮಿಗಳು ಈ ನಿಟ್ಟಿನಲ್ಲಿ ಯೋಚಿಸಬೇಕು. ಕೇವಲ ಯಂತ್ರೋಪಕರಣಗಳಿಂದ ಹೆಚ್ಚಿನ ಪ್ರಯೋಜನವಿಲ್ಲ. ಇದರ ಜತೆಗೆ ಹೊಸತನ್ನು ಸಾಧಿಸುವ ಛಲವಿರಬೇಕು ಎಂದರು.

ಕಾರ್ಯಕ್ರಮದಲ್ಲಿ ಪ್ರತಿಷ್ಠಾನದ ಸಂಸ್ಥಾಪಕ ರಾಮಜಿ ರಾಘವನ್, ಟಿ.ಎಸ್. ಸುರೇಶ್ ಉಪಸ್ಥಿತರಿದ್ದರು.

ಕುಪ್ಪಂನ ಅಗಸ್ತ್ಯ ಇಂಟರ್‌ನ್ಯಾಷನಲ್ ಫೌಂಡೇಷನ್ ಕ್ಯಾಂಪಸ್‌ನ ಅನ್ವೇಷಣಾ ಕೇಂದ್ರಕ್ಕೆ ಸಚಿವ ಎಂ.ಬಿ.ಪಾಟೀಲ ಭೇಟಿ ನೀಡಿದರು

‘ಜನರನ್ನು ಮರೆಯುವ ಜನಪ್ರತಿನಿಧಿಗಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣೆಯ ಸಂದರ್ಭದಲ್ಲಿ ಮಾತ್ರ ಜನಪ್ರತಿನಿಧಿಗಳಿಗೆ ಮನುಷ್ಯರು ನೆನಪಾಗುತ್ತಾರೆ. ಕುರ್ಚಿಯಲ್ಲಿ ಕುಳಿತ ಬಳಿಕ ಜನಸಾಮಾನ್ಯರಿಗೆ ಕೊಟ್ಟ ಮಾತು ನೆನಪು ಇರುವುದಿಲ್ಲ ಎಂದು ಸಾಹಿತಿ ಕೆ.ಮರುಳಸಿದ್ದಪ್ಪ ಹೇಳಿದರು.

ನಗರದ ಗಾಂಧಿ ಭವನದಲ್ಲಿ ಕೋ.ಚೆ ಸಾಹಿತ್ಯ ಮತ್ತು ಶಿಕ್ಷಣ ಟ್ರಸ್ಟ್ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಚಿಂತಕ ಪ್ರೊ. ಜಿ.ರಾಮಕೃಷ್ಣ (ಜಿ.ಆರ್.) ಅವರಿಗೆ ಕೋ.ಚೆನ್ನಬಸಪ್ಪ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

ಚುನಾವಣೆಯಲ್ಲಿ ಮತ್ತೆ ಹೇಗೆ ಗೆಲ್ಲಬೇಕು ಎನ್ನುವ ತಂತ್ರದ ಭಾಗವಾಗಿ ಜನರ ಬಗ್ಗೆ ಯೋಚಿಸುತ್ತಾರೆ ಅಷ್ಟೇ. ಎಲ್ಲ ಮೌಲ್ಯಗಳು ಅಧಃಪತನಗೊಂಡಿರುವ ಕಾಲದಲ್ಲಿ ಚೆನ್ನಬಸಪ್ಪ, ಜಿ.ರಾಮಕೃಷ್ಣ ಹಾಗೂ ಚಳವಳಿಗಾರರನ್ನು ನೆನಪು ಮಾಡಿಕೊಳ್ಳುವುದು ಬಲವನ್ನು ತಂದುಕೊಡಲಿದೆ. ದೇಶಕ್ಕೆ ಭವಿಷ್ಯ ಇದೆ ಎಂದು ನಂಬಿಕೆ ಇಟ್ಟುಕೊಂಡವರಿಗೆ ಚಳವಳಿಗಾರರು, ಚಿಂತಕರನ್ನು ನೆನಪು ಮಾಡಿಕೊಳ್ಳುವುದು ಸ್ಫೂರ್ತಿಯ ವಿಚಾರ ಎಂದು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ದೇಶದ ಹಿತ ಹಾಗೂ ಮೌಲ್ಯಕ್ಕಾಗಿಯೇ ಬದುಕಿದವರನ್ನು ಜಗತ್ತು ಸ್ಮರಿಸುತ್ತದೆ ಎಂಬುದಕ್ಕೆ ಕೋ.ಚೆನ್ನಬಸಪ್ಪ ಅವರು ಉತ್ತಮ ಉದಾಹರಣೆ. ಅವರು ಎಂದಿಗೂ ರಾಜಕೀಯಕ್ಕಾಗಿ ಹಂಬಲಿಸಲಿಲ್ಲ. ನಂಬಿದ ತತ್ವಕ್ಕೆ ಬದ್ಧರಾಗಿ ನೊಂದವರ ಕಷ್ಟಗಳಿಗೆ ಸ್ಪಂದಿಸುವ ಮೂಲಕ ಪರಿಪೂರ್ಣ ಜೀವನ ನಡೆಸಿದವರು ಎಂದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಜಿ.ರಾಮಕೃಷ್ಣ, ‘ಚೆನ್ನಬಸಪ್ಪ ಪ್ರಶಸ್ತಿ ಸ್ವೀಕರಿಸಿದ್ದು ಸಂತೋಷ ಉಂಟು ಮಾಡಿದೆ. ಅವರೊಂದಿಗೆ ಉತ್ತಮ ಒಡನಾಟ ಇತ್ತು. ಅನೇಕ ಚಳವಳಿಗಾರರು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಲೇಖನಗಳ ಬಗ್ಗೆ ಚರ್ಚಿಸುತ್ತಿದ್ದರು’ ಎಂದು ತಿಳಿಸಿದರು.

ಪ್ರೊ.ಎಸ್.ಜಿ.ಸಿದ್ದರಾಮಯ್ಯ, ಚಿಂತಕ ಸಿದ್ದನಗೌಡ ಪಾಟೀಲ್ ಮಾತನಾಡಿದರು. ಪ್ರೊ.ಜಿ.ರಾಮಕೃಷ್ಣ ಅವರಿಗೆ ಪ್ರಶಸ್ತಿ ಫಲಕದೊಂದಿಗೆ ₹50 ಸಾವಿರ ನಗದು ನೀಡಿ ಸನ್ಮಾನಿಸಲಾಯಿತು. ಟ್ರಸ್ಟ್ ಅಧ್ಯಕ್ಷೆ ಶಾಂತಾ ಜಯಪ್ರಸಾದ್, ಡಾ. ವೀರಶೆಟ್ಟಿ ಬಿ. ಗಾರಂಪಳ್ಳಿ, ಡಾ. ಕೆ.ಸಿ.ಗುರುದೇವ ಹಾಜರಿದ್ದರು.

ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ನಾಡೋಜ ಕೋ.ಚೆನ್ನಬಸಪ್ಪ ಪ್ರಶಸ್ತಿಯನ್ನು ಜಿ. ರಾಮಕೃಷ್ಣ ಅವರಿಗೆ ಕೆ. ಮರುಳಸಿದ್ದಪ್ಪ ಪ್ರದಾನ ಮಾಡಿದರು. ಹಂ.ಪ.ನಾಗರಾಜಯ್ಯ, ಕೆ.ಸಿ. ಗುರುದೇವ್, ವೂಡೇ ಪಿ. ಕೃಷ್ಣ, ಶಾಂತಾ ಜಯಪ್ರಸಾದ್, ಸಿದ್ದನಗೌಡ ಪಾಟೀಲ, ಲಕ್ಷ್ಮಣ ಕೊಡಸೆ, ಎಸ್.ಜಿ. ಸಿದ್ಧರಾಮಯ್ಯ, ಕೆ.ಐ.ಗುದಗಿ ಉಪಸ್ಥಿತರಿದ್ದರು

ನಗರದಲ್ಲಿ ಇಂದು

ನಿಮಿಷಾಂಬಾದೇವಿ ಜಯಂತಿ: ಬೆಳಿಗ್ಗೆ 7.30ಕ್ಕೆ ನಿಮಿಷಾಂಬಾದೇವಿಗೆ ಅಭಿಷೇಕ, ಪುಷ್ಪಾಲಂಕಾರ, 8ಕ್ಕೆ ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಆಯೋಜನೆ ಮತ್ತು ಸ್ಥಳ: ನಿಮಿಷಾಂಬಾದೇವಿ ದೇವಸ್ಥಾನ, ಒಟಿಸಿ ರಸ್ತೆ, ಕಾಟನ್‌ಪೇಟೆ.

ನಿಮಿಷಾಂಬಾದೇವಿ ಜಯಂತಿ: ಬೆಳಿಗ್ಗೆ 9.30ಕ್ಕೆ ಗಣಪತಿ ಹೋಮ, ನವಗ್ರಹ ಹೋಮ, ಸುದರ್ಶನ ಹೋಮ, ಸತ್ಯನಾರಾಯಣ ಪೂಜೆ, ಮಧ್ಯಾಹ್ನ 2ಕ್ಕೆ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸಂಜೆ 6ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳು: ಆರ್ಯ ಕ್ಷತ್ರಿಯ ಮಹಿಳಾ ಸಂಘ, ಆಯೋಜನೆ ಮತ್ತು ಸ್ಥಳ: ಸೋಮವಂಶ ಆರ್ಯಕ್ಷತ್ರಿಯ ಸೇವಾ ಸಂಘ, ನಿಮಿಷಾಂಬಾದೇವಿ ಕಲ್ಯಾಣ ಮಂಟಪ, ರಂಗಸ್ವಾಮಿಗುಡಿ ರಸ್ತೆ.

ವಿಶ್ವ ಬೌದ್ಧ ಮಹಾಸಮ್ಮೇಳನ: ಸಾನ್ನಿಧ್ಯ: ಭಂತೆ ಈತಲ್ವೆತುನವೆವ ಜ್ಞಾನತಿಲಕ ಥೇರೋ, ನಿರ್ಮಲಾನಂದನಾಥ ಸ್ವಾಮೀಜಿ, ಭಂತೆ ಆನಂದ ಥೇರೋ, ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ: ಸಿದ್ದರಾಮಯ್ಯ, 888 ಅಡಿ ಎತ್ತರದ ಭಗವಾನ್ ಬುದ್ಧನ ಮೂರ್ತಿ ನಿರ್ಮಾಣ ಕಾಮಗಾರಿಗೆ ಚಾಲನೆ: ಡಿ.ಕೆ. ಶಿವಕುಮಾರ್, ಪಂಚಶೀಲ ಪಾದಯಾತ್ರೆ ಉದ್ಘಾಟನೆ: ಜಿ. ಪರಮೇಶ್ವರ, ಅಧ್ಯಕ್ಷತೆ: ಎಚ್.ಸಿ. ಮಹದೇವಪ್ಪ, ಅತಿಥಿಗಳು: ರಾಮಲಿಂಗಾರೆಡ್ಡಿ, ಸತೀಶ್ ಜಾರಕಿಹೊಳಿ, ಕೆ. ವೆಂಕಟೇಶ್, ಎನ್. ಚಲುವರಾಯಸ್ವಾಮಿ, ಪ್ರಿಯಾಂಕ್ ಖರ್ಗೆ, ಆಯೋಜನೆ: ವಿಶ್ವ ಬೌದ್ಧ ಮಹಾಸಮ್ಮೇಳನ ಸಮಿತಿ, ಸ್ಥಳ: ನಾಗಸೇನ ಬುದ್ಧ ವಿಹಾರ, ಸದಾಶಿವನಗರ, ಬೆಳಿಗ್ಗೆ 10.30



ನಿರ್ಮಲಾನಂದನಾಥ ಸ್ವಾಮೀಜಿ

ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಯೂನಿವರ್ಸಿಟಿಯ ಎರಡನೇ ಘಟಿಕೋತ್ಸವ: ಅಧ್ಯಕ್ಷತೆ: ಥಾವರಚಂದ್ ಗೆಹಲೋತ್, ಉಪಸ್ಥಿತಿ: ಡಾ.ಎಂ.ಸಿ. ಸುಧಾಕರ್, ಬಿ.ಎಲ್. ಮುಂಗೇಕರ್, ವಿಶ್ವನಾಥ, ಆಯೋಜನೆ ಮತ್ತು ಸ್ಥಳ: ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಯೂನಿವರ್ಸಿಟಿಯ ಆವರಣ, ಜ್ಞಾನಭಾರತಿ, ಬೆಳಿಗ್ಗೆ 11.30

ಡಾ.ರಾಜ್‌ಕುಮಾರ್ ಜನ್ಮದಿನದ ಪ್ರಯುಕ್ತ ‘ಶ್ರೀಮಹರ್ಷಿ ವಾಲ್ಮೀಕಿ ನಾಟಕೋತ್ಸವ’: ಮಧ್ಯಾಹ್ನ 3ಕ್ಕೆ ‘ಸಂಸಾರ ಗುಟ್ಟು’ ನಾಟಕ ಪ್ರದರ್ಶನ: ನಿರ್ದೇಶನ: ರತ್ನಮ್ಮ ಆರ್., ಸಂಜೆ 4ಕ್ಕೆ ‘ಜಿಪುಣ ಹನುಮಂತ’ ನಾಟಕ ಪ್ರದರ್ಶನ: ನಿರ್ದೇಶನ: ಬಿ.ಟಿ. ಮಂಜುನಾಥ್, ಆಯೋಜನೆ: ಸಿಂಧು ಭೈರವಿ ಕಲಾ ತಂಡ ಟ್ರಸ್ಟ್, ಸ್ಥಳ: ನಿರಾಶ್ರಿತರ ಪರಿಹಾರ ಕೇಂದ್ರ, ಸುಮ್ಮನಹಳ್ಳಿ ವೃತ್ತ.

ನವೀಕರಣಗೊಂಡ ಕಟ್ಟಡ ಹಾಗೂ ನೂತನವಾಗಿ ನಿರ್ಮಿಸಿರುವ ಹೆಚ್ಚುವರಿ ಕೊಠಡಿಗಳ ಉದ್ಘಾಟನೆ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಅತಿಥಿಗಳು: ಸತೀಶ್ ಜಾರಕಿಹೊಳಿ, ಕೃಷ್ಣ ಬೈರೇಗೌಡ, ಪ್ರಿಯಾಂಕ್ ಖರ್ಗೆ, ಬಿ.ಎಸ್. ಸುರೇಶ್, ಶಾಲಿನಿ ರಜನೀಶ್, ಗೌರವ್ ಗುಪ್ತ, ಅಂಜುಂ ಪರ್ವೇಜ್, ರಿತೇಶ್ ಕುಮಾರ್ ಸಿಂಗ್, ರಾಜೇಂದ್ರ ಕುಮಾರ್ ಕಟಾರಿಯಾ, ಕೆ.ಜಿ. ಜಗದೀಶ, ಅಧ್ಯಕ್ಷತೆ: ಬಿ. ಶಿವಸ್ವಾಮಿ, ಆಯೋಜನೆ: ಕರ್ನಾಟಕ ಆಡಳಿತ ಸೇವೆ ಅಧಿಕಾರಿಗಳ ಸಂಘ, ಸ್ಥಳ: ನಂ.1, ಇನ್‌ಫೆಂಟ್ರಿ ರಸ್ತೆ, ಸಂಜೆ 4

ಬಸವ ಜಯಂತಿ, ‘ಬಸವಶ್ರೀ’, ‘ವಚನ ಸಾಹಿತ್ಯಶ್ರೀ’ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪ್ರಶಸ್ತಿ ಪ್ರದಾನ: ಬಸವರಾಜ ಬೊಮ್ಮಾಯಿ, ಉದ್ಘಾಟನೆ: ವಿ. ಸೋಮಣ್ಣ, ಪ್ರಶಸ್ತಿ ಪುರಸ್ಕೃತರು: ಎಚ್.ಡಿ. ದೇವೇಗೌಡ, ಗುರುರಾಜ ಕರಜಗಿ, ಅತಿಥಿಗಳು: ಎಚ್.ಕೆ. ಪಾಟೀಲ, ಲಕ್ಷ್ಮೀ ಹೆಬ್ಬಾಳಕರ, ಪ್ರಾಸ್ತಾವಿಕ ನುಡಿ: ಸಿ. ಸೋಮಶೇಖರ್, ಆಯೋಜನೆ: ಬಸವ ವೇದಿಕೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30

ಗುರುರಾಜ ಕರ್ಜಗಿ

ರಾಜ್ಯಮಟ್ಟದ ಕನ್ನಡ ರಂಗ ಸ್ಪರ್ಧೆ–2026: ‘ಜ್ಞಾನ ದೇಗುಲ’ ನಾಟಕ ಪ್ರದರ್ಶನ: ಪ್ರಸ್ತುತಿ: ಜನಪದರು ಹೊಸಕೋಟೆ, ಆಯೋಜನೆ: ರಂಗಾಸ್ಥೆ, ಸ್ಥಳ: ಯುವಪಥ, ಜಯನಗರ ನಾಲ್ಕನೇ ಹಂತ, ಸಂಜೆ 7

ಸಾರ್ವಜನಿಕ ಸೂಚನೆ

ಎ.ಆರ್.ಸಿ.ಐ.ಎಲ್.–ಟ್ರಸ್ಟ್–2025–009 (ಎ.ಆರ್.ಸಿ.ಐ.ಎಲ್.)ನ ಟ್ರಸ್ಟಿಯಾಗಿ ಕಾರ್ಯನಿರ್ವಹಿಸುತ್ತಿರುವ ಅಸೆಟ್ ರೀಕನ್‌ಸ್ಟ್ರಕ್ಷನ್ (ಇಂಡಿಯಾ) ಲಿಮಿಟೆಡ್, 2002 ರ ಸೆಕ್ಯೂರಿಟೈಜೇಶನ್ ಅಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಕಾಯ್ದೆಯ ಸೆಕ್ಷನ್ 13(2) ರ ಅಡಿಯಲ್ಲಿ ಕಾರ್ನರ್‌ಸ್ಟೋನ್ ಪ್ರಾಪರ್ಟೀಸ್ ಪ್ರೈವೇಟ್ ಲಿಮಿಟೆಡ್, ಕಾರ್ನರ್‌ಸ್ಟೋನ್ ಬೇ ಈಸ್ಟ್ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ ಮತ್ತು ಕ್ರೈಸೋಲೈಟ್ ಪ್ರಾಪರ್ಟಿ ಡೆವಲಪ್‌ಮೆಂಟ್ಸ್ ಪ್ರೈವೇಟ್ ಲಿಮಿಟೆಡ್ (“ಸಾಲಗಾರರು”) ಗೆ, ಇತರೆ ವಿಷಯಗಳ ನಡುವೆ – **ಬ್ರಿಗೇಡ್ ಕಾರ್ನರ್‌ಸ್ಟೋನ್ ಯುಟೋಪಿಯಾ** ಫೇಸ್ 1 ಮತ್ತು ಫೇಸ್ 2 ಸಂಬಂಧಿಸಿದಂತೆ – ಮೂಲತಃ ಎಲ್ & ಟಿ ಫೈನಾನ್ಸ್ ಲಿಮಿಟೆಡ್‌ನಿಂದ ಪಡೆದ ಮತ್ತು ನಂತರ ಎ.ಆರ್.ಸಿ.ಐ.ಎಲ್.ಗೆ ನಿಯೋಜಿಸಲಾದ ಹಣಕಾಸು ಸೌಲಭ್ಯಗಳಿಗೆ ಸಂಬಂಧಿಸಿದಂತೆ ನೋಟಿಸ್ ನೀಡಿತ್ತು. ದಿನಾಂಕ : 29.03.2025 ರ ಈ ಸೂಚನೆಯನ್ನು ದಿನಾಂಕ : 15.05.2025 ರಂದು ಡೆಕ್ಕನ್ ಹೆರಾಲ್ಡ್ ಮತ್ತು ದಿನಾಂಕ : 16.05.2025 ರಂದು ಪ್ರಜಾವಾಣಿಯಲ್ಲಿ ಪ್ರಕಟಿಸಲಾಗಿದೆ. ಇದರ ನಂತರ, ಪಕ್ಷಗಳು ಚರ್ಚೆಗೆ ಇಳಿದು ವಿಷಯವನ್ನು ಸೌಹಾರ್ದಯುತವಾಗಿ ಪರಿಹರಿಸಿಕೊಂಡಿವೆ. ಮೇಲೆ ತಿಳಿಸಿದ ಹಿನ್ನೆಲೆಯಲ್ಲಿ, **ಬ್ರಿಗೇಡ್ ಕಾರ್ನರ್‌ಸ್ಟೋನ್ ಯುಟೋಪಿಯಾ** ಫೇಸ್ 1 ಮತ್ತು ಫೇಸ್ 2 ಸೇರಿದಂತೆ ಈ ಮೇಲ್ಕಂಡಂತೆ ತಿಳಿಸಲಾದ ಪತ್ರಿಕೆಗಳಲ್ಲಿ ಪ್ರಕಟಿಸಲಾದ ಎಲ್ಲಾ ಈ ಹಿಂದಿನ ಪ್ರಕಟಣೆಗಳು / ಕಾನೂನು ಕ್ರಮಗಳನ್ನು ಹಿಂತೆಗೆದುಕೊಳ್ಳಲಾಗಿದೆ.

ಈ ಪ್ರಕಟಣೆಯನ್ನು ಸಂಬಂಧಪಟ್ಟ ಎಲ್ಲರ ಮಾಹಿತಿಗಾಗಿ ಬಿಡುಗಡೆ ಮಾಡಲಾಗಿದೆ.

ಅಧಿಕೃತ ಸಹಿದಾರರು **ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯಾ) ಲಿಮಿಟೆಡ್** (ಎ.ಆರ್.ಸಿ.ಐ.ಎಲ್. - ಟ್ರಸ್ಟ್‌ನ ಟ್ರಸ್ಟಿ - 2025-009)	**ಅಧಿಕೃತ ಸಹಿದಾರರು** **ಕಾರ್ನರ್‌ಸ್ಟೋನ್ ಪ್ರಾಪರ್ಟೀಸ್ ಪ್ರೈವೇಟ್ ಲಿಮಿಟೆಡ್,** **ಕಾರ್ನರ್‌ಸ್ಟೋನ್ ಬೇ ಈಸ್ಟ್ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ &** **ಕ್ರೈಸೋಲೈಟ್ ಪ್ರಾಪರ್ಟಿ ಡೆವಲಪ್‌ಮೆಂಟ್ಸ್ ಪ್ರೈವೇಟ್ ಲಿಮಿಟೆಡ್.**

ಸ್ಥಳ : ಬೆಂಗಳೂರು
ದಿನಾಂಕ : 27.04.2026

ನಗರದ ಕಬ್ಬನ್ ರಸ್ತೆಯಲ್ಲಿ ಭಾನುವಾರ ಓಟದ ಗಮ್ಮತ್ತು ರಂಗೇರಿತ್ತು. 18ನೇ ಆವೃತ್ತಿಯ ಟಿಸಿಎಸ್ ವಿಶ್ವ ಟೆನ್‌ಕೆ ಓಟದ ಸಂಭ್ರಮದಲ್ಲಿ ಸಹಸ್ರಾರು ಮಂದಿ ಮಿಂದೆದ್ದರು. ಬೆಳ್ಳಂಬೆಳಗ್ಗೆ ಬಣ್ಣಬಣ್ಣದ ಜೆರ್ಸಿ ತೊಟ್ಟು ಬಂದಿದ್ದ ಹವ್ಯಾಸಿ ಓಟಗಾರರು ಜೊತೆಯಾಗಿ ಸಾಗಿದರು. ಅಥ್ಲೀಟ್‌ಗಳೊಂದಿಗೆ ಪುಟಾಣಿಗಳು, ವಿದ್ಯಾರ್ಥಿಗಳು, ಗೃಹಿಣಿಯರು, ರಾಜಕಾರಣಿಗಳು, ವೃತ್ತಿನಿರತರು, ಹಿರಿಯ ನಾಗರಿಕರು, ಅಂಗವಿಕಲರು ಉತ್ಸಾಹದಿಂದ ಹೆಜ್ಜೆಹಾಕಿದರು. ಡಿ.ಜೆ ಸಂಗೀತ, ವಿಶೇಷ ವೇಷಭೂಷಣಗಳು, ಜಾಗೃತಿ ಸಂದೇಶಗಳು ಓಟದ ಮೆರುಗನ್ನು ಹೆಚ್ಚಿಸಿತು ಚಿತ್ರಗಳು: ರಂಜು ಪಿ./ ಪುಷ್ಕರ್ ವಿ.

ಟೆನ್‌ಕೆ ಓಟದ ಗಮ್ಮತ್ತು

ಟಿಸಿಎಸ್ ವಿಶ್ವ ಟೆನ್‌ಕೆ ಓಟದಲ್ಲಿ ಗಮನ ಸೆಳೆದ ವೇಷಧಾರಿಗಳು

ಮಹಿಳೆಯರ ಎಲೀಟ್ ಸ್ಪರ್ಧೆ ವೇಳೆ ಅಥ್ಲೀಟ್‌ಗಳೊಂದಿಗೆ ನಾಯಿಯೊಂದು ಹೆಜ್ಜೆ ಹಾಕಿದ್ದು ಹೀಗೆ

ಗಣಪತಿಯ ವೇಷ ಧರಿಸಿದ ವ್ಯಕ್ತಿಯೊಬ್ಬರು ಅಂಗಾಂಗ ದಾನದ ಬಗ್ಗೆ ಜಾಗೃತಿ ಮೂಡಿಸಿದರು

ಟಿಸಿಎಸ್ ವಿಶ್ವ ಟೆನ್‌ಕೆ ಓಟದಲ್ಲಿ ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಭಾಗವಹಿಸಿ, ದಾರಿ ಮಧ್ಯೆ ವಿಶ್ರಾಂತಿ ಪಡೆದರು

ಯಂಗ್ ಬ್ಲ್ಯೂಸ್‌ಗೆ ಕಿರೀಟ

ಕೆಎಸ್‌ಎಫ್‌ಎ ಮಹಿಳಾ ಎ ಡಿವಿಷನ್ ಲೀಗ್ ಫುಟ್‌ಬಾಲ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶ
- ಟೆಕ್ನಿಕೊ ಫುಟ್‌ಬಾಲ್ ಫೌಂಡೇಶನ್ ತಂಡಕ್ಕೆ ಸೋಲು

ಬೆಂಗಳೂರು: ಅಮೋಘ ಪ್ರದರ್ಶನ ಮುಂದುವರಿಸಿದ ಯಂಗ್ ಬ್ಲ್ಯೂಸ್ ಎಲೀಟ್ ಎಫ್‌ಸಿ ತಂಡವು ಭಾನುವಾರ ನಡೆದ ಕೆಎಸ್‌ಎಫ್‌ಎ ಮಹಿಳಾ ಎ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ತನ್ನ ಕೊನೆಯ ಪಂದ್ಯದಲ್ಲಿ 5–0ಯಿಂದ ಟೆಕ್ನಿಕೊ ಫುಟ್‌ಬಾಲ್ ಫೌಂಡೇಶನ್ ತಂಡವನ್ನು ಮಣಿಸಿತು. ಆ ಮೂಲಕ, ಅಂಕಪಟ್ಟಿಯಲ್ಲಿ ಅಗ್ರಸ್ಥಾನದೊಂದಿಗೆ ಚಾಂಪಿಯನ್ ಆಗಿ ಹೊರಹೊಮ್ಮಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಯಂಗ್ ಬ್ಲ್ಯೂಸ್ ತಂಡದ ಶ್ರಾವ್ಯ ಮನೋಜ್ (6ನೇ ಹಾಗೂ 31ನೇ ನಿ.) ಅವಳಿ ಗೋಲು ಹೊಡೆದರು. ನಿಲವ್ರೊಲಿ ಸೇತುರಾಯರ್ (4ನೇ ನಿ.), ಲಕ್ಷಿತಾ ವಿನಯ್ ನಾಯರ್ (34ನೇ ನಿ.) ಹಾಗೂ ಧನುಶ್ರೀ ಎ.ಸಿ. (70ನೇ ನಿ.) ತಲಾ ಒಂದು ಗೋಲು ದಾಖಲಿಸಿ, ತಮ್ಮ ತಂಡಕ್ಕೆ ಏಕಪಕ್ಷೀಯ ಗೆಲುವು ತಂದುಕೊಟ್ಟರು. ಟೆಕ್ನಿಕೊ ತಂಡದ ಆಟಗಾರ್ತಿಯರು ಗೋಲು ಗಳಿಸುವಲ್ಲಿ ವಿಫಲರಾದರು.

ದಿನದ ಇತರ ಪಂದ್ಯಗಳಲ್ಲಿ ಕೆಂಪ್ ಜೂನಿಯರ್ಸ್ ಎಫ್‌ಸಿ ತಂಡವು 2–0ಯಿಂದ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ವಿರುದ್ಧ ಹಾಗೂ ರೆಡ್ಸ್ ಯುನೈಟೆಡ್ ಎಫ್‌ಸಿ ತಂಡವು 3–0ಯಿಂದ ಪಾಸ್ ಎಫ್‌ಸಿ ಸ್ಪಾರ್ಕ್ಸ್ ತಂಡದ ವಿರುದ್ಧ ಸುಲಭ ಜಯ ಸಾಧಿಸಿದವು.

ಚಾಂಪಿಯನ್ ಯಂಗ್‌ಬ್ಲ್ಯೂಸ್ ಹಾಗೂ ಅಂಕಪಟ್ಟಿಯಲ್ಲಿ ಎರಡನೇ ಸ್ಥಾನದೊಂದಿಗೆ ರನ್ನರ್ಸ್‌ಅಪ್ ಪ್ರಶಸ್ತಿ ಜಯಿಸಿದ ಪರಿಕ್ರಮ ಎಫ್‌ಸಿ ತಂಡಗಳು 2026–27ನೇ ಸಾಲಿನ ಕರ್ನಾಟಕ ಮಹಿಳಾ ಫುಟ್‌ಬಾಲ್ ಲೀಗ್‌ಗೆ ಅರ್ಹತೆ ಪಡೆದುಕೊಂಡವು. ಅಂಕಪಟ್ಟಿಯಲ್ಲಿ ಕೊನೆಯ ಎರಡು ಸ್ಥಾನದಲ್ಲಿದ್ದ ಜಿಆರ್‌ಕೆ ಗರ್ಲ್ಸ್ ಎಫ್‌ಸಿ ಹಾಗೂ ಆಫ್‌ಸೈಡ್ ಟ್ರ್ಯಾಪ್ ಎಫ್‌ಸಿ ತಂಡಗಳು ಬಿ ಡಿವಿಷನ್ ಲೀಗ್‌ಗೆ ಹಿಂಬಡ್ತಿ ಪಡೆದವು.

ಉತ್ತಮ ಗೋಲ್‌ಕೀಪರ್: ಕೆತಕಿ ಪರಾಗ್ ಗುಲ್ವನೆ (ಯಂಗ್ ಬ್ಲ್ಯೂಸ್ ಎಫ್‌ಸಿ); ಉತ್ತಮ ಡಿಫೆಂಡರ್: ಜುದಿತ್ ಸೋನಾಲಿ ಜಾನ್ (ಪರಿಕ್ರಮ ಎಫ್‌ಸಿ); ಉತ್ತಮ ಮಿಡ್‌ಫೀಲ್ಡರ್: ನಿಲವ್ರೊಲಿ ಸೇತುರಾಯರ್ (ಯಂಗ್ ಬ್ಲ್ಯೂಸ್ ಎಫ್‌ಸಿ). ಗರಿಷ್ಠ ಗೋಲು: ಆರತಿ ಎಂ. (9 ಗೋಲು; ಪರಿಕ್ರಮ ಎಫ್‌ಸಿ).

‘ವಿಶ್ವಕರ್ಮವು ವಿಶ್ವಧರ್ಮ ಸಮುದಾಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಶ್ವಕರ್ಮ ಸಮುದಾಯವು ವಿಶ್ವಧರ್ಮ ಸಮುದಾಯವಾಗಿದೆ. ಮನುಷ್ಯನ ಬದುಕಿಗೆ ಅಗತ್ಯವಿರುವ ಎಲ್ಲ ಸಂಗತಿಗಳನ್ನು ವಿಶ್ವಕರ್ಮ ಸಮುದಾಯ ಒದಗಿಸುತ್ತದೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಣ್ಣಿಸಿದರು.

ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ವಧು-ವರರ ಸಮಾವೇಶದಲ್ಲಿ ಭಾಗವಹಿಸಿ ಮಾತನಾಡಿದರು.

‘ಬಾಗಿಲು, ನೇಗಿಲು ವಿಶ್ವಕರ್ಮ ಸಮುದಾಯದ ಕೊಡುಗೆಯಾಗಿದೆ. ವಿಶ್ವದ ಯಾವುದೇ ದೇಶಕ್ಕೆ ಹೋದರೂ ಅಲ್ಲಿನ ಪ್ರತಿಮೆಗಳಿಂದ ಹಿಡಿದು, ಆಭರಣ ವಿನ್ಯಾಸ ಎಲ್ಲವೂ ವಿಶ್ವಕರ್ಮರ ಕೈಯಲ್ಲಿ ಅರಳುವ ಕಲೆಗಳಾಗಿವೆ. ಭೂಮಿಯನ್ನು ಸೃಷ್ಟಿ ಮಾಡಿದ್ದೂ ಸಹ ವಿಶ್ವಕರ್ಮ ಮಹರ್ಷಿಗಳು. ವಿಶ್ವಕರ್ಮ ಸಮುದಾಯ ಕೇವಲ ಈ ರಾಜ್ಯಕ್ಕೆ ಸೀಮಿತವಾದ ಸಮುದಾಯವಲ್ಲ’ ಎಂದರು.

‘ಇತ್ತೀಚಿನ ದಿನಗಳಲ್ಲಿ ಅಂತರ್ಜಾತಿ ವಿವಾಹಗಳು ಹೆಚ್ಚಾಗುತ್ತಿವೆ. ಸಾಮಾಜಿಕ ಜಾಲತಾಣಗಳ ಪ್ರಭಾವದಿಂದಲೂ ಅನೇಕ ಬದಲಾವಣೆಗಳು ಆಗುತ್ತಿವೆ. ಜನರು ಜಾತಿ, ಧರ್ಮಗಳನ್ನು ಮೀರಿ ಮದುವೆಯಾಗುತ್ತಿದ್ದಾರೆ’ ಎಂದು ಹೇಳಿದರು.

‘ಸಿದ್ದಪ್ಪಾಜಿ ದೇವರು ಹಾಗೂ ನನಗೆ ಅವಿನಾಭಾವ ಸಂಬಂಧವಿದೆ. ಚಿಕ್ಕ ವಯಸ್ಸಿನಲ್ಲಿ ತಂದೆ ನಡೆಸಿಕೊಂಡು ಸಂಗಮದ ಮೂಲಕ ದೇವಸ್ಥಾನಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಆ ದೇವಸ್ಥಾನದ ಅಭಿವೃದ್ಧಿಗೆ ಏನು ಮಾಡಬೇಕೆಂದು ಚರ್ಚೆ ನಡೆಸಲಾಗುವುದು’ ಎಂದರು.

‘ವಿಶ್ವಕರ್ಮ ಶ್ರೀಗಳ ಮಾರ್ಗದರ್ಶನದಲ್ಲಿ, ಕೆ.ಪಿ. ನಂಜುಂಡಿ ಅವರ ಮುಂದಾಳತ್ವದಲ್ಲಿ, ಬಸವರಾಜು ಅವರ ಅಧ್ಯಕ್ಷತೆಯಲ್ಲಿ ಮುಂದಿನ ಪೀಳಿಗೆಗೆ ಅಡಿಪಾಯ ಹಾಕಲು, ಸಮುದಾಯವನ್ನು ಒಗ್ಗೂಡಿಸಲು ಸಂಘಟನೆ ಮಾಡುತ್ತಿದ್ದಾರೆ ಎಂದರು.

EDUCATION CORNER ಕ್ಲಾಸಿಫೈಡ್ಸ್

R.E.S. POLYTECHNIC
Estd: 1986 - Recognised by Govt. of Karnataka & AICTE
10th Pass / What Next ???
JOIN DIPLOMA IN: ♦ Computer Science ♦ IS ♦ Civil ♦ Mechanical ♦ Automobile ♦ Electrical ♦ Electronics ♦ Fashion Tech ♦ Commerce (CP)
After Diploma can join JOB / 2nd year Engg OR Any Degree through LATERAL ENTRY QUOTA
PUC Pass Join 2 yrs Diploma Engineering
PUC Fail Join 3 yrs Diploma Engineering
RES-26701
EVENING / WEEKEND CLASSES
Available for working Professionals to EE
5, Sunkadakatte, Magadi Road, Hegganahalli Cross, B-91
Call: Secretary-99166 46466 / Principal-9916639466

THE BEST HIGH SCHOOL
Where Futures Begin
21st Cross Rd, 5th Block, Ashwath Nagar, HBR Layout
Connect with us!
AR & VR Labs
Live AI Workshops
100% Results in SSLC Examination 2025-26
14 Distinctions, 8 Centums & 29 First Classes
“A Testament to Dedicated Students & Committed Educators”
AMEENA BEE 96.80%
AFSHAN MARIAM 94.88%
HAROON PASHA 94.40% | NEHA 94.08% | NITHYASHREE 93.60% | AASEEMA SARWATH IRAM 93.28% | HARI KISHAN 92.80% | NARESH. V 92.80% | MD SHAZEB SHARIFF 90.40% | MADIHA NAAZ 90.08%
APPLE BISWAS 89.44% | JHEEL TIWARI 88.16% | ADYAN KHAN 87.04% | ANUSHA 85.44% | JEEVITHA M 84.96% | RAID BAIG 84.96% | ABDUL RAHIM 84.64% | RANJITHA M 84%
SHAZIYA MEHREEN 83.84% | PREM 83.84% | ROHAN RADHA KRISHNA 83.20% | CHARVI S 82.40% | HAMZA JAFFER SHAFEEQ 81.60% | A PRERANA 81.28% | MD BILAL KHAN 81.12% | S LAYA 80.16%
ADMISSIONS OPEN 2026-27 | AR & VR LABS | LIVE AI WORKSHOPS | 895174403 | ADMISSIONS@FLORENCEHIGHSCHOOL.IN

FLORENCE HIGH SCHOOL
Where Futures Begin
22/2, Viviani Road, Richards Town
Connect with us!
AR & VR Labs
Live AI Workshops
100% Results in SSLC Examination 2025-26
17 Distinctions, 7 Centums across 3 Subjects & 54 First Classes
“A Testament to Dedicated Students & Committed Educators”
AZRA FIRDOSE 93.60% | DANIA SUMAN 93.44% | FIRDOUS FATHIMA 92.16% | SYED ARHAAN 91.84%
JOSHIL ALICE 91.68% | ZAIN NAZ 91.36% | SYED MD ZAIN 90.88% | RABIYA KHAN 89.76% | MD RUMMAN AHMED 88.64% | SYED AFFAN SAMAAK 88.16% | SANA SARWATH 88%
MANHA KHAN 87.84% | ALIYA SULTANA 87.68% | MD TAYEEB 87.36% | MD UMAR IQBAL 86.08% | SAYEEMA HOORAIN 85.60% | YOUSUF SAFIYYA 85.60% | ARISHA HANIN 84.64%
BI BI FATHIMA 84.64% | SUHEB KHAN 84.64% | G DIVINAA 83.84% | MD HUZAIF 82.88% | SIDRA KULSUM 82.88% | VAISHNAVI 82.88% | SONI JESSIKA 82.72%
GOKUL CHARAN 82.24% | ERUM FIRDOSE 82.24% | JOEL ABRAHAM 82.08% | RAJIHA FATHIMA 81.92% | MD ARHAM 80.32% | MD HAROON 80.16% | UMME KULSUM 79.52%
ADMISSIONS OPEN 2026-27 | AR & VR LABS | LIVE AI WORKSHOPS | 8792130256 | ADMISSIONS@FLORENCEHIGHSCHOOL.IN

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

PERSONAL

Change of Name

I, SUBASH Narayanan Murugappan, parent of Aadhya, residing at 318, 10th cross, BEL Layout 1st phase , Anjana Nagara, Bengaluru 560091, have changed my child's name from Aadhya to Aadhya S (adding initial) for all purposes, vide Affidavit dated 24/04/2025.

JOB OPPORTUNITIES

Graphic Designers

REQUIRED GRAPHIC Designer– Photoshop/ Corel Draw/ Illustrator Experience 1 Year or above in around Rajajinagar. Contact: 9108458798/ 9845579620

HRD & Admin

WANTED FEMALE Office Assistant Any Degree Knowing Tally, Fluent In English, Kannada, Hindi Around Rajajinagar Contact: 9108458798/ 9845579620

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

DH DECCAN HERALD Classifieds
More value, more impact
ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
*Conditions apply
www.dhclassifieds.com
BOOK NOW
For more details contact:
+91 9731810277 | +91 9886213331
+91 9845114560 | +91 9900428036

B.M.S. EDUCTIONAL TRUST, BENGALURU
“BUILD A BRIGHT FUTURE WITH US”
B.M.S COLLEGE FOR WOMEN
Autonomous Institution Affiliated to
Dr. Manmohan Singh Bengaluru City University
NAAC Accreditation: “A” Grade
Recognised under 2(f) & 12(b) of the UGC act 1956
Late B.M.Sreenivasaiah, Founder
Late B.S.Narayan, Former Donor Trustee
LEGACY OF 62 YEARS

UNDER GRADUATE PROGRAMS

SCHOOL OF COMMERCE & MANAGEMENT
- B.Com. General
- B.Com. CMA
- B.Com. Accounting & Finance
- B.Com. Business Data Analytics
- B.B.A. General
- B.B.A. Digital Marketing (certification Course)

SCHOOL OF NATURAL & APPLIED SCIENCE
- B.C.A. General
- B.C.A. Artificial Intelligence and Machine Learning
- B.Voc. Information Technology
- B.Sc. PCM (Physics, Chemistry, Mathematics)
- B.Sc. PMCs (Physics, Mathematics, Computer Science)
- B.Sc. CZMb (Chemistry, Zoology, Microbiology)
- B.Sc. CBBt (Chemistry, Botany, Biotechnology)
- B.Sc. Clinical Nutrition & Dietetics

SCHOOL OF ARTS & HUMANITIES
- B.A. HES (History, Economics, Sociology)
- B.A. PES (Psychology, Economics, Sociology)
- B.A. JPE (Journalism, Psychology, Optional English)

POST GRADUATE STUDIES
- M.Com. General
- M.Sc. Mathematics
- M.Sc. Organic Chemistry

ADMISSIONS OPEN

MERITORIOUS SCHOLARSHIP for the student score 80% & above in PU

Application can be obtained from the college or download from the website

CONTACT: BUGLE ROCK ROAD, BASAVANAGUDI, BENGALURU 560 004
Ph: 080-26601836 | 9481237933 | 7338367755 | 73382 47755
email: enquiry@bmscw.edu.in, principal@bmscw.edu.in, Website: www.bmscw.edu.in

FLORENCE HIGH SCHOOL
Where Futures Begin
105, Banaswadi Main Road, Subbayanapalya
Connect with us!
AR & VR Labs
Live AI Workshops
100% Results in SSLC Examination 2025-26
6 Distinctions, 3 Centums across 3 Subjects & 29 First Classes
“A Testament to Dedicated Students & Committed Educators”
NIVETHA.R 93.44%
M.PAVITIHIRA 92.32% | AFIA 92.32% | MOHAMMED ANAS 85.28% | SANDHYA 85.28% | SHASHINI 85.28%
NITESH.C 83.84% | SHIRVANI 82.72% | MUSFIRA BANU 82.40% | RIGVED 82.24% | KEERTHANA 81.60% | SHEKH REHAN 78.40% | SANJANA 78.24%
ANJANA 77.44% | ABHIJITH SHARAN 77.28% | JAYALAKSHMI 76.96% | SAADIYA 76.32% | PRIYA DARSHINI 75.68% | ROHAN.C 75.52% | KAVYA SHREE 75.36%
SHALOM JONATHAN 73.92% | SOMESHWARI 72.80% | DEVSHARAN 72.64% | MANESH.N 72% | INDELA VARUN KUMAR 70.88% | ETHAN JEDIDIAH 70.56% | SHUBHARAJ JONES 70.56%
ADMISSIONS OPEN 2026-27 | AR & VR LABS | LIVE AI WORKSHOPS | 8904484400 | ADMISSIONS@FLORENCEHIGHSCHOOL.IN

₹1 ಕೋಟಿಯ ಚಿನ್ನಾಭರಣ ಕಳವು

ಅಮೆರಿಕದಿಂದ ಬಂದಿದ್ದ ವೈದ್ಯೆಯ 725 ಗ್ರಾಂ ಚಿನ್ನ ಮದುವೆ ಮಂಟಪದಲ್ಲಿ ಕೃತ್ಯ: ಆರೋಪಿಗಾಗಿ ಹುಡುಕಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆರಿಕದಿಂದ ಸಹೋದರಿ ಮಗನ ಮದುವೆಗೆ ಬಂದಿದ್ದ ವೈದ್ಯೆಯೊಬ್ಬರ ₹1 ಕೋಟಿ ಮೌಲ್ಯದ 725 ಗ್ರಾಂ ಚಿನ್ನಾಭರಣ ಕಳ್ಳತನ ಮಾಡಲಾಗಿದೆ.

ವೈದ್ಯೆ ಸಿರುವೆಲ್ಲ ಶ್ರೀದೇವಿ ಎಂಬುವರು ನೀಡಿದ ದೂರಿನ ಮೇರೆಗೆ ಅಪರಿಚಿತ ವ್ಯಕ್ತಿಯ ವಿರುದ್ಧ ಆವಲಹಳ್ಳಿ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ಅಮೆರಿಕದಲ್ಲಿ ವಾಸವಿರುವ ದೂರುದಾರೆ ಏಪ್ರಿಲ್ 18ರಂದು ನಗರಕ್ಕೆ ಬಂದು, ಬಳ್ಳಾರಿ ರಸ್ತೆಯ ಗಂಗಾನಗರದಲ್ಲಿರುವ ಸಹೋದರರ ಮನೆಯಲ್ಲಿ ತಂಗಿದ್ದರು. ಏಪ್ರಿಲ್ 22ರಂದು ಹಳೇ ಮದ್ರಾಸ್ ರಸ್ತೆಯ ಎಸ್‌ಡಿಪಿ ಕಲ್ಯಾಣ ಮಂಟಪಕ್ಕೆ ತೆರಳಿದ್ದರು. ಸಂಜೆ 6.30ರ ವೇಳೆಗೆ ಅವರ ಸಹೋದರ ಕೆ.ಶ್ರೀನಿವಾಸಮೂರ್ತಿ ಅವರು ಚಿನ್ನಾಭರಣದ ಪೆಟ್ಟಿಗೆಯನ್ನು ಮಂಟಪದಲ್ಲೇ ವೈದ್ಯೆಗೆ ನೀಡಿದ್ದರು. ಆ ಪೈಕಿ ಸ್ವಲ್ಪ ಆಭರಣಗಳನ್ನು ಧರಿಸಿ ಉಳಿದವುಗಳನ್ನು ಕೊಠಡಿಯಲ್ಲಿ ಇಟ್ಟು ಬಾಗಿಲು ಕೀ ಹಾಕಿಕೊಂಡು, ಮದುವೆ ಆರತಕ್ಷತೆ ಕಾರ್ಯಕ್ರಮಕ್ಕೆ ತೆರಳಿದ್ದರು. ಕೊಠಡಿಗೆ ವಾಪಸ್ ರಾತ್ರಿ 11.30ರ ಸುಮಾರಿಗೆ ಬಂದು ನೋಡಿದಾಗ ಚಿನ್ನಾಭರಣ ಪೆಟ್ಟಿಗೆ ಕಳ್ಳತನವಾಗಿತ್ತು. ಕೊಠಡಿಯಲ್ಲಿ ಆಭರಣ ಬದಲಿಸುವ ಸಂದರ್ಭದಲ್ಲಿ ಕೆಲಸದ ಮಹಿಳೆಯೊಬ್ಬರು ಬಂದಿದ್ದು, ಅವರ ಮೇಲೆ ಶಂಕೆ ಇದೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ದೂರಿನನ್ವಯ ಆವಲಹಳ್ಳಿ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಕಲ್ಯಾಣ ಮಂಟಪದಲ್ಲಿನ ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲನೆ ಮಾಡುವ ಮೂಲಕ ಆರೋಪಿ ಪತ್ತೆಗೆ ಶೋಧ ನಡೆಸುತ್ತಿದ್ದಾರೆ.

ಚಿನ್ನಾಭರಣ ದೋಚಿದ್ದ ಇಬ್ಬರ ಸೆರೆ

ಬೆಂಗಳೂರು: ಮನೆಯ ಬೀಗ ಮುರಿದು ಕಿಟಕಿಯ ಗ್ರಿಲ್ ತುಂಡರಿಸಿ ಚಿನ್ನಾಭರಣ ದೋಚಿದ್ದ ಇಬ್ಬರು ಆರೋಪಿಗಳನ್ನು ಕೊಡಿಗೆಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಮಹಾರಾಷ್ಟ್ರದ ರೋಹನ್ ಹಾಗೂ ಆಕಾಶ್ ಎಂಬುವರನ್ನು ಬಂಧಿಸಿ, 2 ಕೆ.ಜಿ ಬೆಳ್ಳಿ ಜಪ್ತಿ ಮಾಡಲಾಗಿದೆ.

ಸಹಕಾರ ನಗರದ ನಿವಾಸಿ ಪದ್ಮನಾಭ್ ಕಳೆದ ನವೆಂಬರ್‌ನಲ್ಲಿ ಮನೆಯ ಬಾಗಿಲ ಬೀಗ ಹಾಕಿಕೊಂಡು ಮನೆ ನೋಡಿಕೊಳ್ಳಲು ಸಂಜಯ್ ಎಂಬ ಭದ್ರತಾ ಸಿಬ್ಬಂದಿಯನ್ನು ನೇಮಕ ಮಾಡಿದ್ದರು. ಆತ ರಾತ್ರಿ ಮನೆಯ ಬಳಿ ಕರ್ತವ್ಯ ನಿರ್ವಹಿಸಿ ಬೆಳಿಗ್ಗೆ ವಿಶ್ರಾಂತಿಗೆ ತೆರಳಿದ್ದ ಸಂದರ್ಭದಲ್ಲಿ ಕಳ್ಳರು ಮನೆಯ ಕಿಟಕಿಯ ಗ್ರಿಲ್ ಕತ್ತರಿಸಿ ಒಳಗೆ ನುಗ್ಗಿ ಸುಮಾರು 3 ಕೆ.ಜಿ. ಬೆಳ್ಳಿ ವಸ್ತುಗಳು ಮತ್ತು 250 ಗ್ರಾಂ ಆಭರಣಗಳನ್ನು ಕಳವು ಮಾಡಿಕೊಂಡು ಪರಾರಿಯಾಗಿದ್ದರು. ಸಂಜಯ್ ಸಂಜೆ ಕೆಲಸಕ್ಕೆ ಬಂದಾಗ ಕಳ್ಳತನವಾಗಿರುವುದು ಗೊತ್ತಾಯಿತು. ಕೊಡಿಗೆಹಳ್ಳಿ ಠಾಣೆ ಪೊಲೀಸರು ತಲೆಮರೆಸಿಕೊಂಡಿದ್ದ ಆರೋಪಿಗಳನ್ನು ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ.

ತಮಿಳುನಾಡಿನ 6 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳು ವಾಸವಿದ್ದ ಮನೆಗೆ ನುಗ್ಗಿ ಹಲ್ಲೆ ಮಾಡಿ, ಬೆದರಿಸಿ ನಗದು, ಮೊಬೈಲ್, ಲ್ಯಾಪ್‌ಟಾಪ್‌ಗಳನ್ನು ಕಿತ್ತುಕೊಂಡು ಪರಾರಿಯಾಗಿದ್ದ ಆರು ಮಂದಿಯನ್ನು ಕೋಣನಕುಂಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವಿದ್ಯಾರ್ಥಿಯ ದೂರು ಆಧರಿಸಿ, ತಮಿಳುನಾಡಿನ ಅಭಿನೇಶ್, ಕಲೈವೆಂದನ್, ವಿಮಲ್ ರಾಜ್, ಕುಮಾರನ್, ಪ್ರೇಮ್ ಕುಮಾರ್ ಮತ್ತು ನವೀನ್ ಕುಮಾರ್ ಎಂಬುವವರನ್ನು ಬಂಧಿಸಿ, ₹3 ಲಕ್ಷ ಮೌಲ್ಯದ ಎರಡು ದ್ವಿಚಕ್ರ ವಾಹನಗಳು, ನಾಲ್ಕು ಮೊಬೈಲ್ ಫೋನ್ ಹಾಗೂ ಎರಡು ಲ್ಯಾಪ್‌ಟಾಪ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಅಭಿನೇಶ್ ಹೊರತುಪಡಿಸಿ ಉಳಿದವರು ಶಿಕ್ಷಣ ಪೂರೈಸಿ ವಿವಿಧೆಡೆ ಕೆಲಸ ಮಾಡಿಕೊಂಡಿದ್ದು, ಸ್ನೇಹಿತನ ಸಹಾಯಕ್ಕಾಗಿ ಬೆಂಗಳೂರಿಗೆ ಬಂದಿದ್ದರು. ಆರೋಪಿಗಳ ಮೇಲೆ ಹಿಂದೆ ಯಾವುದೇ ಪ್ರಕರಣ ದಾಖಲಾಗಿಲ್ಲ ಎಂದು ಪೊಲೀಸರು ತಿಳಿಸಿದರು.

ಠಾಣಾ ವ್ಯಾಪ್ತಿಯ ಕಾಲೇಜೊಂದರಲ್ಲಿ ಓದುತ್ತಿರುವ ಕೇರಳದ ವಿದ್ಯಾರ್ಥಿಗಳು ಕೆಂಬತ್ತಹಳ್ಳಿ ಮುಖ್ಯ ರಸ್ತೆಯಲ್ಲಿ ಬಾಡಿಗೆಗೆ ಮನೆಯೊಂದನ್ನು ಮಾಡಿಕೊಂಡು ವಾಸವಾಗಿದ್ದಾರೆ. ಏಪ್ರಿಲ್ 17ರ ರಾತ್ರಿ ಆರು ಮಂದಿ ವಿದ್ಯಾರ್ಥಿಗಳ ಮನೆಗೆ ನುಗ್ಗಿ, ಚಾಕುವಿನಿಂದ ಹಲ್ಲೆ ಮಾಡಿ, ಬೆದರಿಸಿ, ₹10 ಸಾವಿರ ನಗದು, ನಾಲ್ಕು ಮೊಬೈಲ್ ಫೋನ್‌ಗಳು, ಎರಡು ಲ್ಯಾಪ್‌ಟಾಪ್ ಹಾಗೂ ಒಂದು ದ್ವಿಚಕ್ರ ವಾಹನವನ್ನು ಕಿತ್ತುಕೊಂಡು ಪರಾರಿಯಾಗಿದ್ದರು ಎಂದು ಪೊಲೀಸರು ತಿಳಿಸಿದರು.

ಪ್ರಕರಣ ದಾಖಲಿಸಿಕೊಂಡು ವಿವಿಧ ಆಯಾಮಗಳಲ್ಲಿ ತನಿಖೆ ನಡೆಸಿ, ಬಾತ್ಮೀದಾರರಿಂದ ಮಾಹಿತಿ ಸಂಗ್ರಹಿಸಿ ತಮಿಳುನಾಡಿನ ಕೊಯಮತ್ತೂರು ಜಿಲ್ಲೆಯ ಓಂ ಶಕ್ತಿ ನಗರದಲ್ಲಿ ಆರು ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ಕೃತ್ಯದಲ್ಲಿ ಭಾಗಿಯಾಗಿರುವುದಾಗಿ ತಪ್ಪೊಪ್ಪಿಕೊಂಡಿದ್ದಾರೆ ಎಂದರು.

ತಮಿಳುನಾಡಿನ ಅಭಿನೇಶ್ ಮತ್ತು ಕೇರಳದ ವಿದ್ಯಾರ್ಥಿಗಳೊಂದಿಗೆ ಗಲಾಟೆ ಆಗಿತ್ತು. ವೈಷಮ್ಯದ ಹಿನ್ನೆಲೆಯಲ್ಲಿ ಅಭಿನೇಶ್ ತಮಿಳುನಾಡಿನಿಂದ ತನ್ನ ಸ್ನೇಹಿತರನ್ನು ನಗರಕ್ಕೆ ಕರೆಸಿಕೊಂಡಿದ್ದ. ವಿದ್ಯಾರ್ಥಿಗಳು ವಾಸವಿದ್ದ ಮನೆಗೆ ನುಗ್ಗಿ ಹಲ್ಲೆ ನಡೆಸಿದ್ದರು. ಹಲ್ಲೆಗೊಳಗಾದ ವಿದ್ಯಾರ್ಥಿಗಳು ಮತ್ತು ಆರೋಪಿ ಅಭಿನೇಶ್ ಒಂದೇ ಕಾಲೇಜಿನವರು ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ.

ಅಪಘಾತ: ಕಾರ್ಮಿಕ ಸೇರಿ ಇಬ್ಬರ ಸಾವು

ಬೆಂಗಳೂರು: ನಗರದ ಪೀಣ್ಯ ಹಾಗೂ ಚಿಕ್ಕಬಾಣಾವರದಲ್ಲಿ ಶನಿವಾರ ಸಂಭವಿಸಿದ ಪ್ರತ್ಯೇಕ ಅಪಘಾತಗಳಲ್ಲಿ ಕಾರ್ಮಿಕ ಸೇರಿ ಇಬ್ಬರು ಮೃತಪಟ್ಟಿದ್ದಾರೆ.

ಚಿಕ್ಕಬಾಣಾವರದ ಕಾಮಾಕ್ಷಿ ಫಂಕ್ಷನ್ ಹಾಲ್ ಬಳಿ ಕಾರು ಡಿಕ್ಕಿ ಹೊಡೆದು ಕನ್ಯಾ ಪ್ರಕಾಶ್ (65) ಎಂಬುವರು ಮೃತಪಟ್ಟಿದ್ದಾರೆ. ಅಬ್ಬಿಗೆರೆ ನಿವಾಸಿಯಾಗಿದ್ದ ಅವರು ಚಿಕ್ಕಬಾಣಾವರದ ಸಂಬಂಧಿಕರ ಮನೆಗೆ ಹೋಗಿದ್ದರು. ನಂತರ ಅಲ್ಲಿಂದ ಅಬ್ಬಿಗೆರೆಗೆ ವಾಪಸ್ ಬರುತ್ತಿದ್ದಾಗ ಈ ದುರ್ಘಟನೆ ನಡೆದಿದೆ.

ರಸ್ತೆ ದಾಟಲು ಪಾದಚಾರಿ ಮಾರ್ಗದಲ್ಲಿ ನಿಂತಿದ್ದ ಕನ್ಯಾ ಅವರಿಗೆ ಕಾರು ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಅವರು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಮೃತಪಟ್ಟರು. ಕಾರು ಚಾಲಕನ ಅತಿಯಾದ ವೇಗ ಹಾಗೂ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣ ಎಂದು ಪೊಲೀಸರು ತಿಳಿಸಿದ್ದಾರೆ. ಚಿಕ್ಕಬಾಣಾವರ ಠಾಣೆ ಪೊಲೀಸರು ಕಾರು ಚಾಲಕನನ್ನು ಬಂಧಿಸಿ, ವಾಹನ ಜಪ್ತಿ ಮಾಡಿದ್ದಾರೆ. ಈ ಸಂಬಂಧ ದೂರು ದಾಖಲಾಗಿದೆ.

ಕಾರ್ಮಿಕನ ಸಾವು: ಪೀಣ್ಯ ಕೈಗಾರಿಕಾ ಪ್ರದೇಶದ ಎನ್‌ಟಿಟಿಎಫ್ ಜಂಕ್ಷನ್‌ನಲ್ಲಿ ಬೈಕ್, ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಸಂಭವಿಸಿದ ಅಪಘಾತದಲ್ಲಿ ಸವಾರ ಸಂದೀಪ್ (20) ಮೃತಪಟ್ಟಿದ್ದಾರೆ.

ರಾಯಚೂರು ಜಿಲ್ಲೆಯ ಸುರಪುರದ ಸಂದೀಪ್, ನಗರದ ರಾಜಗೋಪಾಲನಗರದಲ್ಲಿ ವಾಸವಾಗಿದ್ದರು. ಪೀಣ್ಯದ ಕಬ್ಬಿಣದ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಅವರು ಸ್ನೇಹಿತನ ಜತೆ ದಾಸರಹಳ್ಳಿಗೆ ಹೋಗುತ್ತಿದ್ದಾಗ ಈ ದುರ್ಘಟನೆ ನಡೆದಿದೆ.

ಅಜಾಗರೂಕತೆಯಿಂದ ಅತಿ ವೇಗವಾಗಿ ಬೈಕ್ ಚಾಲನೆ ಮಾಡುತ್ತಿದ್ದ ಸಂದೀಪ್, ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದ್ದಾರೆ. ಪರಿಣಾಮ ಬೈಕ್‌ನಿಂದ ಕೆಳಗೆ ಬಿದ್ದು ತೀವ್ರವಾಗಿ ಗಾಯಗೊಂಡ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸಲಿಲ್ಲ ಎಂದು ತಿಳಿಸಿದ್ದಾರೆ.

ಸಂದೀಪ್, ಹೆಲ್ಮೆಟ್ ಧರಿಸಿರಲಿಲ್ಲ. ಹೀಗಾಗಿ, ಅವರ ತಲೆಗೆ ತೀವ್ರ ಪೆಟ್ಟಾಗಿ ಮೃತಪಟ್ಟಿದ್ದಾರೆ. ಅತಿಯಾದ ವೇಗ ಹಾಗೂ ಅಜಾಗರೂಕತೆಯೇ ಅಪಘಾತಕ್ಕೆ ಕಾರಣ. ಅವರ ಜತೆ ಬೈಕ್‌ನಲ್ಲಿ ಹೋಗುತ್ತಿದ್ದ ಹಿಂಬದಿ ಸವಾರ ಮಲ್ಲಿಕಾರ್ಜುನ್‌ಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ಪೊಲೀಸರು ಹೇಳಿದ್ದಾರೆ. ಪೀಣ್ಯ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೂವರ ವಿರುದ್ಧ ಎಫ್‌ಐಆರ್

ಬೆಂಗಳೂರು: ಸರ್ಕಾರಿ ಉದ್ಯೋಗ ಕೊಡಿಸುವುದಾಗಿ ನಂಬಿಸಿ ಉದ್ಯೋಗಾಕಾಂಕ್ಷಿಗಳಿಂದ ₹1.83 ಕೋಟಿ ವಂಚಿಸಿದ ಆರೋಪ ಸಂಬಂಧ ಮೂವರ ವಿರುದ್ಧ ಸಿಸಿಬಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರ್‌ಎಂವಿ ಬಡಾವಣೆ ನಿವಾಸಿ ಎನ್.ಸುರೇಂದ್ರನಾಥ್ ರಾವ್ ಮಿರ್ಜಾಕರ್ ಅವರ ದೂರು ಆಧರಿಸಿ ವೈ.ರಮೇಶ್, ಮಧ್ಯವರ್ತಿಗಳಾದ ರಾಘವೇಂದ್ರ, ಬಿ.ಎಸ್.ಧ್ರುವಕುಮಾರ್ ಎಂಬುವವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಸುರೇಂದ್ರನಾಥ್ ಅವರಿಗೆ ಸ್ನೇಹಿತರ ಮೂಲಕ ರಮೇಶ್ ಪರಿಚಯವಾಗಿದೆ. ಈ ವೇಳೆ ರಮೇಶ್, 'ತಾನು ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ವಿವಿಧ ಇಲಾಖೆಗಳಲ್ಲಿ 'ಬಿ' ಮತ್ತು 'ಡಿ' ದರ್ಜೆಯ ಉದ್ಯೋಗ ಕೊಡಿಸುತ್ತೇನೆ' ಎಂದು ಹೇಳಿದ್ದರು. ರಮೇಶ್ ಅವರ ಮಾತು ನಂಬಿದ್ದ ಸುರೇಂದ್ರನಾಥ್, ತಮ್ಮ ಪರಿಚಯಸ್ಥರು ಹಾಗೂ ಸಂಬಂಧಿಕರ ಮಕ್ಕಳಿಗೆ ವಿಚಾರ ತಿಳಿಸಿದ್ದರು. 58 ಉದ್ಯೋಗಾಕಾಂಕ್ಷಿಗಳಿಂದ 2019–2023ರ ಅವಧಿಯಲ್ಲಿ ರಮೇಶ್ ಹಾಗೂ ರಾಘವೇಂದ್ರ ಅವರು ₹1,83,40,000 ಪಡೆದಿದ್ದಾರೆ ಎಂದು ದೂರಲಾಗಿದೆ. ಹಣ ಪಡೆದ ಬಳಿಕ ಯಾರಿಗೂ ಕೆಲಸ ಕೊಡಿಸಿಲ್ಲ. ಹಣ ವಾಪಸ್ ಕೊಡುತ್ತಿಲ್ಲ. ಧ್ರುವ ಕುಮಾರ್ ಎಂಬಾತ ಸಹ ₹20 ಲಕ್ಷ ಪಡೆದು ಮೋಸ ಮಾಡಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಇಬ್ಬರ ಬಂಧನ: 20 ಬೈಕ್ ಜಪ್ತಿ

ಬೆಂಗಳೂರು: ದ್ವಿಚಕ್ರ ವಾಹನಗಳನ್ನು ಕಳವು ಮಾಡಿ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಿರುವ ತಲಘಟ್ಟಪುರ ಠಾಣೆ ಪೊಲೀಸರು, ₹15 ಲಕ್ಷ ಮೌಲ್ಯದ 20 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

ಠಾಣಾ ವ್ಯಾಪ್ತಿಯ ವರಹಾಸಂದ್ರದಲ್ಲಿ ನಿವಾಸಿಯೊಬ್ಬರು ಯಲ್ಲಮ್ಮ ದೇವಸ್ಥಾನದ ಪಕ್ಕದಲ್ಲಿ ನಿಲ್ಲಿಸಿದ್ದ ದ್ವಿಚಕ್ರ ವಾಹನ ಕಳವು ಆಗಿತ್ತು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆ ಕೈಗೊಂಡರು.

ವಿವಿಧ ಆಯಾಮಗಳಲ್ಲಿ ತನಿಖೆ ಕೈಗೊಂಡು, ಬಾತ್ಮೀದಾರರಿಂದ ಮಾಹಿತಿ ಕಲೆ ಹಾಕಿ, ನೈಸ್ ರಸ್ತೆಯ ಬಳಿ ದ್ವಿಚಕ್ರ ವಾಹನ ಸಮೇತ ಇಬ್ಬರು ವ್ಯಕ್ತಿಗಳನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಲಾಯಿತು. ಬೆಂಗಳೂರು ನಗರದ ವಿವಿಧ ಕಡೆಗಳಲ್ಲಿ ದ್ವಿಚಕ್ರ ವಾಹನಗಳನ್ನು ಕಳವು ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದರು.

ಮಾವಿನ ತೋಪು, ರಾಜಹಂಸ ಗಾರ್ಡನ್ ಪಕ್ಕದ ಖಾಲಿ ಜಾಗ ಹಾಗೂ ನಾಗೇಗೌಡನಪಾಳ್ಯದ ಬಿಡಿಎ ನಿವೇಶನದಲ್ಲಿ ನಿಲ್ಲಿಸಿದ್ದ 20 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಹೇಳಿದರು.

ಆರೋಪಿಗಳ ಬಂಧನದಿಂದ ತಲಘಟ್ಟಪುರ ಠಾಣೆಯ 3, ಕೋಣನಕುಂಟೆ ಠಾಣೆಯ 2, ಗಿರಿನಗರ, ಕರ್ಮಷಿಯಲ್ ಸ್ಟ್ರೀಟ್, ಬನಶಂಕರಿ, ತಿಲಕನಗರ, ಬಂಡೆಪಾಳ್ಯ, ರಾಜರಾಜೇಶ್ವರಿ ನಗರ, ಹನುಮಂತನಗರ, ಭಾರತಿನಗರ, ಸುಬ್ರಮಣ್ಯಪುರ, ಸಿದ್ದಾಪುರ ಪೊಲೀಸ್ ಠಾಣೆಗಳ ತಲಾ ಒಂದು ಪ್ರಕರಣ ಸೇರಿ ಒಟ್ಟು 10 ದ್ವಿಚಕ್ರ ವಾಹನ ಕಳವು ಪ್ರಕರಣಗಳು ಹಾಗೂ ನಗರದ ವಿವಿಧ ಪೊಲೀಸ್ ಠಾಣೆಗಳ ಐದು ಪ್ರಕರಣಗಳು ಪತ್ತೆಯಾಗಿವೆ.

ಅಪರಾಧ ಸುದ್ದಿಗಳು

ಇಬ್ಬರ ವಿರುದ್ಧ ಪ್ರಕರಣ

ಬೆಂಗಳೂರು: ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಸಂದೇಶ ಪೋಸ್ಟ್ ಮಾಡಿದ್ದ ಇಬ್ಬರ ವಿರುದ್ಧ ವಿಜಯನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕನ್ನಡ ಚೇತನ ಗೌಡ್ರು ಎಂ ಮತ್ತು ಎಸ್.ಎಂ.ರಾಜೇಶ್ ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದೆ. ಮುರುಗೇಶ್‌ಪಾಳ್ಯ ನಿವಾಸಿ, ಸಾಮಾಜಿಕ ಕಾರ್ಯಕರ್ತ ಎಲ್.ಆರ್. ಪುಟ್ಟರಾಜು ಎಂಬುವರು ನ್ಯಾಯಾಲಯದಿಂದ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಲು ಅನುಮತಿ ಪಡೆದುಕೊಂಡಿದ್ದು, ಎನ್‌ಸಿಆರ್ ದಾಖಲಿಸಿಕೊಂಡು ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಏಪ್ರಿಲ್ 18ರಂದು ಫೇಸ್‌ಬುಕ್‌ನಲ್ಲಿ ನಿರ್ಮಲಾನಂದನಾಥ ಸ್ವಾಮೀಜಿ ವಿರುದ್ಧ ಕನ್ನಡ ಚೇತನ್ ಗೌಡ್ರು ಎಂ ಎಂಬುವರು ಕೆಟ್ಟ ಪದಗಳನ್ನು ಬಳಸಿ ಸಂದೇಶ ಕಳುಹಿಸಿದ್ದಾರೆ. ಅದಕ್ಕೆ ರಾಜೇಶ್ ಎಂಬುವರು ಭಕ್ತರಿಗೆ ನೋವುಂಟಾಗುವ ರೀತಿಯಲ್ಲಿ ಪ್ರತಿಕ್ರಿಯಿಸಿ ದ್ದಾರೆ. ಹಾಗಾಗಿ ಇಬ್ಬರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಚಿಟಿಕೆ ಸುದ್ದಿ

ನಾಯಿಗಳಿಗೆ ಹಿಂಸೆ: ಇಬ್ಬರ ವಿರುದ್ಧ ಪ್ರಕರಣ

ಬೆಂಗಳೂರು: ಪ್ರತ್ಯೇಕ ಪ್ರಕರಣಗಳಲ್ಲಿ ನಾಯಿಗಳಿಗೆ ಹಿಂಸೆ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಕೆ.ಆರ್.ಪುರ ಠಾಣೆಯಲ್ಲಿ ಇಬ್ಬರ ವಿರುದ್ಧ ಪ್ರಕರಣ ದಾಖಲಾಗಿದೆ.

ಏಪ್ರಿಲ್ 25ರಂದು ಮುನಿಯಪ್ಪ ಲೇಔಟ್‌ನಲ್ಲಿ ಎಳನೀರು ವ್ಯಾಪಾರಿಯೊಬ್ಬರು ಬೀದಿ ನಾಯಿಗೆ ಚಾಕುವಿನಿಂದ ಇರಿದು, ಗಾಯಗೊಳಿಸಿದ್ದಾರೆ. ಅಲ್ಲದೇ ಹಿರಿಯ ನಾಗರಿಕರೊಬ್ಬರಿಗೆ ಬೆದರಿಕೆ ಹಾಕಿದ್ದಾರೆ. ಗಾಯಗೊಂಡಿರುವ ನಾಯಿಗೆ ಚಿಕಿತ್ಸೆ ಕೊಡಿಸಿ, ಆಶ್ರಯ ತಾಣದಲ್ಲಿ ಬಿಡಲಾಗಿದೆ. ಈ ಸಂಬಂಧ ಸಿದ್ದಲಿಂಗಪ್ಪ ಅವರ ದೂರಿನ ಮೇರೆಗೆ ಎಳನೀರು ವ್ಯಾಪಾರಿ ವಿರುದ್ಧ ಪ್ರಕರಣ ದಾಖಲಾಗಿದೆ. ಮತ್ತೊಂದು ಪ್ರಕರಣದಲ್ಲಿ ಏಪ್ರಿಲ್ 21ರಂದು ರಾಮಮೂರ್ತಿ ನಗರದಲ್ಲಿ ಕಟ್ಟಡ ಕಾರ್ಮಿಕರೊಬ್ಬರು ಬೀದಿ ನಾಯಿಯನ್ನು ಸಾಯಿಸಿದ್ದಾರೆ. ರೇಬಿಸ್ ಕಾಯಿಲೆಯಿಂದ ಬಳಲುತ್ತಿದ್ದ ಕಾರಣ ನಾಯಿಯನ್ನು ಸಾಯಿಸಿರುವುದಾಗಿ ಅವರು ಹೇಳಿದ್ದಾರೆ. ಪ್ರಕರಣ ದಾಖಲಾಗಿದೆ.

ಹೊಂಡದಲ್ಲಿ ಕಾಲುಜಾರಿ ಬಿದ್ದು ಅಕ್ಕ,ತಮ್ಮ ಸಾವು

ಮಧುಗಿರಿ: ತಾಲ್ಲೂಕಿನ ಮಿಡಿಗೇಶಿ ಹೋಬಳಿ ಬೆನಕನಹಳ್ಳಿ-ಮಿಡಿಗೇಶಿ ಬಳಿಯ ಹೊಂಡಕ್ಕೆ ಭಾನುವಾರ ನೀರು ಕುಡಿಯಲು ಹೋದ ಕಸಾಪುರ ಗ್ರಾಮದ ಅಕ್ಕ, ತಮ್ಮ ಕಾಲುಜಾರಿ ಹೊಂಡಕ್ಕೆ ಬಿದ್ದು ಮೃತಪಟ್ಟಿದ್ದಾರೆ. ಮೇಕೆ ಮೇಯಿಸಲು ಹೋಗಿದ್ದ ಕಸಾಪುರದ ಮಂಜುನಾಥ ಎಂಬುವವರ ಮೂವರು ಮಕ್ಕಳು ನೀರು ಕುಡಿಯಲು ಹೋದಾಗ ಮೊದಲು ರವೀಂದ್ರ (9) ಕಾಲುಜಾರಿ ಹೊಂಡಕ್ಕೆ ಬಿದ್ದಿದ್ದಾನೆ. ತಮ್ಮನನ್ನು ರಕ್ಷಿಸಲು ಹೋಗಿ ಅಕ್ಕ ಸುಚಿತ್ರಾ (11) ಕೂಡಾ ಕಾಲು ಜಾರಿ ಹೊಂಡಕ್ಕೆ ಬಿದ್ದಿದ್ದಾಳೆ. ಮತ್ತೊಬ್ಬ ಮಗಳು ಪೋಷಕರನ್ನು ಕರೆ ತರುವಷ್ಟರಲ್ಲಿ ಇಬ್ಬರು ಸಾವನ್ನಪ್ಪಿದ್ದಾರೆ. ಶವಗಳನ್ನು ಮರಣೋತ್ತರ ಪರೀಕ್ಷೆಗಾಗಿ ಮಧುಗಿರಿ ಸಾರ್ವಜನಿಕ ಆಸ್ಪತ್ರೆಗೆ ತರಲಾಗಿದೆ. ಮಿಡಿಗೇಶಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಧನ ವಾರ್ತೆ

ಭಾಗ್ಯಲಕ್ಷ್ಮಮ್ಮಣ್ಣಿ

ಬೆಂಗಳೂರು: ಸಮಾಜಕಲ್ಯಾಣ ಇಲಾಖೆಯ ನಿವೃತ್ತ ಅಧಿಕಾರಿ ದಿವಂಗತ ಚಿನ್ನಯ್ಯ ಅವರ ಪತ್ನಿ, ಸುಂಕದಕಟ್ಟೆಯ ಟೆಲಿಕಾಂ ಬಡಾವಣೆ ನಿವಾಸಿ ಭಾಗ್ಯ ಲಕ್ಷ್ಮಮ್ಮಣ್ಣಿ (76) ಭಾನುವಾರ ಹೃದಯಾಘಾತದಿಂದ ನಿಧನರಾದರು.

ಅವರಿಗೆ ಪುತ್ರ, ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ಮಾಂಬಳ್ಳಿಯಲ್ಲಿ ನೆರವೇರಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ನೋಡಿ, ಇಲ್ಲಿದೆ ಕಸ!

ನಿಮ್ಮ ಬಡಾವಣೆಯಲ್ಲಿ ಕಸ ವಿಲೇವಾರಿ ಆಗುತ್ತಿಲ್ಲವೇ? ರಸ್ತೆಗಳಲ್ಲಿ ತ್ಯಾಜ್ಯ ಸುರಿಯಲಾಗುತ್ತಿದೆಯೇ? ಇಂತಹ ಸಮಸ್ಯೆ ಇದ್ದರೆ, ಚಿತ್ರಸಹಿತ ಮಾಹಿತಿಯನ್ನು ನಿಮ್ಮ ಹೆಸರು, ವಿಳಾಸದೊಂದಿಗೆ 'ಪ್ರಜಾವಾಣಿ'ಗೆ ಕಳುಹಿಸಿ. **96060 38256**

ಮೈಕೋ ಲೇಔಟ್‌ನ ಬೇಗೂರಿನ ರಸ್ತೆಯಲ್ಲಿ ಕಸ ಹಾಕಲಾಗಿದೆ

ಸ್ಥಳೀಯ ನಿವಾಸಿಗಳು ತಮ್ಮ ಮನೆಯಲ್ಲಿ ಉತ್ಪತ್ತಿಯಾದ ತ್ಯಾಜ್ಯವನ್ನು ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ಜೆ.ಪಿ. ಉದ್ಯಾನದ ಬ್ಯಾಕ್ ಗೇಟ್‌ನ ರಿಂಗ್ ರಸ್ತೆಯಲ್ಲಿ ಎಸೆದು ಹೋಗಿದ್ದಾರೆ

ವಿಜಯನಗರ ವಿಧಾನಸಭಾ ಕ್ಷೇತ್ರದ ಕೆಂಪಾಪುರ ಅಗ್ರಹಾರದ ಸಂಗೊಳ್ಳಿ ರಾಯಣ್ಣ ಮುಖ್ಯರಸ್ತೆಯಲ್ಲಿ ಕಸದ ರಾಶಿ ಬಿದ್ದಿದೆ

'ಅಂಕಿತ ಪುಸ್ತಕ' ಕಾರ್ಯಕ್ರಮದಲ್ಲಿ ಲೇಖಕಿ ಬಾನು ಮುಷ್ತಾಕ್ ಅಭಿಮತ

'ಅಹಂಕಾರದ ಜ್ಞಾನ ಈ ಕಾಲದ ಸಮಸ್ಯೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಜ್ಞಾನಕ್ಕಿಂತ ಅಹಂಕಾರದ ಜ್ಞಾನ ಈ ಕಾಲದ ದೊಡ್ಡ ಸಮಸ್ಯೆಯಾಗಿದೆ. ಈ ಸಂದರ್ಭದಲ್ಲಿ ಸಾಹಿತ್ಯವು ಅಹಂಕಾರದ ಕತ್ತಲೆಗೆ ಬೆಳಕಾಗಬೇಕು' ಎಂದು ಲೇಖಕಿ ಬಾನು ಮುಷ್ತಾಕ್ ಅಭಿಪ್ರಾಯಪಟ್ಟರು.

ಅಂಕಿತ ಪುಸ್ತಕ ಪ್ರಕಾಶನ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಬರಗೂರು ರಾಮಚಂದ್ರಪ್ಪ ಅವರ ಲೇಖನಗಳ ಸಂಕಲನ 'ಶ್ರೇಷ್ಠತೆಯ ಸೊಕ್ಕು' ಕೃತಿಯನ್ನು ಜನಾರ್ಪಣೆ ಮಾಡಿ, ಮಾತನಾಡಿದರು.

'ಶ್ರೇಷ್ಠತೆಯ ಭ್ರಮೆ ಅಮಾನವೀಯವಾಗಿ ರೂಪುಗೊಂಡಿದೆ. ಇದರ ಹಾನಿ ಭೀಕರವಾಗಿರುತ್ತದೆ. ಹುಟ್ಟು, ಜಾತಿ, ವರ್ಗ, ಧರ್ಮ, ಲಿಂಗ, ಬಣ್ಣಕ್ಕೆ ಸಂಬಂಧಿಸಿದಂತೆಯೂ ಶ್ರೇಷ್ಠತೆಯ ಸೊಕ್ಕನ್ನು ಕಾಣಬಹುದಾಗಿದೆ. ಈ ಸೊಕ್ಕು ಅಹಂಕಾರದಿಂದ ಬರುತ್ತದೆ. ಇತರರನ್ನು ಕುಗ್ಗಿಸುವ ಮೂಲಕ ಸ್ವತಃ ಉನ್ನತನೆಂಬ ಮನೋಭಾವವಾಗಿದೆ. ಇದು ಸಾಮಾಜಿಕ ಸಮಸ್ಯೆಯಾಗಿರದೆ, ಆಂತರಿಕ ರೋಗವಾಗಿದೆ. ಆದ್ದರಿಂದ ಅಹಂಕಾರದ ಕೈದಿಗಳಾಗಿರದೆ, ಮಾನವೀಯ ಮಾರ್ಗವನ್ನು ಅನುಸರಿಸಬೇಕು' ಎಂದರು.

ಕಾರ್ಯಕ್ರಮದಲ್ಲಿ ಬಾನು ಮುಷ್ತಾಕ್ ಹಾಗೂ ಬರಗೂರು ರಾಮಚಂದ್ರಪ್ಪ ಅವರು ಸಮಾಲೋಚನೆ ನಡೆಸಿದರು. ರಾಜೇಂದ್ರ ಚೆನ್ನಿ, ಎಚ್.ಎಸ್. ರಾಘವೇಂದ್ರರಾವ್ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

'ನನಗೆ 'ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿ' ಬಂದ ಬಳಿಕ ಸೊಕ್ಕುಗಳು ನನ್ನನ್ನು ಅಪಾರ ಕಾಡಿಸಿದ್ದವು. ಈ ಪ್ರಶಸ್ತಿ ನನಗೆ ಬಂದದ್ದು ಸುಲಭವಾಗಿರಲಿಲ್ಲ. ಅದರ ಯಶಸ್ಸನ್ನು ಸಂಬಂಧಪಡದವರಿಗೆ ತಲುಪಿಸಲು ಕೆಲವರು ಬೇಕಾದ ಪ್ರಯತ್ನಗಳನ್ನು ಮಾಡಿದ್ದರು. ನನ್ನ ಮೇಲೆ ಒತ್ತಡವನ್ನೂ ಹೇರಿದ್ದರು. ಆದರೆ, ನಾನು ಆ ವೇಳೆ ಬಂಡಾಯ ಸಾಹಿತ್ಯ ಸಂಘಟನೆ ಹಾಗೂ ಸಾಮಾಜಿಕ ಚಳವಳಿಗೆ ಮಾತ್ರ ಕೃತಜ್ಞತೆ ಸಲ್ಲಿಸಿದೆ' ಎಂದು ಸ್ಮರಿಸಿಕೊಂಡರು.

ವಿಮರ್ಶಕ ರಾಜೇಂದ್ರ ಚೆನ್ನಿ, 'ನಮ್ಮ ಸಾಂಸ್ಕೃತಿಕ ಸಂಸ್ಥೆಗಳು ಹಾಗೂ ಹಲವಾರು ಅಕಾಡೆಮಿಗಳು ಇತ್ತೀಚೆಗೆ ಸರ್ಕಾರದ ಇಲಾಖೆಗಳಂತಾಗಿ ನಿಸ್ತೇಜಗೊಂಡಿವೆ. ಸ್ವಂತಿಕೆಯನ್ನು ಕಳೆದುಕೊಂಡು, ಬೇಡದಿರುವ ಬದ್ಧತೆಯನ್ನು ತೋರಿಸುತ್ತವೆ. ಅಕಾಡೆಮಿ ಗಳು ಸರ್ಕಾರದಿಂದ ಧನಸಹಾಯ ಪಡೆದು ಕೊಂಡರೂ, ಸರ್ಕಾರದ ಗುಲಾಮರಾಗ ಬಾರದು. ಈ ಬಗ್ಗೆ ಬರಗೂರು ರಾಮಚಂದ್ರಪ್ಪ ಅವರು ತಮ್ಮ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಆಯಾ ಕಾಲದ ಘಟನೆಗಳಿಗೆ ಸಂವೇದನಾಶೀಲ ಪ್ರತಿಕ್ರಿಯೆ ನೀಡಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬರಗೂರು ರಾಮಚಂದ್ರಪ್ಪ ಅವರು, 'ಅಕ್ಷರ ಹಾಗೂ ಅಧಿಕಾರ ಅಹಂಕಾರವಾಗದೆ, ಅಂತಃಕರಣವಾಗಬೇಕು. ಶ್ರೇಷ್ಠತೆ ಸೊಕ್ಕಾಗದೆ ಶೋಧವಾಗಬೇಕು. ಯಾವತ್ತೂ ಚರಿತ್ರೆಯ ಕೊಂಡಿಗಳನ್ನು ಶ್ರೇಷ್ಠತೆಯ ಸೊಕ್ಕಿನಿಂದ ಕಳಚಬಾರದು. ಚಾರಿತ್ರಿಕ ಬೆಳವಣಿಗೆಯೊಂದನ್ನು ನಿರಾಕರಿಸುವ ಅಥವಾ ತಿರಸ್ಕರಿಸುವ ಧೋರಣೆಯೇ ನಿಜವಾದ ಅರ್ಥದಲ್ಲಿ ಸೊಕ್ಕು' ಎಂದು ಅಭಿಪ್ರಾಯಪಟ್ಟರು.

ವಿಮರ್ಶಕ ಎಚ್.ಎಸ್. ರಾಘವೇಂದ್ರರಾವ್, ಪ್ರಕಾಶಕ ಪ್ರಕಾಶ್ ಕಂಬತ್ತಳ್ಳಿ ಉಪಸ್ಥಿತರಿದ್ದರು.

ಎಚ್.ಎಸ್.ಆರ್. ಲೇಔಟ್: ತ್ಯಾಜ್ಯ ನಿರ್ವಹಣೆಗೆ ಮೆಚ್ಚುಗೆ

ಬೆಂಗಳೂರು: ಬೆಂಗಳೂರು ದಕ್ಷಿಣ ನಗರಪಾಲಿಕೆ ಆಯುಕ್ತ ಕೆ.ಎನ್.ರಮೇಶ್ ಭಾನುವಾರ ಎಚ್.ಎಸ್.ಆರ್. ಲೇಔಟ್‌ನಲ್ಲಿನ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯನ್ನು ಪರಿಶೀಲಿಸಿದರು.

ಕೆ.ಎನ್. ರಮೇಶ್

ಈ ವೇಳೆ ಸಾರ್ವಜನಿಕರು ಮತ್ತು ಎಚ್.ಎಸ್.ಆರ್ ಸಿಟಿಜನ್ ಫೋರಂನ ಸ್ವಯಂಸೇವಕರು ಸ್ವಚ್ಛತೆಗೆ ಕೈಗೊಂಡಿರುವ ಕಾರ್ಯಗಳನ್ನು ಶ್ಲಾಘಿಸಿದರು. ಎಚ್.ಎಸ್.ಆರ್. ಲೇಔಟ್‌ನಲ್ಲಿನ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಕ್ಕೆ ಭೇಟಿ ನೀಡಿದ ಆಯುಕ್ತರು, ಅಲ್ಲಿ ಪ್ರತಿದಿನ ಸುಮಾರು 5 ಟನ್ ಒಣ ತ್ಯಾಜ್ಯವನ್ನು ಸಂಸ್ಕರಿಸುತ್ತಿರುವುದನ್ನು ವೀಕ್ಷಿಸಿದರು.

ತ್ಯಾಜ್ಯ ಸಂಗ್ರಹಣಾ ವಾಹನಗಳ ಕಾರ್ಯನಿರ್ವಹಣೆಯನ್ನು ಮೇಲ್ವಿಚಾರಣೆ ಮಾಡಲು ಸ್ಥಳೀಯ ನಿವಾಸಿಗಳು ಸ್ವಯಂಸೇವಕರನ್ನು ನೇಮಿಸಿಕೊಂಡಿರುವುದು ಮತ್ತು ಒಣ ತ್ಯಾಜ್ಯಕ್ಕಾಗಿ ಪ್ರತ್ಯೇಕ ವಾಹನವನ್ನು ನಿರ್ವಹಿಸುತ್ತಿರುವುದು ಮಾದರಿಯಾಗಿದೆ ಎಂದು ಶ್ಲಾಘಿಸಿದರು.

ಎಚ್.ಎಸ್.ಆರ್. ಲೇಔಟ್ 7ನೇ ಸೆಕ್ಟರ್, 8ನೇ ಮುಖ್ಯರಸ್ತೆ ಮತ್ತು 22ನೇ ಅಡ್ಡರಸ್ತೆಯಲ್ಲಿ ಸುಮಾರು 600 ಮನೆಗಳಿಂದ ಉತ್ಪತ್ತಿ ಆಗುವ 500 ಕೆ.ಜಿ. ಹಸಿ ಕಸವನ್ನು ಗೊಬ್ಬರವಾಗಿ ಪರಿವರ್ತಿಸಲಾಗುತ್ತಿದೆ. ಇದನ್ನು ಸ್ಥಳೀಯ ನಿವಾಸಿಗಳೇ ತಮ್ಮ ಉದ್ಯಾನಗಳಿಗೆ ಬಳಸಿಕೊಳ್ಳುತ್ತಿದ್ದಾರೆ.

ಇದಲ್ಲದೇ ದ.ರಾ. ಬೇಂದ್ರೆ ಪಾರ್ಕ್‌ನಲ್ಲಿ ಎಲೆಗಳಿಂದ ಗೊಬ್ಬರ ತಯಾರಿಸುವ ಪ್ರಕ್ರಿಯೆಯನ್ನು ಆಯುಕ್ತರು ವೀಕ್ಷಿಸಿದರು. ಎನ್‌ಜಿಒಗಳ ಸಹಯೋಗದಲ್ಲಿ ನಡೆಯುತ್ತಿರುವ ಈ ಕಾರ್ಯವು ಪರಿಸರ ಸ್ನೇಹಿಯಾಗಿದೆ ಎಂದು ಹೇಳಿದರು.

ಬೆಂಗಳೂರಿಗೆ ಬಾಲಕರ ಕಳ್ಳಸಾಗಣೆ: ರಕ್ಷಣೆ

ರಾಂಚಿ (ಪಿಟಿಐ): ಬೆಂಗಳೂರಿಗೆ ಕಳ್ಳಸಾಗಣೆ ಮಾಡುತ್ತಿದ್ದ ಮೂವರು ಬಾಲಕರನ್ನು ಜಾರ್ಖಂಡ್‌ನ ರಾಂಚಿ ಜಿಲ್ಲೆಯ ರೈಲ್ವೆ ನಿಲ್ದಾಣದಲ್ಲಿ ರಕ್ಷಿಸಲಾಗಿದೆ ಎಂದು ಆರ್‌ಪಿಎಫ್ ಭಾನುವಾರ ಹೇಳಿಕೆ ನೀಡಿದೆ.

ಮಾನವ ಕಳ್ಳಸಾಗಣೆ ಆರೋಪದ ಮೇಲೆ 27 ವರ್ಷದ ವ್ಯಕ್ತಿಯನ್ನು ಬಂಧಿಸಲಾಗಿದೆ. ರಕ್ಷಿಸಲಾದ ಮೂವರು ಬಾಲಕರು ಪಶ್ಚಿಮ ಬಂಗಾಳದ ಪುರುಲಿಯಾ ಜಿಲ್ಲೆಯ ಝಾಲ್ದಾದವರು.

ಮಾನವ ಕಳ್ಳಸಾಗಣೆ ಮತ್ತು ಬಾಲ ಕಾರ್ಮಿಕ ಪದ್ಧತಿ ವಿರೋಧಿ ವಿಶೇಷ ಕಾರ್ಯಾಚರಣೆ ಸಂದರ್ಭದಲ್ಲಿ, ರೈಲ್ವೆ ಪೊಲೀಸ್ ಪಡೆ ಶನಿವಾರ ಸಂಜೆ ಹಟಿಯಾ ನಿಲ್ದಾಣದಲ್ಲಿ 14–15 ವರ್ಷದೊಳಗಿನ ಮೂವರು ಬಾಲಕರನ್ನು ರಕ್ಷಿಸಿದೆ ಎಂದು ಆರ್‌ಪಿಎಫ್ ಹೇಳಿಕೆಯಲ್ಲಿ ತಿಳಿಸಿದೆ.

'ಬೆಂಗಳೂರಿನ ನಿರ್ಮಾಣ ಸ್ಥಳಗಳಿಗೆ ಕಾರ್ಮಿಕರನ್ನು ಕಳುಹಿಸುವುದಾಗಿ ಮತ್ತು ಪ್ರತಿ ಕಾರ್ಮಿಕರಿಗೆ ₹300–400 ಕಮಿಷನ್ ಪಡೆಯುವುದಾಗಿ ವಿಚಾರಣೆಯ ಸಮಯದಲ್ಲಿ ಆರೋಪಿಯು ಒಪ್ಪಿಕೊಂಡಿದ್ದಾನೆ. ಬಂಧಿತ ವ್ಯಕ್ತಿ ಮೊತ್ತೊಬ್ಬ ವ್ಯಕ್ತಿಯೊಂದಿಗೆ ಸೇರಿ ವಿವಿಧ ರಾಜ್ಯಗಳಿಂದ ಬಡ ಮಕ್ಕಳನ್ನು ಕಳ್ಳಸಾಗಣೆ ಮಾಡುತ್ತಿದ್ದ ಎಂದು ಬಹಿರಂಗಪಡಿಸಿದ್ದಾರೆ' ಎಂದು ಅದು ಹೇಳಿದೆ.

ಚಿತ್ರಾವಳಿ

ಭಾರತೀಯ ರುಮಟಾಲಜಿ ಆಸೋಸಿಯೇಷನ್ ಕರ್ನಾಟಕ ವಿಭಾಗವು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ವಾಕಥಾನ್‌ನಲ್ಲಿ ಸಂಧಿವಾತದ ಬಗ್ಗೆ ಜಾಗೃತಿ ಮೂಡಿಸಲಾಯಿತು

ಟ್ವೆಲ್ ಮೀಡಿಯಾ ಸಂಸ್ಥೆ ಹೈದರಾಬಾದ್‌ನಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಹೃದ್ರೋಗ ತಜ್ಞ ಡಾ.ಎಚ್.ಎಸ್. ನಾಗರಾಜ ಶೆಟ್ಟಿ ಅವರಿಗೆ ಟ್ವೆಲ್ ಮೀಡಿಯಾದ ಸಂಸ್ಥಾಪಕ ದೀಪಕ್ ಜೈನ್ ಅವರು 'ಇಂಡಿಯನ್ ಮೆಡಿಕಲ್ ಅವಾರ್ಡ್' ಪ್ರದಾನ ಮಾಡಿದರು

ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ 78ನೇ ಸಂಸ್ಥಾಪನಾ ವರ್ಷಾಚರಣೆ

'ಸಾಮ್ರಾಜ್ಯಶಾಹಿ ದೇಶಗಳಿಂದ ಯುದ್ಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಮ್ರಾಜ್ಯಶಾಹಿ ಮನಸ್ಥಿತಿಯನ್ನು ಈಗಲೂ ಮುಂದುವರಿಸಿರುವ ಕೆಲವು ದೇಶಗಳು ತಮ್ಮ ಪ್ರಾಬಲ್ಯ ಸಾಧನೆಗೆ ಜಗತ್ತಿನಲ್ಲಿ ಯುದ್ಧದ ಸನ್ನಿವೇಶ ನಿರ್ಮಾಣ ಮಾಡಿವೆ' ಎಂದು ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ಪಾಲಿಟ್ ಬ್ಯೂರೊ ಸದಸ್ಯ ಕೆ.ರಾಧಾಕೃಷ್ಣ ಆಕ್ರೋಶ ವ್ಯಕ್ತಪಡಿಸಿದರು.

ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ 78ನೇ ಸಂಸ್ಥಾಪನಾ ವರ್ಷಾಚರಣೆಯ ಅಂಗವಾಗಿ ನಗರದ ಗಾಂಧಿ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಒಂದು ಕಾಲದಲ್ಲಿ ರಷ್ಯಾ ಮತ್ತು ಚೀನಾ ಕಮ್ಯುನಿಸ್ಟ್, ಸಮಾಜವಾದಿ ಹಿನ್ನೆಲೆ ಹೊಂದಿದ್ದ ದೇಶಗಳಾಗಿದ್ದವು. ಈಗಂತೂ ಚೀನಾ ಜಗತ್ತಿನ ಆರ್ಥಿಕತೆಯ ಮೇಲೆ ಪ್ರಾಬಲ್ಯ ಸಾಧಿಸುತ್ತಿದೆ. ಇದನ್ನು ತಡೆಯಲು ಅಮೆರಿಕ ಪ್ರಯತ್ನ ನಡೆಸುತ್ತಿದೆ. ಜಗತ್ತಿನ ನಾನಾ ದೇಶಗಳಲ್ಲಿ ನಡೆದಿರುವ ಯುದ್ಧಗಳು ಅಮೆರಿಕ, ಚೀನಾ ಸಹಿತ ಹಲವು ದೇಶಗಳ ಸಾಮ್ರಾಜ್ಯಶಾಹಿ ಬಿಕ್ಕಟ್ಟಿನ ಪ್ರತಿಫಲನ' ಎಂದು ಟೀಕಿಸಿದರು.

ನಗರದಲ್ಲಿ ಭಾನುವಾರ ನಡೆದ ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ಸಂಸ್ಥಾಪನಾ ದಿನಾಚರಣೆಯಲ್ಲಿ ವಿ.ಜ್ಞಾನಮೂರ್ತಿ, ಬಿ.ಆರ್.ಅಪರ್ಣಾ, ಬಿ.ರವಿ, ಕೆ.ರಾಧಾಕೃಷ್ಣ, ಸುನೀತ್ ಕುಮಾರ್ ಉಪಸ್ಥಿತರಿದ್ದರು

'ಭಾರತದಲ್ಲೂ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಕಾರ್ಮಿಕ ಕಾಯ್ದೆಗಳಿಗೆ ತಿದ್ದುಪಡಿ ತಂದು ಕಾರ್ಪೊರೇಟ್ ಬಂಡವಾಳಶಾಹಿಗಳಿಗೆ ಮಣೆ ಹಾಕುತ್ತಿದೆ. ಇದರ ಪರಿಣಾಮ ನೊಯ್ಡಾ, ಗುರುಗ್ರಾಮ, ಪನೇಸರ್, ದೆಹಲಿ ಸಹಿತ ನಾನಾ ಕಡೆಗಳಲ್ಲಿ ನಡೆದ ಕಾರ್ಮಿಕ ಹೋರಾಟಗಳಲ್ಲಿ ಪ್ರತಿಫಲಿಸಿದೆ. ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಎನ್ನುವುದು ಮತ್ತೊಂದು ರೀತಿ ಜನರ ಹಕ್ಕು ಕಸಿಯುವ ಪ್ರಯತ್ನವಾಗಿದೆ. ದೇಶದ ವಿದ್ಯಮಾನ ಅರ್ಥೈಸಿಕೊಂಡು ಜನ ಹೋರಾಟ ರೂಪಿಸಬೇಕಾಗಿದೆ' ಎಂದು ಹೇಳಿದರು.

ಪಕ್ಷದ ರಾಜ್ಯ ಸಮಿತಿಯ ಸದಸ್ಯರಾದ ಡಾ ಸುನೀತ್ ಕುಮಾರ್ ಮಾತನಾಡಿ, 'ದೇಶಕ್ಕೆ ಸ್ವಾತಂತ್ರ್ಯ ಲಭಿಸಿದ ಮರು ವರ್ಷವೇ ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷ ಆರಂಭಗೊಂಡು ನಿರಂತರ ವಾಗಿ ಜನಪರ ಹೋರಾಟ, ಸಂಘಟನೆಯಲ್ಲಿ ತೊಡಗಿಸಿಕೊಂಡಿದೆ. ಭಾರತದ ರೈತರು, ಕಾರ್ಮಿಕರಿಗೆ ನಿಜಾರ್ಥದಲ್ಲಿ ಇನ್ನೂ ಸ್ವಾತಂತ್ರ್ಯ ಬಂದಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿದ್ದ ರಾಜ್ಯ ಸಮಿತಿ ಸದಸ್ಯ ಎಂ.ಎನ್.ಶ್ರೀರಾಮ್, 'ಯಾವುದೇ ದೇಶದಲ್ಲಿ ಕ್ರಾಂತಿ ಆಗಬೇಕು ಎಂದರೆ ಕ್ರಾಂತಿಕಾರಿ ಸಿದ್ಧಾಂತ, ಪಕ್ಷ ಬೇಕು ಎಂಬ ಲೆನಿನ್, ಶಿವದಾಸ್ ಘೋಷ್ ಅವರ ವಿಚಾರದಂತೆ ಈ ಪಕ್ಷ ಆರಂಭಗೊಂಡಿದೆ. ಪಕ್ಷದ ಸಿದ್ಧಾಂತ, ವಿಚಾರಗಳನ್ನು ಕಾರ್ಯಕರ್ತರು ಆಳವಾಗಿ ಅರ್ಥೈಸಿಕೊಂಡು ಜನಪರವಾಗಿ ಕೆಲಸ ಮಾಡಬೇಕು' ಎಂದರು.

ರಾಜ್ಯ ಸಮಿತಿಯ ಸದಸ್ಯರಾದ ಜ್ಞಾನ ಮೂರ್ತಿ, ಬಿ.ಆರ್.ಅಪರ್ಣಾ, ವಿ.ಎನ್.ರಾಜಶೇಖರ್, ಬಿ.ರವಿ ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಬೆಂಗಳೂರು: ರಾಜಾಜಿನಗರದ ಆರ್ಯ ಸೇವಾಶ್ರಮ ಟ್ರಸ್ಟ್‌ನಿಂದ ಬಡ ಹಾಗೂ ಅನಾಥ ಬಾಲಕರಿಗೆ ಉಚಿತ ವಿದ್ಯಾಭ್ಯಾಸ ಹಾಗೂ ವಸತಿ ಸೌಲಭ್ಯಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

7 ವರ್ಷದಿಂದ 15 ವರ್ಷದೊಳಗಿನ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಅನಾಥ ಹಾಗೂ ಬಡ ಬಾಲಕರ ಪಾಲಕರು ಏ. 30ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಆರ್ಯ ಸೇವಾಶ್ರಮ ಟ್ರಸ್ಟ್, ನಂ. 83, ಮೊದಲನೇ 'ಎನ್' ಬ್ಲಾಕ್, ರಾಜಾಜಿನಗರ.

ಮಾಹಿತಿಗೆ: 74116 96057, 98445 16664ಗೆ ಸಂಪರ್ಕಿಸಬಹುದು.

ಚಟಿಕೆ ಸುದ್ದಿ

ಕೃಷಿ ಪ್ರಾಯೋಗಿಕ ಪರೀಕ್ಷೆ ಮುಂದೂಡಿಕೆ

ಬೆಂಗಳೂರು: ಯುಜಿಸಿಇಟಿ–2026ರ ಕೃಷಿ ಕೋಟಾದ ಅಭ್ಯರ್ಥಿಗಳಿಗೆ ಏ. 29ರಂದು ನಿಗದಿಯಾಗಿದ್ದ ಕೃಷಿ ಪ್ರಾಯೋಗಿಕ ಪರೀಕ್ಷೆಯನ್ನು ಮೇ 10ಕ್ಕೆ ಮುಂದೂಡಲಾಗಿದೆ.

ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳಿಗೆ ಮೇ 3 ರಂದು ನೀಟ್ ಪರೀಕ್ಷೆ ನಡೆಯಲಿದೆ. ಆದ್ದರಿಂದ ಕೃಷಿ ಪ್ರಾಯೋಗಿಕ ಪರೀಕ್ಷೆಯನ್ನು ಮುಂದೂಡುವಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮನವಿ ಮಾಡಿತ್ತು' ಎಂದು ಬೆಂಗಳೂರು ಕೃಷಿ ವಿಶ್ವ ವಿದ್ಯಾಲಯದ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಧಾರವಾಡ ರಂಗಾಯಣ ಝುಕೀರ ನಿರ್ದೇಶಕ

ಧಾರವಾಡ: ಇಲ್ಲಿನ ರಂಗಾಯಣದ ನಿರ್ದೇಶಕರಾಗಿ ರಂಗಭೂಮಿ ಕಲಾವಿದ ಝುಕೀರ ನದಾಫ ಅವರನ್ನು ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ಝುಕೀರ ಅವರು ಬೆಳಗಾವಿ ಜಿಲ್ಲೆಯ ಸವದತ್ತಿಯವರು.

'ರಂಗಾಯಣದಿಂದ ವಾರ್ಷಿಕ ದೊಡ್ಡಮಟ್ಟದ ಕಾರ್ಯಕ್ರಮ ಮಾಡುವ ಮತ್ತು ಕಾಲೇಜು ವಿದ್ಯಾರ್ಥಿಗಳಿಗಾಗಿ ರಂಗೋತ್ಸವ ಆಯೋಜಿಸುವ ಉದ್ದೇಶವಿದೆ' ಎಂದು ಝುಕೀರ ನದಾಫ 'ಪ್ರಜಾವಾಣಿ'ಗೆ ತಿಳಿಸಿದರು.

ರಂಗಾಯಣದ ನಿರ್ದೇಶಕರಾಗಿದ್ದ ರಾಜು ತಾಳಿಕೋಟಿ ನಿಧನದ ಬಳಿಕ ಆರು ತಿಂಗಳಿನಿಂದ ಹುದ್ದೆ ಖಾಲಿ ಇತ್ತು.

ಸುಜನಾ ಸಾಹಿತ್ಯ ಪ್ರಶಸ್ತಿಗೆ ರಾಗೌ ಆಯ್ಕೆ

ಕೆ.ಆರ್.ಪೇಟೆ (ಮಂಡ್ಯ ಜಿಲ್ಲೆ): ಸಾಹಿತಿ ಪ್ರೊ.ಸುಜನಾ ಅವರ ಹೆಸರಿನಲ್ಲಿ ಸ್ಥಾಪಿಸಿರುವ ಸುಜನಾ ಸಾಹಿತ್ಯ ಚೊಚ್ಚಲ ಪ್ರಶಸ್ತಿಗೆ ಮೈಸೂರಿನ ಸಾಹಿತಿ ಪ್ರೊ.ರಾಮೇಗೌಡ (ರಾಗೌ) ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಡಾ.ಸುಜನಾ ಪ್ರತಿಷ್ಠಾನದ ಅಧ್ಯಕ್ಷ ಕೆ.ಎಸ್. ಸೋಮಶೇಖರ್ ತಿಳಿಸಿದರು.

'ಪ್ರಶಸ್ತಿ ₹25ಸಾವಿರ ನಗದು, ಫಲಕ ಒಳಗೊಂಡಿದೆ. ಹೊಸ ಹೊಳಲುವಿನಲ್ಲಿ ಏ.28ರಂದು ಪ್ರದಾನ ಮಾಡಲಾಗುವುದು' ಎಂದು ಭಾನುವಾರ ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಕೈದಿ ಆತ್ಮಹತ್ಯೆ

ಧಾರವಾಡ: ನಗರದ ಕೇಂದ್ರ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿ ಮಹಾಂತೇಶ ಕುಂಬಾರ (29), ಶನಿವಾರ ಶೌಚಾಲಯದಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಇವರು, ಗದಗ ಜಿಲ್ಲೆ ಲಕ್ಷ್ಮೇಶ್ವರ ತಾಲ್ಲೂಕಿನ ಪುಟಗಾವ ಬಂಡಿ ಗ್ರಾಮದವರು. ತಕ್ಷಣವೇ ಆಸ್ಪತ್ರೆಗೆ ಕರೆದೊಯ್ದಿದ್ದು, ಚಿಕಿತ್ಸೆಗೆ ಸ್ಪಂದಿಸಲಿಲ್ಲ' ಎಂದು ಕಾರಾಗೃಹದ ಸಿಬ್ಬಂದಿ ತಿಳಿಸಿದರು. ಪ್ರಕರಣ ದಾಖಲಾಗಿದೆ.

ವ್ಯಕ್ತಿ ತಲೆ ಮೇಲೆ ಕಾಲಿಟ್ಟ ಕಾಡಾನೆ

ಕನಕಪುರ (ರಾಮನಗರ): ಕಾವೇರಿ ವನ್ಯಜೀವಿಧಾಮದ ಸಂಗಮ ಅರಣ್ಯ ವ್ಯಾಪ್ತಿಯ ಚೀಲಂದವಾಡಿಯಲ್ಲಿ ಭಾನುವಾರ ಕಾಡಾನೆ ದಾಳಿಗೆ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ.

ಪಡಿತರ ತರಲು ಹೊರಟಿದ್ದ ಶಿವು (55) ಅವರ ಮೇಲೆ ಆನೆ ದಾಳಿ ನಡೆಸಿ, ತುಳಿದಿದೆ. ಅವರು ಸ್ಥಳದಲ್ಲೇ ಮೃತಪಟ್ಟರು.

ಅರಣ್ಯಾಧಿಕಾರಿಗಳು ಹಾಗೂ ಕೋಡಿಹಳ್ಳಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಗುಂಡು ಹೊಡೆದುಕೊಂಡು ಶಿಕ್ಷಕಿ ಆತ್ಮಹತ್ಯೆ

ಮಡಿಕೇರಿ: ತಾಲ್ಲೂಕಿನ ಭಾಗಮಂಡಲ ಸಮೀಪದ ಚೇರಂಬಾಣೆ ಗ್ರಾಮದ ನಿವಾಸಿ, ಸ್ಥಳೀಯ ಜಿಎಂಪಿ ಶಾಲೆಯ ಶಿಕ್ಷಕಿ ರೋಹಿಣಿ (51), ಭಾನುವಾರ ಗುಂಡು ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ರೋಹಿಣಿ

'ಕೋವಿಯಿಂದ ಬೆಳಿಗ್ಗೆ 5ರ ಸುಮಾರಿಗೆ ಮುಖಕ್ಕೆ ಗುಂಡು ಹೊಡೆದುಕೊಂಡಿದ್ದಾರೆ. ಮಲಗಿದ್ದ ಪತಿ, ಪುತ್ರಿ ಸಿಲಿಂಡರ್ ಸ್ಫೋಟಿಸಿದೆ ಎಂದು ಗಾಬರಿಯಿಂದ ಎದ್ದು ನೋಡಿದ್ದಾರೆ. ಅಷ್ಟೊತ್ತಿಗೆ ಮೃತಪಟ್ಟಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ಪತಿಯ ಅನಾರೋಗ್ಯ ಮತ್ತು ಕೆಲಸದ ಒತ್ತಡದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ' ಎಂದು ಮಾಹಿತಿ ನೀಡಿದರು. 'ಜನಗಣತಿ ಕಾರ್ಯಕ್ಕೆ ಅವರನ್ನು ನಿಯೋಜಿಸಲಾಗಿತ್ತು. ಕೆಲಸದ ಒತ್ತಡ ಎಂದು ಅವರು ಮೌಖಿಕವಾಗಿ ಅಥವಾ ಲಿಖಿತವಾಗಿ ಗಮನಕ್ಕೂ ತಂದಿರಲಿಲ್ಲ' ಎಂದು ಡಿಡಿಪಿಐ ಬಸವರಾಜು ತಿಳಿಸಿದರು.

'ಅಹಿಂದಕ್ಕೆ ನಮ್ಮವರಿಂದಲೇ ತೊಡಕು'

ಅಹಿಂದ ಹೋರಾಟ, ಸಾಧನೆ, ಸಂಕಲ್ಪ– ರಾಜ್ಯಮಟ್ಟದ ವಿಚಾರ ಸಂಕಿರಣ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ರಾಜ್ಯದಲ್ಲಿ ನಮ್ಮ ಪಕ್ಷದ ಸರ್ಕಾರ ಇದ್ದರೂ ಅಹಿಂದ ವರ್ಗಕ್ಕೆ ಏನೂ ಮಾಡಿಲ್ಲ ಎಂಬ ಮಾತು ಕೇಳಿಬರುತ್ತಿದೆ. ಆ ವರ್ಗಕ್ಕೆ ಕೊಟ್ಟ ಭರವಸೆ ಈಡೇರಿಸಲು ನಮ್ಮವರೇ ತೊಡಕಾಗಿದ್ದಾರೆ' ಎಂದು ಲೋಕೋಪಯೋಗಿ ಸಚಿವ, ಅಹಿಂದ ಮುಖಂಡ ಸತೀಶ ಜಾರಕಿಹೊಳಿ ಇಲ್ಲಿ ಬೇಸರ ವ್ಯಕ್ತಪಡಿಸಿದರು.

ಭಾನುವಾರ ಇಲ್ಲಿ 'ಅಹಿಂದ 25 ವರ್ಷಗಳ ಹೋರಾಟ, ಸಾಧನೆ, ಸಂಕಲ್ಪ–ರಾಜ್ಯಮಟ್ಟದ ವಿಚಾರ ಸಂಕಿರಣ' ಉದ್ಘಾಟಿಸಿದ ಅವರು, '25 ವರ್ಷಗಳ ಸುದೀರ್ಘ ಅವಧಿಯಲ್ಲಿ ಅಹಿಂದ ವರ್ಗ ಸಾಕಷ್ಟು ಪಾಠ ಕಲಿತಿದೆ' ಎಂದರು.

'ಬೃಹತ್ ಸಮಾವೇಶ, ಸಭೆಗಳನ್ನು ನಡೆಸಿದರೂ ನಿರೀಕ್ಷಿತ ಬದಲಾವಣೆ ಆಗಿಲ್ಲ. ಅನಿವಾರ್ಯವಾಗಿ ಈಗ ಹೋರಾಟದ ಸ್ವರೂಪ ಬದಲಿಸಬೇಕಿದೆ. ನಮ್ಮ ರಕ್ಷಣೆ, ಸೌಲಭ್ಯಕ್ಕಾಗಿ ಹೊಸ ದಾರಿಯನ್ನು ಕಂಡುಕೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಎರಡನೇ ಹಂತದ ಹೋರಾಟ ಇದೀಗ ಆರಂಭವಾಗಿದ್ದು, 2028ರ ಮೇ ತಿಂಗಳವರೆಗೆ ನಡೆಯಲಿದೆ. ಇದು ರಾಜ್ಯದಲ್ಲಿ ಹೊಸ ಕ್ರಾಂತಿಗೆ ಕಾರಣವಾಗಲಿದೆ' ಎಂದರು.

'ಅಹಿಂದ ಸಂಘಟನೆ ರಾಜಕೀಯದ ಹೊರತಾಗಿ ಇರಬೇಕು. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧ್ಯಕ್ಷರು ಸಕ್ರಿಯರಾಗಿ ಕೆಲಸ ಮಾಡುತ್ತ ಸಮಾಜದಲ್ಲಿ ಜಾಗೃತಿ ಮೂಡಿಸಬೇಕು. ಗುಡಿಸಲು, ಟೆಂಟ್ ವಾಸಿಗಳನ್ನು ಗುರುತಿಸಿ, ಅವರ ಏಳಿಗೆಗೆ ಶ್ರಮಿಸಬೇಕು. ರಾಜಕೀಯ ಮುಖಂಡರನ್ನು ಹೊರಗಿಟ್ಟು ವರ್ಷಪೂರ್ತಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಸಮಾವೇಶ ನಡೆಸಿ, ಅಹಿಂದ ಸಮುದಾಯಗಳನ್ನು ಒಗ್ಗೂಡಿಸಬೇಕು' ಎಂದರು.

ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ ಅವರು, 'ಸಂವಿಧಾನದಲ್ಲಿ ಇರುವ ಹಲವು ಅನುಚ್ಛೇದಗಳು ಅಪ್ರಸ್ತುತ ಎಂದು ಹೇಳಿ, ಸಾಮಾಜಿಕ ನ್ಯಾಯವನ್ನು ಅಪ ವ್ಯಾಖ್ಯಾನ ಮಾಡಲಾಗುತ್ತಿದೆ' ಎಂದರು.

'ನಮ್ಮ ಪಕ್ಷದಲ್ಲೇ ಇರುವ ಶತ್ರುಗಳನ್ನು ಸಮರ್ಥವಾಗಿ ಎದುರಿಸಿ ಸಂವಿಧಾನ ರಕ್ಷಿಸಬೇಕಿದೆ. ಹೋರಾಟದ ಸ್ವರೂಪ ಬದಲಿಸಬೇಕು. ಎಲ್ಲರ ಹಿತರಕ್ಷಣೆಯೇ ಅಹಿಂದ ಉದ್ದೇಶವಾಗಬೇಕು' ಎಂದು ಸಲಹೆ ಮಾಡಿದರು.

ರಾಜಕೀಯ ಲಾಭಕ್ಕಾಗಿ ಅಹಿಂದ ಸಮಾವೇಶ ಮಾಡುತ್ತಿಲ್ಲ. ಸಮಾಜದ ಜಾಗೃತಿಗೆ ಸಮಾವೇಶ ನಡೆಸುತ್ತಿದ್ದು, ಸರ್ಕಾರ ಮತ್ತು ಅಹಿಂದ ಸೇತುವೆಯಾಗಿ ಪದಾಧಿಕಾರಿಗಳು ಕೆಲಸ ಮಾಡಬೇಕು
ಸತೀಶ ಜಾರಕಿಹೊಳಿ, ಸಚಿವ

ದೇಶದಲ್ಲಿನ ಸಮಸ್ಯೆ, ಸವಾಲುಗಳಿಗೆ ಸಂವಿಧಾನ ಕಾರಣ ಎನ್ನುತ್ತಾ ಅದನ್ನು ಬದಲಿಸಲು ಒಂದು ವರ್ಗ ವ್ಯವಸ್ಥಿತವಾಗಿ ಷಡ್ಯಂತ್ರ ನಡೆಸುತ್ತಿದೆ. ಸಂವಿಧಾನ ರಕ್ಷಣೆಗೆ ಆದ್ಯತೆ ನೀಡಬೇಕಿದೆ
ಎಚ್.ಎನ್. ನಾಗಮೋಹನದಾಸ್, ನಿವೃತ್ತ ನ್ಯಾಯಮೂರ್ತಿ

ಹುಬ್ಬಳ್ಳಿಯಲ್ಲಿ ಭಾನುವಾರ ನಡೆದ 'ಅಹಿಂದ 25 ವರ್ಷಗಳ ಹೋರಾಟ, ಸಾಧನೆ, ಸಂಕಲ್ಪ ರಾಜ್ಯಮಟ್ಟದ ವಿಚಾರ ಸಂಕಿರಣ'ದಲ್ಲಿ ಅಹಿಂದ ಸಮುದಾಯದ ಮುಖಂಡರು ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಕುರ್ಚಿ ಉಳಿಸಿಕೊಳ್ಳಲು ಹುಬ್ಬಳ್ಳಿಯಲ್ಲಿ ಕಾಂಗ್ರೆಸ್ ಅಹಿಂದ ಸಮಾವೇಶ ನಡೆಸುತ್ತಿದೆ. ನಮ್ಮ ಭಿಕ್ಷೆಯಿಂದ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ ಎಂದು ಅಹಿಂದ ಸಮುದಾಯದ ಜನ ಹೇಳುತ್ತಿದ್ದಾರೆ
ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಈ ಸರ್ಕಾರ ಪತನ ಶತಸಿದ್ಧ. ಅಹಿಂದ ಸಮಾವೇಶದ ಮೂಲಕ ಸಿದ್ದರಾಮಯ್ಯ ಕುರ್ಚಿ ಉಳಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. ಇದು ಡಿ.ಕೆ. ಶಿವಕುಮಾರ್‌ಗೆ ಟಾಂಗ್ ನೀಡುವ ಸಮಾವೇಶ
ಆರ್.ಅಶೋಕ, ವಿಧಾನಸಭೆ ವಿರೋಧಪಕ್ಷದ ನಾಯಕ

ಸುದ್ದಿ 2 ನಿಮಿಷ

ಜನರ ಸಮಸ್ಯೆಗೆ ಸ್ಪಂದಿಸದ ಪಿಡಿಒಗಳು: ಬಿ.ಆರ್.ಪಾಟೀಲ

ಕಲಬುರಗಿ: 'ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರ ಸ್ವರೂಪ ಪಡೆದುಕೊಂಡಿದೆ. ಪಂಚಾಯಿತಿಗಳಲ್ಲಿ ಹಣವಿಲ್ಲ. ಚುನಾಯಿತ ಪ್ರತಿನಿಧಿಗಳಿಲ್ಲ' ಎಂದು ಶಾಸಕ, ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ ಬೇಸರಿಸಿದರು.

'ಪಿಡಿಒಗಳು ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ನನ್ನ ಫೋನ್ ಕರೆಯನ್ನೂ ಸ್ವೀಕರಿಸುವುದಿಲ್ಲ' ಎಂದು ಅವರು ಭಾನುವಾರ ಸುದ್ದಿಗೋಷ್ಠಿಯಲ್ಲಿ ಅಸಮಾಧಾನ ವ್ಯಕ್ತಪಡಿಸಿದರು.

'ಕಳೆದ ವರ್ಷ ಉತ್ತಮ ಮಳೆಯಾಗಿ ಕೆರೆಗಳು ಭರ್ತಿಯಾಗಿದ್ದವು. ಈ ವರ್ಷ ತಾಪಮಾನ ಹೆಚ್ಚುತ್ತಿದೆ. ನೀರಿನ ಸಮಸ್ಯೆ ಶುರುವಾಗಿದೆ. ಹಳ್ಳಿಗಳಲ್ಲಿ ಜಾನುವಾರುಗಳು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ' ಎಂದರು.



'ಗ್ರಾಮೀಣ ಭಾಗಗಳಲ್ಲಿ ಕುಡಿಯುವ ನೀರು ಪೂರೈಕೆಯ ತುರ್ತು ಕಾಮಗಾರಿಗಳಿಗೆ ₹45 ಕೋಟಿ ಅನುದಾನ ಹಂಚಿಕೆ ಮಾಡಲಾಗಿದೆ. ಆದರೆ, ನನ್ನ ಕ್ಷೇತ್ರವೊಂದರಿಂದಲೇ ₹4.37 ಕೋಟಿ ಅನುದಾನಕ್ಕೆ ಬೇಡಿಕೆ ಇದೆ. ಬೇಡಿಕೆಗೆ ತಕ್ಕಂತೆ ಅನುದಾನ ಬಿಡುಗಡೆ ಮಾಡಬೇಕು' ಎಂದು ಅವರು ಆಗ್ರಹಿಸಿದರು.

ಉಪಚುನಾವಣೆ: ಮೂವರ ಅಮಾನತು

ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ನಡೆಸಿದ ಆರೋಪದ ಮೇಲೆ ಮೂವರನ್ನು ಕಾಂಗ್ರೆಸ್ ಪಕ್ಷದ ಅಮಾನತು ಮಾಡಿದೆ.

ಬಾಗಲಕೋಟೆ ಕೇಂದ್ರ ಸಹಕಾರಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಮುರುಗೇಶ ಕಡ್ಲಿಮಟ್ಟಿ, ಕಮತಗಿ ಪಟ್ಟಣ ಪಂಚಾಯಿತಿ ಸದಸ್ಯರಾದ ಗುರು ಪಾಟೀಲ ಮತ್ತು ರಮೇಶ ಜಮಖಂಡಿ ಅಮಾನತುಗೊಂಡವರು.

'ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನೀಡಿದ ದೂರಿನ ಮೇರೆಗೆ ಮೂವರಿಗೆ ನೋಟಿಸ್ ನೀಡಲಾಗಿತ್ತು. ಉತ್ತರ ಆಧರಿಸಿ ಅಮಾನತು ಮಾಡಲಾಗಿದೆ' ಎಂದು ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಎಸ್.ಜಿ. ನಂಜಯ್ಯಮಠ ತಿಳಿಸಿದ್ದಾರೆ.

'ಆರೋಗ್ಯ ವ್ಯವಸ್ಥೆ ಸಂಪೂರ್ಣ ಅಸ್ತವ್ಯಸ್ಥ'

ಪ್ರಜಾವಾಣಿ ವರದಿ ಉಲ್ಲೇಖ: ಸರ್ಕಾರದ ವಿರುದ್ಧ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಔಷಧ ಕೊರತೆ ಸೇರಿ ಸಾಲು ಸಾಲು ಸಮಸ್ಯೆಗಳಿಂದ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ರಾಜ್ಯದಾದ್ಯಂತ ಸಂಪೂರ್ಣ ಅಸ್ತವ್ಯಸ್ಥವಾಗಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

'ತಾಲ್ಲೂಕು ಆಸ್ಪತ್ರೆಗೆ ಬೇಕು ಚಿಕಿತ್ಸೆ' ಶೀರ್ಷಿಕೆಯಡಿ 'ಪ್ರಜಾವಾಣಿ'ಯ ಮುಖಪುಟದಲ್ಲಿ ಭಾನುವಾರ ವಿಶೇಷ ವರದಿ ಪ್ರಕಟವಾಗಿತ್ತು. ಈ ವರದಿ ಉಲ್ಲೇಖಿಸಿ 'ಎಕ್ಸ್' ಮಾಡಿರುವ ಅವರು, 'ರಾಜ್ಯದ ಆರೋಗ್ಯ ಇಲಾಖೆ ಅನಾರೋಗ್ಯ ಪೀಡಿತವಾಗಿದೆ. ಸರ್ಕಾರಿ ಆಸ್ಪತ್ರೆಗಳು ಕೋಮಾ ಸ್ಥಿತಿಯಲ್ಲಿವೆ. ವಿಧಾನಸಭೆ ಅಧಿವೇಶನದಲ್ಲಿ ಈ ಬಗ್ಗೆ ನಾನು ಪ್ರಸ್ತಾಪಿಸಿದಾಗ, ಎಲ್ಲವೂ ಸರಿಯಿದೆ ಎಂದು ತಿಪ್ಪೆ ಸಾರಿಸುವ ಮಾತನಾಡಿದ್ದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರ ಕಾರ್ಯವೈಖರಿಗೆ ಮಾಧ್ಯಮಗಳೇ ಕನ್ನಡಿ ಹಿಡಿದಿವೆ' ಎಂದಿದ್ದಾರೆ.

'ಆಂತರಿಕ ಕಚ್ಚಾಟ, ರಾಜಕೀಯ ಮೇಲಾಟ, ಬಣ ಬಡಿದಾಟ ಇವುಗಳಲ್ಲಿಯೇ ಮುಳುಗಿರುವ ರಾಜ್ಯ ಕಾಂಗ್ರೆಸ್ ಸರ್ಕಾರ, ಆರೋಗ್ಯ ಇಲಾಖೆಯನ್ನು ಸಂಪೂರ್ಣ ನಿರ್ಲಕ್ಷಿಸಿ ಸರ್ಕಾರಿ ಆಸ್ಪತ್ರೆಗಳನ್ನು ಅಧೋಗತಿಗೆ ತಳ್ಳಿದೆ. ಈಗಲಾದರೂ ಎಚ್ಚೆತ್ತುಕೊಂಡು ಆರೋಗ್ಯ ಇಲಾಖೆಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡದಿದ್ದರೆ, ಜನ ಕಾಂಗ್ರೆಸ್ ಸರ್ಕಾರದ ವಿರುದ್ಧ ದಂಗೆ ಏಳುವ ದಿನ ಬಹಳ ದೂರವಿಲ್ಲ' ಎಂದಿದ್ದಾರೆ.

'ಆರೋಗ್ಯ ಇಲಾಖೆಗೆ ಅನಾರೋಗ್ಯ'

'ಆರೋಗ್ಯ ಇಲಾಖೆಯೇ ಈಗ 'ಅನಾರೋಗ್ಯ' ಪೀಡಿತವಾಗಿದ್ದು, ಸರ್ಕಾರಿ ಆಸ್ಪತ್ರೆಗಳು ಕೋಮಾ ಸ್ಥಿತಿಗೆ ತಲುಪಿವೆ' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ದೂರಿದ್ದಾರೆ.

'ಪ್ರಜಾವಾಣಿ' ವರದಿ ಉಲ್ಲೇಖಿಸಿ 'ಎಕ್ಸ್' ಮಾಡಿರುವ ಅವರು, 'ರಾಜ್ಯದ ತಾಲ್ಲೂಕು ಆಸ್ಪತ್ರೆಗಳ ದಯನೀಯ ಸ್ಥಿತಿ ಬಹಿರಂಗವಾಗಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಗಳಿಲ್ಲದೆ ಬಡ ರೋಗಿಗಳು ಖಾಸಗಿ ಔಷಧ ಕೇಂದ್ರಗಳಿಗೆ ಅಲೆದಾಡುತ್ತಿದ್ದಾರೆ. ತಜ್ಞ ವೈದ್ಯರು ಹಾಗೂ ಶುಶ್ರೂಷಕರ ಹುದ್ದೆಗಳು ಖಾಲಿ ಉಳಿದಿದ್ದು, ಚಿಕಿತ್ಸೆ ವಿಳಂಬವಾಗುತ್ತಿದೆ. ಸುಳ್ಳು ಸಮರ್ಥನೆಗಳನ್ನು ಬಿಟ್ಟು ಆಸ್ಪತ್ರೆಗಳಿಗೆ ಕಾಯಕಲ್ಪ ನೀಡಿ' ಎಂದು ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಎಫ್‌ಟಿಐಐ: ದೆಹಲಿ ಕೇಂದ್ರದಲ್ಲಿ ಪರೀಕ್ಷೆ ರದ್ದು

ನವದೆಹಲಿ (ಪಿಟಿಐ): ಕೆಲ ವಿದ್ಯಾರ್ಥಿಗಳು ಸ್ಟ್ರಾಂಗ್‌ರೂಮ್‌ಗೆ ನುಗ್ಗಿ, ಸಿಬ್ಬಂದಿ ಜೊತೆ ಅನುಚಿತವಾಗಿ ವರ್ತಿಸಿರುವ ಕಾರಣ ದೆಹಲಿ ಕೇಂದ್ರದಲ್ಲಿ ನಡೆಯಬೇಕಿದ್ದ ಫಿಲ್ಮ್ ಆ್ಯಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ(ಎಫ್‌ಟಿಐಐ)ದ ಪ್ರವೇಶ ಪರೀಕ್ಷೆಯನ್ನು ಭಾನುವಾರ ರದ್ದುಗೊಳಿಸಲಾಗಿದೆ.

ದೇಶದ ಉಳಿದ ಕೇಂದ್ರಗಳಲ್ಲಿ ಪರೀಕ್ಷೆಯು ಶಾಂತಿಯುತವಾಗಿ ನಡೆಯಿತು. ದೆಹಲಿ ಕೇಂದ್ರದಲ್ಲಿ ನಡೆಯುತ್ತಿದ್ದ ಎಫ್‌ಟಿಐಐ ಪ್ರವೇಶ ಪರೀಕ್ಷೆಯ ಮೊದಲ ಪಾಳಿಯಲ್ಲಿ ಪ್ರಶ್ನೆಪತ್ರಿಕೆ ವಿತರಣೆ ವಿಳಂಬವಾದ ಕಾರಣ ಗೊಂದಲ ಉಂಟಾಗಿತ್ತು. ಕೆಲವು ವಿದ್ಯಾರ್ಥಿಗಳು ಸ್ಟ್ರಾಂಗ್‌ರೂಮ್ ಪ್ರವೇಶಿಸಿ, ಸಿಬ್ಬಂದಿ ಜೊತೆ ಅನುಚಿತವಾಗಿ ವರ್ತಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವಿರೋಧ ಪಕ್ಷದ ನಾಯಕ ಆರ್‌.ಅಶೋಕ ಕಿಡಿ

'ದಲಿತರಿಗೆ ಚೊಂಬು ಕೊಟ್ಟ ಸರ್ಕಾರ'

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ಬಿಜೆಪಿ ಆಡಳಿತದಲ್ಲಿ ಎಸ್.ಸಿ ಸಮುದಾಯಕ್ಕೆ ಶೇ 17ರಷ್ಟು ಮೀಸಲಾತಿ ನೀಡಿದ್ದೆವು. ಈ ಸರ್ಕಾರ ದಲಿತರಿಗೆ ಚೊಂಬು ಕೊಟ್ಟಿದೆ' ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಕಿಡಿಕಾರಿದರು.

'ಡಿ.ಕೆ.ಶಿವಕುಮಾರ್ ಅವರು ದೆಹಲಿಗೆ ತೆರಳಿದ್ದ ಸಮಯದಲ್ಲಿ ಸಿದ್ದರಾಮಯ್ಯ ಸಂಪುಟ ಸಭೆ ನಡೆಸಿದ್ದಾರೆ. ಇದು ದಲಿತ ಸಮುದಾಯದ ವಿರೋಧಿ ಎಂದು ಬಿಂಬಿಸಲು ನಡೆಸಿರುವ ಕುತಂತ್ರ' ಎಂದು ಟೀಕಿಸಿದರು.

ಸುದ್ದಿಗಾರ ಜೊತೆಗೆ ಮಾತನಾಡಿದ ಅವರು, 'ಜೆಡಿಎಸ್‌ನಲ್ಲಿದ್ದಾಗ ದೇವೇಗೌಡರನ್ನು ಮುಗಿಸಲು ಸಂಚು ಮಾಡಿದ್ದ ಸಿದ್ದರಾಮಯ್ಯ ಇದೀಗ ಅದೇ ತಂತ್ರಗಾರಿಕೆ ನಡೆಸಿದ್ದಾರೆ. 'ಬಿಎಸ್‌ವೈ ಅಭಿಮಾನೋತ್ಸವ ಪಕ್ಷಾತೀತ ಕಾರ್ಯಕ್ರಮ. ಬಿಜೆಪಿ ಆಯೋಜಿಸಿರುವ ಕಾರ್ಯಕ್ರಮ ಅಲ್ಲ. ಜೆಡಿಎಸ್ ಸೇರಿ ಯಾರಿಗೆ ಆಹ್ವಾನಿಸಬೇಕೆಂದು ಕುಟುಂಬಸ್ಥರು ತೀರ್ಮಾನಿಸುತ್ತಾರೆ' ಎಂದು ಸ್ಪಷ್ಟಪಡಿಸಿದರು.

'ಕಾಂಗ್ರೆಸ್‌ನಿಂದ ಅನ್ಯಾಯ'

ಹಾವೇರಿ: 'ಮೀಸಲಾತಿ ವಿಷಯದಲ್ಲಿ ಕಾಂಗ್ರೆಸ್ ಪರಿಶಿಷ್ಟರಿಗೆ ಅನ್ಯಾಯ ಮಾಡಿದೆ. ವೋಟ್ ಬ್ಯಾಂಕ್ ಹೆಸರಿನಲ್ಲಿ ವಂಚಿಸಿದೆ' ಎಂದು ಮಾಜಿ ಸಚಿವ ರಾಜುಗೌಡ ಹೇಳಿದರು.

ಮಹರ್ಷಿ ವಾಲ್ಮೀಕಿ ಅವರ ಮೂರ್ತಿ ಅನಾವರಣ ಕಾರ್ಯಕ್ರಮದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿ, 'ಪರಿಶಿಷ್ಟ ಸಮುದಾಯದವರು ಯಾವಾಗಲೂ ಅರ್ಜಿ ಕೊಡುತ್ತಲೇ ಇರಬೇಕು ಎಂಬ ಮನಸ್ಥಿತಿ ಕಾಂಗ್ರೆಸ್‌ನವರದ್ದು' ಎಂದರು.

'ವಾಲ್ಮೀಕಿ ಸಮಾಜದವರು ಯಾವುದೇ ಪಕ್ಷ ಅಥವಾ ನಾಯಕರನ್ನು ನಂಬಬಾರದು. ಎಲ್ಲರೂ ಸ್ವಯಂ ಪ್ರೇರಣೆಯಿಂದ ಹೋರಾಡಿದರೆ, ನಿಶ್ಚಿತವಾಗಿ ನ್ಯಾಯ ಸಿಗುತ್ತದೆ' ಎಂದರು.

ಸಮುದಾಯಗಳಿಗೆ ಅನ್ಯಾಯವಾಗುತ್ತದೆ ಎಂಬ ಅನುಮಾನಕ್ಕೆ ಒಳಮೀಸಲು ಮೂಲಕ ಪರಿಹಾರ ನೀಡಲಾಗಿದೆ. ಈ ವಿಷಯದಲ್ಲಿ ಕರ್ನಾಟಕ ಯಶಸ್ವಿ ಮಾದರಿ ಅನುಸರಿಸಿದೆ
ಎಚ್.ಕೆ.ಪಾಟೀಲ, ಸಚಿವ

ರಾಜ್ಯದಲ್ಲಿ ಒಳ ಮೀಸಲಾತಿ ವಿಷಯದಲ್ಲಿ ಅಲೆಮಾರಿ ಸಮುದಾಯದವರಿಗೆ ಅನ್ಯಾಯ ಆಗಿಲ್ಲ. ಅವರಿಗೆ ಮೀಸಲಾತಿ ಸೌಲಭ್ಯವಿದ್ದು, ಆತಂಕ ಪಡಬೇಕಿಲ್ಲ
ಸತೀಶ ಜಾರಕಿಹೊಳಿ, ಸಚಿವ

ಗುರುಪೀಠದ ಮೂವರು ಟ್ರಸ್ಟಿಗಳ ಉಚ್ಚಾಟನೆ

ಒಂದನೇ ಪುಟದಿಂದ...

'ಟ್ರಸ್ಟ್‌ನ ಬೈಲಾ ಪ್ರಕಾರ ಸಂಘಕ್ಕೆ ಪರಮಾಧಿಕಾರವಿದೆ. ಈವರೆಗೆ ಬಚ್ಚಿಡಲಾಗಿದ್ದ ಬೈಲಾವನ್ನು ಮಾಹಿತಿ ಹಕ್ಕು ಕಾಯ್ದೆಯಡಿ ಪಡೆಯಲಾಗಿದೆ. ವಿವಾದ ಸೃಷ್ಟಿಯಾದಾಗ, ಲೆಕ್ಕಪತ್ರದಲ್ಲಿ ಸಮಸ್ಯೆಗಳು ಕಂಡುಬಂದಾಗ ತೀರ್ಮಾನ ಕೈಗೊಳ್ಳುವ ಅಧಿಕಾರವನ್ನು ಸಂಘಕ್ಕೆ ನೀಡಿರುವುದು ಬೈಲಾದಲ್ಲಿ ಉಲ್ಲೇಖವಾಗಿದೆ' ಎಂದರು.

'ಸಂಘ 1994ರಲ್ಲಿ ರಚನೆಯಾದರೆ, ಟ್ರಸ್ಟ್ 2008ರಲ್ಲಿ ಅಸ್ತಿತ್ವಕ್ಕೆ ಬಂದಿದೆ. 18 ವರ್ಷಗಳಿಂದ ಲೆಕ್ಕಪತ್ರ ಸರಿಯಾಗಿ ನೀಡಿಲ್ಲ. ಗುರುಪೀಠ ಸ್ಥಾಪನೆ ಉದ್ದೇಶ ಈಡೇರಿಲ್ಲ. ಶಿಕ್ಷಣ ಸಂಸ್ಥೆ ಹಾಗೂ ಹಾಸ್ಟೆಲ್‌ಗಳು ನಿರ್ಮಾಣವಾಗಿಲ್ಲ' ಎಂದು ಆರೋಪಿಸಿದರು.

'ಲೆಕ್ಕ ನೀಡಲು ಟ್ರಸ್ಟ್ ಏ.27ರಂದು ದಿನ ನಿಗದಿಪಡಿಸಿರುವುದು ಏಕಪಕ್ಷೀಯ ತೀರ್ಮಾನ. ಇದಕ್ಕೆ ಸಂಘದ ಸಹಮತವಿಲ್ಲ. ರಾಜ್ಯದ 120 ತಾಲ್ಲೂಕು ಸಮಿತಿ ಹಾಗೂ 20 ಜಿಲ್ಲಾ ಸಮಿತಿಯನ್ನು ಭೇಟಿ ಮಾಡಿ ದೇಣಿಗೆ ನೀಡಿದವರ ಮಾಹಿತಿ ಕಲೆಹಾಕುವ ಪ್ರಕ್ರಿಯೆ ಮೇ ತಿಂಗಳು ಆರಂಭವಾಗಲಿದೆ. ಸಮುದಾಯದ ಜನಪ್ರತಿನಿಧಿಗಳ ಸಮ್ಮುಖದಲ್ಲಿ ಜೂನ್‌ನಲ್ಲಿ ಸಭೆ ಕರೆದು ಟ್ರಸ್ಟ್‌ನಿಂದ ಲೆಕ್ಕ ಕೇಳುತ್ತೇವೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸಹಕಾರ ಕಾಯ್ದೆಯಡಿ ನೋಂದಣಿಯಾಗಿರುವ ಸಂಘಕ್ಕೆ ಟ್ರಸ್ಟ್ ಮೇಲೆ ಯಾವುದೇ ಅಧಿಕಾರವಿಲ್ಲ. ಬೈಲಾ ಭಿನ್ನವಾಗಿದೆ. ಟ್ರಸ್ಟಿಗಳನ್ನು ಉಚ್ಚಾಟಿಸಲು ಸಂಘಕ್ಕೆ ಸಾಧ್ಯವಿಲ್ಲ
ಬಿ.ಸಿ. ಉಮಾಪತಿ, ಪ್ರಧಾನ ಧರ್ಮದರ್ಶಿ, ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ಟ್ರಸ್ಟ್

ಭಕ್ತರು ನೀಡಿದ ದೇಣಿಗೆ ಮಾಹಿತಿಯನ್ನು ಟ್ರಸ್ಟ್ ಮರೆಮಾಚಿದೆ. ಪ್ರಾಮಾಣಿಕರಾಗಿದ್ದರೆ ಧರ್ಮಸ್ಥಳದ ಮಂಜುನಾಥೇಶ್ವರ ಅಥವಾ ಕೊಟ್ಟೂರಿನ ಕೊಟ್ಟೂರೇಶ್ವರ ಸನ್ನಿಧಾನದಲ್ಲಿ ಪ್ರಮಾಣ ಮಾಡಲಿ
ಎಚ್.ಎಸ್.ಶಿವಶಂಕರ್, ಮಾಜಿ ಶಾಸಕ ಹರಿಹರ

ಮೆರವಣಿಗೆಯಲ್ಲಿ ಸಂಘಟನೆಯ ರಾಷ್ಟ್ರೀಯ ಹಾಗೂ ರಾಜ್ಯಮಟ್ಟದ ಮುಖಂಡರು ಭಾಗವಹಿಸಿದ್ದರು

'ನರೇಗಾ: ದೆಹಲಿ ಮಾದರಿ ಹೋರಾಟ'

ಪ್ರಜಾವಾಣಿ ವಾರ್ತೆ

ಶಹಾಪುರ (ಯಾದಗಿರಿ ಜಿಲ್ಲೆ): 'ಕೇಂದ್ರ ಸರ್ಕಾರ ವಿಬಿ–ಜಿ ರಾಮ್ ಜಿ ಕಾಯ್ದೆ ರದ್ದುಗೊಳಿಸಿ ಹಿಂದಿನ ನರೇಗಾ ಯೋಜನೆ ಮರುಜಾರಿ ಮಾಡದಿದ್ದರೆ, ಹಿಂದೆ ಕೃಷಿ ಕಾಯ್ದೆಗಳ ರದ್ದತಿ ಮಾದರಿಯಲ್ಲಿ ಹೋರಾಟ ನಡೆಯಲಿದೆ' ಎಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಜಂಟಿ ಕಾರ್ಯದರ್ಶಿ ವಿ.ಶಿವದಾಸನ್ ಹೇಳಿದರು.

ಭಾನುವಾರ ಇಲ್ಲಿ ನಡೆದ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ 9ನೇ ರಾಜ್ಯ ಸಮ್ಮೇಳನದ ಬಹಿರಂಗ ಸಭೆಯಲ್ಲಿ ಅವರು ಮಾತನಾಡಿದರು.

'ಹಿಂದೆ ದೆಹಲಿಯಲ್ಲಿ ಸತತವಾಗಿ ಹೋರಾಟದಿಂದ ಮೂರು ಕೃಷಿ ಕಾಯ್ದೆಗಳು ರದ್ದುಗೊಂಡವು. ಕೂಲಿಕಾರ್ಮಿಕರು ಎಲ್ಲರೂ ಒಗ್ಗೂಡಿ ಮತ್ತೊಂದು ಹೋರಾಟದ ಭಾಗವಾಗಿ ಮೇ 15ರಂದು ನರೇಗಾ ಮರುಜಾರಿಗೆ ಒತ್ತಾಯಿಸಿ ದೇಶವ್ಯಾಪಿ ಪ್ರತಿಭಟನೆ ನಡೆಸಲಾಗುವುದು' ಎಂದರು.

ಸಂಘದ ಪ್ರಧಾನ ಕಾರ್ಯದರ್ಶಿ ವಿ.ವೆಂಕಟ್ ಅವರು, 'ಬಿಜೆಪಿಯನ್ನು ಅಧಿಕಾರದಿಂದ ದೂರ ಇರಿಸಲು ರಾಜ್ಯದಲ್ಲಿ ಕಾಂಗ್ರೆಸ್‌ಗೆ ಬೆಂಬಲಿಸಿದ್ದೆವು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಈಗ ಬಿಜೆಪಿಯ ಹಾದಿಯಲ್ಲಿ ಸಾಗುತ್ತಿದ್ದಾರೆ. ಗ್ಯಾರಂಟಿಗಳ ಹೆಸರಿನಲ್ಲಿ ವಂಚಿಸಿದ್ದು, ಕೃಷಿ ಕಾರ್ಮಿಕರ ರಕ್ಷಣೆಗೆ ಮುಂದಾಗುತ್ತಿಲ್ಲ' ಎಂದರು.

ಬಹಿರಂಗ ಸಭೆಗೂ ಮುನ್ನ ನಡೆದ ಮೆರವಣಿಗೆಯಲ್ಲಿ ಸಾವಿರಾರು ಕೆಂಪು ವಸ್ತ್ರಧಾರಿಗಳು, ರೈತರು, ಕೂಲಿಕಾರ್ಮಿಕರು ಕೆಂಪು ಬಾವುಟ ಹಿಡಿದು ಸಾಗಿದರು.

'ಪ್ಯಾನ್-ಐಐಟಿ ಬೆಂಗಳೂರು ಶೃಂಗಸಭೆ' ಮೇ 16 ರಂದು

ಬೆಂಗಳೂ: 'ಪ್ಯಾನ್ ಐಐಟಿ ಅಲ್ಯೂಮ್ನಿ ಇಂಡಿಯಾ ಅಸೋಸಿಯೇಷನ್ ಮತ್ತು ಕರ್ನಾಟಕ ಸರ್ಕಾರದ ಸಹಯೋಗದಲ್ಲಿ 'ಪ್ಯಾನ್-ಐಐಟಿ ಬೆಂಗಳೂರು ಶೃಂಗಸಭೆ–2026' ಮೇ 16ರಂದು ನಡೆಯಲಿದೆ' ಎಂದು ಇ-ಆಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿ ಪಂಕಜ್ ಕುಮಾರ್ ಪಾಂಡೆ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ತಂತ್ರಜ್ಞಾನದಲ್ಲಿನ ಸ್ವಾಯತ್ತತೆ' ಎಂಬ ವಿಷಯದಡಿ ಈ ಶೃಂಗಸಭೆ ನಡೆಯಲಿದೆ. 23 ಐಐಟಿಗಳ 5 ಲಕ್ಷಕ್ಕೂ ಹೆಚ್ಚು ಅಲ್ಯೂಮ್ನಿಗಳ ಸಂಯುಕ್ತ ಚಿಂತನೆಯ ಫಲ ಈ ಶೃಂಗ ಸಭೆ' ಎಂದರು.

'ಜಾಗತಿಕ ಮಟ್ಟದಲ್ಲಿ ತಂತ್ರಜ್ಞಾನ, ವ್ಯವಹಾರ ಮತ್ತು ನೀತಿ ರೂಪಣೆಯಲ್ಲಿ ಸಕ್ರಿಯವಾಗಿರುವ ಸಮುದಾಯವನ್ನು ಒಂದೇ ವೇದಿಕೆಗೆ ತರುವುದು ಸಭೆಯ ಉದ್ದೇಶ' ಎಂದು ಅವರು ಹೇಳಿದರು.

'ಸಾರ್ವಜನಿಕ ವಲಯ ಮತ್ತು ತಾಂತ್ರಿಕ ಕಂಪನಿಗಳ ಮೂಲಕ ಏರೋಸ್ಪೇಸ್, ರಕ್ಷಣಾ ಹಾಗೂ ಮೂಲ ಎಂಜಿನಿಯರಿಂಗ್ ಕ್ಷೇತ್ರಗಳಲ್ಲಿ ಕರ್ನಾಟಕವು ಗಟ್ಟಿಯಾದ ನೆಲೆ ಹೊಂದಿದೆ. ಈ ಹಂತದಲ್ಲಿ ಅಕಾಡೆಮಿ, ಕೈಗಾರಿಕೆ ಮತ್ತು ಸರ್ಕಾರಗಳ ನಡುವೆ ಪರಸ್ಪರ ಸಹಕಾರ ಅಗತ್ಯವಾಗಿದ್ದು, ಈ ಕಾರಣಕ್ಕೆ ಈ ಶೃಂಗ ಸಭೆ ಹಮ್ಮಿಕೊಳ್ಳಲಾಗಿದೆ' ಎಂದು ವಿವರಿಸಿದರು. ಪ್ಯಾನ್ ಐಐಟಿ ಅಧ್ಯಕ್ಷ ಪ್ರಭಾತ್ ಕುಮಾರ್ ಮಾತನಾಡಿ, 'ಈ ಶೃಂಗ ಸಭೆಯಲ್ಲಿ ವಿವಿಧ ವಿಷಯಗಳ ಕುರಿತು ಚರ್ಚೆಗಳು ಹಾಗೂ ಎಐ, ರಕ್ಷಣೆ, ಸೆಮಿಕಂಡಕ್ಟರ್, ಇಂಧನ, ಮೊಬೈಲಿಟಿ ಮತ್ತು ಆರೋಗ್ಯ ಕ್ಷೇತ್ರಗಳ ಕುರಿತು ಸಂವಾದ ನಡೆಯಲಿದೆ' ಎಂದರು.

ಆರ್ಟ್ ಆಫ್ ಲಿವಿಂಗ್ ಸಂಸ್ಥಾಪಕ ಶ್ರೀ ಶ್ರೀ ರವಿಶಂಕರ ಗುರೂಜಿ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಇಂಧನ) ಗೌರವ್ ಗುಪ್ತಾ ಮತ್ತಿತರರು ಭಾಗವಹಿಸಲಿದ್ದಾರೆ.

ರಾಜಸ್ಥಾನದಲ್ಲಿ ಹೂಡಿಕೆಗೆ ಆಹ್ವಾನ

ಬೆಂಗಳೂರು: 'ರಾಜಸ್ಥಾನದಲ್ಲಿ ಹೂಡಿಕೆಗೆ ವಿಪುಲ ಅವಕಾಶಗಳಿದ್ದು, ಹೂಡಿಕೆ ಮಾಡುವವರಿಗೆ ಹಲವು ವಿನಾಯತಿ ಮತ್ತು ರಿಯಾಯತಿಗಳನ್ನೂ ಒದಗಿಸಲಾಗುತ್ತದೆ' ಎಂದು ರಾಜಸ್ಥಾನ ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ ಹೇಳಿದರು.

'ಗ್ಲೋಬಲ್ ರಾಜಸ್ಥಾನ ಅಗ್ರಿಟೆಕ್ ಮೀಟ್–2026'ರ ಭಾಗವಾಗಿ ನಗರದಲ್ಲಿ ಭಾನುವಾರ ರಾಜಸ್ಥಾನ ಸರ್ಕಾರದ ವತಿಯಿಂದ ಆಯೋಜಿಸಲಾಗಿದ್ದ ಉದ್ಯಮಿಗಳ ಜತೆಗಿನ ಸಂವಾದದಲ್ಲಿ ಅವರು ಮಾತನಾಡಿದರು.

ಗಡಿ ಗುರುತಿಸಿ, ಚುನಾಯಿತ ಸದಸ್ಯರ ಸಂಖ್ಯೆ ನಿಗದಿಪಡಿಸಿ ರಾಜ್ಯ ಸರ್ಕಾರ ಅಧಿಸೂಚನೆ

8 ಜಿಲ್ಲೆಗಳ ಜಿ.ಪಂ. ಕ್ಷೇತ್ರಗಳ ಪುನರ್ ವಿಂಗಡಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಬೆಂಗಳೂರು ದಕ್ಷಿಣ, ಹಾಸನ, ಉತ್ತರ ಕನ್ನಡ, ಯಾದಗಿರಿ, ಬೀದರ್, ಕೊಪ್ಪಳ ಈ ಎಂಟು ಜಿಲ್ಲೆಗಳ ಜಿಲ್ಲಾ ಪಂಚಾಯಿತಿ ಕ್ಷೇತ್ರಗಳ ಗಡಿ ಗುರುತಿಸಿ ಮತ್ತು ಚುನಾಯಿತ ಸದಸ್ಯರ ಸಂಖ್ಯೆ ನಿಗದಿಪಡಿಸಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ.

ಈ ಹಿಂದೆ ಜಿಲ್ಲಾ ಪಂಚಾಯಿತಿಗಳ ಸದಸ್ಯರ ಸಂಖ್ಯೆ ಮತ್ತು ಗಡಿ ಗುರುತಿಸಿ ಹೊರಡಿಸಿದ್ದ ಅಧಿಸೂಚನೆಯ ನಂತರ ಆಗಿರುವ ಕೆಲವು ಆಡಳಿತಾತ್ಮಕ ಬದಲಾವಣೆಗಳ ಕಾರಣಕ್ಕೆ ಮತ್ತು ನಗರಾಭಿವೃದ್ಧಿ ಇಲಾಖೆಯು ಕೆಲವು ಗ್ರಾಮೀಣ ಪ್ರದೇಶಗಳನ್ನು ನಗರ ಸ್ಥಳೀಯ ಸಂಸ್ಥೆಗಳಾಗಿ ಪರಿವರ್ತಿಸಿರುವುದರಿಂದ ಕ್ಷೇತ್ರಗಳ ಪುನರ್ ವಿಂಗಡಣೆ ಮಾಡಲಾಗಿದೆ.



ಕಂದಾಯ ಇಲಾಖೆಯು ಮಾಗಡಿ ಮತ್ತು ನೆಲಮಂಗಲ ತಾಲ್ಲೂಕುಗಳ ಭೌಗೋಳಿಕ ಗಡಿಗಳನ್ನು ಪುನರ್ ರಚಿಸಿತ್ತು. ಈ ಕಾರಣಗಳಿಂದಾಗಿ ಜಿಲ್ಲಾ ಪಂಚಾಯಿತಿ ಕ್ಷೇತ್ರಗಳ ಗಡಿಗಳನ್ನು ಮತ್ತೊಮ್ಮೆ ಪರಿಷ್ಕರಿಸುವುದು ಅನಿವಾರ್ಯವಾಗಿತ್ತು.

ಭೌಗೋಳಿಕ ವ್ಯಾಪ್ತಿಗೆ ಅನುಗುಣವಾಗಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಗಡಿಗಳನ್ನು ಮರುನಿಗದಿಪಡಿಸಲಾಗಿದೆ. ಜಿಲ್ಲಾ ಪಂಚಾಯಿತಿ ಕ್ಷೇತ್ರಗಳ ಕ್ರಮಸಂಖ್ಯೆಯ ನಿರಂತರತೆ ಕಾಪಾಡುವ ಉದ್ದೇಶದಿಂದ ಹಳೆಯ ಅಧಿಸೂಚನೆಗಳನ್ನು ಹಿಂಪಡೆದು ಹೊಸ ಕ್ರಮಸಂಖ್ಯೆಗಳೊಂದಿಗೆ ಕ್ಷೇತ್ರಗಳ ಹೆಸರು ಮತ್ತು ವ್ಯಾಪ್ತಿ ಪ್ರಕಟಿಸಲಾಗಿದೆ.

ಪ್ರತಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಅಡಿಯಲ್ಲಿ ಬರುವ ಗ್ರಾಮಗಳ ವಿವರವಾದ ಪಟ್ಟಿಯನ್ನು ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಒಟ್ಟು 28 ಏಕ ಸದಸ್ಯ ಜಿಲ್ಲಾ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನು ಗುರುತಿಸಲಾಗಿದೆ. ಇದರಲ್ಲಿ ಹೊಸಕೋಟೆ (8), ದೇವನಹಳ್ಳಿ (7), ದೊಡ್ಡಬಳ್ಳಾಪುರ (7) ಮತ್ತು ನೆಲಮಂಗಲ (6) ಕ್ಷೇತ್ರಗಳಿವೆ.

ಮೇ 5ರಂದು ಅದಾಲತ್

ಕರ್ನಾಟಕ ಪಂಚಾಯತ್‌ರಾಜ್ ಸೀಮಾ ನಿರ್ಣಯ ಆಯೋಗ ಏಪ್ರಿಲ್ 18ರಂದು ಹೊರಡಿಸಿರುವ ರಾಜ್ಯದ ಗ್ರಾಮ ಪಂಚಾಯಿತಿಗಳ ಚುನಾಯಿತ ಸದಸ್ಯ ಸ್ಥಾನಗಳ ಕರಡು ಪ್ರಕಟಣೆಗೆ ಆಕ್ಷೇಪಣೆ ಸಲ್ಲಿಸುವ ಅವಧಿಯನ್ನು ಮೇ 2ರ ಸಂಜೆ 5.30ರವರೆಗೆ ವಿಸ್ತರಿಸಲಾಗಿದೆ.

ಎಲ್ಲ 31 ಜಿಲ್ಲೆಗಳ ಗ್ರಾಮ ಪಂಚಾಯಿತಿಗಳ ಚುನಾಯಿತ ಸದಸ್ಯರ ಸಂಖ್ಯೆಯ ಕುರಿತಂತೆ ಬಂದಿರುವ ಆಕ್ಷೇಪಣೆ, ಅಹವಾಲುಗಳ ಕುರಿತು ಏಪ್ರಿಲ್ 27ರಂದು ನಿಗದಿಪಡಿಸಲಾಗಿದ್ದ ಪರಿಶೀಲನಾ ಅದಾಲತ್ತನ್ನು ಮೇ 5ಕ್ಕೆ ಮುಂದೂಡಲಾಗಿದೆ. ಬಹುಮಹಡಿಗಳ ಕಟ್ಟಡದಲ್ಲಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಚೇರಿಯಲ್ಲಿ ಅದಾಲತ್ ನಡೆಯಲಿದೆ.

ಅಂದು ಬೆಳಿಗ್ಗೆ 11 ರಿಂದ 1.30ರವರೆಗೆ ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಯನಗರ, ಧಾರವಾಡ, ಬೆಳಗಾವಿ, ಬಾಗಲಕೋಟೆ, ಗದಗ, ವಿಜಯಪುರ, ಹಾವೇರಿ ಮತ್ತು ಉತ್ತರಕನ್ನಡ ಜಿಲ್ಲೆ, ಮಧ್ಯಾಹ್ನ 2:30 ರಿಂದ 5ರವರೆಗೆ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಬೆಂಗಳೂರು ದಕ್ಷಿಣ, ತುಮಕೂರು, ದಾವಣಗೆರೆ, ಕೋಲಾರ, ಚಿತ್ರದುರ್ಗ, ಶಿವಮೊಗ್ಗ, ಕೊಡಗು, ಚಾಮರಾಜನಗರ, ಮೈಸೂರು, ಮಂಡ್ಯ, ಹಾಸನ, ದಕ್ಷಿಣ ಕನ್ನಡ, ಚಿಕ್ಕಮಗಳೂರು ಮತ್ತು ಉಡುಪಿ ಜಿಲ್ಲೆಗಳಿಗೆ ಸಂಬಂಧಿಸಿದ ಅದಾಲತ್ ನಡೆಯಲಿದೆ.

ಟ್ರಂಪ್‌ಗೆ ಮಧ್ಯದ ಬೆರಳು ಪ್ರದರ್ಶಿಸಿದ ಲಾಡ್

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಭಾರತವನ್ನು 'ನರಕ' ಎಂದು ಕರೆದಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಕಾರ್ಮಿಕ ಸಚಿವ ಸಂತೋಷ್ ಲಾಡ್ ಮಧ್ಯದ ಬೆರಳು ಪ್ರದರ್ಶಿಸಿದ್ದಾರೆ.

ಸಂಡೂರಿನಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು, 'ನೀವು ನಮ್ಮ ಪ್ರಧಾನಿಗೆ ಅವಮಾನಿಸಿದ್ದೀರಿ. ಭಾರತವನ್ನು 'ನರಕ' ಎಂದು ಕರೆದಿದ್ದೀರಿ. ಮಿಸ್ಟರ್ ಟ್ರಂಪ್ ನೀವೊಬ್ಬ 'ಮ್ಯಾಡ್ ಮ್ಯಾಕ್ಸ್' ಎಂದು ಹರಿಹಾಯ್ದರು.

'ನೀವು ಅಮೆರಿಕದ ಅಧ್ಯಕ್ಷರಾದ ಕಾರಣಕ್ಕೆ ಭಾರತದ ಬಗ್ಗೆ ಏನೇನೋ ಮಾತನಾಡುವಂತಿಲ್ಲ. ನನ್ನ ದೇಶದ ಬಗ್ಗೆ ನೀವು ಆಡಿದ ಮಾತುಗಳನ್ನು ಖಂಡಿಸಬೇಕಿದೆ. ನಾನು ನಿಮಗೆ ಮಧ್ಯದ ಬೆರಳು ತೋರಿಸಬೇಕೆಂದು ಅನ್ನಿಸುತ್ತಿದೆ' ಎಂದು ಬೆರಳು ತೋರಿದರು.

ಸುದ್ದಿಗೋಷ್ಠಿಯಲ್ಲಿ ಟ್ರಂಪ್ ವಿರುದ್ಧ ಮಧ್ಯದ ಬೆರಳು ಪ್ರದರ್ಶಿಸಿದ ಸಚಿವ ಸಂತೋಷ್ ಲಾಡ್

'ನಾವು ನಮ್ಮ ದೇಶದ ಪರವಾಗಿರುತ್ತೇವೆ. ಭಾರತ ಎಂದಿಗೂ ಒಗ್ಗಟ್ಟಾಗಿ ಇರಲಿದೆ. ಟ್ರಂಪ್ ನೀವು ನರಕಕ್ಕೆ ಹೋಗಿ' ಎಂದು ಮತ್ತೆ ಬೆರಳು ಪ್ರದರ್ಶನ ಮಾಡಿದರು.

ಸಮಾಧಾನ

ಕಾಲುನೋವಿಗೂ ಓದಿಗೂ ಇತ್ತು ಸಂಬಂಧ!

ಡಾ. ಡಿ.ಎಂ.ಹೆಗಡೆ, ಆಪ್ತಸಮಾಲೋಚಕ

'ಸಮಾಧಾನ' ಅಂಕಣ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಎಸ್ಸೆಸ್ಸೆಲ್ಸಿ ದಿಕ್ಸೂಚಿ

ಎಸ್ಎಸ್ಎಲ್‌ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ (ಇತಿಹಾಸ)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಅಧ್ಯಾಯ:1 ಭಾರತಕ್ಕೆ ಯುರೋಪಿಯನ್ನರ ಆಗಮನ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಬಕ್ಸಾರ್ ಕದನದ ಪರಿಣಾಮ ವಿವರಿಸಿ

(2026ರ ಮಾರ್ಚ್ ವಾರ್ಷಿಕ ಪರೀಕ್ಷೆ)

ಉತ್ತರ:– ಬಕ್ಸಾರ್ ಯುದ್ಧದ ಪರಿಣಾಮಗಳು:–

1. ಈಸ್ಟ್ ಇಂಡಿಯಾ ಕಂಪನಿಗೆ ಬಂಗಾಳದ ಮೇಲಿನ 'ದಿವಾನಿ' ಹಕ್ಕನ್ನು ಎರಡನೇ ಷಾ ಆಲಂ ನೀಡಿದನು.
2. ಷಾ ಆಲಂ ವಾರ್ಷಿಕ 26 ಲಕ್ಷ ರೂಪಾಯಿಗಳನ್ನು ಪಡೆದು ಬಂಗಾಳದ ಮೇಲಿನ ತನ್ನ ಹಕ್ಕನ್ನೆಲ್ಲ ಬಿಟ್ಟುಕೊಡಬೇಕಾಯಿತು
3. ಔದ್‌ನ ನವಾಬನಾದ ಷುಜಾ–ಉದ್–ದೌಲನು ಕಂಪನಿಗೆ ಯುದ್ಧ ನಷ್ಟದ ಪರಿಹಾರವಾಗಿ 50 ಲಕ್ಷ ರೂಪಾಯಿಗಳನ್ನು ಕೊಡಬೇಕಾಯಿತು.
4. ಮೀರ್‌ಜಾಫರ್ ಮರಣ ಹೊಂದಿದ್ದರಿಂದ ಅವನ ಮಗನಿಗೆ ವಿಶ್ರಾಂತಿ ವೇತನ ನೀಡಿ ಬಂಗಾಳದ ಪೂರ್ಣ ಆಡಳಿತವನ್ನು ಕಂಪನಿಯು ನಿರ್ವಹಿಸತೊಡಗಿತು

ಅಂತಿಮವಾಗಿ ಬಕ್ಸಾರ್ ಕದನವು ಬ್ರಿಟಿಷರು ಬಂಗಾಳ, ಬಿಹಾರ ಮತ್ತು ಒರಿಸ್ಸಾದ ನಿಜವಾದ ಒಡೆಯರೆಂದು ದೃಢೀಕರಿಸಿತು ಹಾಗೂ ಔದ್ ಕೂಡ ಅವರ ಅಧೀನದಲ್ಲಿ ಉಳಿಯುವಂತಾಯಿತು. 1765ರಲ್ಲಿ ರಾಬರ್ಟ್ ಕ್ಲೈವನು ಬಂಗಾಳದಲ್ಲಿ 'ದ್ವಿ ಪ್ರಭುತ್ವ' ಪದ್ಧತಿಯನ್ನು ಜಾರಿಗೆ ತಂದನು.

2) ವಸಹತುಶಾಹಿ ಎಂದರೇನು?

ಉತ್ತರ:– ಒಂದು ದೇಶವು ಮತ್ತೊಂದು ದೇಶವನ್ನು ಆಕ್ರಮಿಸಿ ತನ್ನ ಸ್ವಾರ್ಥ ಸಾಧನೆಗಾಗಿ ಹಿಡಿತದಲ್ಲಿಟ್ಟುಕೊಳ್ಳುವುದನ್ನು ವಸಹತುಶಾಹಿ ಎನ್ನುತ್ತಾರೆ

(2018ರ ಮಾರ್ಚ್ ವಾರ್ಷಿಕ ಪರೀಕ್ಷೆ 1 ಅಂಕದ ಪ್ರಶ್ನೆ)

3) ಕಾನ್‌ಸ್ಟಾಂಟಿನೋಪಲ್ ನಗರವು ಎಲ್ಲಿದೆ?

ಉತ್ತರ:– ಪೂರ್ವ ರೋಮನ್ ಸಾಮ್ರಾಜ್ಯ

4) ಭಾರತದ ಯಾವೆಲ್ಲಾ ಪದಾರ್ಥಗಳಿಗೆ ಯುರೋಪಿನಲ್ಲಿ ಅಪಾರ ಬೇಡಿಕೆ ಇತ್ತು? (2017ರ ಮಾರ್ಚ್ ವಾರ್ಷಿಕ ಪರೀಕ್ಷೆ ಪ್ರಶ್ನೆ)

ಉತ್ತರ:– ಭಾರತದ ಸಾಂಬಾರ ಪದಾರ್ಥಗಳಾದ ಮೆಣಸು, ಜೀರಿಗೆ, ದಾಲ್ಚಿನ್ನಿ, ಏಲಕ್ಕಿ, ಶುಂಠಿ ಮುಂತಾದ ಉತ್ಪನ್ನಗಳಿಗೆ ಯುರೋಪಿನಲ್ಲಿ ಅಪಾರ ಬೇಡಿಕೆ ಇತ್ತು.

5) ಕಾನ್‌ಸ್ಟಾಂಟಿನೋಪಲ್ ನಗರವು ಏನೆಂದು ಹೆಸರು ಪಡೆದಿದೆ?

ಉತ್ತರ:– ಯೂರೋಪಿಯನ್ ವ್ಯಾಪಾರ ಹೆಬ್ಬಾಗಿಲು

6) 1498ರಲ್ಲಿ ಭಾರತಕ್ಕೆ ವ್ಯಾಪಾರದ ಉದ್ದೇಶಕ್ಕಾಗಿ ಬಂದಿಳಿದ ಯುರೋಪಿಯನ್ನರಲ್ಲಿ ಮೊದಲಿಗ ಯಾರು?

ಉತ್ತರ:– 1498ರಲ್ಲಿ ಭಾರತಕ್ಕೆ ವ್ಯಾಪಾರದ ಉದ್ದೇಶಕ್ಕಾಗಿ ಬಂದಿಳಿದ ಯುರೋಪಿಯನ್ನರಲ್ಲಿ ಮೊದಲಿಗನೆಂದರೆ ಪೋರ್ಚುಗೀಸ್ ನಾವಿಕ ವಾಸ್ಕೊಡಗಾಮ

7) ಜಲಮಾರ್ಗದ ಮೂಲಕ ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಮೊಟ್ಟಮೊದಲ ಯುರೋಪಿಯನ್ನರು ಪೋರ್ಚುಗೀಸರಾದರೆ ಭಾರತವನ್ನು ತೊರೆದ ಕೊನೆಯ ಯುರೋಪಿಯನ್ನರು ಯಾರು?

ಉತ್ತರ:– ಪೋರ್ಚುಗೀಸರು

8) ಪೋರ್ಚುಗೀಸರ ಮೊಟ್ಟಮೊದಲ ವೈಸರಾಯ್ ಆಗಿ ಯಾರು ಭಾರತಕ್ಕೆ ಬಂದನು.?

ಉತ್ತರ:– ಫ್ರಾನ್ಸಿಸ್ಕೊ ಡಿ ಆಲ್ಮೇಡ

9) ಭೂಮಿಯ ಮೇಲಿನ ಅಧಿಪತ್ಯಕ್ಕೆ ಬದಲು ಸಮುದ್ರದ ಮೇಲಿನ ಏಕಸ್ವಾಮ್ಯಕ್ಕಾಗಿ ನೌಕಾಶಕ್ತಿಯನ್ನು ಬಲಪಡಿಸುವ 'ನೀಲಿ ನೀರಿನ ನೀತಿ' (Blue Water Policy)ಯನ್ನು ಜಾರಿಗೆ ತಂದವನು ಯಾರು?

ಉತ್ತರ:– ಫ್ರಾನ್ಸಿಸ್ಕೊ ಡಿ ಆಲ್ಮೇಡ

10) ಭಾರತದಲ್ಲಿ ಪೋರ್ಚುಗೀಸ್ ಸಾಮ್ರಾಜ್ಯದ ನಿಜವಾದ ಸ್ಥಾಪಕನೆಂದು ಪ್ರಸಿದ್ಧನಾಗಿದ್ದನಾವ ಯಾರು?

ಉತ್ತರ:– ಆಲ್ಫೋನ್ಸೊ–ಡಿ–ಅಲ್ಬುಕರ್ಕ್

11) 1510ರಲ್ಲಿ ಬಿಜಾಪುರದ ಸುಲ್ತಾನನಿಂದ ಗೋವಾವನ್ನು ಗೆದ್ದುಕೊಂಡು ಪೋರ್ಚುಗೀಸರ ಆಡಳಿತ ಕೇಂದ್ರವಾಗಿ ಪರಿವರ್ತಿಸಿದವನು ಯಾರು?

ಉತ್ತರ:– ಆಲ್ಫೋನ್ಸೊ–ಡಿ–ಅಲ್ಬುಕರ್ಕ್

12) ಭಾರತದಲ್ಲಿ ಪೋರ್ಚುಗೀಸರ ಏಕಸ್ವಾಮ್ಯತೆಯು ಯಾವಾಗ ಶಿಥಿಲಗೊಂಡಿತು?

ಉತ್ತರ:– 17ನೇ ಶತಮಾನದವರೆಗೂ ಪೋರ್ಚುಗೀಸರು ವ್ಯಾಪಾರಿ ಏಕಸ್ವಾಮ್ಯತೆಯನ್ನು ಹೊಂದಿದ್ದರು. ಭಾರತದೊಳಗೆ ಡಚ್ ಮತ್ತು ಇಂಗ್ಲಿಷರ ಪ್ರವೇಶದೊಂದಿಗೆ ಪೋರ್ಚುಗೀಸರ ಏಕಸ್ವಾಮ್ಯತೆಯು ಶಿಥಿಲಗೊಂಡಿತು.

13) ಡಚ್ ಈಸ್ಟ್ ಇಂಡಿಯಾ ಕಂಪನಿ ಯಾವಾಗ ವ್ಯಾಪಾರಕ್ಕಾಗಿ ಭಾರತಕ್ಕೆ ಬಂತು?

ಉತ್ತರ:– 1602ರಲ್ಲಿ ಡಚ್ ಈಸ್ಟ್ ಇಂಡಿಯಾ ಕಂಪೆನಿಯು ಭಾರತಕ್ಕೆ ವ್ಯಾಪಾರಕ್ಕಾಗಿ ಬಂತು.

14) ಡಚ್ಚರ ವ್ಯಾಪಾರಿ ಕೇಂದ್ರಗಳು ಯಾವುವು?

ಉತ್ತರ:– ಸೂರತ್, ಬ್ರೋಚ್, ಕಾಂಬೆ, ಕೊಚ್ಚಿನ್, ನಾಗಪಟ್ಟಣ, ಮಚಲೀಪಟ್ಟಣ ಹಾಗೂ ಚಿನ್ಸೂರ

15) ಕರಿಮೆಣಸಿನ ಆಸೆಯಿಂದ ವಿದೇಶಿಯರು ನಡೆಸಿದ್ದ ನಿರಂತರ ಆಕ್ರಮಣವನ್ನು ಮತ್ತು ಸಾಮ್ರಾಜ್ಯದಾಹವನ್ನು ಮೆಟ್ಟಿನಿಂತ ವೈನಾಡ್ ಅರಸ ಯಾರು?

ಉತ್ತರ:– ಮಾರ್ತಾಂಡ ವರ್ಮ

16) ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಗೆ ಭಾರತದಲ್ಲಿ ವ್ಯಾಪಾರಿ ದಾಸ್ತಾನು ಮಳಿಗೆ ಆರಂಭಿಸಲು ಅನುಮತಿ ಕೊಟ್ಟವರು ಯಾರು?

ಉತ್ತರ:– ಮೊಘಲ್ ಸಾಮ್ರಾಟ ಜಹಾಂಗೀರ

17) ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಯು ಭಾರತದಲ್ಲಿ ಮೊದಲ ವ್ಯಾಪಾರಿ ದಾಸ್ತಾನು ಮಳಿಗೆ ಎಲ್ಲಿ ಆರಂಭಿಸಿತು?

ಉತ್ತರ:– ಸೂರತ್

18) 1617ರಲ್ಲಿ ಇಂಗ್ಲೆಂಡಿನ ರಾಜ ಒಂದನೆಯ ಜೇಮ್ಸ್‌ನ ರಾಯಭಾರಿಯಾಗಿ ಜಹಾಂಗೀರನ ಆಸ್ಥಾನಕ್ಕೆ ಯಾರು ಬಂದನು?

ಉತ್ತರ:– ಸರ್. ಥಾಮಸ್ ರೋ

19) ಇಂಗ್ಲಿಷರು ಎಲ್ಲಿ ಸೆಂಟ್ ಜಾರ್ಜ್ ಫೋರ್ಟ್ ಎಂಬ ಬಲಿಷ್ಠ ಕೋಟೆಯನ್ನು ಕಟ್ಟಿದರು.?

ಉತ್ತರ:– ಮದ್ರಾಸ್

20) ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಗೆ ಮುಂಬೈಯನ್ನು ಕೊಟ್ಟವರು ಯಾರು? ಅದಕ್ಕೆ ಎಷ್ಟು ಬಾಡಿಗೆ ಕಟ್ಟುತ್ತಿದ್ದರು?

ಉತ್ತರ:– ಇಂಗ್ಲೆಂಡಿನ ರಾಜಕುಮಾರ ಎರಡನೇ ಚಾರ್ಲ್ಸ್‌ನು ಬಾಂಬೆಯನ್ನು 1668ರಲ್ಲಿ ಕಂಪನಿಗೆ ವಾರ್ಷಿಕ 10 ಪೌಂಡುಗಳ ಬಾಡಿಗೆಗೆ ವಹಿಸಿಕೊಟ್ಟನು.

21) ಯಾವ ವರ್ಷ ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು ಆರಂಭವಾಯಿತು.

ಉತ್ತರ:– 1664

22) ಫ್ರೆಂಚರ ವ್ಯಾಪಾರಿ ಕೇಂದ್ರಗಳನ್ನು ಹೆಸರಿಸಿ.

ಉತ್ತರ:– ಸೂರತ್, ಮಚಲಿಪಟ್ಟಣ, ಚಂದ್ರನಗರ, ಮಾಹೆ, ಕಾರೈಕಲ್ಲು, ಕಾಸಿಂ ಬಜಾರ್, ಬಾಲಸೂರ್

ಬಹುಆಯ್ಕೆ ಪ್ರಶ್ನೆಗಳು

I) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) 1453ರಲ್ಲಿ ಆಟೋಮಾನ್ ಟರ್ಕರು .... ನಗರವನ್ನು ವಶಪಡಿಸಿಕೊಂಡರು

ಎ) ಕಾನ್‌ಸ್ಟಾಂಟಿನೋಪಲ್ ಬಿ) ರೋಮ್
ಸಿ) ಕಾಬೂಲ್ ಡಿ) ಕರಾಚಿ

ಉತ್ತರ:– (ಎ) ಕಾನ್‌ಸ್ಟಾಂಟಿನೋಪಲ್

2) 1510ರಲ್ಲಿ ವಿಜಯಪುರದ ಸುಲ್ತಾನನಿಂದ ಗೋವಾ ಗೆದ್ದುಕೊಂಡು ಪೋರ್ಚುಗೀಸರ ಆಡಳಿತ ಕೇಂದ್ರವಾಗಿ ಮಾಡಿಕೊಂಡವನು ಯಾರು?

ಎ) ವಾಸ್ಕೋಡಗಾಮ ಬಿ) ಆಲ್ಫನ್ಸೋ ಅಲ್ಬುಕರ್ಕ್
ಸಿ) ಫ್ರಾನ್ಸಿಸ್ಕೋ ಡಿ ಅಲ್ಮೇಡ ಡಿ) ಮೇಲಿನ ಯಾರೂ ಅಲ್ಲ

ಉತ್ತರ:– (ಬಿ)ಆಲ್ಫನ್ಸೋ ಅಲ್ಬುಕರ್ಕ್

ಪಿಯುಸಿ ದಿಕ್ಸೂಚಿ

Physics

Chapter – 1

ELECTRIC CHARGES AND FIELDS

1) The electric field at a distance 'r' from infinitely long straight uniformly charged wire is

(A) inversely proportional to r
(B)inversely proportional to cube of r
(C) inversely proportional to square of r
(D) independent of r Ans:- A

2) **Which one of the following charges can not exist on a body?**

(A) 2e (B) 3e (C) 3.5e (D) – 4e

Ans:- (C) 3.5e

3) The force on any charge due to a number of other charges is the vector sum of all the forces on that charge due to the other charges. This statement is called

(A) quantization principle of charges
(B) principle of superposition of electric forces
(C) principle of homogeneity
(D) additivity of charges Ans:- B

4) The direction of electric field vector at a point on the equatorial line of a dipole is

(A)in the same direction of dipole moment
(B)in the opposite direction to the dipole moment
(C) towards negative charge
(D) towards positive charge

Ans:- B)opposite direction to the dipole moment

5) Dipole moment is a vector quantity, which is pointing from

(A) –q to +q along the axis of an electric dipole.
(B) +q to – q along the axis of an electric dipole.
(C) infinity to +q (D) +q to infinity.

Ans:- A)-q to +q along the axis of an electric dipole

FILL IN THE BLANKS

[neutral, negative , positive, maximum, zero, infinity]

1. The electric field lines due to a single positive charge end at ____________.
2. The electric field inside a uniformly charged spherical shell is ____________.
3. If area vector $\Delta\vec{S}$ of a surface is parallel to the applied electric field $\vec{E}$, then the electric flux ϕ through the surface is at its____________.
4. A neutron does not experience any force in an electric field because neutron is ________.
5. A body gains a ______________ charge when it loses electrons.

Ans:- 1. infinity 2. Zero 3. maximum 4. neutral 5. positive

Answer the Following-

1) Define the term Electrostatics.

Ans:- Electrostatics is that branch of physics that deals with the study of forces, fields and potentials arising from static charges (electric charges at rest).

2) Mention some of the properties of charges.

Ans:- The properties of charges are as follows -

(a) There are two types of charges – positive and negative.
(b) Like charges repel and unlike charges attract each other.
(c) A charged body attracts light uncharged bodies.
d) Charge can neither be created nor destroyed. i.e., charge is conserved.
e) Charge remains unaffected by motion and it is independent of the velocity of the body.
(f) Charges always reside on the outer surface of the conductor.
(g) Accelerated charges radiate energy in the form of electromagnetic waves.
(h) Charge is quantised that is charge exists in discrete 'packets'.
(i) It is a scalar quantity and its SI unit is Coulomb

3) Which is the sure test of electrification?

Ans:- The sure test of electrification is repulsion between two charged bodies and not attraction.

4) When is the electrostatic force maximum between the two point charges?

Ans:- The electrostatic force between the two point charges separated by a given distance is maximum when the charges are in air or in vacuum.

5) Give reasons, why the charges get distributed over the outer surface of the conductor?

Ans:- Charges get distributed over the outer surface of the conductor in order to have minimum repulsion between them.

6) Why does the charges get distributed uniformly over the surface of the circular conductor?

Ans:- Charges get distributed uniformly over the surface of the circular conductor because the surface of the circular conductor is uniform.

7) Whats does the Coulomb's Law state?

Ans:- Coulomb's Law: The force of attraction or repulsion acting along a straight line between two electric charges is directly proportional to the product of the charges and inversely to the square of the distance between them.

8) Which are the regions on the conductor on which the charges are accumulated in abundance?

Ans:- The regions on the conductor on which the charges are accumulated in abundance are the pointed ends of the conductor.

9) A comb run through the dry hair attracts small bits of paper. Why? What happens, if the hair is wet?

Ans:- When a comb is run through the dry hair it gets charged hence it starts attracting. When the hair is wet there is absence of friction due to which the comb does not get charged and hence it does not attract the paper bits.

10) What is 'electric flux'?

Ans:- The measure of count of number of electric field lines crossing an area is known as Electric Flux.

11) An arbitrary surface encloses a dipole. What is the electric flux through this surface?

Ans:- Zero

15) A metallic spherical shell has an inner radius R_1 and outer radius R_2. A charge Q is placed at the centre of the spherical cavity. What will be surface charge density on – (i) the surface, and (ii) the outer surface?

Ans:- (i) $\frac{-Q}{4\pi R_1^2}$ (ii) $\frac{-Q}{4\pi R_2^2}$

16) The dimensions of an atom are of the order of an Angstrom. Thus there must be large electric fields between the protons and electrons. Why, then is the electrostatic field inside a conductor zero?

Ans:- The electric fields binds the atoms to neutral entity. Fields are caused by excess charges. There can be no excess charge on the inner surface of an isolated conductor.

ಫೇಲಾದವರಿಗೂ ಇವೆ ಬಗೆ ಬಗೆ ಕೋರ್ಸ್

ಎಸ್‌ಎಸ್‌ಎಲ್‌ಸಿ ಅಥವಾ ಪಿಯುಸಿಯಲ್ಲಿ ಫೇಲಾಗಿದ್ದೇನೆ, ಮುಂದೇನು ಎಂಬ ಚಿಂತೆಯಲ್ಲಿದ್ದೀರಾ? ಚಿಂತೆ ಬಿಡಿ, ಫೇಲಾದವರೂ ಪ್ರವೇಶ ಪಡೆಯಬಹುದಾದ, ಇಲ್ಲಿರುವ ಬಗೆ ಬಗೆ ಕೋರ್ಸ್‌ಗಳಲ್ಲಿ ಯಾವುದನ್ನಾದರೂ ಆಯ್ಕೆ ಮಾಡಿಕೊಂಡು ಭವಿಷ್ಯ ರೂಪಿಸಿಕೊಳ್ಳಿ

• ಆರ್.ಬಿ.ಗುರುಬಸವರಾಜ

ಪ್ರತಿ ವಿದ್ಯಾರ್ಥಿಯ ಜೀವನದಲ್ಲೂ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಬೋರ್ಡ್ ಪರೀಕ್ಷೆಗಳು ಮಹತ್ತರ ಘಟ್ಟಗಳಾಗಿರುತ್ತವೆ. ಇವು ಅವರ ಮುಂದಿನ ಭವಿಷ್ಯಕ್ಕೆ ಆರಂಭಿಕ ಮೆಟ್ಟಿಲುಗಳು. ಎಲ್ಲರೂ ಈ ಪರೀಕ್ಷೆಗಳನ್ನು ಪಾಸಾಗಲು ಆಗದೇ ಇರಬಹುದು. ಆದರೆ ಅಲ್ಲಿಗೇ ಅವರ ವೃತ್ತಿಜೀವನದ ಕನಸು ಮೊಟಕುಗೊಳ್ಳಬೇಕಿಲ್ಲ. ಏಕೆಂದರೆ, ಫೇಲಾದ ವಿದ್ಯಾರ್ಥಿಗಳು ಹೊಸ ಕೌಶಲಗಳನ್ನು ಪಡೆಯಲು ಮತ್ತು ತಮ್ಮ ವೃತ್ತಿಜೀವನದ ನಿರೀಕ್ಷೆಗಳನ್ನು ಸಾಕಾರಗೊಳಿಸಿಕೊಳ್ಳಲು ಅನೇಕ ಕೋರ್ಸ್‌ಗಳು ಈಗ ಲಭ್ಯವಿವೆ. ಅಂತಹ ಕೆಲವು ಕೋರ್ಸ್‌ಗಳ ವಿವರವನ್ನು ಕೆಳಗೆ ಕೊಡಲಾಗಿದೆ.

ಈ ಕೆಲವು ಕೋರ್ಸ್‌ಗಳಿಗೆ ಎಸ್‌ಎಸ್‌ಎಲ್‌ಸಿ ಕಡ್ಡಾಯವಾಗಿ ಪಾಸಾಗಿರಬೇಕಾಗುತ್ತದೆ. ಪಿಯುಸಿ ಫೇಲಾದವರು ಇಂತಹ ಕೋರ್ಸ್‌ಗಳಿಗೆ ಸೇರಬಹುದು. ಆದರೆ, ಇನ್ನು ಕೆಲವು ಕೋರ್ಸ್‌ಗಳಿಗೆ ಎಸ್‌ಎಸ್‌ಎಲ್‌ಸಿ ಫೇಲಾಗಿದ್ದರೂ ಸೇರಲು ಅವಕಾಶ ಇರುತ್ತದೆ. ಹೀಗಾಗಿ, ವಿದ್ಯಾರ್ಥಿಗಳು ಆನ್‌ಲೈನ್ ಮಾಹಿತಿಯನ್ನಷ್ಟೇ ಅವಲಂಬಿಸದೆ, ಖುದ್ದಾಗಿ ಕಾಲೇಜಿಗೆ ಭೇಟಿ ನೀಡಿ, ಇಂತಹ ಕೋರ್ಸ್‌ಗಳ ವಿವರ ಪಡೆದು, ತಮ್ಮ ಇಚ್ಛೆಯ ಕೋರ್ಸ್‌ಗೆ ಪ್ರವೇಶ ಪಡೆಯಬಹುದು.

ಜಿಟಿಟಿಸಿ ಕೋರ್ಸ್: ಜಿಟಿಟಿಸಿಯಲ್ಲಿ ಟೂಲ್ ರೂಮ್ ಮಷೀನಿಸ್ಟ್, ಕಂಪೋಸಿಟ್ ಮಷೀನಿಸ್ಟ್, ಟೂಲ್ ಆ್ಯಂಡ್ ಡೈ ಟೆಕ್ನೀಷಿಯನ್... ಹೀಗೆ ವಿಭಿನ್ನ ಕೋರ್ಸ್‌ಗಳಿವೆ. ಇಲ್ಲಿ ತಾತ್ವಿಕ ಕಲಿಕೆಗಿಂತ ಪ್ರಾಯೋಗಿಕ ಕೌಶಲವನ್ನು ಹೆಚ್ಚಾಗಿ ಕಲಿಸಲಾಗುತ್ತದೆ. ಕೋರ್ಸ್ ಪೂರೈಸಿದ ವಿದ್ಯಾರ್ಥಿಗಳಿಗೆ ಸಂಸ್ಥೆಯು ಕೆಲಸದ ಭರವಸೆಯನ್ನೂ ನೀಡುತ್ತದೆ. ಆರ್ಥಿಕವಾಗಿ ಹಿಂದುಳಿದ, ನಪಾಸಾದ ವಿದ್ಯಾರ್ಥಿಗಳಿಗೆ ಇವು ಅತ್ಯಂತ ಉಪಯುಕ್ತವಾದ ಕೋರ್ಸ್‌ಗಳಾಗಿವೆ.

ಡಿಪ್ಲೊಮಾ ಕೋರ್ಸ್: ಇವು ವಿಶೇಷ ಜ್ಞಾನ ಮತ್ತು ಪ್ರಾಯೋಗಿಕ ಕೌಶಲಗಳನ್ನು ಕಲಿಸುವ ಮೂಲಕ ವೃತ್ತಿಜೀವನಕ್ಕೆ ಸಹಾಯ ಮಾಡುತ್ತವೆ. ಸಾಮಾನ್ಯ ಪದವಿ ಕೋರ್ಸ್‌ಗಳಿಗಿಂತ ಕಡಿಮೆ ಅವಧಿ ಹೊಂದಿದ್ದು, ಕೈಗೆಟಕುವ ದರದಲ್ಲಿ ಶುಲ್ಕ ಇರುತ್ತದೆ. ಎಂಜಿನಿಯರಿಂಗ್, ತಂತ್ರಜ್ಞಾನ, ಆತಿಥ್ಯ, ಹೋಟೆಲೋದ್ಯಮದಂತಹ ಕ್ಷೇತ್ರಗಳಲ್ಲಿ ವಿಶೇಷ ತರಬೇತಿಯನ್ನು ನೀಡುವ ಡಿಪ್ಲೊಮಾ ಕೋರ್ಸ್‌ಗಳಿವೆ.

3ರಿಂದ 6 ತಿಂಗಳ ಅವಧಿಯ ಈ ಕೋರ್ಸ್‌ಗಳ ಶುಲ್ಕವು ಶೈಕ್ಷಣಿಕ ಸಂಸ್ಥೆಯನ್ನು ಅವಲಂಬಿಸಿರುತ್ತದೆ. 10 ಸಾವಿರದಿಂದ 1 ಲಕ್ಷ ರೂಪಾಯಿಯವರೆಗೂ ಶುಲ್ಕ ಇರಬಹುದು.

ಐಟಿಐ ಕೋರ್ಸ್: ಕೈಗಾರಿಕಾ ತರಬೇತಿ ಸಂಸ್ಥೆಗಳು ಮೆಕ್ಯಾನಿಕಲ್ ಎಂಜಿನಿಯರಿಂಗ್, ಎಲೆಕ್ಟ್ರಿಕಲ್ ಎಂಜಿನಿಯರಿಂಗ್, ಪ್ಲಂಬಿಂಗ್, ವೆಲ್ಡಿಂಗ್ ಮತ್ತು ಕಾರ್ಪೆಂಟರಿ ಕೋರ್ಸ್‌ಗಳನ್ನು ನೀಡುತ್ತವೆ. ಇವು 6 ತಿಂಗಳಿನಿಂದ 2 ವರ್ಷದವರೆಗಿನ ಅವಧಿಯ ಕೋರ್ಸ್‌ಗಳಾಗಿವೆ. ಐಟಿಐ ಕೋರ್ಸ್‌ಗಳಿಗೆ ಕಡಿಮೆ ಶುಲ್ಕ ಇದ್ದು, ವಿವಿಧ ಕೈಗಾರಿಕೆಗಳಲ್ಲಿ ಬಹುಬೇಡಿಕೆಯ ಕೋರ್ಸ್‌ಗಳಾಗಿವೆ. ಇಲ್ಲಿ ಪ್ರಾಯೋಗಿಕ ಕೌಶಲಗಳೊಂದಿಗೆ ವಿದ್ಯಾರ್ಥಿಗಳನ್ನು ಕೈಗಾರಿಕಾ ಕ್ಷೇತ್ರಕ್ಕೆ ಸಜ್ಜುಗೊಳಿಸಲಾಗುತ್ತದೆ.

ವೃತ್ತಿಪರ ಕೋರ್ಸ್: ಡಿಪ್ಲೊಮಾ ಮತ್ತು ಐಟಿಐ ಕೋರ್ಸ್‌ಗಳ ಜೊತೆಗೆ ಹಲವಾರು ವೃತ್ತಿಪರ ಕೋರ್ಸ್‌ಗಳು ಸಹ ಲಭ್ಯವಿವೆ. ಬ್ಯೂಟಿ ಆ್ಯಂಡ್ ವೆಲ್‌ನೆಸ್, ಫ್ಯಾಷನ್ ಡಿಸೈನ್, ಆತಿಥ್ಯ ಮತ್ತು ಪ್ರವಾಸೋದ್ಯಮ, ಹೆಲ್ತ್ ಮ್ಯಾನೇಜ್‌ಮೆಂಟ್ ಕೋರ್ಸ್‌ಗಳು ವೃತ್ತಿಗೆ ಅಗತ್ಯವಾದ ಕೌಶಲಗಳನ್ನು ಕಲಿಸುತ್ತವೆ. ನಿರ್ದಿಷ್ಟ ಕ್ಷೇತ್ರದ ಯಶಸ್ಸಿಗೆ ಬೇಕಾದ ಜ್ಞಾನವನ್ನು ಪಡೆಯಲು ಈ ಕೋರ್ಸ್‌ಗಳು ಉಪಯುಕ್ತವಾಗಿವೆ.

ಫೇಲಾದ ವಿದ್ಯಾರ್ಥಿಗಳು ಶಿಕ್ಷಣ ಮತ್ತು ವೃತ್ತಿ ಅವಕಾಶಗಳನ್ನು ಹುಡುಕುವಾಗ ಅನೇಕ ಸವಾಲುಗಳು ಎದುರಾಗುತ್ತವೆ. ಇವುಗಳಲ್ಲಿ ಭಾರಿ ಶುಲ್ಕ, ಹೆಚ್ಚು ಹೊರೆಯೆನಿಸದ ಶುಲ್ಕದಲ್ಲಿ ಲಭ್ಯವಿರುವ ಉತ್ತಮವಾದ ಕೋರ್ಸ್‌ಗಳ ಬಗ್ಗೆ ಅರಿವಿನ ಕೊರತೆ ಮತ್ತು ಸಾಮಾಜಿಕ ಒತ್ತಡ ಸೇರಿರುತ್ತವೆ. ಇಂತಹ ಸವಾಲುಗಳಿಗೆ ಪರಿಹಾರಗಳಿವೆ. ಲಭ್ಯವಿರುವ ಕೋರ್ಸ್‌ಗಳು ಮತ್ತು ವೃತ್ತಿ ಅವಕಾಶಗಳ ಬಗ್ಗೆ ಸೂಕ್ತ ಮಾಹಿತಿ ಪಡೆದು ಮುಂದಡಿ ಇಟ್ಟರೆ, ಫೇಲ್ ಎಂಬುದು ನಿಮ್ಮ ಆತ್ಮವಿಶ್ವಾಸವನ್ನು ಕಸಿಯುವುದಿಲ್ಲ ಮತ್ತು ನಿಮ್ಮ ಭವಿಷ್ಯದ ನಿರೀಕ್ಷೆಗಳ ಮೇಲೆ ದುಷ್ಪರಿಣಾಮ ಬೀರುವುದಿಲ್ಲ.

ಹೊಸ ಕೌಶಲ, ಕಡಿಮೆ ಅವಧಿ

ಹೊಸ ಕೌಶಲ ಮತ್ತು ಜ್ಞಾನವನ್ನು ಪಡೆಯಲು ಸರ್ಟಿಫಿಕೆಟ್ ಕೋರ್ಸ್‌ಗಳು ಉತ್ತಮ ಆಯ್ಕೆಯಾಗಿವೆ. ಇವು ಡಿಪ್ಲೊಮಾ ಕೋರ್ಸ್‌ಗಳಿಗಿಂತ ಕಡಿಮೆ ಅವಧಿಯನ್ನು ಹೊಂದಿರುತ್ತವೆ ಮತ್ತು ನಿರ್ದಿಷ್ಟ ಅಧ್ಯಯನ ಕ್ಷೇತ್ರಗಳ ಮೇಲೆ ಹೆಚ್ಚು ಕೇಂದ್ರೀಕೃತವಾಗಿರುತ್ತವೆ.

ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಲಭ್ಯವಿರುವ ಕೆಲವು ಜನಪ್ರಿಯ ಸರ್ಟಿಫಿಕೆಟ್ ಕೋರ್ಸ್‌ಗಳೆಂದರೆ, ಡಿಜಿಟಲ್ ಮಾರ್ಕೆಟಿಂಗ್, ವೆಬ್ ಡಿಸೈನಿಂಗ್, ಹೋಟೆಲ್ ಮ್ಯಾನೇಜ್‌ಮೆಂಟ್, ಬ್ಯೂಟಿಷಿಯನ್ ಮತ್ತು ಮೇಕಪ್, ಫೈನಾನ್ಷಿಯಲ್ ಅಕೌಂಟೆಂಟ್, ಲ್ಯಾಂಗ್ವೇಜ್ ಫ್ಲುಯೆನ್ಸಿ ಮುಂತಾದವು. ಈ ಕೋರ್ಸ್‌ಗಳ ಅವಧಿ ಮತ್ತು ಶುಲ್ಕವು ಸಂಸ್ಥೆಯನ್ನು ಅವಲಂಬಿಸಿ ಬದಲಾಗಬಹುದು.

ತರಬೇತಿ ಉಚಿತ, ಕೌಶಲ ಖಚಿತ

ಇವು ನಿರ್ದಿಷ್ಟ ಕೌಶಲ ಮತ್ತು ವ್ಯಾಪಾರದ ಬಗ್ಗೆ ತರಬೇತಿ ಹಾಗೂ ಶಿಕ್ಷಣವನ್ನು ನೀಡುವ ಕೋರ್ಸ್‌ಗಳಾಗಿವೆ. ಸಾಮಾನ್ಯವಾಗಿ ಸರ್ಕಾರಿ ಸಂಸ್ಥೆಗಳು ಇವುಗಳನ್ನು ನೀಡುತ್ತವೆ. ಹಾಗಾಗಿ, ಹೆಚ್ಚಿನ ಕೋರ್ಸ್‌ಗಳು ಉಚಿತವಾಗಿರುತ್ತವೆ. ಲಭ್ಯವಿರುವ ಕೆಲವು ಜನಪ್ರಿಯ ಕೌಶಲ ಅಭಿವೃದ್ಧಿ ಕೋರ್ಸ್‌ಗಳೆಂದರೆ, ಸ್ಕಿಲ್ ಇಂಡಿಯಾ, ಪ್ರಧಾನ ಮಂತ್ರಿ ಕೌಶಲ್ ವಿಕಾಸ್ ಯೋಜನೆ ಮತ್ತು ರಾಷ್ಟ್ರೀಯ ಕೌಶಲ ಅಭಿವೃದ್ಧಿ ನಿಗಮದ ಕೋರ್ಸ್‌ಗಳು.

ಕೋರ್ಸ್ ಅನ್ನು ಅವಲಂಬಿಸಿ ಅರ್ಹತಾ ಮಾನದಂಡಗಳು ಮತ್ತು ಅವಧಿ ಬದಲಾಗುತ್ತವೆ.

ಉದ್ಯೋಗ ಕಿರಣ

ವರ್ಕ್ ಫ್ರಂ ಹೋಮ್ ಇಂಟರ್ನ್‌ಷಿಪ್

ಕಾಂಟೆಕ್ಸ್ಟ್ ಕ್ಯುಎ: ವಿಡಿಯೊ ಎಡಿಟರ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಅಡೋಬ್ ಆಫ್ಟರ್ ಎಫೆಕ್ಟ್ಸ್, ಅಡೋಬ್ ಪ್ರೀಮಿಯರ್ ಪ್ರೊ, ಕ್ಯಾನ್ವ, ಕ್ಯಾಪ್‌ಕಟ್, ಕಲರ್ ಗ್ರೇಡಿಂಗ್, ಡಾವಿನ್ಸಿ ರೆಸಾಲ್ವ್, ಫೈನಲ್ ಕಟ್ ಪ್ರೊ, ಮೋಷನ್ ಗ್ರ್ಯಾಫಿಕ್ಸ್, ವಿಡಿಯೊ ಎಡಿಟಿಂಗ್, ವಿಷುಯಲ್ ಸ್ಟೋರಿ ಟೆಲ್ಲಿಂಗ್ ಮತ್ತು ವಿಡಿಯೊ ಮೇಕಿಂಗ್ ಜ್ಞಾನವುಳ್ಳ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಮೇ 23 ಅರ್ಜಿ ಸಲ್ಲಿಕೆಗೆ ಕಡೇ ದಿನ. ಸ್ಟೈಪೆಂಡ್– ತಿಂಗಳಿಗೆ ₹ 3,000– 5,000. ಸಂಪರ್ಕ: internshala.com/i/608620.

ಸಾದ್ಗಿ ಹೌಸ್: ಫ್ಯಾಷನ್ ಡಿಸೈನ್ ಇಂಟರ್ನಿಗಳನ್ನು ಆಹ್ವಾನಿಸಿದೆ. ಅಡೋಬ್ ಇಲಸ್ಟ್ರೇಟರ್, ಅಡೋಬ್ ಫೋಟೊಶಾಪ್, ಕೋರಲ್‌ಡ್ರಾ, ಫ್ಯಾಷನ್ ಡಿಸೈನಿಂಗ್ ಮತ್ತು ಫ್ಯಾಷನ್ ಇಲಸ್ಟ್ರೇಷನ್ ಬಗ್ಗೆ ಅರಿತಿರುವ ವಿದ್ಯಾರ್ಥಿಗಳು ಮೇ 23ರ ಒಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್– ತಿಂಗಳಿಗೆ ₹ 5,000– 8000. ಸಂಪರ್ಕ: internshala.com/i/7beaa6.

ಬೆಂಗಳೂರು ಕೇಂದ್ರಿತ ಇಂಟರ್ನ್‌ಷಿಪ್

ದಿ ಸಿಗ್ನೇಚರ್ ಡಿಸೈನ್ ಸ್ಟುಡಿಯೊ: ಇಂಟೀರಿಯರ್ ಡಿಸೈನ್ ಇಂಟರ್ನಿಗಳನ್ನು ನೇಮಕ ಮಾಡಿಕೊಳ್ಳಲಿದ್ದು ಅರ್ಜಿ ಸಲ್ಲಿಸಲು ಮೇ 22ರವರೆಗೆ ಅವಕಾಶ ಇದೆ. ಆಟೊಕ್ಯಾಡ್, ಆಟೊಡೆಸ್ಕ್ 3ds ಮ್ಯಾಕ್ಸ್, ಗೂಗಲ್ ಸ್ಕೆಚಪ್, ಇಂಟೀರಿಯರ್ ಡಿಸೈನ್ ಮತ್ತು V-Ray ವಿಷಯಗಳಲ್ಲಿ ಕೌಶಲ ಉಳ್ಳವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಸ್ಟೈಪೆಂಡ್ ತಿಂಗಳಿಗೆ ₹ 8,000– 12,000. ಸಂಪರ್ಕ: internshala.com/i/16924c.

ಬ್ರ್ಯಾಂಡ್‌ಶಾರ್ಕ್: ಸೋಷಿಯಲ್ ಮೀಡಿಯಾ ಮಾರ್ಕೆಟಿಂಗ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಡಿಜಿಟಲ್ ಮಾರ್ಕೆಟಿಂಗ್, ಇನ್‌ಸ್ಟಾಗ್ರಾಂ ಮಾರ್ಕೆಟಿಂಗ್, ಸರ್ಚ್ ಎಂಜಿನ್ ಮಾರ್ಕೆಟಿಂಗ್ (ಎಸ್‌ಇಎಂ), ಸೋಷಿಯಲ್ ಮೀಡಿಯಾ ಮಾರ್ಕೆಟಿಂಗ್ ಬಗ್ಗೆ ಜ್ಞಾನವುಳ್ಳ ಹಾಗೂ ಇಂಗ್ಲಿಷ್‌ನಲ್ಲಿ ಬರೆಯುವ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳು ಮೇ 21ರ ಒಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್– ತಿಂಗಳಿಗೆ ₹ 10,000. ಸಂಪರ್ಕ: internshala.com/i/26aefc.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಕನ್ನಡ ನಾಡಿಗೆ ಕನ್ನಡವೇ ಗತಿ. ಸಂಸ್ಕೃತವಲ್ಲ, ಇಂಗ್ಲಿಷ್ ಅಲ್ಲ; ಹಿಂದಿಯೂ ಅಲ್ಲ.

-ಬಿ.ಎಂ. ಶ್ರೀಕಂಠಯ್ಯ

ಸಂಪಾದಕೀಯ

ಒಳ ಮೀಸಲು: ಸರ್ಕಾರದ ಸೂತ್ರ ಕೊರತೆಗಳಿದ್ದರೂ ಸಮಾಧಾನಕರ

ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಕಲ್ಪಿಸಬೇಕೆಂಬ ನಾಲ್ಕು ದಶಕಗಳ ಹಕ್ಕೊತ್ತಾಯಕ್ಕೆ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಕೊನೆಗೂ ದೃಢ ನಿರ್ಧಾರ ಕೈಗೊಂಡಿದೆ. ಇಂತಹದೊಂದು ನಿರ್ಣಯಕ್ಕೆ ಕಾನೂನಿನ ಹಲವು ಕಟ್ಟಳೆಗಳು ಅಡ್ಡಿಯಾಗಿದ್ದವು. ಇಂದಿರಾ ಸಾಹ್ನಿ ಪ್ರಕರಣದಲ್ಲಿ ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್ ಒಟ್ಟು ಮೀಸಲಾತಿ ಪ್ರಮಾಣ ಶೇ 50ರಷ್ಟನ್ನು ಮೀರುವಂತಿಲ್ಲ ಎಂದು ಹೇಳಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬರುವುದಕ್ಕೆ ಮುನ್ನ ರಾಜ್ಯದಲ್ಲಿದ್ದ ಬಿಜೆಪಿ ಸರ್ಕಾರ ಪರಿಶಿಷ್ಟ ಜಾತಿಗೆ ಶೇ 15ರಷ್ಟು ಹಾಗೂ ಪರಿಶಿಷ್ಟ ಪಂಗಡಕ್ಕೆ ಶೇ 3ರಷ್ಟಿದ್ದ ಮೀಸಲಾತಿ ಪ್ರಮಾಣವನ್ನು ಕ್ರಮವಾಗಿ ಶೇ 17ಕ್ಕೆ ಹಾಗೂ ಶೇ 7ಕ್ಕೆ ಏರಿಸಿತ್ತು. ಹೀಗಾಗಿ, ಒಟ್ಟು ಮೀಸಲಾತಿ ಪ್ರಮಾಣ ಶೇ 56ಕ್ಕೆ ಮುಟ್ಟಿತ್ತು. ಅದರ ಜಾರಿಗೆ, ಇಂದಿರಾ ಸಾಹ್ನಿ ಪ್ರಕರಣದ ತೀರ್ಪು ಅಡ್ಡಿಯಾಗಿತ್ತು. 2024ರ ಆಗಸ್ಟ್ 1ರಂದು ಪ್ರಕರಣವೊಂದರಲ್ಲಿ ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್, ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಕಲ್ಪಿಸುವ ಅಧಿಕಾರ ರಾಜ್ಯ ಸರ್ಕಾರಗಳಿಗಿದೆ ಎಂದು ಹೇಳಿತ್ತು. ಅದರ ಅನುಷ್ಠಾನಕ್ಕೆ ಮುಂದಾದ ಕಾಂಗ್ರೆಸ್ ಸರ್ಕಾರ, ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಅಧ್ಯಕ್ಷತೆಯಲ್ಲಿ ಏಕವ್ಯಕ್ತಿ ಆಯೋಗ ರಚಿಸಿತು. ಆಯೋಗದ ಶಿಫಾರಸುಗಳನ್ನು ಪರಿಷ್ಕರಿಸಿ, ಪರಿಶಿಷ್ಟ ಜಾತಿಗೆ ಶೇ 17ರಷ್ಟು ಮೀಸಲಾತಿ ಆಧಾರದಲ್ಲಿ ಎಡಗೈ-ಬಲಗೈ ಸಮುದಾಯಗಳಿಗೆ ತಲಾ ಶೇ 6 ಹಾಗೂ ಸ್ಪೃಶ್ಯ ಜಾತಿಗಳಿಗೆ ಶೇ5 ರಷ್ಟು ಮೀಸಲಾತಿ ನೀಡಲು ತೀರ್ಮಾನಿಸಿತು.

ಒಳಮೀಸಲಾತಿಗೆ ಸಂಬಂಧಿಸಿದಂತೆ ಸರ್ಕಾರ ಮಹತ್ವದ ತೀರ್ಮಾನ ತೆಗೆದುಕೊಂಡಿದೆ. ಮೀಸಲಾತಿ ಗೊಂದಲ ಬಗೆಹರಿದಿದ್ದು, ನೇಮಕಾತಿ ಪ್ರಕ್ರಿಯೆ ವಿಳಂಬವಿಲ್ಲದೆ ಶುರುವಾಗಲಿ.

ಲಭ್ಯ ಮೀಸಲಾತಿ ಪ್ರಮಾಣದಲ್ಲಿ ಉಪವರ್ಗೀಕರಣಕ್ಕೆ ಅವಕಾಶ ಇದೆ ಎಂದು ಸುಪ್ರೀಂ ಕೋರ್ಟ್ ಹೇಳಿತ್ತೇ ವಿನಾ, ಮೀಸಲು ಹೆಚ್ಚಳಕ್ಕೆ ಅವಕಾಶ ಕಲ್ಪಿಸಿರಲಿಲ್ಲ. ಹಾಗಾಗಿ, ಶೇ 17ರ ಲೆಕ್ಕಾಚಾರದಲ್ಲಿ ಒಳಮೀಸಲಾತಿ ಹಂಚಿಕೆ ತಪ್ಪು ನಡೆಯಾದುದರಿಂದ ಅದು ಊರ್ಜಿತವಾಗಲಿಲ್ಲ. ಪರಿಶಿಷ್ಟ ಜಾತಿ ಮೀಸಲಾತಿ ಒಟ್ಟು ಹುದ್ದೆಗಳನ್ನು ಆಧರಿಸಿ ಹಂಚಿಕೆ ಮಾಡಲು ರೂಪಿಸಲಾದ ರೋಸ್ಟರ್ ಬಿಂದು ಸೂತ್ರದಿಂದ ತಮಗೆ ಅನ್ಯಾಯವಾಗಿದೆ ಎಂದು ಬಲಗೈ ಸಮುದಾಯ ಆಕ್ಷೇಪ ಎತ್ತಿತು. ಅಲೆಮಾರಿಗಳಿಗೆ ಮೀಸಲಾತಿ ಕಲ್ಪಿಸಿಲ್ಲ ಎಂಬ ವಿಷಯವೂ ಕೋರ್ಟ್ ಮೆಟ್ಟಿಲೇರಿತು. ರಾಜ್ಯ ಸರ್ಕಾರ ಹಿಂದೆ ಜಾರಿ ಮಾಡಿದ್ದ 6:6:5ರ ಅನುಪಾತದಲ್ಲಿ ನೇಮಕಾತಿ ಮಾಡಕೂಡದು, ಇದರಿಂದ ತಮಗೆ ವಂಚನೆಯಾಗಲಿದೆ ಎಂದು ಬಲಗೈ ಸಮುದಾಯದವರು ವಿರೋಧ ವ್ಯಕ್ತಪಡಿಸಿದ್ದರು. ಸದ್ಯದ ಏಟಿನಿಂದ ತಪ್ಪಿಸಿಕೊಳ್ಳುವ ಒಳದಾರಿಯನ್ನು ಏಪ್ರಿಲ್ 24ರಂದು ನಡೆದ ಸಂಪುಟ ಸಭೆಯಲ್ಲಿ ಸರ್ಕಾರ ಕಂಡುಕೊಂಡಿದೆ. ಶೇ 15ರ ಮೀಸಲಾತಿಯಲ್ಲಿಯೇ ಪರಿಶಿಷ್ಟ ಜಾತಿಯಲ್ಲಿ ಗ್ರೂಪ್ 'ಎ' (ಎಡಗೈ), ಗ್ರೂಪ್ 'ಬಿ' (ಬಲಗೈ), ಗ್ರೂಪ್ 'ಸಿ' (ಸ್ಪೃಶ್ಯ) ಎಂದು ವರ್ಗೀಕರಿಸಲಾಗಿದೆ. ಎಡಗೈ ಹಾಗೂ ಬಲಗೈ ಜಾತಿಯವರಿಗೆ ತಲಾ ಶೇ 5.25 ಹಾಗೂ ಸ್ಪೃಶ್ಯ ಮತ್ತು ಅಲೆಮಾರಿ ಸಮುದಾಯಗಳಿಗೆ ಶೇ 4.5ರಷ್ಟು ಹಂಚಿಕೆ ಮಾಡಲಾಗಿದೆ. ರೋಸ್ಟರ್ ಬಿಂದು ಗೊಂದಲ ಪರಿಹಾರಕ್ಕೆ ಹೊಸ ಸೂತ್ರ ರೂಪಿಸಲಾಗಿದೆ. ಯಾವುದೇ ವೃಂದದ ಹುದ್ದೆಗಳಲ್ಲಿ 3ಕ್ಕಿಂತ ಕಡಿಮೆ ಪರಿಶಿಷ್ಟ ಜಾತಿ ಬಿಂದುಗಳು ಲಭ್ಯವಾಗುತ್ತಿದ್ದರೆ ಆ ಹುದ್ದೆಯನ್ನು 'ಪರಿಶಿಷ್ಟ ಜಾತಿ ಸಾಮಾನ್ಯ' ಎಂದು ಪರಿಗಣಿಸಲು ನಿರ್ಧರಿಸಲಾಗಿದೆ. ಕಡಿಮೆ ಹುದ್ದೆಗಳು ಇದ್ದ ಪಕ್ಷದಲ್ಲಿ ಮೂರು ಗ್ರೂಪ್‌ನವರು ಸ್ಪರ್ಧಾತ್ಮಕವಾಗಿ ಈ ಹುದ್ದೆಗಳನ್ನು ಪಡೆದುಕೊಳ್ಳುವ ಅವಕಾಶ ಕಲ್ಪಿಸಲಾಗಿದೆ. ಗ್ರೂಪ್ 'ಸಿ' ಅಡಿ ಸ್ಪೃಶ್ಯ ಜಾತಿಗಳ ಜತೆಗೆ ಸೇರಿಸಲಾಗಿರುವ ಅಲೆಮಾರಿ ಸಮುದಾಯಕ್ಕೆ ಶೇ 20ರಷ್ಟನ್ನು ಮೀಸಲಿಡಲಾಗುತ್ತದೆ ಎಂದು ಸರ್ಕಾರ ಹೇಳಿದೆ.

ನೇಮಕಾತಿ ಪ್ರಕ್ರಿಯೆಯಡಿ ಕಡಿಮೆ ಹುದ್ದೆಗಳಿದ್ದಲ್ಲಿ ರೋಸ್ಟರ್ ಬಿಂದು ಪದ್ಧತಿಯಿಂದಾಗಿ ಎಡಗೈ ಸಮುದಾಯಕ್ಕೆ ಹೆಚ್ಚಿನ ಪ್ರಾತಿನಿಧ್ಯ ಸಿಗುತ್ತದೆ ಎಂಬ ಬಲಗೈ ಸಮುದಾಯದ ಆಕ್ಷೇಪ ತಣಿಸಲು ನ್ಯಾಯದ ಸೂತ್ರ ರೂಪಿಸಿದ ಸರ್ಕಾರ ಎಲ್ಲರನ್ನೂ ಓಲೈಸಲು ಯತ್ನಿಸಿದೆ. ಪರಿಶಿಷ್ಟ ಜಾತಿಯ ಮೀಸಲಾತಿಯಲ್ಲಿ ಹೆಚ್ಚಿನ ಸೌಲಭ್ಯ ದಕ್ಕಿಸಿಕೊಂಡಿರುವ ಬಲಗೈಗೆ ಮೀಸಲಾತಿ ಪ್ರಮಾಣ ಕಡಿಮೆ ಮಾಡಬೇಕಿತ್ತು. ಪರಿಶಿಷ್ಟರಲ್ಲೂ ತೀರಾ ಅಮಾನವೀಯ ಅಸ್ಪೃಶ್ಯತೆಗೆ ಗುರಿಯಾಗಿರುವ ಎಡಗೈ ಗುಂಪಿನ ಜಾತಿಗೆ ಹೆಚ್ಚಿನ ಮೀಸಲಾತಿ ಕೊಟ್ಟಿದ್ದರೆ ಸಾಮಾಜಿಕ ನ್ಯಾಯ ಕಲ್ಪಿಸಿದಂತಾಗುತ್ತಿತ್ತು. ಮೀಸಲಾತಿಯಲ್ಲಿ ಪ್ರಧಾನ ಲಾಭ ಪಡೆದ ಬೋವಿ ಮತ್ತು ಲಂಬಾಣಿಯಂತಹ ಪ್ರಭಾವಿ ಜಾತಿಗಳ ಗುಂಪಿನಲ್ಲಿ ಅಲೆಮಾರಿಗಳನ್ನು ಸೇರಿಸಿರುವುದು ಅನ್ಯಾಯ. ಊರು-ಸೂರು ಎರಡೂ ಇಲ್ಲದ ತಬ್ಬಲಿ ಸಮುದಾಯಗಳ ಪರವಾಗಿ ನಿಲ್ಲುವುದು ಸರ್ಕಾರದ ಕರ್ತವ್ಯವಾಗಬೇಕಿತ್ತು. ಗ್ರೂಪ್ 'ಸಿ'ಯಲ್ಲಿ ಶೇ 20ರಷ್ಟು ಹುದ್ದೆಗಳನ್ನು ಮೀಸಲಿಡುವುದು ಒಳ್ಳೆಯ ತೀರ್ಮಾನವಾದರೂ, ಅಂಚಿನಲ್ಲೇ ಉಳಿದಿರುವ ಅಲೆಮಾರಿಗಳಿಗೆ ಶತಮಾನಗಳ ಅನ್ಯಾಯ ಸರಿಪಡಿಸುವ ಕ್ರಮವಂತೂ ಅಲ್ಲ. ಮೀಸಲಾತಿಯ ಗೊಂದಲಕ್ಕೆ ತೆರೆ ಬಿದ್ದಿರುವುದರಿಂದಾಗಿ ನೇಮಕಾತಿಗೆ ದಾರಿ ತೆರೆದಿದೆ. ಸರ್ಕಾರ ವಿಳಂಬ ಮಾಡದೇ 56,432 ಹುದ್ದೆಗಳ ಭರ್ತಿಗೆ ತುರ್ತು ಕ್ರಮ ತೆಗೆದುಕೊಳ್ಳಬೇಕು. ಪ್ರಣಾಳಿಕೆಯಲ್ಲಿ ವಾಗ್ದಾನ ಮಾಡಿದಂತೆ, 2.84 ಲಕ್ಷ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು.

ಜಾಲತಾಣ

ಸ್ಮೃತಿ ಅಳಿಸಲಾಗುವುದೆ?

ಬಸವಣ್ಣ, ಕುವೆಂಪು, ರಾಜಕುಮಾರ್ ಕನ್ನಡದ ಮಹಾಮನೆಯ ಹಿರಿಯರು, ಕನ್ನಡಿಗರಿಗೆ ಪ್ರಾತಃಸ್ಮರಣೀಯರು. ಹಿರಿಯರ ಸ್ಮರಣೆಗೆ ಅರ್ಪಿಸಿದ ಸ್ಮಾರಕವನ್ನು ಅಳಿಸಲು ಯತ್ನಿಸಬಹುದಷ್ಟೇ... ಕನ್ನಡಿಗರ ಹೃದಯಗಳ ಅನಂತ ವಿಸ್ತಾರದಲ್ಲಿ ವಿರಾಜಮಾನರಾಗಿರುವ ಅಣ್ಣಾವ್ರ ಸ್ಮೃತಿಯನ್ನು ಹೇಗೆ ಅಳಿಸಬಲ್ಲಿರಿ?

ಸವಿರಾಜ್ ಆನಂದೂರು, ಲೇಖಕ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಆಂತರಿಕ ಕಚ್ಚಾಟ, ರಾಜಕೀಯ ಮೇಲಾಟ, ಬಣ ಬಡಿದಾಟದಲ್ಲೇ ಮುಳುಗಿರುವ ರಾಜ್ಯ ಸರ್ಕಾರವು ಆರೋಗ್ಯ ಇಲಾಖೆಯನ್ನು ಸಂಪೂರ್ಣ ನಿರ್ಲಕ್ಷಿಸಿ, ಸರ್ಕಾರಿ ಆಸ್ಪತ್ರೆಗಳನ್ನು ಅಧೋಗತಿಗೆ ತಳ್ಳಿದೆ.

ಆರ್. ಅಶೋಕ, ವಿಧಾನಸಭಾ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶುಕ್ರವಾರ, 27-4-2001

• ಕೈಗಾ: ಇನ್ನೆರಡು ಅಣು ರಿಯಾಕ್ಟರ್ ಸ್ಥಾಪನೆಗೆ ಸಮ್ಮತಿ

ನವದೆಹಲಿ, ಏ. 26– ಉತ್ತರ ಕನ್ನಡ ಜಿಲ್ಲೆಯ ಕೈಗಾದಲ್ಲಿ ರೂ. 2,856 ಕೋಟಿ ಅಂದಾಜು ವೆಚ್ಚದ ಎರಡು ಪರಮಾಣು ರಿಯಾಕ್ಟರ್‌ಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರ ಇಂದು ನಿರ್ಧರಿಸಿತು.

ಹೊಸದಾಗಿ ಸ್ಥಾಪನೆಗೊಳ್ಳಲಿರುವ ತಲಾ 220 ಮೆಗಾವಾಟ್ ಸಾಮರ್ಥ್ಯದ ಕೈಗಾದ ಮೂರು ಮತ್ತು ನಾಲ್ಕು ರಿಯಾಕ್ಟರ್‌ಗಳು ಪ್ರತಿ ವರ್ಷ 2,420 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದಿಸಲಿವೆ.

• ಒಪ್ಪಂದ ರದ್ದುಪಡಿಸಲು ಎನ್ರಾನ್ ನಿರ್ಧಾರ

ಲಂಡನ್, ಏ. 26 (ಪಿಟಿಐ)– ಮಹಾರಾಷ್ಟ್ರ ರಾಜ್ಯ ವಿದ್ಯುತ್ ಮಂಡಳಿ (ಎಂಎಸ್‌ಇಬಿ) ಜತೆ ವಿದ್ಯುತ್ ಪೂರೈಕೆ ಒಪ್ಪಂದ ರದ್ದುಪಡಿಸುವ ಅಧಿಕಾರವನ್ನು ತನ್ನ ಆಡಳಿತ ವರ್ಗಕ್ಕೆ ನೀಡುವ ನಿರ್ಧಾರವನ್ನು ಎನ್ರಾನ್‌ನ ದಾಭೋಲ್ ಪವರ್ ಕಂಪನಿ (ಡಿಪಿಸಿ) ಕೈಗೊಂಡಿದೆ.

75 ವರ್ಷಗಳ ಹಿಂದೆ

ಶುಕ್ರವಾರ, 27-4-1951

• ಅರ್ಥ ಮಸೂದೆಗೆ ಭಾರತ ಪಾರ್ಲಿಮೆಂಟಿನ ಅಂಗೀಕಾರ

ನವದೆಹಲಿ, ಏ. 26– ಹುಕ್ಕಾ ತಂಬಾಕಿನ ಮೇಲಿನ ಸುಂಕವನ್ನು ಪೌಂಡಿಗೆ ಏಳು ಆಣೆಗಳಿಗೆ ಇಳಿಸಿ, ಸೆಲೆಕ್ಟ್ ಸಮಿತಿಯ ಸಲಹೆಗನುಸಾರವಾದ ಅರ್ಥ ಮಸೂದೆಗೆ ಪಾರ್ಲಿಮೆಂಟ್ ಅಂಗೀಕಾರ ಮುದ್ರೆಯೊತ್ತಿತು.

ಅರ್ಥ ಸಚಿವ ಚಿಂತಾಮಣ್ ದೇಶಮುಖರು, ಸರ್ಕಾರದ ನಗದು ಶಿಲ್ಕಿನ ಪರಿಸ್ಥಿತಿ ಇನ್ನೂ ಉತ್ತಮಗೊಂಡಿದೆ ಎಂದು ವರದಿ ಮಾಡಿದರು.

ಈಗಿನ ಚಿಹ್ನೆಗಳ ಪ್ರಕಾರ ಅಖೈರು ಶಿಲ್ಕು 160 ಕೋಟಿ ರೂ. ಗಳಿಷ್ಟಿರುವುದೆಂದೂ, ಪುನರ್ವಿಮರ್ಶಿತ ಅಂದಾಜಿನಲ್ಲಿ 95 ಕೋಟಿ ರೂ. ಗಳಷ್ಟಿದೆ ಎಂದೂ, 1951–52ರ ಅಂತ್ಯದಲ್ಲಿ ಹಿಂದೆ ನಿರೀಕ್ಷಿಸಿದಂತೆ 43 ಕೋಟಿ ರೂ.ಗಳ ನಗದು ಶಿಲ್ಕಿಗೆ ಬದಲಾಗಿ 50–55 ಕೋಟಿ ರೂ.ಗಳ ಶಿಲ್ಕು ಸರಕಾರಕ್ಕಿದೆಯೆಂದೂ ದೇಶಮುಖ್ ತಿಳಿಸಿದರು.

ಪ್ರಜ್ಞಾವಂತರ ಮೌನ, ಕಳಪೆ ಶಿಕ್ಷಣ

ವಿಶ್ಲೇಷಣೆ

ಅರುಣ್ ಜೋಳದಕೂಡ್ಲಿಗಿ

> ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳು ಹಾಗೂ ನೀಡುತ್ತಿರುವ ಅನುದಾನ ಆಕರ್ಷಕ. ಆದರೆ, ಯೋಜನೆಗಳ ಫಲಶ್ರುತಿ ಮೂಲ ಸೌಕರ್ಯಗಳ ರೂಪದಲ್ಲಿ ಕಾಣಿಸುತ್ತಿಲ್ಲ. ಇದನ್ನು ಪ್ರಶ್ನಿಸುವ ಮನೋಭಾವದ ಕೊರತೆಯಿಂದಾಗಿ, ಅಭಿವೃದ್ಧಿಯ ಓಟದಲ್ಲಿ 'ಕಲ್ಯಾಣ' ಆಮೆಗತಿಯಲ್ಲಿದೆ.

ಕರ್ನಾಟಕದಾದ್ಯಂತ ಪದವಿ ಕಾಲೇಜುಗಳಿಗೆ ಮಾನವಿಕ ವಿಭಾಗದಲ್ಲಿ ವಿದ್ಯಾರ್ಥಿಗಳು ಕಡಿಮೆ ಆಗುತ್ತಿದ್ದಾರೆ. ಹೀಗಾಗಿ, ಕಾಲೇಜುಗಳಲ್ಲಿ ಅಧ್ಯಾಪಕರಾಗಿರುವವರು ತಮ್ಮ ಉಳಿವಿಗಾಗಿ ಪಿಯು ಫಲಿತಾಂಶ ಬಂದ ನಂತರ ವಿದ್ಯಾರ್ಥಿಗಳ ಬೇಟೆ ಶುರು ಮಾಡುತ್ತಾರೆ. ವಿವಿಧ ರಿಯಾಯಿತಿ ಮತ್ತು ಸೌಲಭ್ಯಗಳನ್ನು ಮುಂದಿರಿಸಿ ವಿದ್ಯಾರ್ಥಿಗಳನ್ನು ತಮ್ಮ ಕಾಲೇಜುಗಳಿಗೆ ಸೆಳೆಯುವ ಕಸರತ್ತು ಮಾಡುತ್ತಾರೆ. ನಾನು ಕೂಡ ಈ ಕಸರತ್ತಿನ ಭಾಗವಾಗಿ ನಮ್ಮ ಕಾಲೇಜಿನ ಸಹ ಅಧ್ಯಾಪಕರ ಜತೆ ಎರಡು ವರ್ಷದಿಂದ ಕಲಬುರಗಿ ಜಿಲ್ಲೆಯ ವಿವಿಧ ತಾಲ್ಲೂಕುಗಳ ಗ್ರಾಮಗಳಿಗೆ ಪ್ರಚಾರಕ್ಕಾಗಿ ಹೋಗುತ್ತಿದ್ದೇನೆ. ಈ ಪ್ರಯಾಣದಲ್ಲಿ ಮೊದಲಿಗೆ ಕಣ್ಣಿಗೆ ರಾಚುವುದು ಹಳ್ಳಿಗಳನ್ನು ಸಂಪರ್ಕಿಸುವ ಅತ್ಯಂತ ಕಳಪೆ ರಸ್ತೆಗಳು, ಆಯಾ ಊರುಗಳಲ್ಲಿನ ಚರಂಡಿ ಅವ್ಯವಸ್ಥೆ, ಬಿಸಿಲನಾಡಲ್ಲೂ ತಗಡಿನಿಂದ ಕಟ್ಟಿಕೊಂಡ ಹಂದಿಗೂಡಿನಂತಹ ಮನೆಗಳು. ಕಣ್ಣಿಗೆ ರಾಚುವ ಬಡತನ, ಈಗಲೋ ಆಗಲೋ ಬೀಳುವ ಸ್ಥಿತಿಯಲ್ಲಿರುವ ಶಾಲೆಗಳನ್ನು ಒಳಗೊಂಡಂತೆ ಅತ್ಯಂತ ಕಳಪೆ ಸರ್ಕಾರಿ ಕಟ್ಟಡಗಳು. ಹೀಗೆ ಹಳ್ಳಿಗಳನ್ನು ಸುತ್ತುತ್ತಿದ್ದರೆ ಕರ್ನಾಟಕದ ಈ ಭಾಗ ಕಲ್ಯಾಣವಾಗುವುದು ಯಾವಾಗ ಎನ್ನುವ ಪ್ರಶ್ನೆಯೊಂದು ಎದುರಾಗುತ್ತದೆ.

ಕರ್ನಾಟಕ ಸರ್ಕಾರವು ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ, ಕಲಬುರಗಿ ಮತ್ತು ವಿಜಯನಗರ ಜಿಲ್ಲೆಗಳನ್ನು 'ಕಲ್ಯಾಣ ಕರ್ನಾಟಕ' ಎಂದು ಗುರ್ತಿಸಿದೆ. ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಲು 2007–08ರಿಂದ ಈ ಭಾಗಕ್ಕೆ ವಿಶೇಷ ಅನುದಾನ ನೀಡಲಾಗುತ್ತಿದೆ. ಆಗ ಈ ಅನುದಾನವನ್ನು ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ (ಎಚ್‌ಕೆಆರ್‌ಡಿಬಿ) ವಿತರಿಸಲಾಗುತ್ತಿತ್ತು. 2013ರಿಂದ 371(ಜೆ) ಕಾಲಮ್ಮಿನ ಅನ್ವಯ ಇದನ್ನು 'ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ' (ಕೆಕೆಆರ್‌ಡಿಬಿ) ಆಗಿ ಪುನರ್ ರಚಿಸಲಾಗಿದೆ.

2013–14ನೇ ಸಾಲಿನಿಂದ 2025–26ನೇ ಸಾಲಿನಲ್ಲಿ ಈ ವರ್ಷದ ಜನವರಿ ಅಂತ್ಯಕ್ಕೆ ₹24,773.30 ಕೋಟಿಗಳ ಅನುದಾನ ನಿಗದಿಯಾಗಿದ್ದು, ₹17,728.80 ಕೋಟಿ ಅನುದಾನ ಬಿಡುಗಡೆಯಾಗಿದೆ. ಈ ಪೈಕಿ ₹15,803.92 ಕೋಟಿ ವೆಚ್ಚ ಭರಿಸಿ ಶೇ 89ರಷ್ಟು ಪ್ರಗತಿ ಸಾಧಿಸಲಾಗಿದೆ. ಅದೇ ರೀತಿ 43,397 ಕಾಮಗಾರಿಗಳು ಅನುಮೋದನೆಗೊಂಡಿದ್ದು, 35,013 ಕಾಮಗಾರಿಗಳು ಮುಕ್ತಾಯಗೊಂಡಿವೆ. 2025–26ರ ವಿಶೇಷ ಅಭಿವೃದ್ಧಿ ಯೋಜನೆಯಡಿ ಅನುದಾನ ಹಂಚಿಕೆಯಾದಂತೆ ₹16 ಸಾವಿರ ಕೋಟಿಗಳ ಹೆಚ್ಚುವರಿ ಹೂಡಿಕೆಯಲ್ಲಿ ಕಲಬುರಗಿ ವಿಭಾಗದ ಪಾಲು ₹6,400 ಕೋಟಿಗಳಾಗಿದ್ದು ಅದು ಗರಿಷ್ಠ ಮೊತ್ತವಾಗಿದೆ. ಕೆಕೆಆರ್‌ಡಿಬಿಗೆ ನೀಡಿದ ಅನುದಾನದಲ್ಲಿ ಶೇ 89ರಷ್ಟು ಪ್ರಗತಿ ನಿಜಕ್ಕೂ ಆಗಿದ್ದರೆ, ಇದು ಕಲ್ಯಾಣ ಕರ್ನಾಟಕದ ಪ್ರತಿ ಹಳ್ಳಿಗಳ ಲೆಕ್ಕ ಕೊಡಬೇಕಾಗುತ್ತದೆ. ಜನ ಚಳವಳಿಗಳು ಜೀವಂತವಾಗಿದ್ದಲ್ಲಿ ಕೆಕೆಆರ್‌ಡಿಬಿಯ ಎದುರು ದಿನಕ್ಕೊಂದು ಹಳ್ಳಿಗಳಂತೆ ಬಂದು ನಮ್ಮ ಊರಿಗೆ ಏನು ಖರ್ಚು ಮಾಡಿದ್ದೀರಿ ಎಂದು ಲೆಕ್ಕ ಕೇಳುವಂತೆ ಜನಜಾಗೃತಿ ಮೂಡಿಸಬೇಕಾಗಿದೆ.

ಮೇಲಿನ ಹಾಗೆ ಲೆಕ್ಕ ಕೊಡುವ ಕರ್ನಾಟಕ ಆರ್ಥಿಕ ಸಮೀಕ್ಷೆ 2025–26ರಲ್ಲಿಯೇ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಜಿಲ್ಲಾಮಟ್ಟದಲ್ಲಿ ಅಸಮಾನತೆಗಳು ಇರುವುದನ್ನೂ ದಾಖಲಿಸುತ್ತದೆ. ಬೆಂಗಳೂರು ನಗರ (0.738) ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಮುಂಚೂಣಿಯಲ್ಲಿದೆ. ದಕ್ಷಿಣ ಕನ್ನಡ (0.687), ಚಿಕ್ಕಮಗಳೂರು (0.668), ಮತ್ತು ಉಡುಪಿ (0.665) ನಂತರದ ಜಿಲ್ಲೆಗಳಾಗಿವೆ. ಆದರೆ, ಯಾದಗಿರಿ (0.538), ಕಲಬುರಗಿ (0.539), ಮತ್ತು ರಾಯಚೂರು (0.562) ಕಡಿಮೆ ಮಾನವ ಅಭಿವೃದ್ಧಿ ಸೂಚ್ಯಂಕ ಮೌಲ್ಯಗಳನ್ನು ದಾಖಲಿಸಿವೆ.

ಕಲ್ಯಾಣ ಕರ್ನಾಟಕದ ಮೂರು ಜಿಲ್ಲೆಗಳು ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಹಿಂದುಳಿದಿವೆ. ಮಾನವ ಅಭಿವೃದ್ಧಿ ಸೂಚ್ಯಂಕದ ಅತಿ ಹಿಂದುಳಿದ 10 ತಾಲ್ಲೂಕುಗಳ ಪಟ್ಟಿಯಲ್ಲಿ ಕಲ್ಯಾಣ ಕರ್ನಾಟಕದ 8 ತಾಲ್ಲೂಕುಗಳಿವೆ: ಶಹಾಪುರ, ಚಿಂಚೊಳ್ಳಿ, ಸಿಂಧನೂರು, ಯಲಬುರ್ಗಾ, ಸುರಪುರ, ಕೂಡ್ಲಿಗಿ, ಜೇವರ್ಗಿ, ಯಾದಗಿರಿ. ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಯಾದಗಿರಿ ಕೊನೆಯ ಸ್ಥಾನದಲ್ಲಿದೆ.

ಈ ಭಾಗದಲ್ಲಿ ಬಹುಪಾಲು ಕಳಪೆ ರಸ್ತೆಗಳು ಇರುವುದು ವಾಸ್ತವ. ವೈರುಧ್ಯವೆಂದರೆ 2025–26ರ ಕರ್ನಾಟಕ ಆರ್ಥಿಕ ಸಮೀಕ್ಷೆಯಲ್ಲಿ ಕಲ್ಯಾಣಪಥ ಯೋಜನೆಯ ಅಂಗವಾಗಿ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ ಮಾದರಿಯಲ್ಲಿ ಕಲ್ಯಾಣ ಕರ್ನಾಟಕ ವ್ಯಾಪ್ತಿಯ 38 ಗ್ರಾಮೀಣ ವಿಧಾನಸಭಾ ಕ್ಷೇತ್ರಗಳಲ್ಲಿ 1,150 ಕಿ.ಮೀ. ರಸ್ತೆಗಳನ್ನು ₹1,000 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಡಿಸೆಂಬರ್ 2025ರವರೆಗೆ, 1,124.91 ಕಿ.ಮೀ. ರಸ್ತೆಗಳನ್ನು ಒಳಗೊಂಡ 63 ಪ್ಯಾಕೇಜ್‌ಗಳನ್ನು (286 ಕೆಲಸಗಳು) ತೆಗೆದುಕೊಳ್ಳಲಾಗಿದೆ; ₹208.56 ಕೋಟಿ ವೆಚ್ಚದಲ್ಲಿ 168.37 ಕಿ.ಮೀ. ಪೂರ್ಣಗೊಂಡಿದೆ ಎಂದು ಸರ್ಕಾರಿ ಲೆಕ್ಕ ಹೇಳುತ್ತಿದೆ.

ಅನುಚ್ಛೇದ 371(ಜೆ) ಅಡಿ ಮಂಜೂರಾದ ಹಾಗೂ ಭರ್ತಿಯಾದ ಮತ್ತು ಮುಂಬಡ್ತಿ ನೀಡಿರುವ ಹುದ್ದೆಗಳ ಸ್ಥಿತಿಯನ್ನು ನೋಡುವುದಾದರೆ, ನೇರ ನೇಮಕಾತಿಯಡಿ ಸ್ಥಳೀಯ ವೃಂದದಲ್ಲಿ 1,16,816 ಹುದ್ದೆಗಳು ಮಂಜೂರಾಗಿದ್ದು, 79,373 ಹುದ್ದೆಗಳು ಭರ್ತಿಯಾಗಿವೆ; 37,443 ಹುದ್ದೆಗಳು ಖಾಲಿ ಇವೆ. ನೇರ ನೇಮಕಾತಿಯಡಿ ರಾಜ್ಯವ್ಯಾಪಿ ವೃಂದದಲ್ಲಿ (ಶೇ 8) 13,183 ಹುದ್ದೆಗಳು ಮಂಜೂರಾಗಿದ್ದು, 7,393 ಹುದ್ದೆಗಳು ಭರ್ತಿಯಾಗಿ 5,790 ಹುದ್ದೆಗಳು ಖಾಲಿ ಇವೆ. ಸ್ಥಳೀಯ ವೃಂದದ ಮುಂಬಡ್ತಿಯಲ್ಲಿ 40,724 ಹುದ್ದೆಗಳನ್ನು ಮೀಸಲಿಡಲಾಗಿದ್ದು, 25,806 ಹುದ್ದೆಗಳು ಭರ್ತಿಯಾಗಿವೆ; 14,658 ಹುದ್ದೆಗಳು ಖಾಲಿ ಇವೆ. ರಾಜ್ಯವ್ಯಾಪಿ ವೃಂದದ ಮುಂಬಡ್ತಿಯಲ್ಲಿ 4,513 ಹುದ್ದೆಗಳನ್ನು ಮೀಸಲಿಡಲಾಗಿದ್ದು, ಈ ಪೈಕಿ 2,658 ಹುದ್ದೆಗಳು ಭರ್ತಿಯಾಗಿವೆ ಮತ್ತು 1,829 ಹುದ್ದೆಗಳು ಖಾಲಿ ಇರುತ್ತವೆ. ಎಲ್ಲವನ್ನೂ ಲೆಕ್ಕ ಹಾಕಿದರೆ ಇನ್ನೂ 59,720 ಹುದ್ದೆಗಳು ಖಾಲಿ ಇದ್ದು ಭರ್ತಿ ಮಾಡಬೇಕಾಗಿದೆ.

ಕರ್ನಾಟಕ ಸರ್ಕಾರವೇ ನೀಡಿರುವ ಅಂಕಿಅಂಶಗಳನ್ನು ('ಕರ್ನಾಟಕ ಆರ್ಥಿಕ ಸಮೀಕ್ಷೆ 2025-26') ನೋಡಿದರೆ ವೈರುಧ್ಯಗಳು ಢಾಳಾಗಿ ಕಾಣುತ್ತವೆ. ಈ ಭಾಗ ಕಲ್ಯಾಣಕ್ಕಾಗಿ ಕಾದು ಕೂತಂತಿದೆ. ಇಲ್ಲಿನ ಸಮಸ್ಯೆಗೆ ಒಂದು ರಾಜಕೀಯ ಪಕ್ಷ, ಕೆಲವು ರಾಜಕಾರಣಿಗಳು ಅಥವಾ ಅಧಿಕಾರಿ ವರ್ಗವನ್ನು ದೂರುವಂತಿಲ್ಲ. ಒಂದು ಕಾಲಘಟ್ಟವನ್ನು ಬೆರಳುಮಾಡಿ ತೋರುವಂತಿಲ್ಲ. ಸ್ವಾತಂತ್ರ್ಯಾನಂತರ ಬಂದ ಎಲ್ಲಾ ಪಕ್ಷಗಳ ಸರ್ಕಾರಗಳೂ, ಬಹುಪಾಲು ರಾಜಕಾರಣಿಗಳು ಇಲ್ಲಿನ ಜನರನ್ನು ನಿರಂತರವಾಗಿ ವಂಚಿಸಿದ್ದಾರೆ. ಹಾಗೆ ನೋಡಿದರೆ, ದಮನಿತ ದಲಿತ ಸಮುದಾಯದಿಂದ ಬಂದ ರಾಜಕಾರಣಿಗಳೇ ಈ ಭಾಗದ ಬೆಳವಣಿಗೆಗೆ ಒಂದಷ್ಟು ಕೆಲಸ ಮಾಡಿದ್ದಾರೆ. ಬಿ.ಆರ್. ಅಂಬೇಡ್ಕರ್ 1945ರಲ್ಲಿ ಸ್ಥಾಪಿಸಿದ 'ಪೀಪಲ್ಸ್ ಎಜುಕೇಷನ್ ಸೊಸೈಟಿ'ಯ ಬೈಲಾವನ್ನೇ ಅನ್ವಯಿಸಿಕೊಂಡು 'ಕರ್ನಾಟಕ ಪೀಪಲ್ಸ್ ಎಜುಕೇಷನ್ ಸೊಸೈಟಿ' ಸ್ಥಾಪಿಸಿ, ಬಡ ದಲಿತ ವಿದ್ಯಾರ್ಥಿಗಳಿಗಾಗಿ ವಿದ್ಯಾಸಂಸ್ಥೆಗಳನ್ನು ತೆರೆದಿರುವುದನ್ನು ಮೊದಲುಗೊಂಡು, 371(ಜೆ) ರೀತಿಯ ಮಹತ್ವದ ಪ್ರಾತಿನಿಧ್ಯವನ್ನು ಒಳಗೊಂಡಂತೆ ಹಲವು ಮಹತ್ವದ ಯೋಜನೆಗಳನ್ನು ತಂದ ಮಲ್ಲಿಕಾರ್ಜುನ ಖರ್ಗೆ ಅವರದು ಎದ್ದು ಕಾಣುವ ಹೆಸರು.

ರಾಜಕಾರಣಿಗಳನ್ನು ಪ್ರಶ್ನಿಸಬೇಕಾದ ಸಾಮಾನ್ಯ ಜನರು, ಅಧಿಕಾರಿಗಳನ್ನು ಜನಪರವಾಗಿ ಪ್ರಾಮಾಣಿಕವಾಗಿ ಕೆಲಸ ಮಾಡುವಂತೆ ಎಚ್ಚರಿಸಬೇಕಾದ ಪ್ರಜ್ಞಾವಂತರು, ಅವ್ಯವಸ್ಥೆಯ ಬಗ್ಗೆ ಅರಿವು ಮೂಡಿಸಬೇಕಾಗಿದ್ದ ಪ್ರಾಮಾಣಿಕ ಜನಚಳವಳಿಯ ಸಂಘಟನೆಗಳು, ಪ್ರಾದೇಶಿಕ ಮಾಧ್ಯಮಗಳು ಒಡೆದು ಚೂರಾಗಿವೆ. ಅಥವಾ ಇವುಗಳನ್ನೆಲ್ಲಾ ಭ್ರಷ್ಟಗೊಳಿಸಲಾಗಿದೆ. ಇದು ಸರಿ ಹೋಗದಿದ್ದಲ್ಲಿ ಇನ್ನೂ ನೂರು ವರ್ಷ ಲಕ್ಷಾಂತರ ಕೋಟಿಗಳನ್ನು ಸುರಿದರೂ ಕಲ್ಯಾಣ ಕರ್ನಾಟಕ ಅಭಿವೃದ್ಧಿಯಾಗುವುದಿಲ್ಲ.

ಕಲ್ಯಾಣ ಕರ್ನಾಟಕದ ಸಮಸ್ಯೆಯ ಬೇರು ಇರುವುದು ಇಲ್ಲಿನ ಭ್ರಷ್ಟಗೊಂಡ ಶಿಕ್ಷಣದಲ್ಲಿ. ನೆಲ್ಸನ್ ಮಂಡೇಲಾ ಅವರು 'ಒಂದು ದೇಶವನ್ನು ನಾಶ ಮಾಡಲು ಮದ್ದುಗುಂಡಿನ ಅಗತ್ಯವಿಲ್ಲ; ಅಲ್ಲಿನ ಶಿಕ್ಷಣವನ್ನು ಭ್ರಷ್ಟಗೊಳಿಸಿದರೆ ಸಾಕು, ಆ ದೇಶ ತಾನಾಗೇ ನಾಶವಾಗುತ್ತದೆ' ಎನ್ನುತ್ತಾರೆ. ಅಂಬೇಡ್ಕರ್ ಅವರು 'ನಿಜವಾದ ಶಿಕ್ಷಣವು ಮಾನಸಿಕ ಮತ್ತು ಬೌದ್ಧಿಕ ಬೆಳವಣಿಗೆಗೆ ಅಸ್ತ್ರವಿದ್ದಂತೆ. ಶಿಕ್ಷಣವು ಗುಲಾಮಿತನದಿಂದ ಹೊರಬಂದು ರಾಜಕೀಯ ಸ್ವಾತಂತ್ರ್ಯ ಪಡೆಯಲು ಕೀಲಿ ಕೈ' ಎನ್ನುತ್ತಾರೆ. ಈ ಎರಡೂ ಮಾತುಗಳ ಕಣ್ನೋಟದಲ್ಲಿ ಕಲ್ಯಾಣ ಕರ್ನಾಟಕದ ಶಿಕ್ಷಣವನ್ನು ಗಮನಿಸಿದರೆ ಬಹುಪಾಲು ಶಿಕ್ಷಣ ವ್ಯವಸ್ಥೆಯನ್ನು ಭ್ರಷ್ಟಗೊಳಿಸಲಾಗಿದೆ. ಕಳಪೆ ಡಾಕ್ಟರುಗಳು, ಎಂಜಿನಿಯರುಗಳು, ಪದವೀಧರರು ಉತ್ಪಾದನೆ ಆಗುತ್ತಿದ್ದಾರೆ. ಹೀಗೆ ಕಳಪೆ ಶಿಕ್ಷಣ ಪಡೆದವರೇ ಇಲ್ಲಿ ಶಿಕ್ಷಕರಾಗಿ, ಅಧ್ಯಾಪಕರಾಗಿ ನೇಮಕವಾಗುತ್ತಾರೆ. ಅವರು ಪಡೆದ ಕಳಪೆ ಶಿಕ್ಷಣಕ್ಕಿಂತ ಕೆಳಮಟ್ಟದ ಶಿಕ್ಷಣವನ್ನು ಮಕ್ಕಳಿಗೆ ಕೊಡುತ್ತಾರೆ. ಇದೊಂದು ವ್ಯತ್ಯಾಕಾರದ ಹಿಮ್ಮುಖ ಚಲನೆ.

ವಿದ್ಯಾರ್ಥಿಗಳು ಸ್ವಂತ ಆಲೋಚಿಸುವಂತೆ, ಪ್ರಶ್ನಿಸುವಂತೆ ಕಲಿಸದಿರುವುದೇ ಸಮಸ್ಯೆಯ ಮೂಲ. ಈ ಭಾಗದಲ್ಲಿ ಶಿಕ್ಷಣವೊಂದು ಸರಿಯಾದರೆ, ಉಳಿದೆಲ್ಲವೂ ನಿಧಾನಕ್ಕೆ ಸರಿದಾರಿಗೆ ಬರುವ ಸಾಧ್ಯತೆ ಇದೆ. ಕಲ್ಯಾಣ ಕರ್ನಾಟಕವನ್ನು ಅಭಿವೃದ್ಧಿ ಮಾಡುವ ಪ್ರಾಮಾಣಿಕ ಕನಸಿದ್ದ ರಾಜಕಾರಣಿಗಳು, ಅಧಿಕಾರಿಗಳು ಇಲ್ಲಿನ ಭ್ರಷ್ಟಗೊಂಡ ಶಿಕ್ಷಣ ವ್ಯವಸ್ಥೆಯನ್ನು ಸರಿಪಡಿಸಬೇಕಿದೆ. ಕಲಬುರಗಿಯನ್ನು ಒಳಗೊಂಡಂತೆ ಕಲ್ಯಾಣ ಕರ್ನಾಟಕದಲ್ಲಿ ಬಾಬಾಸಾಹೇಬ ಅಂಬೇಡ್ಕರ್ ಅವರನ್ನು ದೇವರಂತೆ ಆರಾಧಿಸುತ್ತಾರೆ. ಆದರೆ, ಅಂಬೇಡ್ಕರ್ ಕನಸು ಕಂಡ ನೈತಿಕ ಪ್ರಜ್ಞೆಯ ಶೇಕಡ ಒಂದರಷ್ಟನ್ನು ಜನರು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿದ್ದರೆ ಕಲ್ಯಾಣ ಕರ್ನಾಟಕದ ಸ್ಥಿತಿ ಬಹುಶಃ ಹೀಗಿರುತ್ತಿರಲಿಲ್ಲ.

ವಾಚಕರ ವಾಣಿ

ಶಾಲೆಯಲ್ಲಿ ಕನ್ನಡ ಪತ್ರಿಕೆ ಓದು ಕಡ್ಡಾಯ

ಶಾಲೆಗಳಲ್ಲಿ ಪ್ರತಿದಿನ ಹತ್ತು ನಿಮಿಷ ಕನ್ನಡ ದಿನಪತ್ರಿಕೆ ಓದುವುದನ್ನು ಕಡ್ಡಾಯಗೊಳಿಸಿರುವ ಶಾಲಾ ಶಿಕ್ಷಣ ಇಲಾಖೆಯ ನಿರ್ಧಾರ ಒಳ್ಳೆಯದು. ಈಗಾಗಲೇ, ಉತ್ತರಪ್ರದೇಶ ಸರ್ಕಾರ ಇಂಥ ಆದೇಶ ಹೊರಡಿಸಿದೆ. ರಾಜ್ಯದ ಕೆಲವು ಶಾಲೆಗಳಲ್ಲೂ ವಿದ್ಯಾರ್ಥಿಗಳು ಪ್ರಾರ್ಥನೆಗೆ ನಿಂತಾಗ ಪತ್ರಿಕೆಯ ಮುಖ್ಯಾಂಶಗಳನ್ನು ವಿದ್ಯಾರ್ಥಿಯೊಬ್ಬ ಓದುವ ಮತ್ತು ಉಳಿದವರು ಅದನ್ನು ಕೇಳಿಸಿಕೊಳ್ಳುವ ಕ್ರಮ ಹಿಂದಿನಿಂದಲೂ ಜಾರಿಯಲ್ಲಿದೆ. ಶಾಲೆಯ ಗಂಟೆ ಮೊಳಗಿದ ತಕ್ಷಣ ಮಕ್ಕಳೆಲ್ಲ ಪ್ರಾರ್ಥನೆಗೆ ಸೇರುತ್ತಾರೆ. ಆನಂತರ ರಾಷ್ಟ್ರಗೀತೆ, ನಾಡಗೀತೆ, ಸಂವಿಧಾನದ ಪೀಠಿಕೆ ಓದು, ಪತ್ರಿಕೆಗಳ ಓದು, ಮುಖ್ಯೋಪಾಧ್ಯಾಯರು ಆಟ-ಪಾಠ ಕುರಿತು ಮಾತನಾಡಬೇಕಾಗುತ್ತದೆ. ಈ ಕ್ರಮ ಎಲ್ಲ ಶಾಲೆಗಳಲ್ಲೂ ಜಾರಿಗೆ ಬರಲಿ.

ಸಿ. ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಸಾಮಾಜಿಕ ಹಿಂಚಲನೆ ಮಾತು ಸರಿಯಲ್ಲ

'ಮಹಿಳೆಯರು ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಕೇಳುತ್ತಿದ್ದಾರೆ. ಇದರಿಂದ ಕುಟುಂಬಗಳು ಒಡೆಯುತ್ತಿವೆ; ಜನಹಿತಕ್ಕೆ ವಿರುದ್ಧವಾದ ಕಾಯ್ದೆ ಹಿಂಪಡೆಯಬೇಕು' ಎಂದು ತರಳಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದ್ದಾರೆ. ಗಂಡನ ಮನೆಯವರ ದೌರ್ಜನ್ಯ ಹಾಗೂ ವರದಕ್ಷಿಣೆಗಾಗಿ ಸುಟ್ಟು ಕರಕಲಾದ ಹೆಣ್ಣುಮಕ್ಕಳ ಸಂಖ್ಯೆ ಎಷ್ಟೆಂದು ಸ್ವಾಮೀಜಿಯವರಿಗೆ ಅಂದಾಜಿಸಲು ಆಗಿಲ್ಲ ಎನಿಸುತ್ತದೆ. ಹೆಣ್ಣಿನ ಕೊನೆ ಮೊದಲಿಲ್ಲದ ಸಂಕಟಗಳಿಗೆ ಕಾರಣವಾಗಿರುವ ಮದುವೆಗಳ ಬಗ್ಗೆ ಸ್ವಾಮೀಜಿಯವರು ಸುಧಾರಣೆಯ ಅಭಿಪ್ರಾಯ ನೀಡಿ ಸಮಾಜದ ಮುಂಚಲನೆಗೆ ಸಹಕರಿಸಬೇಕು. ಮಹಿಳೆಯರೂ ಮಾನವರು ಎಂದು ಭಾವಿಸುವ ಯಾರೊಬ್ಬರೂ ಕಾನೂನನ್ನು ಹಿಂಪಡೆಯುವ ಮಾತನಾಡಬಾರದು. ಸಾಮಾಜಿಕ ಹಿಂಚಲನೆ ಬಗ್ಗೆ ಮಾತನಾಡುವಾಗ ಹೆಣ್ಣು-ಗಂಡಿನ ಸ್ಥಾನಮಾನದ ಸ್ಥಿತಿಗತಿ ಬಗ್ಗೆ ಆಲೋಚಿಸಬೇಕಲ್ಲವೆ?

ಸರೋಜ ಎಂ.ಎಸ್., ಸಾಗರ

ಎಸ್‌ಎಸ್‌ಎಲ್‌ಸಿ: ಹಗ್ಗಜಗ್ಗಾಟ ಏಕೆ?

ದ್ವಿತೀಯ ಪಿಯುಸಿ ಮತ್ತು ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶದಲ್ಲಿ ಕಲಬುರಗಿ ಜಿಲ್ಲೆ ಕೊನೆಯ ಸ್ಥಾನದಲ್ಲಿದೆ. ಇದು ರಾಜಕೀಯ ನಾಯಕರ ವಾಗ್ಯುದ್ಧಕ್ಕೆ ಕಾರಣವಾಗಿದೆ. ಬಿಜೆಪಿ ನಾಯಕರು ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಟೀಕಿಸುವ ಭರದಲ್ಲಿ ಕಲಬುರಗಿ ಭಾಗದ ಮಕ್ಕಳ ಬೌದ್ಧಿಕ ಸಾಮರ್ಥ್ಯವನ್ನು ಅಲ್ಲಗಳೆಯುತ್ತಿದ್ದಾರೆ. ಬಿಜೆಪಿ ಸರ್ಕಾರವಿದ್ದಾಗಲೂ ಕಲಬುರಗಿ ಕೊನೆಯ ಸ್ಥಾನಕ್ಕೆ ಸೀಮಿತವಾಗಿತ್ತು. ಆಗ ಕಲಬುರಗಿ ಜಿಲ್ಲೆಯ ಉಸ್ತುವಾರಿ ಹೊತ್ತವರು ಗೋವಿಂದ ಕಾರಜೋಳ ಹಾಗೂ ಮುರುಗೇಶ್ ನಿರಾಣಿ. ಅವರಿದ್ದಾಗಲೂ ಏನು ಬದಲಾವಣೆ ತಾರದವರು ಈಗ ರಾಜಕೀಯಕ್ಕೆ ಇದನ್ನು ಬಳಸಿಕೊಳ್ಳುತ್ತಿರುವುದು ನಾಚಿಕೆಗೇಡಿನ ಸಂಗತಿ.

ನಾಗಾರ್ಜುನ ಹೊಸಮನಿ, ಕಲಬುರಗಿ

ಕಲ್ಯಾಣ ಕರ್ನಾಟಕ: ವಿವೇಕ, ಆತ್ಮಸಿದ್ಧಿ

'ಕಲಬುರಗಿ ವಿವೇಕಕ್ಕೆ ಎಣೆಯುಂಟೆ?' ಬರಹ (ಲೇ: ರಘುನಾಥ ಚ.ಹ., ಪ್ರ.ವಾ., ಏ. 25) ಮನಮಿಟುವಂತಿದೆ. ಬರಹದ ಕಟ್ಟಕಡೆಯಲ್ಲಿ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು ಸ್ಪರ್ಧಾತ್ಮಕ ಶಿಕ್ಷಣ ಹಾಗೂ ವ್ಯಾಪಾರ-ವಹಿವಾಟಿನ ಕ್ಷೇತ್ರಗಳಲ್ಲಿ 'ಜಾಣತನ'ವನ್ನು ತೋರಿದರೂ ಸಾಮಾಜಿಕ ಸಾಮರಸ್ಯದ ನೆಲೆಯಲ್ಲಿ ಆತ್ಮವಿನಾಶ ಮಾಡಿಕೊಂಡಿರುವುದನ್ನು ಗುರ್ತಿಸುತ್ತ, ಅದರ ಎದುರಿಗೆ, ಆ ಅದೇ ಸಾಮರಸ್ಯದ ವಿಷಯದಲ್ಲಿ ಕಲ್ಯಾಣ ಕರ್ನಾಟಕವು ತೋರುವ ವಿವೇಕ ಮತ್ತು ಆತ್ಮಸಿದ್ಧಿಯನ್ನು ಎತ್ತಿಹಿಡಿದಿರುವುದಂತೂ ಮಾರ್ಮಿಕವಾಗಿದೆ; ಹೌದಲ್ಲ... ಎಂದು ನಾವೆಲ್ಲರೂ ನಮ್ಮ ನಾವು ನೋಡಿಕೊಳ್ಳಲು ದೂಡುತ್ತದೆ. ಖರ್ಗೆ ಕುಟುಂಬದವರನ್ನೂ ಕಲಬುರಗಿಯ ಜನರನ್ನೂ ಹಂಗಿಸುತ್ತಿರುವ ಟ್ರೋಲ್‌ಗಳು, ಹಾಗೂ ಅವರ ಹಿಂದೆಯಿರುವ 'ಸಂಘ'ದ ಶಕ್ತಿಗಳು, ಬರಹದ ಅದೊಂದು ಮಾತನ್ನಾದರೂ ಮನಸ್ಸಿಗೆ ತಂದುಕೊಂಡು, ದಶಕಗಳ ಹಿಂದೆ ಕರಾವಳಿಯ ಆ ಜಿಲ್ಲೆಗಳಲ್ಲಿಯೂ ಇದ್ದೊಂದು ವಿವೇಕವು ನಾಶವಾದ್ದಕ್ಕೆ ತಾವು ಹೇಗೆ ಕಾರಣಕರ್ತರಾದೆವು ಅನ್ನುವುದು ಕಾಣಬೇಕು, ಆತ್ಮಶುದ್ಧಿ ಮಾಡಿಕೊಳ್ಳಬೇಕು.

ತಿರುತಿರುಗಿ ನೆನಪಾಗುವ ಒಂದು ಪ್ರಸಂಗ: ನಲವತ್ತು ವರ್ಷಗಳ ಹಿಂದೆ ಕಲಬುರಗಿಯ ಬಂದೇ ನವಾಜ್ ದರ್ಗಾಕ್ಕೆ ಹೋಗಿ ಅಲ್ಲಿಯ ಮೌಲಾನಾ ಅವರೊಡನೆ ನೆಲದ ಮೇಲೆ ಕೂತು ಮಾತನಾಡುತ್ತ ಹಲವು ಗಂಟೆಗಳ ಕಾಲ ಕಳೆದೆ. ವಿಶಾಲವಾದ ಆ ದರ್ಗಾದಲ್ಲಿ ಆಗ ಎಲ್ಲೆಲ್ಲೂ ಮರಗಳು, ನೆರಳು, ತಂಪು. ಬಿಸಿಲನಾಡಿನಲ್ಲಿದ್ದೇನೆ ಎಂದನ್ನಿಸಲೇ ಇಲ್ಲ. ಆ ಪರಿಸರ ಎಷ್ಟು ತಂಪಾಗಿತ್ತೋ ಮೌಲಾನಾ ಅವರ ಮಾತು ಕೂಡ ಅಷ್ಟೇ ತಂಪು, ಅಷ್ಟೇ ಆಪ್ಯಾಯಮಾನವಾಗಿತ್ತು.

ರಘುನಂದನ, ಬೆಂಗಳೂರು

ಬಗೆ ಬಗೆ ಧಗೆ

ಧಗೆ, ಒಬ್ಬೊಬ್ಬರಿಗೆ
ಒಂದೊಂದು ಬಗೆ
ಅಲ್ಲಿ, ಪಂಚ ರಾಜ್ಯಗಳ
ಫಲಿತಾಂಶದ ಧಗೆ
ಇಲ್ಲಿ, ಆಡುತ್ತಿದೆ
ಕುರ್ಚಿಯ ಹೊಗೆ
ನಮ್ಮನಿಮ್ಮೂರುಗಳಲ್ಲಿ
ಜನ-ಜಾನುವಾರುಗಳಿಗೆ
ಮಳೆಯಿಲ್ಲದೆ, ನೀರಿಲ್ಲದೆ
ಸುಡು ಬಿಸಿಲಿನ ಬೇಗೆ!

ಮ.ಗು. ಬಸವಣ್ಣ, ಮೈಸೂರು

ಪರ್ಯಾಯ ಬೆಳೆ: ತಂಬಾಕು ರೈತರ ಸಂಕಟ

ಬೆಲೆ ಕುಸಿತದಿಂದ ತಂಬಾಕು ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಮತ್ತೊಂದೆಡೆ ತಂಬಾಕು ಮಂಡಳಿಯು ಮುಂದಿನ ವರ್ಷದಿಂದ ತಂಬಾಕು ಉತ್ಪಾದನೆಯನ್ನು ಕಡಿತಗೊಳಿಸಿ ಆದೇಶಿಸಿದೆ. ಪರ್ಯಾಯ ಬೆಳೆ ಬೆಳೆಯುವಂತೆ ಎಲ್ಲರೂ ರೈತರನ್ನು ಮನವೊಲಿಸುತ್ತಿದ್ದಾರೆ. ಆದರೆ, ಯಾರೊಬ್ಬರೂ ಸೂಕ್ತ ಪರ್ಯಾಯ ಬೆಳೆಯ ಬಗ್ಗೆ ಮಾರ್ಗದರ್ಶನ ನೀಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿಲ್ಲ. ಮೈಸೂರು ಮತ್ತು ಹಾಸನ ಜಿಲ್ಲೆಗಳಲ್ಲಿ ತಂಬಾಕು ಹೆಚ್ಚಾಗಿ ಬೆಳೆಯಲಾಗುತ್ತದೆ. ತಂಬಾಕಿಗೆ ಪರ್ಯಾಯವಾಗಿ ಈ ತಾಲ್ಲೂಕುಗಳಲ್ಲಿ ರೇಷ್ಮೆ ಕೃಷಿಯನ್ನು ಉತ್ತೇಜಿಸಬಹುದಾಗಿದೆ.

ನಟರಾಜ ಎಂ. ಜವನಿಕುಪ್ಪೆ, ಪಿರಿಯಾಪಟ್ಟಣ

ಚುರುಮುರಿ

ಕಮಲವೇ ನಿತ್ಯ ಸತ್ಯ

• ಸುಮಂಗಲಾ

ಬೆಕ್ಕಣ್ಣ ಎಡಗೈಯಲ್ಲಿ ದಪ್ಪ ತೊಟ್ಟಿನ ಕಮಲದ ಹೂ ಹಿಡಿದು, ಬಲಗೈಯಲ್ಲಿ ಪೊರಕೆ ಹಿಡಿದು ಕಸ ಗುಡಿಸುತ್ತಿತ್ತು.

'ಏನಲೇ ಇದು ಹೊಸ ಅವತಾರ?' ಕುತೂಹಲದಿಂದ ಕೇಳಿದೆ.

'ಇನ್ಮೇಲೆ ಹಿಂಗೇ' ಎಂದು ಮುಗುಮ್ಮಾಗಿ ನಸುನಕ್ಕಿತು.

ಒಟ್ಟುಗೂಡಿಸಿದ ಕಸವನ್ನು ಕೇಸರಿ ಬಣ್ಣದ ಕಾಗದದಲ್ಲಿ ಹಾಕಿತು. ಕಸವನ್ನು ಮಧ್ಯೆ ಇಟ್ಟು, ಬಣ್ಣದ ಕಾಗದವನ್ನು ಹಾಗೆ ಹೀಗೆ ಮಡಚಿ, ಏಳು ಕಮಲದ ಹೂ ಮಾಡಿತು! ಚಡ್ಡಾ ಮತ್ತು ಆರು ಜನ ಎಎಪಿ ಬಿಟ್ಟವರ ಹೆಸರುಗಳನ್ನು ಈ ಹೂವುಗಳಿಗೆ ಇಟ್ಟಿತು.

'ಭಪ್ಪರೇ!' ನಾನು ದಂಗಾಗಿಬಿಟ್ಟೆ.

'ನೋಡು... ಇಷ್ಟುದಿನ ಪೊರಕೆಯ ಗುಣಗಾನ ಮಾಡ್ತಿದ್ದವರು ಈಗ ಹೆಂಗೆ ಸ್ವತಃ ಕಮಲದ ಹೂ ಆಗ್ಯಾವೆ! ಇದೇ ನಮ್ ಮೋದಿಮಾಮಾರ ಕರಾಮತ್ತು!' ಎಂದು ಹೆಮ್ಮೆಯಿಂದ ಉಲಿಯಿತು.

ಪೊರಕೆಯನ್ನು ಮೂಲೆಯಲ್ಲಿ ಜೋಪಾನವಾಗಿ ಎತ್ತಿಡುತ್ತ, 'ಮತ್ತ ನಾಳೆ ಬೇಕಾಗತೈತಿ' ಎಂದು ಕಣ್ಣು ಮಿಟುಕಿಸಿತು.

'ಬಂಗಾಳವಳಗೂ ಮೋದಿಮಾಮಾರು ಹಿಂಗೇ ಕರಾಮತ್ತು ನಡೆಸ್ಯಾರೇನು?' ಕೇಳಿದೆ.

'ಅಲ್ಲಿ ಕರಾಮತ್ತು ಸ್ವಲ್ಪ ಬ್ಯಾರೆ. ಈ ಸಲನೂ ಮಮತಾ ದೀದೀನೇ ಗೆಲ್ಲಬೌದು ಖರೇ... ಆದ್ರ ಹುಲ್ಲಲ್ಲಿ ಅರಳಿದ ಎರಡು ಹೂಗಳ ಹತ್ರಾನೆ ಕಮಲದ ಹೂ ಕೂಡ ಅರಳತೈತಿ! ನಾಕಾರು ಇ.ಡಿ. ದಾಳಿ ಆಯಿತು ಅಂದರೆ ದೀದಿಯ ಹೂಗಳು ಕಮಲದ ಹೂಗಳಾಗತಾವೆ' ಎಂದು ಖಣಿ ಹೇಳಿತು.

'ನಮ್ಮ ದೇಶದಾಗೆ ಅತ್ಯಂತ ಬಡ ಸಿಎಮ್ಮು ಅಂದರೆ ದೀದಿ... ಬಂಗಾಳದ ಹುಲಿ ಇ.ಡಿ. ದಾಳಿಗೆ ಹೆದರಂಗಿಲ್ಲಲೇ' ಎಂದೆ.

'ಇನ್ ಮ್ಯಾಗೆ ಕೇಂದ್ರದಾಗೆ ಬಹುಮತದ ಆಡಳಿತ ಪಕ್ಷ ಆರಿಸಕ್ಕೆ ಚುನಾವಣೆ ಮಾಡೂ ಅಗತ್ಯನೇ ಇಲ್ಲ. ಅದು ಹೆಂಗಿದ್ರೂ ನಮ್ ಕಮಲಕ್ಕನ ಪಕ್ಷ. ಬಹುಮತದ ವಿರೋಧ ಪಕ್ಷ ಆರಿಸಕ್ಕೆ ಚುನಾವಣೆ ಮಾಡಬಕು ಅಷ್ಟೇ' ಎಂದು ಬೆಕ್ಕಣ್ಣ ಚುನಾವಣೆಯ ಹೊಸ ವ್ಯಾಖ್ಯಾನ ಮಾಡಿತು!

ಸಂಗತ

ದೈವ ನಂಬಿಕೆ ಎಂಬ ಬಂಡವಾಳ ಹೂಡಿಕೆ

ದೇವರ ಮೇಲಿನ ನಂಬಿಕೆ ಅಂಧಶ್ರದ್ಧೆಯ ರೂಪ ಪಡೆದಾಗ ಅದನ್ನು ಕೆಲವರು ಬಂಡವಾಳ ಆಗಿಸಿಕೊಳ್ಳುತ್ತಾರೆ; ಆದರಿಂದ ವ್ಯಕ್ತಿಗೂ ಹಾನಿ, ಸಮಾಜಕ್ಕೂ ಅಪಾಯ.

• ರಾಜಕುಮಾರ ಕುಲಕರ್ಣಿ

'ಊರಿನಲ್ಲಿ ಹಳೆಯ ದೇವಸ್ಥಾನದ ಜೀರ್ಣೋದ್ಧಾರ ಭರದಿಂದ ಸಾಗಿದೆ. ಗ್ರಾಮದ ಪ್ರಮುಖರು ಮನೆ ಮನೆಗೆ ತೆರಳಿ ವಂತಿಗೆ ಸಂಗ್ರಹಿಸುತ್ತಿದ್ದಾರೆ. ಪ್ರತಿ ಮನೆಯವರು ವಂತಿಗೆ ಎಷ್ಟು ಕೊಡಬೇಕೆನ್ನುವುದನ್ನು ಪ್ರಮುಖರೇ ನಿರ್ಧರಿಸುತ್ತಿದ್ದಾರೆ. ಎರಡು ಹೊತ್ತಿನ ಊಟಕ್ಕೆ ಪರದಾಡುವವರು ಸಾಲ ಮಾಡಿ ದೇವಸ್ಥಾನದ ಜೀರ್ಣೋದ್ಧಾರಕ್ಕೆ ವಂತಿಗೆ ಸಲ್ಲಿಸಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ದೇವಸ್ಥಾನದ ಜೀರ್ಣೋದ್ಧಾರದ ಬದಲು ಊರಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸಿದ್ದರೆ ಜನರಿಗೆ ಅನುಕೂಲವಾಗುತ್ತಿತ್ತು' ಎಂದು ಸ್ನೇಹಿತರು ಹೇಳಿದರು. ಅವರ ಮಾತುಗಳಲ್ಲಿ ಸಾಮಾಜಿಕ ಕಾಳಜಿ ಧ್ವನಿಸುತ್ತಿತ್ತು.

ದೇವಸ್ಥಾನಗಳಿಗೆ ದೇಣಿಗೆ ನೀಡುವ ಜನರು ಶಾಲೆ, ಕುಡಿಯುವ ನೀರು, ಆರೋಗ್ಯ ಕೇಂದ್ರ, ಸಾರಿಗೆ ವ್ಯವಸ್ಥೆ, ಗ್ರಂಥಾಲಯ ಮತ್ತು ಶೌಚಾಲಯದಂತಹ ಮೂಲ ಸೌಕರ್ಯಗಳ ಕುರಿತು ಯೋಚಿಸುವುದು ಕಡಿಮೆ. ಜನರ ಈ ನಿರ್ಲಕ್ಷ್ಯದ ಪರಿಣಾಮ ಅದೆಷ್ಟೋ ಹಳ್ಳಿಗಳಲ್ಲಿ ಸುಸಜ್ಜಿತ ಶಾಲೆಗಳಿಲ್ಲ. ಶುದ್ಧ ಕುಡಿಯುವ ನೀರು ಲಭ್ಯವಿಲ್ಲದೆ ಅಶುದ್ಧ ನೀರು ದೇಹವನ್ನು ಸೇರುತ್ತಿದೆ. ಪ್ರಾಥಮಿಕ ಆರೋಗ್ಯ ಕೇಂದ್ರದ ಕೊರತೆಯಿಂದ ಸಕಾಲದಲ್ಲಿ ಅಗತ್ಯದ ಚಿಕಿತ್ಸೆ ದೊರೆಯದೆ ಸಾವುಗಳು ಸಂಭವಿಸುತ್ತಿವೆ. ಗ್ರಂಥಾಲಯ ಮತ್ತು ಶೌಚಾಲಯ ಇಂದಿಗೂ ಗ್ರಾಮೀಣ ಭಾಗದಲ್ಲಿ ಆದ್ಯತೆಯಾಗಿಲ್ಲ.

ಮೂಲ ಸೌಕರ್ಯಗಳ ಕೊರತೆ ಇದ್ದರೂ ಜನರಲ್ಲಿ ದೈವಶ್ರದ್ಧೆಗೆ ಬರವಿಲ್ಲ. ರಸ್ತೆಯ ಪಕ್ಕದ ಕಲ್ಲಿಗೆ ಒಂದಿಷ್ಟು ಕುಂಕುಮ ಲೇಪಿಸಿದರೂ ಭಕ್ತಿಯಿಂದ ನಿಂತು ನಮಸ್ಕರಿಸುತ್ತಾರೆ. ದೇವರ ಹೆಸರಿನಲ್ಲಿ ದೇಹಕ್ಕೆ ಬಗೆಬಗೆಯ ಹಿಂಸೆಯನ್ನು ನೀಡುವ ಭಕ್ತರ ಸಂಖ್ಯೆ ಸಮಾಜದಲ್ಲಿ ಬಹಳಷ್ಟಿದೆ. ಕೆಂಡದ ಮೇಲೆ ನಡೆಯುವುದು, ಅಂಗೈಯಲ್ಲಿ ಕರ್ಪೂರದಾರತಿ ಬೆಳಗುವುದು, ಮುಳ್ಳಿನ ಪಾದುಕೆಗಳ ಮೇಲೆ ನಿಲ್ಲುವುದು, ರಕ್ತ ಜಿನುಗುವಂತೆ ಚಾಟಿಯಿಂದ ಹೊಡೆದುಕೊಳ್ಳುವುದು, ಬೆನ್ನಿಗೆ ಕಬ್ಬಿಣದ ಕೊಂಡಿ ಸಿಕ್ಕಿಸಿಕೊಂಡು ಗಾಳಿಯಲ್ಲಿ ತೇಲಾಡುವುದು, ನಾಲಗೆಗೆ ಕಬ್ಬಿಣದ ಸಲಾಕೆ ಚುಚ್ಚಿಕೊಳ್ಳುವುದು, ಹೀಗೆ ಭಕ್ತಗಣ ದೈಹಿಕ ಹಿಂಸೆಗೆ ಒಳಗಾಗುತ್ತಾರೆ.

ಜನರಿಗಿರುವ ದೇವರ ಮೇಲಿನ ನಂಬಿಕೆ ಮತ್ತು ಭಕ್ತಿ, ರಾಜಕಾರಣಕ್ಕೆ ಉಪಯುಕ್ತ ಬಂಡವಾಳವಾಗಿದೆ. ರಾಜಕೀಯ ನಾಯಕರು ತಮ್ಮ ಮತ ಕ್ಷೇತ್ರಗಳಲ್ಲಿ ದೇವಸ್ಥಾನಗಳನ್ನು ಮತ್ತು ಮಸೀದಿಗಳನ್ನು ಸ್ಥಾಪಿಸಲು ಪೈಪೋಟಿಗಿಳಿಯುತ್ತಾರೆ. ಪರಿಣಾಮವಾಗಿ ಧಾರ್ಮಿಕ ಕೇಂದ್ರಗಳು ಮತಬ್ಯಾಂಕ್‌ಗಳಾಗಿ ರೂಪಾಂತರಗೊಂಡಿವೆ. ಮಂದಿರ, ಮಸೀದಿಗಳ ಮುಖ್ಯಸ್ಥರು ಸರ್ಕಾರದ ಮಟ್ಟದಲ್ಲಿ ತಮ್ಮ ಸಮುದಾಯಗಳ ನಾಯಕರನ್ನು ಸಚಿವರನ್ನಾಗಿಸಲು ಲಾಬಿ ನಡೆಸುವುದು ಸಾಮಾನ್ಯವಾಗಿದೆ. ಸಚಿವಾಲಯದಲ್ಲಿನ ಸಚಿವರ ಕೊಠಡಿಗಳು ವಾಸ್ತುಪ್ರಕಾರ ನವೀಕರಣಗೊಳ್ಳುತ್ತವೆ. ಅಧಿಕಾರ ಗ್ರಹಣದ ಸಂದರ್ಭ ಸಚಿವರುಗಳಿಂದ ದೇವರಪೂಜೆ ನೆರವೇರುತ್ತದೆ.

ಇತ್ತೀಚೆಗೆ ಭೇಟಿಯಾದವರೊಬ್ಬರು ಮಾತಿನ ನಡುವೆ, ತಮ್ಮ ಕುಟುಂಬದ ನಿರ್ವಹಣೆಯಲ್ಲಿ ಎರಡು ದೇವಸ್ಥಾನಗಳಿವೆ ಹಾಗೂ ಅವುಗಳ ಮೇಲ್ವಿಚಾರಣೆಯೇ ತಮ್ಮ ಉದ್ಯೋಗವಾಗಿದೆ ಎಂದರು. ದೇವಸ್ಥಾನ ಕುಟುಂಬದ ಆಸ್ತಿಯಾಗಿ, ಅದೊಂದು ಆದಾಯದ ಮೂಲವಾಗಿರುವುದಕ್ಕೆ ಜನರಲ್ಲಿರುವ ದೈವಶ್ರದ್ಧೆಯೇ ಕಾರಣವಾಗಿದೆ. ದೇವರ ಮೇಲಿರುವ ಜನರ ನಂಬಿಕೆ ಕೆಲವರಿಗೆ ಹಣಗಳಿಕೆಗಾಗಿ ಬಂಡವಾಳ ಹೂಡಿಕೆಯ ಮಾರ್ಗವಾಗಿದೆ. ಅದಕ್ಕೆಂದೇ ಇಲ್ಲಿ ನಕಲಿ ಬಾಬಾಗಳು, ಜ್ಯೋತಿಷಿಗಳು, ವಾಸ್ತು ಹೇಳುವವರು ಹುಟ್ಟಿಕೊಳ್ಳುತ್ತಿರುವರು.

ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯ ನಡುವೆಯೂ ದೈವನಂಬಿಕೆಯ ಸಿನಿಮಾಗಳು ಚಿತ್ರರಂಗದಲ್ಲಿ ನಿರ್ಮಾಣಗೊಳ್ಳುತ್ತಿವೆ. ಕನ್ನಡ ಮಾತ್ರವಲ್ಲದೆ, ಭಾರತದ ಎಲ್ಲ ಭಾಷೆಗಳಲ್ಲಿ ದೇವರು-ದೇವತೆಗಳ ಕಥೆ ಆಧಾರಿತ ಸಿನಿಮಾಗಳು ತಯಾರಾಗಿ ಜನಪ್ರಿಯಗೊಳ್ಳುತ್ತಿವೆ. ಜನರಲ್ಲಿರುವ ದೈವಶ್ರದ್ಧೆಯನ್ನು ಬಂಡವಾಳವಾಗಿಸಿಕೊಳ್ಳುವ ಸಿನಿಮಾ ಮಾಧ್ಯಮ ದೈವಭಕ್ತಿ ಸಾರುವ ಸಿನಿಮಾಗಳನ್ನು ನಿರ್ಮಿಸುತ್ತಿದೆ. ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಗ್ರಾಫಿಕ್ ಮೂಲಕ ದೇವರ ಸಾಹಸ ಸಿನಿಮಾ ಪರದೆಯ ಮೇಲೆ ಅನಾವರಣಗೊಳ್ಳುತ್ತಿದೆ. ದೈವ ಮತ್ತು ದೆವ್ವ ಎರಡನ್ನೂ ತಂತ್ರಜ್ಞಾನದ ನೆರವಿನಿಂದ ಕಲಾತ್ಮಕವಾಗಿ ತೋರಿಸುವುದರಲ್ಲಿ ನಮ್ಮ ನಿರ್ದೇಶಕರು ತಮ್ಮೊಳಗಿನ ಕ್ರಿಯಾಶೀಲತೆಯನ್ನು ವ್ಯರ್ಥಗೊಳಿಸುತ್ತಿರುವರು.

ಮಹಾತ್ಮ ಗಾಂಧಿ ಅವರ ಪ್ರಕಾರ 'ಸತ್ಯವೇ' ದೇವರು. ಅವರು ಸತ್ಯ, ಪ್ರೀತಿ ಮತ್ತು ಅಹಿಂಸೆಯಲ್ಲಿ ದೇವರನ್ನು ಸಾಕ್ಷಾತ್ಕರಿಸಿಕೊಂಡರು. ಸತ್ಯದ ಅನ್ವೇಷಣೆಯೇ ಗಾಂಧೀಜಿಗೆ ದೇವರ ಸಾಕ್ಷಾತ್ಕಾರವಾಗಿತ್ತು. ಅಂಬೇಡ್ಕರ್ ಅವರು ಮನುಷ್ಯನ ಗೌರವ ಮತ್ತು ಸಮಾನತೆ ಮುಖ್ಯವೇ ವಿನಾ ದೇವರ ಮೇಲಿನ ಅಂಧಶ್ರದ್ಧೆಯಲ್ಲ ಎಂದು ನಂಬಿದ್ದರು. ಜನರನ್ನು ಮೂಢನಂಬಿಕೆಯಿಂದ ಹೊರತರಲು ದೇವಾಲಯಗಳಿಗಿಂತ ಗ್ರಂಥಾಲಯಗಳನ್ನು ಹೆಚ್ಚು ಸ್ಥಾಪಿಸಿ ಎಂದಿದ್ದರು. ಕರುನಾಡಿನ ಶಿಲ್ಪಕಲಾ ವೈಭವವನ್ನು ವರ್ಣಿಸುತ್ತ ಕುವೆಂಪು 'ಗಂಟೆಗಳ ದನಿಯಿಲ್ಲ, ಜಾಗಟೆಗಳಿಲ್ಲಿಲ್ಲ, ಕರ್ಪೂರದಾರತಿಯ ಜ್ಯೋತಿಯಿಲ್ಲ' ಎಂದಿರುವರು. ದೇವಾಲಯದ ಪರಿಕಲ್ಪನೆಯನ್ನೇ ಅವರು ನಿರಾಕರಿಸುವ ಬಗೆಯಿದು.

ಮನುಷ್ಯನ ಅಂಧಶ್ರದ್ಧೆಯಲ್ಲಿ ದೇವರ ಮೇಲಿನ ಅತಿ ನಂಬಿಕೆಯೂ ಒಂದು. ಕಾಯವೇ ದೇಗುಲವೆಂದ ಬಸವಣ್ಣನವರು, ಕಾಯಕವೇ ಕೈಲಾಸ ಎಂದರು. ಆದರೆ ಮನುಷ್ಯ ಅಂಧಶ್ರದ್ಧೆಯಿಂದ ದೇವರ ಹೆಸರಿನಲ್ಲಿ ದೇಹವನ್ನು ಯಾತನೆಗೆ ಒಳಪಡಿಸುತ್ತಿರುವನು. ದೇವರನ್ನೇ ನೆಚ್ಚಿಕೊಂಡು ಕಾಯಕಕ್ಕೆ ವಿಮುಖನಾಗಿರುವನು. ಮನುಷ್ಯರಲ್ಲಿ ಅಂಧಶ್ರದ್ಧೆ ಅಳಿದು ವೈಚಾರಿಕಪ್ರಜ್ಞೆ ಮೂಡಬೇಕು. ದೈವಶ್ರದ್ಧೆಯು ಅಂಧಶ್ರದ್ಧೆಯಾದಾಗ ಮನುಷ್ಯನ ದೌರ್ಬಲ್ಯವನ್ನು ಬಂಡವಾಳ ಆಗಿಸಿಕೊಳ್ಳುವವರ ಸಂಖ್ಯೆ ಸಮಾಜದಲ್ಲಿ ವೃದ್ಧಿಸುವ ಅಪಾಯವಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೃಷಿ ಹೊಂಡ ಎಂಬ ಮೃತ್ಯುಕೂಪ

ಅವಘಡ ತಡೆಗೆ ನಿಯಮಗಳಿವೆ; ಪಾಲಿಸುವವರಿಲ್ಲ

ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನಲ್ಲಿ ಭಾನುವಾರ ನೀರು ಕುಡಿಯಲು ಹೋದ ಇಬ್ಬರು ಮಕ್ಕಳು ಕೃಷಿ ಹೊಂಡದಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಯಾದಗಿರಿ ಜಿಲ್ಲೆ ಸುರಪುರ ಸಮೀಪದ ನಗನೂರಿನಲ್ಲಿ ಮಾರ್ಚ್ 29ರಂದು ಈಜಲು ಹೋಗಿದ್ದ ಒಂದೇ ಕುಟುಂಬದ ನಾಲ್ವರು ಮಕ್ಕಳು ಮೃತಪಟ್ಟಿದ್ದರು. ಇದರ ಬೆನ್ನಲ್ಲೇ, ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರಿಗೆ ಪತ್ರ ಬರೆದು, ಕೃಷಿ ಹೊಂಡಕ್ಕೆ ಬೇಲಿ ಹಾಕಿಸಲು ನಿಯಮ ರೂಪಿಸಬೇಕು ಎಂದು ಹೇಳಿದ್ದರು. ಕೃಷಿ ಹೊಂಡಗಳ ಸುತ್ತ ಬೇಲಿ ನಿರ್ಮಿಸುವುದನ್ನು ಕೃಷಿ ಇಲಾಖೆ ಈಗಾಗಲೇ ಕಡ್ಡಾಯಗೊಳಿಸಿದೆ. ಇದಕ್ಕಾಗಿ ಪ್ರೋತ್ಸಾಹ ಧನವನ್ನೂ ನೀಡುತ್ತಿದೆ. ಆದರೆ, ನಿಯಮಗಳನ್ನು ರೈತರು ಪಾಲಿಸುತ್ತಿಲ್ಲ, ಇಲಾಖೆ ಅಧಿಕಾರಿಗಳು ಇದನ್ನು ಗಮನಿಸುತ್ತಿಲ್ಲ ಎಂಬ ಆರೋಪ ಇದೆ

• ಗಾಣಧಾಳು ಶ್ರೀಕಂಠ

ಘಟನೆ 1–2023ರ ಫೆಬ್ರುವರಿ 19: ದೊಡ್ಡಬಳ್ಳಾಪುರದ ಕೋಳೂರು ಗ್ರಾಮದಲ್ಲಿ ಕೃಷಿ ಹೊಂಡದ ಬದುವಿನ ಮೇಲೆ ಆಟವಾಡುತ್ತಿದ್ದ ಒಂಬತ್ತು ವರ್ಷದ ಬಾಲಕ ಕಾಲು ಜಾರಿ ಬಿದ್ದಿದ್ದ. ಆತನನ್ನು ರಕ್ಷಿಸಲು ಹೊಂಡಕ್ಕೆ ಧುಮುಕಿದ್ದ ತಾಯಿಗೂ ನೀರಿನಿಂದ ಮೇಲೆ ಬರಲಾಗಲಿಲ್ಲ. ತಾಯಿ–ಮಗ ಇಬ್ಬರೂ ಕೃಷಿ ಹೊಂಡದಲ್ಲಿ ಉಸಿರು ಚೆಲ್ಲಿದ್ದರು.

ಘಟನೆ 2–2024ರ ಮಾರ್ಚ್ 3: ಹೊಸಕೋಟೆ ತಾಲ್ಲೂಕು ಕಬೀರನಹಳ್ಳಿಯಲ್ಲಿ ಕೃಷಿ ಹೊಂಡದಲ್ಲಿ ಕೈ ತೊಳೆಯಲು ಹೋಗಿ ಆಕಸ್ಮಿಕವಾಗಿ ಹೊಂಡಕ್ಕೆ ಜಾರಿಬಿದ್ದ ಮಗಳನ್ನು ರಕ್ಷಿಸಲು ಹೋದ ತಂದೆ ಮತ್ತು ತಾಯಿ ಕೂಡ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದರು.

ಇಂತಹ ಘಟನೆಗಳು ರಾಜ್ಯದ ವಿವಿಧ ಕಡೆಗಳಲ್ಲಿ ನಡೆಯುತ್ತಲೇ ಇವೆ. ಕೃಷಿ ಹೊಂಡಕ್ಕೆ ಈಜಲು ಹೋಗಿ, ಕಾಲು ಜಾರಿ ಬಿದ್ದು ಪ್ರಾಣ ಕಳೆದುಕೊಳ್ಳುತ್ತಿರುವ ಪ್ರಕರಣಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಭಾನುವಾರ ಮಧುಗಿರಿಯಲ್ಲಿ ಇಬ್ಬರು ಮಕ್ಕಳು, ಕಳೆದ ತಿಂಗಳು ಯಾದಗಿರಿ ಜಿಲ್ಲೆಯಲ್ಲಿ ನಾಲ್ವರು ಮಕ್ಕಳು ಪ್ರಾಣ ಕಳೆದುಕೊಂಡಿದ್ದು, ಪ್ರಕರಣಗಳ ಪಟ್ಟಿಗೆ ಹೊಸ ಸೇರ್ಪಡೆ. ಅಂದಾಜಿನ ಪ್ರಕಾರ, ರಾಜ್ಯದಲ್ಲಿ ಪ್ರತಿ ವರ್ಷ ಇಂತಹ 50ಕ್ಕೂ ಹೆಚ್ಚು ಪ್ರಕರಣಗಳು ವರದಿಯಾಗುತ್ತಿವೆ. ಉಣ್ಣುವ ಅನ್ನ ಬೆಳೆಯುವುದಕ್ಕಾಗಿ ಮಳೆ ನೀರು ಸಂಗ್ರಹಿಸುವ ಈ ಜಲ ಪಾತ್ರೆಗಳು ಮೃತ್ಯುಕೂಪವಾಗುತ್ತಿವೆ. ಇಂಥ ಅವಘಡಗಳಲ್ಲಿ ಅಸುನೀಗಿದವರಲ್ಲಿ ಹೆಚ್ಚಿನವರು ಮಕ್ಕಳು ಮತ್ತು ಮಹಿಳೆಯರು. ಕೆಲವರು ಹಿರಿಯ ನಾಗರಿಕರು. ಈ ಹೊಂಡಗಳಿಗೆ ಬಿದ್ದು ಸಾಯುತ್ತಿರುವ ಜಾನುವಾರುಗಳ ಸಂಖ್ಯೆಯೂ ದೊಡ್ಡದಿದೆ.

> ಹೊಂಡಗಳ ಸುತ್ತ ಬೇಲಿ ನಿರ್ಮಾಣ ಕಡ್ಡಾಯ. ಸಹಾಯಧನ ಸಿಗಬೇಕೆಂದರೆ, ಬೇಲಿ ನಿರ್ಮಾಣ ಮಾಡಿರುವುದನ್ನು ತೋರಿಸಲೇಬೇಕು. ಆದರೆ, ಸರ್ಕಾರದ ನೆರವು ಕಡಿಮೆ ಇರುವುದರಿಂದ ರೈತರು ತಮ್ಮ ಬಳಿ ಇರುವ ಹಣದಲ್ಲಿ ಹೆಸರಿಗಷ್ಟೇ ಬೇಲಿ ಕಟ್ಟುತ್ತಾರೆ. ಆದರೆ, ಅಲ್ಲಿ ಸುರಕ್ಷತೆ ಖಾತ್ರಿ ಇರುವುದಿಲ್ಲ. ಪರಿಶೀಲನೆಗೆ ಬರುವ ಅಧಿಕಾರಿಗಳು ಕೂಡ ಇದರ ಬಗ್ಗೆ ಚಕಾರ ಎತ್ತುವುದಿಲ್ಲ ಎಂಬ ಆರೋಪ ಇದೆ.

ಪಾಲಿಥೀನ್ ಶೀಟ್ ಕಾರಣ?

ಕೃಷಿ ಹೊಂಡದಲ್ಲಿ ಈಜಲು ಹೋಗಿ ಮೃತಪಡುವುದು ಒಂದೆಡೆಯಾದರೆ, ಜನರು ಆಕಸ್ಮಿಕವಾಗಿ ಕಾಲು ಜಾರಿ ಹೊಂಡಕ್ಕೆ ಬಿದ್ದು ಪ್ರಾಣ ಕಳೆದುಕೊಳ್ಳುತ್ತಿರುವ ಪ್ರಕರಣಗಳು ಹೆಚ್ಚು ವರದಿಯಾಗುತ್ತಿವೆ. ಕೃಷಿ ಹೊಂಡಕ್ಕೆ ಪಾಲಿಥೀನ್ ಶೀಟ್ ಹೊದಿಸುವ ಪ್ರಕ್ರಿಯೆ ಆರಂಭವಾದಾಗಿನಿಂದ ಇಂಥ ಅವಘಡಗಳ ಸಂಖ್ಯೆ ಹೆಚ್ಚಾಗಿದೆ ಎಂದು ಕೃಷಿ ಇಲಾಖೆಯ ನಿವೃತ್ತ ಅಧಿಕಾರಿಗಳು ಅಂದಾಜಿಸುತ್ತಾರೆ. ಪಾಲಿಥೀನ್ ಶೀಟ್‌ಗಳು ಹೊದಿಸಿರುವ ಹೊಂಡಗಳಲ್ಲಿ, ಇಳಿದು- ಹತ್ತಿ ಬರಲು ಸಮರ್ಪಕವಾದ ವ್ಯವಸ್ಥೆ ಅಳವಡಿಸದಿರುವುದೂ ಇದಕ್ಕೆ ಕಾರಣ. ಈಜು ಬಾರದವರು ಹೊಂಡಕ್ಕೆ ಬಿದ್ದಾಗ ರಕ್ಷಣೆಗೆ ಏನೂ ಸಿಗದೇ ಮೇಲೆ ಬರಲಾಗದೇ ನೀರಲ್ಲಿ ಮುಳುಗಿ ಸಾಯುತ್ತಿದ್ದಾರೆ ಎನ್ನುವುದು ಅವರು ಗಮನಿಸಿರುವ ಅಂಶ.

1990-2000ಕ್ಕೂ ಮುನ್ನ ಕೃಷಿಹೊಂಡಗಳೆಂದರೆ ನೀರು ಇಂಗಿಸುವ ಮತ್ತು ನೀರು ಸಂಗ್ರಹಿಸಿ ಬಳಸುವ ಜಲಸಂರಕ್ಷಣಾ ರಚನೆಗಳಾಗಿದ್ದವು. ಹೊಂಡದ ಸುತ್ತ ಮೆಟ್ಟಿಲುಗಳಿರುತ್ತಿದ್ದವು. ಹೊಂಡದ ಮೇಲ್ಭಾಗದ ಸುತ್ತಲಿನ ಬದು ಮೇಲೆ ಮೇಲೆ ಹಣ್ಣು, ಹೂವು, ತರಕಾರಿ ಗಿಡಗಳನ್ನೂ ರೈತರು ಬೆಳೆಸುತ್ತಿದ್ದರು. ಇದು, ಹೊಂಡಕ್ಕೆ ರಕ್ಷಣೆಯಾಗಿಯೂ, ರೈತರಿಗೆ ಉಪ ಆದಾಯ ಅಥವಾ ಮನೆಗೆ ಬೇಕಾಗುವ ವಸ್ತುಗಳನ್ನು ಪೂರೈಸುತ್ತಿದ್ದವು ಎಂದು ಹಿರಿಯ ಕೃಷಿ ಅಧಿಕಾರಿಗಳು ನೆನಪಿಸಿಕೊಳ್ಳುತ್ತಾರೆ.

ಹೊಂಡಕ್ಕೆ ನೀರಿನ ಒಳ ಹರಿವು ಮತ್ತು ಹೊರ ಹರಿವಿನ ಜಾಗಕ್ಕೆ –ಕಲ್ಲುಗಳ ಹೊದಿಕೆಯಿತ್ತು. ಮೆಟ್ಟಿಲುಗಳಿಗೂ ಗಟ್ಟಿಯಾದ ಮಣ್ಣಿನ ಕಟ್ಟೆ ಇರುತ್ತಿದ್ದವು. ಹೀಗಾಗಿ, ಹೊಂಡಕ್ಕೆ ಇಳಿದು – ಹತ್ತಲು ಕಟ್ಟೆ ನೆರವಾಗುತ್ತಿತ್ತು.

ರಾಜ್ಯದಲ್ಲಿ 2003ರಿಂದ ಸತತ ನಾಲ್ಕೈದು ವರ್ಷ ಬರಗಾಲ ಕಂಡು ಬಂತು. ಆಗ ಹೊಂಡಗಳಿಗೆ ಪಾಲಿಥೀನ್ ಶೀಟ್ ಹೊದಿಸಿ ಆ ವರ್ಷದ ಮಳೆನೀರನ್ನು ಸಂಗ್ರಹಿಸಿ ಕೃಷಿ ಚಟುವಟಿಕೆಗೆ ಬಳಸುವ ಪರಿಕಲ್ಪನೆ ಆರಂಭವಾಯಿತು. ಮೊದಲು ಕೆಲವು ರೈತರು ಖಾಸಗಿಯಾಗಿ ನಿರ್ಮಿಸಿಕೊಂಡ ಕೃಷಿ ಹೊಂಡಕ್ಕೆ ಪಾಲಿಥೀನ್ ಶೀಟ್ ಹೊದಿಸುವುದಕ್ಕೆ ಆರಂಭಿಸಿದರು. ರಾಷ್ಟ್ರೀಯ ತೋಟಗಾರಿಕಾ ಮಿಷನ್ ಯೋಜನೆ ಅಡಿ ಇದೇ ಪಾಲಿಥೀನ್ ಶೀಟ್ ಹೊದಿಸಿ ಕಿರು ಕೆರೆಗಳನ್ನೇ ನಿರ್ಮಿಸಿದರು. 2013ರಲ್ಲಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಅವಧಿಯಲ್ಲಿ ಕೃಷಿ ಭಾಗ್ಯ ಯೋಜನೆ ಅಡಿ, ಅಧಿಕೃತವಾಗಿ ಕೃಷಿ ಹೊಂಡಗಳಿಗೆ ಪಾಲಿಥೀನ್ ಶೀಟ್ ಹೊದಿಸಿ ನೀರು ಸಂಗ್ರಹಿಸುವುದಕ್ಕೆ ಚಾಲನೆ ಸಿಕ್ಕಿತು.

ಪ್ರಸ್ತುತ ಕೃಷಿ ಇಲಾಖೆ, ಕೃಷಿ ಭಾಗ್ಯ ಯೋಜನೆಯಡಿ ಕನಿಷ್ಠ 10 ಮೀ. (ಅಗಲ) X 10 ಮೀ. (ಉದ್ದ) X 3 ಮೀ. (ಆಳ) ಅಳತೆಯಿಂದ, ಗರಿಷ್ಠ 21 ಮೀ. x 21 ಮೀ. x 3 ಮೀ. ವರೆಗಿನ ವಿವಿಧ ಅಳತೆಗಳ ಕೃಷಿ ಹೊಂಡ ನಿರ್ಮಾಣ ಹಾಗೂ ಪಾಲಿಥೀನ್ ಶೀಟ್ ಖರೀದಿಗೆ ಸಹಾಯಧನ ನೀಡುತ್ತಿದೆ. ಸಾಮಾನ್ಯವರ್ಗದ ರೈತರಿಗೆ ಶೇ 80ರಷ್ಟು, ಪರಿಶಿಷ್ಟ ವರ್ಗದ ರೈತರಿಗೆ ಶೇ 90ಷ್ಟು ಸಹಾಯಧನ ನಿಗದಿಪಡಿಸಿದೆ. ಅಷ್ಟೇ ಅಲ್ಲ, ಕೃಷಿ ಹೊಂಡದ ಸುತ್ತ ರಕ್ಷಣೆಗಾಗಿ ಬೇಲಿ ನಿರ್ಮಾಣವನ್ನು ಕಡ್ಡಾಯಗೊಳಿಸಿ, ಇದಕ್ಕಾಗಿ ಸಾಮಾನ್ಯ ವರ್ಗಕ್ಕೆ ಶೇ 40 ಮತ್ತು ಪರಿಶಿಷ್ಟ ವರ್ಗಕ್ಕೆ ಶೇ 50ರಷ್ಟು ಸಹಾಯಧನ ನೀಡುತ್ತಿದೆ. ಕೃಷಿ ಹೊಂಡಗಳ ನಾಲ್ಕು ಮೂಲೆಗಳಿಂದಲೂ ಹೊಂಡದೊಳಕ್ಕೆ ಹಗ್ಗಗಳನ್ನು ಇಳಿಸಬೇಕು. ವಾಹನಗಳ ಟ್ಯೂಬ್‌ಗೆ ಗಾಳಿ ತುಂಬಿ, ಅದನ್ನು ಹೊಂಡದಲ್ಲಿ ಇಳಿಸಬೇಕು ಎಂಬ ನಿಯಮಗಳನ್ನೂ ಇಲಾಖೆ ರೂಪಿಸಿದೆ.

ಕಡತದಲ್ಲಷ್ಟೇ ನಿಯಮಗಳು

ಕೃಷಿ ಇಲಾಖೆಯ ಮಾರ್ಗಸೂಚಿಗಳನ್ನು ರೈತರು ಪಾಲನೆ ಮಾಡುತ್ತಿಲ್ಲ. ನಿಯಮಗಳ ಪಾಲನೆಯಾಗಿದೆಯೋ ಇಲ್ಲವೋ ಎಂದು ಅಧಿಕಾರಿಗಳು ಪರಿಶೀಲಿಸುವುದಿಲ್ಲ. ಹೀಗಾಗಿ ಅವಘಡಗಳು ಸಂಭವಿಸುತ್ತಿವೆ ಎಂದು ಪ್ರಗತಿಪರ ರೈತರು ಹೇಳುತ್ತಾರೆ.

‘ಅನುದಾನವಿಲ್ಲ, ಸರ್ಕಾರ ಅರ್ಜಿ ಕರೆಯಲು ಆದೇಶ ನೀಡಿಲ್ಲ ಎಂಬ ಕಾರಣ ನೀಡಿ, ಕೃಷಿ ಇಲಾಖೆ ಅಧಿಕಾರಿಗಳು ಸಕಾಲದಲ್ಲಿ ಕೃಷಿ ಹೊಂಡ ನಿರ್ಮಿಸಿಕೊಳ್ಳಲು ರೈತರಿಗೆ ಅನುಮತಿ ನೀಡುವುದಿಲ್ಲ. ಆರ್ಥಿಕ ವರ್ಷ ಮುಗಿಯುವ ಹೊತ್ತಲ್ಲಿ ಇಲಾಖೆ ತನ್ನ ಗುರಿ ಸಾಧನೆಗಾಗಿ ಕೃಷಿ ಹೊಂಡ ನಿರ್ಮಿಸಿಕೊಳ್ಳಲು ರೈತರ ಮೇಲೆ ಒತ್ತಡ ಹಾಕುತ್ತದೆ. ಗಡಿಬಿಡಿಯಲ್ಲಿ ಹೊಂಡ ನಿರ್ಮಿಸುವ ರೈತರು, ಹೊಂಡದ ಸುತ್ತ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಳ್ಳುವುದನ್ನು ನಿರ್ಲಕ್ಷಿಸುತ್ತಾರೆ. ಇಲಾಖೆಯವರಿಗೆ ಗುರಿ ಮುಟ್ಟುವುದು ಮುಖ್ಯವೇ ಹೊರತು ರೈತರಿಗೆ ಅನುಕೂಲ ಕಲ್ಪಿಸುವುದಲ್ಲ’ ಎಂಬುದು ಶಿವಮೊಗ್ಗ ಜಿಲ್ಲೆ ಶಿಕಾರಿಪುರ ಭಾಗದ ರೈತರೊಬ್ಬರ ಅಭಿಪ್ರಾಯ.

‘ಕೃಷಿ ಹೊಂಡದ ಸುತ್ತ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲು ಇಲಾಖೆ ಕೊಡುವ ಶೇ 40ರಷ್ಟು ಸಹಾಯಧನ ಯಾವುದಕ್ಕೂ ಸಾಲುವುದಿಲ್ಲ. ಇದು ಕೂಡ ರೈತರು ಬೇಲಿಯಂತಹ ಸುರಕ್ಷತಾ ಕ್ರಮ ಕೈಗೊಳ್ಳಲು ನಿರ್ಲಕ್ಷ್ಯಿಸಲು ಕಾರಣ. 21 ಮೀ. X 21 ಮೀ. X 5 ಮೀ. ಅಳತೆಯ ಕೃಷಿ ಹೊಂಡದ ಸುತ್ತ ಬೇಲಿ ನಿರ್ಮಾಣ ಮಾಡಲು ಅಂದಾಜು ₹50 ಸಾವಿರ ಖರ್ಚಾದರೆ, ಬೇಲಿ ನಿರ್ಮಾಣಕ್ಕೆ ಇಲಾಖೆ ನಿಗದಿಪಡಿಸುವ ವೆಚ್ಚವೇ ₹15 ಸಾವಿರದಷ್ಟಿದೆ ಇರುತ್ತದೆ. ಅದರಲ್ಲಿ ಶೇ 40ರಷ್ಟು ಸಹಾಯಧನ ಸಿಗುತ್ತದೆ. ಹೊಂಡ ತೆಗೆಸಿಯೇ ಹೈರಾಣವಾಗುವ ರೈತರು, ಬೇಲಿ ಹಾಕಿಸಲು ಹಣಹೊಂದಿಸಲಾಗದೇ ಮುಂದೆ ಹಾಕುತ್ತಾರೆ. ಪ್ರಸ್ತುತ ಮಾರುಕಟ್ಟೆ ಬೆಲೆ ಗಮನಿಸಿಕೊಂಡು ಈಗಿರುವ ಸಹಾಯಧನವನ್ನು ಸರ್ಕಾರ ಶೇ 90ರವರೆಗೆ ಹೆಚ್ಚಿಸಬೇಕು’ ಎಂದು ಆಗ್ರಹಿಸುತ್ತಾರೆ ಚಿಂತಾಮಣಿಯ ಪ್ರಗತಿಪರ ರೈತ ಸೀಕಲ್ ರಮಣರೆಡ್ಡಿ.

‘ಕೃಷಿ ಹೊಂಡ ನಿರ್ಮಿಸುವ ಪ್ಯಾಕೇಜ್ ವ್ಯಾಪ್ತಿಗೆ ಹೊಂಡದ ಸುತ್ತ ಬೇಲಿ ಹಾಕುವುದನ್ನು ಸೇರಿಸಿದೆ. ಹೊಂಡ ನಿರ್ಮಾಣದ ಜೊತೆಗೆ ಇಲಾಖೆ ಸೂಚಿಸಿರುವ ನಿಯಮಗಳನ್ನೂ ಅನುಸರಿಸಿದವರಿಗೆ ಮಾತ್ರ ಸಹಾಯಧನ ಬಿಡುಗಡೆ ಮಾಡುವುದಾಗಿ ನಿಯಮದಲ್ಲಿ ಸೇರಿಸಿದ್ದೇವೆ. ಈ ವಿಷಯನ್ನು ಪದೇ ಪದೇ ಸುತ್ತೋಲೆಗಳ ಮೂಲಕ ರೈತರಿಗೆ ತಲುಪಿಸಲಾಗುತ್ತಿದೆ. ಈಗಲೂ ಪ್ರತಿ ವಾರ ಜಿಲ್ಲೆ, ತಾಲ್ಲೂಕು ಕೃಷಿ ಅಧಿಕಾರಿಗಳೊಂದಿಗಿನ ಸಭೆಯಲ್ಲಿ ಈ ವಿಷಯವನ್ನು ಚರ್ಚಿಸಿ ಸೂಚನೆ ನೀಡುತ್ತಿದ್ದೇವೆ. ಚಾಮರಾಜನಗರ ಸೇರಿ ಒಂದೆರಡು ಜಿಲ್ಲೆಗಳು ಬೇಲಿ ನಿರ್ಮಾಣಕ್ಕೆ ಸಿಮೆಂಟ್ ಕಂಬದ ಬದಲಿಗೆ ಕಲ್ಲು ಕಂಬಗಳನ್ನು ಬಳಸಲು ಅನುಮತಿ ಕೇಳಿದ್ದರು. ಅದಕ್ಕೂ ಒಪ್ಪಿಗೆ ಸೂಚಿಸಲಾಗಿದೆ’ ಎಂದು ಹೇಳುತ್ತಾರೆ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು.

ಕೃಷಿ ಹೊಂಡ - ಸಹಾಯಧನ

ಕೃಷಿ ಇಲಾಖೆ ರೈತರಿಗೆ ಕೃಷಿ ಭಾಗ್ಯ ಯೋಜನೆಯಡಿ ಕೃಷಿ ಹೊಂಡ ನಿರ್ಮಾಣಕ್ಕೆ ಸಹಾಯಧನ ನೀಡುತ್ತಿದೆ. ಕೃಷಿ ಹೊಂಡ ನಿರ್ಮಾಣ, ನೀರು ಇಂಗದಂತೆ ತಡೆಯಲು ಪಾಲಿಥೀನ್ ಹೊದಿಕೆ/ಪರ್ಯಾಯ ಮಾದರಿಗಳು, ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ (GI Wire Fencing) ಘಟಕಗಳಿಗೆ ಕೃಷಿ ಭಾಗ್ಯ ಯೋಜನೆಯಡಿ ವೆಚ್ಚ ಭರಿಸುತ್ತಿದೆ. ಸಹಾಯಧನದ ವಿವರ ಇಂತಿದೆ.

ಕೃಷಿ ಹೊಂಡ ನಿರ್ಮಾಣ ಕ್ಕೆ
- 80% — ಸಾಮಾನ್ಯ ವರ್ಗದ ರೈತರಿಗೆ
- 90% — ಪರಿಶಿಷ್ಟ ಜಾತಿ, ವರ್ಗದ ರೈತರಿಗೆ

ಪಾಲಿಥೀನ್ ಹೊದಿಕೆಗೆ
- ಸಾಮಾನ್ಯ ವರ್ಗಕ್ಕೆ ಗರಿಷ್ಠ ₹70 ಸಾವಿರ (ಶೇ 80)
- ಪರಿಶಿಷ್ಟ ಜಾತಿ, ವರ್ಗಕ್ಕೆ ಗರಿಷ್ಠ ₹80 ಸಾವಿರ (ಶೇ 90)

ಹೊಂಡದ ಸುತ್ತ ತಂತಿ ಬೇಲಿ ನಿರ್ಮಾಣಕ್ಕೆ
- 40% — ಸಾಮಾನ್ಯ ವರ್ಗಕ್ಕೆ
- 50% — ಪರಿಶಿಷ್ಟರಿಗೆ

> **ಕೃಷಿ ಹೊಂಡದ ಸುತ್ತ ಕಡ್ಡಾಯವಾಗಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವ ಜೊತೆಗೆ, ಹೊಂಡದ ಸಮೀಪದಲ್ಲೇ ಸಣ್ಣದೊಂದು ತೊಟ್ಟಿ ನಿರ್ಮಾಣ ಮಾಡಬೇಕು. ಹೊಂಡಕ್ಕೆ ಹರಿಸುವ ನೀರು, ಮೊದಲು ಈ ತೊಟ್ಟಿಗೆ ಹೋಗಿ, ಅಲ್ಲಿಂದ ಹೊಂಡ ತಲುಪಬೇಕು. ಸಣ್ಣ ತೊಟ್ಟಿಯಲ್ಲಿ ಸದಾ ನೀರಿರಬೇಕು. ಹೀಗೆ ಮಾಡುವುದರಿಂದ ನೀರಿಗಾಗಿ ಹೊಂಡದ ಬಳಿ ಹೋಗುವ ಬದಲು ತೊಟ್ಟಿಯಿಂದಲೇ ತುಂಬಿಕೊಳ್ಳುತ್ತಾರೆ. ಇದರಿಂದ ಜನ–ಜಾನುವಾರುಗಳ ಸಾವುಗಳನ್ನು ತಪ್ಪಿಸಬಹುದು**
>
> **ಸೀಕಲ್ ರಮಣ ರೆಡ್ಡಿ,** ಚಿಂತಾಮಣಿ, ಚಿಕ್ಕಬಳ್ಳಾಪುರ ಜಿಲ್ಲೆ

> **ಕೃಷಿ ಹೊಂಡದ ಸುತ್ತ ಬೇಲಿ ಹಾಕಬೇಕೆಂದು ಕೃಷಿ ಇಲಾಖೆಯ ಆದೇಶದಲ್ಲಿದೆ. ಹೊಂಡದ ಸುತ್ತ ಹಗ್ಗ ಇಳಿಬಿಡುವುದು, ಗಾಳಿ ತುಂಬಿರುವ ಟ್ಯೂಬ್‌ಗಳನ್ನು ಹೊಂಡದಲ್ಲಿ ಹಾಕಬೇಕು ಎಂಬ ನಿಯಮಗಳನ್ನು ಎಲ್ಲರೂ ಪಾಲನೆ ಮಾಡಬೇಕು. ಹೊಂಡದ ಆಳ ಕನಿಷ್ಠ 10 ಅಡಿ ಇರುತ್ತದೆ. ಹೊಂಡಕ್ಕೆ ಹೊದಿಸಿರುವ ಪ್ಲಾಸ್ಟಿಕ್ ಶೀಟ್ ಜಾರುತ್ತದೆ. ನಿಯಮಾನುಸಾರ ರಕ್ಷಣಾ ಕ್ರಮಗಳನ್ನು ಅನುಸರಿಸುವುದರಿಂದ ಜೀವಗಳನ್ನು ಉಳಿಸಬಹುದು. ಬೇಲಿಯ ಜೊತೆಗೆ, ಹೂವು, ಹಣ್ಣು, ತರಕಾರಿ ಗಿಡಗಳನ್ನು ನೆಡಬಹುದು. ಮೇವಿನ ಗಿಡಗಳನ್ನೂ ಬೆಳೆಸಬಹುದು. ಇದರಿಂದ ಹೊಂಡಕ್ಕೆ ರಕ್ಷಣೆಯೂ ಆಗುತ್ತದೆ**
>
> **ಆರ್.ಜಿ.ಗೊಲ್ಲರ್,** ಕೃಷಿ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ

ಕೃಷಿ ಇಲಾಖೆ ಹೊರಡಿಸಿರುವ ಮಾರ್ಗಸೂಚಿಯಲ್ಲಿ ಏನಿದೆ?

- ಕೃಷಿ ಭಾಗ್ಯ ಯೋಜನೆಯಡಿ ನಿರ್ಮಿಸುವ ಕೃಷಿ ಹೊಂಡದ ಸುತ್ತ ಕಲ್ಲು/ಸಿಮೆಂಟ್ ಕಂಬಗಳನ್ನು ನೆಟ್ಟು, ಜಿ.ಐ ತಂತಿ ಸುತ್ತಿ ಬೇಲಿ ನಿರ್ಮಿಸಬೇಕು
- ಹೊಂಡಕ್ಕೆ ಪಾಲಿಥೀನ್ ಹೊದಿಸುವುದರಿಂದ ಜಾರುವ ಸಾಧ್ಯತೆ ಹೆಚ್ಚಿರುತ್ತದೆ. ಹಾಗಾಗಿ ಸುರಕ್ಷತಾ ಕ್ರಮವಾಗಿ ಕೃಷಿ ಹೊಂಡಗಳಲ್ಲಿ ಹಗ್ಗಗಳನ್ನು ಇಳಿಬಿಟ್ಟು ಗಾಳಿ ತುಂಬಿದ ಟ್ಯೂಬ್‌ಗಳನ್ನು ತೇಲಿಬಿಡಬೇಕು
- ಹೊಂಡ ನಿರ್ಮಾಣದ ನಂತರ ಸೂಚನಾ ಫಲಕ ಅಳವಡಿಸುವುದು ಕಡ್ಡಾಯ. ಆ ಫಲಕದಲ್ಲಿ ‘ಡೇಂಜರ್/ಅಪಾಯ’ ಎಂದು ಬರೆಸಬೇಕು. ಕೃಷಿ ಹೊಂಡಕ್ಕೆ ಭೂಮಾಲೀಕರನ್ನು ಹೊರತುಪಡಿಸಿ, ಮಕ್ಕಳು/ ವೃದ್ಧರು ಹಾಗೂ ಇತರರಿಗೆ ಪ್ರವೇಶವಿರುವುದಿಲ್ಲ ಎಂಬುದನ್ನು ಫಲಕದಲ್ಲಿ ಉಲ್ಲೇಖಿಸಬೇಕು
- ಕೃಷಿ ಹೊಂಡದಲ್ಲಿ ಈಜಾಡುವುದು/ ಜಾನುವಾರುಗಳಿಗೆ ನೀರು ಕುಡಿಸುವುದು/ ಬಟ್ಟೆ-ಪಾತ್ರೆ ತೊಳೆಯುವುದು ಹಾಗೂ ಇತರೆ ಕೃಷಿಯೇತರ ಚಟುವಟಿಕೆಗಳನ್ನು ನಿಷೇಧಿಸಲಾಗಿದೆ ಎಂದು ಫಲಕದಲ್ಲಿ ಉಲ್ಲೇಖಿಸಿರಬೇಕು
- ರೈತರು ಕೃಷಿ ಹೊಂಡದ ಸುತ್ತ ತಂತಿ ಬೇಲಿ ಅಳವಡಿಸಿಕೊಂಡ ಕೂಡಲೇ, ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ/ಕೃಷಿ ಅಧಿಕಾರಿಗಳು ರೈತರ ಕ್ಷೇತ್ರಕ್ಕೆ ಭೇಟಿ ನೀಡಿ, ಅನುಷ್ಠಾನವಾಗಿರುವ ಬಗ್ಗೆ, ಪರಿಶೀಲಿಸಿ, ಪೂರ್ಣಗೊಳಿಸಿರುವ ಬಗ್ಗೆ ಖಚಿತಪಡಿಸಿ ಅಳತೆ ಪುಸ್ತಕದಲ್ಲಿ ನಮೂದಿಸಿ ಸ್ಥಳ ಪರಿಶೀಲನೆಯನ್ನು K-KISAN Mobile App Post Inspection ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಬೇಕು
- ಕೃಷಿ ಹೊಂಡದ ಸುತ್ತ ಸುರಕ್ಷತಾ ಕ್ರಮಗಳನ್ನು ಕೈಗೊಂಡಿರುವ ಕುರಿತು ರೈತರಿಂದ ಸ್ವಯಂ ಘೋಷಣಾ ಪತ್ರವನ್ನು ಬರೆಸಿಕೊಳ್ಳಬೇಕು

ಭದ್ರ ಬೇಲಿ ನಿರ್ಮಿಸಿರುವ ಕೃಷಿ ಹೊಂಡಕ್ಕೊಂದು ಉದಾಹರಣೆ ಈ ಹೊಂಡ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಮತಗಟ್ಟೆಯೊಂದರ ಬಳಿ ಕುಳಿತುಕೊಂಡಿರುವ ಟಿಎಂಸಿ ಕಾರ್ಯಕರ್ತರಿಗೆ ಪೊಲೀಸರು ಹೊಡೆಯುತ್ತಿರುವ ವಿಡಿಯೊ ತುಣುಕನ್ನು ‘ಎಕ್ಸ್’ ಬಳಕೆದಾರರೊಬ್ಬರು ಪೋಸ್ಟ್ ಮಾಡಿದ್ದಾರೆ. ಇದೇ 23ರಂದು ಪಶ್ಚಿಮ ಬಂಗಾಳದ ವಿಧಾನಸಭೆಗೆ ನಡೆದ ಮೊದಲ ಹಂತದ ಮತದಾನದ ದಿನ ಟಿಎಂಸಿ ಕಾರ್ಯಕರ್ತರು ಮತಗಟ್ಟೆಯ ಬಳಿ ಇದ್ದ ರಸ್ತೆಯಲ್ಲಿ ಪ್ರಚಾರ ನಡೆಸುತ್ತಿದ್ದರು. ಈ ಕಾರಣಕ್ಕೆ ಪೊಲೀಸರು ಅವರಿಗೆ ಹೊಡೆದಿದ್ದಾರೆ ಎಂದು ಪೋಸ್ಟ್‌ನಲ್ಲಿ ಪ್ರತಿಪಾದಿಸಲಾಗಿದೆ. ಆದರೆ, ಇದು ಸುಳ್ಳು.

ವಿಡಿಯೊ ತುಣುಕಿನ ಕೀಫ್ರೇಮ್ ಒಂದನ್ನು ರಿವರ್ಸ್ ಇಮೇಜ್ ವಿಧಾನದಲ್ಲಿ ಗೂಗಲ್ ಲೆನ್ಸ್ ಬಳಸಿ ಹುಡುಕಿದಾಗ, ಹಲವರು ಇದೇ ವಿಡಿಯೊವನ್ನು ಹಂಚಿಕೊಂಡಿರುವುದು ಕಂಡು ಬಂತು. ಇದೇ ವಿಡಿಯೊ 2023ರ ಜುಲೈ 29ರಂದು ‘ಪಾಪ್ಯುಲರ್ ಹೈಲಿಡೇಗಂಜ್’ ಎಂಬ ಫೇಸ್‌ಬುಕ್ ಖಾತೆಯಲ್ಲಿ ಅಪ್‌ಲೋಡ್ ಮಾಡಿರುವುದು ಸಿಕ್ಕಿತು. ಆ ಪೋಸ್ಟ್‌ನಲ್ಲಿ ಯಾವುದೇ ವಿವರಗಳು ಇರಲಿಲ್ಲ. ಆದರೆ, ಈಗ ಹಂಚಿಕೊಳ್ಳುತ್ತಿರುವ ವಿಡಿಯೊ ಇದುವೇ ಎಂಬುದು ಖಚಿತವಾಯಿತು. ಇನ್ನಷ್ಟು ಹುಡುಕಿದಾಗ, ‘ಕೈನಿಂಗ್ ನ್ಯೂಸ್’ ಎಂಬ ಫೇಸ್‌ಬುಕ್ ಖಾತೆಯಲ್ಲಿ ಇದೇ ವಿಡಿಯೊವನ್ನು 2023ರ ಜುಲೈ 9ರಂದು ಅಪ್‌ಲೋಡ್ ಮಾಡಿದ ಪೋಸ್ಟ್ ಸಿಕ್ಕಿತು. ಅದರಲ್ಲಿ ‘ಚುನಾವಣೆ ದಿನ ಕೈನಿಂಗ್‌ನ ಬಸಂತಿಯಲ್ಲಿನ ಪರಿಸ್ಥಿತಿಯನ್ನು ನೋಡಿ’ ಎಂಬ ಒಕ್ಕಣೆ ಬಂಗಾಳಿ ಭಾಷೆಯಲ್ಲಿತ್ತು. ಇದರ ಆಧಾರದಲ್ಲಿ ನಿರ್ದಿಷ್ಟ ಪದಗಳನ್ನು ಬಳಸಿ ಹುಡುಕಾಟ ನಡೆಸಿದಾಗ ನೆಟ್‌ವರ್ಕ್ 18 ಬಾಂಗ್ಲಾ ಪ್ರಕಟಿಸಿದ್ದ ವಿಡಿಯೊ ವರದಿ ಸಿಕ್ಕಿತು. ಪಶ್ಚಿಮ ಬಂಗಾಳದ ಪಂಚಾಯಿತಿ ಚುನಾವಣೆಯಲ್ಲಿ ಬಸಂತಿಯಲ್ಲಿ ನಡೆದ ಹಿಂಸಾಚಾರದ ಬಗ್ಗೆ ವರದಿಯಲ್ಲಿ ವಿವರಿಸಲಾಗಿತ್ತು. ಮೂರು ವರ್ಷಗಳಷ್ಟು ಹಳೆಯ ವಿಡಿಯೊವನ್ನು ಈಗಿನ ಚುನಾವಣೆ ತಳಕು ಹಾಕಿ ತಪ್ಪು ಮಾಹಿತಿ ಹರಡಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಜೀವಪರ ಕಾಳಜಿಯೇ ಘನತೆ

ನುಡಿ ಬೆಳಗು

ದಾದಾಪೀರ್ ನವಿಲೇಹಾಳ್

‘ಪರ್ವತಗಳ ರಾಣಿ’ ಎಂದು ಜನಪ್ರಿಯವಾಗಿರುವ ಮಸ್ಸೂರಿಯಲ್ಲಿ ಭಾರತೀಯ ಪೊಲೀಸ್ ಸೇವೆಯ ತರಬೇತಿ ಪಡೆಯುತ್ತಿದ್ದ ಮಗನನ್ನು ನೋಡುವ ನೆಪದಲ್ಲಿ ದಂಪತಿ ತಮ್ಮ ಮಗಳ ಜೊತೆಗೆ ಪ್ರವಾಸ ಹೊರಟರು. ಅಲ್ಲಿನ ಸರೋವರಗಳನ್ನು ಕಂಡು ಅಲ್ಲಿನ ಅಚ್ಚರಿಯನ್ನು ಆಸ್ವಾದಿಸುವುದು ಅವರ ಉದ್ದೇಶವಾಗಿತ್ತು. ಮಗನಾದವನು ಅದಕ್ಕೆ ಅನುಗುಣವಾಗಿ ತರಬೇತಿಯ ನಡುವೆ ಬಿಡುವು ಪಡೆದು ಎರಡು ಸೈಕಲ್ ರಿಕ್ಷಾಗಳನ್ನು ಬಾಡಿಗೆಗೆ ಪಡೆದಿದ್ದ. ಒಂದರಲ್ಲಿ ತಂದೆ ತಾಯಿಯನ್ನು ಕೂರಿಸಿ ಮತ್ತೊಂದರಲ್ಲಿ ತಂಗಿಯೊಂದಿಗೆ ತಾನು ಕುಳಿತ. ತಂದೆ ತಾಯಿ ಕುಳಿತಿದ್ದ ರಿಕ್ಷಾವನ್ನು ಕಟ್ಟುಮಸ್ತಾದ ಗಂಡಸು ಸ್ವಲ್ಪ ವೇಗವಾಗಿ ತುಳಿಯುತ್ತಿದ್ದ. ಅಣ್ಣ ತಂಗಿ ಕುಳಿತಿದ್ದ ರಿಕ್ಷಾವನ್ನು ನಡುವಯಸ್ಸು ದಾಟಿದವನೊಬ್ಬ ನಿಧಾನಕ್ಕೆ ತುಳಿಯತೊಡಗಿದ. ಮುಂದೆ ಹೋಗುತ್ತಿದ್ದ ರಿಕ್ಷಾದಿಂದ ಅಪ್ಪ ಹಿಂದಕ್ಕೆ ತಿರುಗಿ ಮಗನತ್ತ ನೋಡಿ ನೀವು ಇವತ್ತು ಏನನ್ನೂ ನೋಡಲು ಸಾಧ್ಯವಿಲ್ಲ, ಬರೀ ರಿಕ್ಷಾದಲ್ಲಿ ಕುಳಿತಿರುವುದೇ ಆಗುತ್ತದೆ ಎಂದು ಅಣಕಿಸುವಂತೆ ಹೇಳಿದರು. ಸ್ವಲ್ಪ ದೂರ ಹೋಗುತ್ತಿದ್ದಂತೆ ಅಪ್ಪ ಅಮ್ಮ ಕುಳಿತಿದ್ದ ರಿಕ್ಷಾವನ್ನು ಮತ್ತೊಂದು ರಿಕ್ಷಾ ಓವರ್ ಟೇಕ್ ಮಾಡಿಕೊಂಡು ಹೋಯಿತು. ಆ ಸೈಕಲ್ ರಿಕ್ಷಾವನ್ನು ತುಳಿಯುತ್ತಿದ್ದ ವ್ಯಕ್ತಿ ಹಿಂದಕ್ಕೆ ತಿರುಗಿ ನಗುತ್ತಾ ಟಾಟಾ ಮಾಡುತ್ತಾ ರಭಸವಾಗಿ ಮುಂದೆ ಮುಂದೆ ಹೋದ. ಅಪ್ಪ ಕುತೂಹಲದಿಂದ ನೋಡಿದರೆ ಮಗ ರಿಕ್ಷಾ ತುಳಿಯುತ್ತಿದ್ದ.

ಅಪ್ಪ ಅಮ್ಮನ ಮುಖದಲ್ಲಿ ಹೆಮ್ಮೆ ಮೂಡಿತು. ಮಸ್ಸೂರಿಯಲ್ಲಿದ್ದಷ್ಟು ದಿನ ನಿಸರ್ಗದ ರಮ್ಯ ಚೆಲುವು ಅವರ ಮನಸ್ಸನ್ನು ಸೂರೆಗೊಂಡಿತು. ಅದಕ್ಕಿಂತ ಹೆಚ್ಚಾಗಿ ತಮ್ಮ ಮಗನ ಹೃದಯ ಸೌಂದರ್ಯವೇ ಅವರನ್ನು ಆನಂದದ ಕಡಲಲ್ಲಿ ಮುಳುಗಿಸಿತು. ನಮ್ಮ ಬದುಕಿನಲ್ಲಿ ಇಂಥ ಅಪರೂಪದ ಕ್ಷಣಗಳು ಬಂದು ಹೋಗುತ್ತವೆ. ಬಂಧುಮಿತ್ರರ ಸಿರಿ ಸಂಪತ್ತು, ಅಧಿಕಾರ ಏನೇ ಇರಲಿ ಜೀವ ಕಾರುಣ್ಯದ ಕಾಳಜಿ ತೋರುವ ಸಂಗತಿಗಳೇ ನಮಗೆ ಖುಷಿ ತರುತ್ತವೆ. ಇದಕ್ಕಿಂತ ಇನ್ನೇನು ಬೇಕು? ಎಂಬಂಥ ತೃಪ್ತಿ ಇಂಥ ನಡವಳಿಕೆಯಿಂದ ಹುಟ್ಟುತ್ತದೆ. ನಮ್ಮ ಮಕ್ಕಳು ಪುಟ್ಟ ವಯಸ್ಸಿನಲ್ಲಿ ತೋರುವ ಸ್ನೇಹ ಭಾವ ಬರುಬರುತ್ತಾ ಗಾಢವಾಗಿ ಜೀವನ ಪ್ರೇಮವಾಗಿ ಆಕಾರ ಪಡೆಯುತ್ತದೆ.

ಕಷ್ಟಪಟ್ಟು ದುಡಿವವರ ಬೆವರು ಉಳ್ಳವರ ಪಾಲಿನ ಅನ್ನವಾಗಿರುವ ಸಮಾಜದಲ್ಲಿ ಒಂದಿಷ್ಟು ದಯೆ, ಪ್ರೀತಿ ಅವರಿಗೆ ಸಿಗುವುದಾದರೆ ಸಿಗಲಿ, ಅಂಥ ಅವಕಾಶ ಎಷ್ಟು ಜನರಿಗೆ ಸಿಕ್ಕೀತು? ಬಡತನವನ್ನು ಉಂಡುಟ್ಟು ಬದುಕುವ ಜನರ ನಡುವೆ ಪಡೆಯುವವರು ಎಷ್ಟೋ ಇರಬಹುದು, ಆದರೆ ಕೊಡುವವರ ಸಂಖ್ಯೆ ಕಡಿಮೆ. ನಾವು ಇಲ್ಲಿಗೆ ಬರಿಗೈಯಲ್ಲಿ ಬಂದಿದ್ದೇವೆ. ಯಾರ ವರವೋ, ಯಾರ ಒಲವೋ ನಮಗೆ ಸಾಕಾಗಿಯೂ ಉಳಿಯುವ ಅನ್ನ, ವಸ್ತು ಒಡವೆ ಇದೆಯಲ್ಲಾ, ಅದು ಇನ್ನಾರದ್ದೋ ಹಸಿವನ್ನು ಇಂಗಿಸುವುದಾದರ ಅದೇ ತೃಪ್ತಿಯಲ್ಲವೇ? ನಾವು ಕೊಡುವುದಾದರೂ ಎಷ್ಟು ಮತ್ತು ಅದರಲ್ಲಿ ನಮ್ಮ ಸ್ವಂತದ್ದು ಅನ್ನುವುದು ಏನಿದೆ? ಇತರರಿಂದ ಪಡೆದುಕೊಂಡದ್ದೇ ಅಲ್ಲವೇ? ಹಾಗೆ ಪಡೆದದ್ದು ಕೊಟ್ಟದ್ದರ ನೂರು ಸಾವಿರ ಪಟ್ಟು ಹೆಚ್ಚಲ್ಲವೇ? ಇದು ಒಂದು ಬಗೆಯಲ್ಲಿ ಋಣಮುಕ್ತರಾಗುವುದಕ್ಕೆ ಇರುವ ಸಣ್ಣ ಅವಕಾಶ. ಅದನ್ನು ಕಳೆದುಕೊಳ್ಳಬಾರದು.

ಮಕ್ಕಳಿಗೆ ಬಾಲ್ಯದಿಂದಲೇ ಇಂತಹ ನೈತಿಕ ಸತ್ಯಗಳ ಬಗ್ಗೆ ಹೇಳಿಕೊಡದೇ ಹೋದರೆ ಅವರು ಬರೀ ದುಡಿಯುವ ಯಂತ್ರಗಳಾಗುತ್ತಾರೆ. ಸಂವೇದನಾಶೀಲ ಮನಸ್ಸುಗಳನ್ನು ರೂಪಿಸುವುದು ಹೆತ್ತವರ ಜವಾಬ್ದಾರಿ. ರಾಜ್ಯವೊಂದರಲ್ಲಿ ಉನ್ನತ ಪೊಲೀಸ್ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ತಮ್ಮ ಮಗನ ಆ ಅಂತಹ ನಡವಳಿಕೆಯಿಂದಾಗಿ ಸಿಕ್ಕ ಜನಮನ್ನಣೆ, ಹರಕೆಗಳು ಹೆತ್ತವರ ಸಾರ್ಥಕತೆಯನ್ನು ಸಾರುತ್ತವೆ. ಮಾತೆತ್ತಿದರೆ ಮಕ್ಕಳು ಡಾಕ್ಟರ್, ಎಂಜಿನಿಯರ್ ಇನ್ನೂ ಏನೇನೋ ಆಗಿ ವಿದೇಶದಲ್ಲಿದ್ದಾರೆ, ಕೋಟಿ ಕೋಟಿಗಳಷ್ಟು ಸಂಪಾದಿಸಿದ್ದಾರೆ ಎಂದು ಕೊಚ್ಚಿಕೊಳ್ಳುವವರ ನಡುವೆ ತಮ್ಮ ಮಗ ಅಧಿಕಾರಿಯಾಗಿಯೂ ಜೀವಪರ ಕಾಳಜಿಯುಳ್ಳ ಮನುಷ್ಯನಾಗಿದ್ದಾನೆ ಎಂಬುದೇ ನಮ್ಮ ಘನತೆಯೂ ಧನ್ಯತೆಯೂ ಆಗಬೇಕು.

ಪದಬಂಧ 6386

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
- 1.ಹಸುವಿನಲ್ಲಿ ಕೈಗೂಡದ ಆಸೆ ಕಂಡೀತೆ? (6)
- 4.ತಮದಲ್ಲಿ ಮೇಲುಕೀಳು (4)
- 6.ಎಲ್ಲೆಯಿಂದ ಹೊರಹಾಕುವುದು (4)
- 8.ತುಂಬಿದ ಮೈಕಟ್ಟು (4)
- 10.ಹರಿಯ ಮುಂದಿರಿಸಿದ ಅಗಲವಾದ ತಟ್ಟೆ (4)
- 12.ದಂತಚೂರ್ಣ ಇಲ್ಲಿದೆ (4)
- 13.ಅನಂತರ ಎಂದು ಹೀಗೆ ಹೇಳಿ (4)
- 15.ಇದು ಹಣೆ ಬರಹ (6)

ಮೇಲಿಂದ ಕೆಳಕ್ಕೆ
- 1.ಹಣ್ಣು ತಂದಾಗ ನೆಟ್ಟಿರುವ ತೀಕ್ಷ್ಣದೃಷ್ಟಿ! (4)
- 2.ಸುನೀತಳ ಮಗನಿವನು! (2)
- 3.ಪಂಚಪಾಂಡವರಲ್ಲಿ ಎರಡನೆಯವನು (2)
- 5.ಹಾಗೆ ಆಗಲಿ ಎಂದು ಹೀಗೆ ಹೇಳಬಹುದು (3)
- 7.ಕಾಲು ನಡಿಗೆಯಿಂದ ಸಾಗುವವನು (4)
- 8.ಜ್ಞಾನೇಂದ್ರಿಯ ಇಲ್ಲಿದೆ (3)
- 9.ಒಂದು ಬಗೆಯ ನಯವಾದ ಬಟ್ಟೆ (4)
- 10.ತಲೆಕೂದಲಿನ ಬುಡದಲ್ಲಿಉಂಟಾಗುವ ಚರ್ಮದಹೊಟ್ಟು (3)
- 11.ಈತ ಸಂಪ್ರದಾಯವನ್ನು ಅನುಸರಿಸುವವನು (4)
- 13.ಮಜ್ಜಿಗೆ ಇಲ್ಲಿದೆ (2)
- 14.ಸಂಗೀತ ಮತ್ತು ನೃತ್ಯದಲ್ಲಿನ ಗತಿ ತಲೆಕೆಳಗಾಗಿದೆಯಲ್ಲಾ! (2)



6385ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಹರವಿ 4.ಗಾಯ 5.ರಾಜಾಧಿರಾಜ 8.ಗುಲಾಮ 10.ವಾಗ್ದಾನ 11.ರಾಮನಗರ 12.ಪ್ರಥಮಾ 13.ವಾದನ 15.ಣರಕವೀನ 17.ಬಳ್ಳ 18.ರಿಪೇರಿ

ಮೇಲಿಂದ ಕೆಳಕ್ಕೆ: 1.ಹಡಗು 2.ವಿರಾಮ 3.ಸಂಧಿ 5.ಯಜಮಾನ 7.ಜನಿವಾರ 9.ಕೊನರು 11.ರಾಮಾಯಣ 12.ಪ್ರತಿಬಿಂಬ 13.ವಾನರಿ 15.ನಸರಿ 16.ಕಕ್ಕಿ

ಸುಡೊಕು 6769

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	2	1		5		8	4	
8			3		9			1
	4			1				7
	3	2				7		6
				7			9	
7	9							5
3	1		9				7	
	7			8		1		9
	6	9			1		3	

6768 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ಏಕಾದಶಿ ಗಂ. 18-16 ನಕ್ಷತ್ರ: ಪೂರ್ವಫಲ್ಗುಣಿ ಗಂ. 21-19 ಯೋಗ: ಧ್ರುವ ಗಂ. 21-36 ಕರಣ: ವಣಿಜ ಗಂ. 6-08, ಮೇಷ ಮಾಸದ 14 ನೇ ದಿನ. ಮಳೆ ನಕ್ಷತ್ರ : ಅಶ್ವಿನಿ 4 ನೇ ಪಾದ. ರಾಹುಕಾಲ : ಬೆಳಿಗ್ಗೆ 07-30 - 09-00 ಸೂರ್ಯೋದಯ : 06-15 ಸೂರ್ಯಾಸ್ತ : 06-42 ಮುಸ್ಲಿಂ ದಿನಾಂಕ : 8 ಜುಲ್ಕಾದಾ ಅದೃಷ್ಟ ಸಂಖ್ಯೆ : 7, 12

ಮೇಷ: ಸಿಬ್ಬಂದಿ ವರ್ಗದ ವಿಶ್ವಾಸ ಗಳಿಸಿದರೆ ನೀವಂದುಕೊಂಡ ರೀತಿ ಕೆಲಸಗಳು ನಡೆಯಲಿವೆ. ಮಗಳ ಆರೋಗ್ಯ ಸಮಸ್ಯೆ ನಿಮ್ಮ ನಿದ್ದೆಯನ್ನು ಕೆಡಿಸುತ್ತದೆ. ವಿರೋಧಿಗಳ ಉಪಟಳದ ನಡುವೆ ಬದುಕಲು ಕಷ್ಟವಾಗಲಿದೆ.

ವೃಷಭ: ಹಲವಾರು ಕಾರಣಗಳಿಗೆ ಸ್ನೇಹಿತರು ನಿಮ್ಮ ಮಾರ್ಗದರ್ಶನ, ಬೆಂಬಲ ಹಾಗೂ ಸಹಕಾರವನ್ನು ಅಪೇಕ್ಷಿಸುವಂತಾಗುವುದು. ಸ್ಪರ್ಧಾತ್ಮಕ ಪರೀಕ್ಷೆಯನ್ನು ಎದುರಿಸಲು ಹೆಚ್ಚಿನ ಅಧ್ಯಯನ ಅಗತ್ಯವಾಗುತ್ತದೆ.

ಮಿಥುನ: ವೃತ್ತಿಯಲ್ಲಿ ಸಾಕಷ್ಟು ಪೈಪೋಟಿಗಳನ್ನು ಎದುರಿಸಬೇಕಾಗಬಹುದು. ಮಕ್ಕಳ ಒಡನಾಟದಿಂದ ಹೆಚ್ಚಿನ ಸಂತೃಪ್ತಿ ದೊರೆಯಲಿದೆ. ಕೆಲಸಗಾರರ ಸಮಸ್ಯೆಗಳಿಗೆ ಪರಿಹಾರ ಸಿಗುವುದು ಕಷ್ಟವೆನಿಸಲಿದೆ.

ಕರ್ಕಾಟಕ: ಬ್ಯಾಂಕ್‌ನ ಉನ್ನತ ಅಧಿಕಾರಿಗಳಿಗೆ ಹೊರ ರಾಜ್ಯಗಳಿಗೆ ವರ್ಗಾವಣೆ ಸಾಧ್ಯತೆ. ಸಂಗಡಿಗರು ಮಾಡಿದ ತಪ್ಪಿನಿಂದ ನೀವು ಹೊಸ ನಿರ್ಧಾರ ಕೈಗೊಳ್ಳಬೇಕಾಗುವುದು. ಕೊಡು-ಕೊಳ್ಳುವಿಕೆಗಳಿಂದ ಅಧಿಕ ಲಾಭವಿರುವುದು.

ಸಿಂಹ: ಮನೆಯಲ್ಲಿನ ವ್ಯವಹಾರಗಳಲ್ಲಿ ಸಕಾರಾತ್ಮಕ ಪ್ರತಿಕ್ರಿಯೆಗಳನ್ನು ಕಾಣುವಿರಿ. ಹವ್ಯಾಸಿ ಛಾಯಾಗ್ರಾಹಕರಿಗೆ ಉತ್ತಮ ಅವಕಾಶಗಳು ಸಿಗುವುದು. ವೈದ್ಯರಿಗೆ ವೃತ್ತಿಯಲ್ಲಿ ಸವಾಲೆನಿಸುವ ವಿಷಯಗಳಲ್ಲಿ ಯಶಸ್ಸು ಸಿಗಲಿದೆ.

ಕನ್ಯಾ: ಸಾಮರ್ಥ್ಯ , ಸೃಜನಶೀಲತೆ ಪ್ರದರ್ಶಿಸಲು ಅವಕಾಶಗಳು ಒದಗಿ ಬರುವವು. ಮಾನಸಿಕ ಸ್ಥಿತಿ ಹತೋಟಿಯಲ್ಲಿಟ್ಟುಕೊಳ್ಳುವುದು ಕಷ್ಟವಾಗಲಿದೆ. ಸಾಲ ಮರುಪಾವತಿಯಾಗಿ ಮನಸ್ಸಿಗೆ ನೆಮ್ಮದಿ ಉಂಟಾಗುವುದು.

ತುಲಾ: ನಿಮ್ಮ ಪ್ರೀತಿ ಪಾತ್ರರೊಂದಿಗೆ ಹೊಸ ಯೋಜನೆಯನ್ನು ಆರಂಭಿಸುವ ಬಗ್ಗೆ ಚರ್ಚೆ ನಡೆಸುವಿರಿ. ಸುಗಂಧ ದ್ರವ್ಯ ಹಾಗೂ ಆಲಂಕಾರಿಕ ವಸ್ತುಗಳ ವ್ಯಾಪಾರಿಗಳಿಗೆ ಆಶಾದಾಯಕ ದಿನ. ಜನ ಬಳಕೆಯನ್ನು ಮಾಡಿಕೊಳ್ಳಿರಿ.

ವೃಶ್ಚಿಕ: ಯಂತ್ರೋಪಕರಣ ಅಥವಾ ಕಾರ್ಖಾನೆ ಮೊದಲಾದ ಕೆಲಸಗಳಲ್ಲಿರುವವರಿಗೆ ಹೆಚ್ಚಿನ ಧನ ಲಾಭವಿರುವುದು. ಹಣಕಾಸಿನ ವ್ಯಾಮೋಹ, ಬಯಕೆ ಪಶ್ಚಾತ್ತಾಪಕ್ಕೆ ಕಾರಣವಾಗದಂತೆ ನೋಡಿಕೊಳ್ಳಿ.

ಧನು: ರಾಜಕಾರಣಿಗಳು ಚುನಾವಣಾ ದೃಷ್ಟಿಯಿಂದ ಸಾಮಾಜಿಕ ಕಾರ್ಯಕ್ರಮಗಳನ್ನು ಆಯೋಜಿಸಿ. ಉದ್ಯೋಗಾಕಾಂಕ್ಷಿಗಳಿಗೆ ಪ್ರಭಾವೀ ವ್ಯಕ್ತಿಗಳ ಆಶ್ವಾಸನೆ ಸಿಗಲಿದೆ. ಅನಾರೋಗ್ಯ ಉಂಟಾಗಬಹುದು.

ಮಕರ: ಪ್ರಯತ್ನ, ಆತ್ಮ ವಿಶ್ವಾಸಕ್ಕೆ ಸಮಾನವಾದ ಫಲ ನಿಶ್ಚಿತವಿದ್ದರೂ ಸದ್ಯದ ಪರಿಸ್ಥಿತಿಯಲ್ಲಿ ಹೊಂದಾಣಿಕೆ ಅಗತ್ಯವಿದೆ. ಹೋಟೆಲ್ ಉದ್ಯಮಿಗಳಿಗೆ ವ್ಯಾಪಾರದಲ್ಲಿ ಅನುಕೂಲವಾಗುತ್ತದೆ. ವಿಜ್ಞಾನಿಗಳಿಗೆ ನಿರೀಕ್ಷಿತ ಯಶಸ್ಸು ದೊರೆಯುತ್ತದೆ.

ಕುಂಭ: ಮೇಲಧಿಕಾರಿಗಳಿಂದ ಉತ್ತಮ ಪ್ರಶಂಸೆಯ ಜೊತೆಯಲ್ಲಿ ಗೋಪ್ಯವಾದ ವಿಚಾರದ ಸುಳಿವು ದೊರಕುವುದು. ಇತರರಲ್ಲಿ ನಿಮ್ಮ ಮನಸ್ಸಿನ ಭಾವನೆಗಳನ್ನು ವ್ಯಕ್ತ ಪಡಿಸಲು ಸೂಕ್ತವಾದ ಸಮಯ.

ಮೀನ: ಆಡುವ ಮಾತಿನ ಬಗ್ಗೆ ನಿಗಾ ಇರಲಿ, ನಿಮ್ಮ ಮಾತನ್ನು ನೀವೇ ಸಾಧಿಸಿ ತೋರಿಸಬೇಕಾಗುತ್ತದೆ. ಆಸ್ತಿ ಖರೀದಿ ಬಗ್ಗೆ ಯೋಚನೆ ಮಾಡಬಹುದು. ಇಂದಿನ ಯೋಜಿತ ಕಾರ್ಯದಲ್ಲಿ ವ್ಯತ್ಯಾಸ ಉಂಟಾಗಲಿದೆ.

ಗುಂಡಣ್ಣ

ಚಿಟಿಕೆ ಸುದ್ದಿ

ಹೆಚ್ಚಿದ ತಾಪ: ವಿದ್ಯುತ್ ಬೇಡಿಕೆ 256 ಗಿಗಾವಾಟ್‌ಗೆ ಏರಿಕೆ

ನವದೆಹಲಿ (ಪಿಟಿಐ): ಹೆಚ್ಚಿನ ಬಿಸಿಗಾಳಿಯಿಂದ ದೇಶದಲ್ಲಿ ಹವಾ-ನಿಯಂತ್ರಕಗಳು, ಕೂಲರ್‌ಗಳ ಬಳಕೆ ಹೆಚ್ಚಿದೆ. ಇದರಿಂದ ಏಪ್ರಿಲ್ 25ರಂದು (ಶನಿವಾರ) ದೇಶದಲ್ಲಿ ವಿದ್ಯುತ್ ಬೇಡಿಕೆ 256.11 ಗಿಗಾವಾಟ್‌ಗೆ ಏರಿಕೆಯಾಗಿದೆ. ಇದು ಈವರೆಗಿನ ಗರಿಷ್ಠ ಮಟ್ಟದ ವಿದ್ಯುತ್ ಬೇಡಿಕೆ ಎಂದು ಕೇಂದ್ರ ವಿದ್ಯುತ್ ಸಚಿವಾಲಯದ ಅಂಕಿ-ಅಂಶಗಳು ಭಾನುವಾರ ತಿಳಿಸಿವೆ.

ಏಪ್ರಿಲ್ 24ರಂದು (ಶುಕ್ರವಾರ) 252.07 ಗಿಗಾವಾಟ್ ವಿದ್ಯುತ್ ಬೇಡಿಕೆ ಇತ್ತು. ಈ ಬೇಸಿಗೆಯಲ್ಲಿ ವಿದ್ಯುತ್ ಬೇಡಿಕೆ 270 ಗಿಗಾವಾಟ್‌ಗೆ ತಲುಪಲಿದೆ ಎಂದು ಸಚಿವಾಲಯ ಅಂದಾಜಿಸಿದೆ.

ಭಾರತ–ನ್ಯೂಜಿಲೆಂಡ್ ಎಫ್‌ಟಿಎಗೆ ಇಂದು ಸಹಿ

ನವದೆಹಲಿ/ಆಗ್ರಾ (ಪಿಟಿಐ): ಭಾರತ ಮತ್ತು ನ್ಯೂಜಿಲೆಂಡ್ ನಡುವಿನ ಮುಕ್ತ ವ್ಯಾಪಾರ ಒಪ್ಪಂದಕ್ಕೆ (ಎಫ್‌ಟಿಎ) ಸೋಮವಾರ (ಏಪ್ರಿಲ್ 27ರಂದು) ಸಹಿ ಬೀಳಲಿದೆ.

ಕಳೆದ ವರ್ಷದ ಡಿಸೆಂಬರ್ 22ರಂದು ಎರಡೂ ರಾಷ್ಟ್ರಗಳ ನಡುವೆ ವ್ಯಾಪಾರ ಒಪ್ಪಂದದ ಕುರಿತ ಮಾತುಕತೆಗಳು ಅಂತಿಮಗೊಂಡಿದ್ದವು. ಇದೀಗ ನಾಲ್ಕು ತಿಂಗಳ ಬಳಿಕ ಒಪ್ಪಂದಕ್ಕೆ ಸಹಿ ಆಗುತ್ತಿದೆ.

ಈ ಒಪ್ಪಂದದಿಂದ ಭಾರತದ ಬಹುತೇಕ ಸರಕುಗಳು ಸುಂಕವಿಲ್ಲದೆ, ನ್ಯೂಜಿಲೆಂಡ್‌ಗೆ ಪ್ರವೇಶಿಸಲಿವೆ. ಜೊತೆಗೆ, ಮುಂದಿನ 15 ವರ್ಷದಲ್ಲಿ ನ್ಯೂಜಿಲೆಂಡ್ ಭಾರತದಲ್ಲಿನ ತಯಾರಿಕೆ, ಸೇವೆ, ನಾವೀನ್ಯ ಮತ್ತು ಉದ್ಯೋಗ ಸೃಷ್ಟಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ 20 ಬಿಲಿಯನ್ ಡಾಲರ್ (₹1.88 ಲಕ್ಷ ಕೋಟಿ) ಹೂಡಿಕೆ ಮಾಡಲು ನಿರ್ಧರಿಸಿದೆ.

ಕೇಂದ್ರ ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಮತ್ತು ನ್ಯೂಜಿಲೆಂಡ್‌ನ ವ್ಯಾಪಾರ ಮತ್ತು ಹೂಡಿಕೆ ಸಚಿವ ಟಾಡ್ ಮೆಕ್‌ಕ್ಲೇ ಉಪಸ್ಥಿತಿಯಲ್ಲಿ 'ಭಾರತ ಮಂಟಪ'ದಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಗುತ್ತದೆ ಎಂದು ವಾಣಿಜ್ಯ ಸಚಿವಾಲಯ ತಿಳಿಸಿದೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		ಮೈಸೂರು:	
100 ಕ್ಕೆ	₹575	100 ಕ್ಕೆ	₹580
12 ಕ್ಕೆ	₹78		

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹287-615
ದ್ವಿತಳಿ (ಬಿ.ವಿ)	₹300-775

ಎಂ.ಎಫ್ ಗಳಿಕೆ ಕಡಿಮೆಯಾಗಲು 7 ಕಾರಣ

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.
ಚಾರ್ಟರ್ಡ್ ಅಕೌಂಟೆಂಟ್

ಷೇರು ಮಾರುಕಟ್ಟೆ ವಿಶಾಲವಾದ ಸಮುದ್ರವಿದ್ದಂತೆ. ಅಲ್ಲಿ ಈಜಲು ಬಾರದವರಿಗೆ ಮ್ಯೂಚುವಲ್ ಫಂಡ್‌ಗಳು (ಎಂ.ಎಫ್) ಜೀವ ರಕ್ಷಕನಂತೆ (ಲೈಫ್ ಜಾಕೆಟ್) ಕೆಲಸ ಮಾಡುತ್ತವೆ. ಆದರೆ, ಆಶ್ಚರ್ಯದ ಸಂಗತಿಯೆಂದರೆ, ಉತ್ತಮ ಫಂಡ್‌ಗಳನ್ನು ಆರಿಸಿದರೂ ಅನೇಕ ಹೂಡಿಕೆದಾರರು ನಿರೀಕ್ಷಿತ ಲಾಭ ಪಡೆಯಲು ವಿಫಲರಾಗುತ್ತಾರೆ. ವೃತ್ತಿಪರ ನಿಧಿ ನಿರ್ವಾಹಕರು (ಫಂಡ್ ಮ್ಯಾನೇಜರ್) ಇದ್ದರೂ ಹೂಡಿಕೆದಾರರು ಏಕೆ ಸೋಲುತ್ತಾರೆ? ಇದು ಮಾರುಕಟ್ಟೆಯ ತಪ್ಪಲ್ಲ, ಬದಲಾಗಿ ನಾವು ಮಾಡುವ ಸಣ್ಣ ತಪ್ಪುಗಳ ಫಲಿತಾಂಶ. ಆ ಏಳು ಪ್ರಮುಖ ತಪ್ಪುಗಳನ್ನು ತಿಳಿಯುವುದು ಅಗತ್ಯ.

1. ಭಾವನಾತ್ಮಕ ನಿರ್ಧಾರಗಳು, ಭಯ ಮತ್ತು ದುರಾಸೆಯ ಆಟ: ಹೂಡಿಕೆ ಎನ್ನುವುದು ಲೆಕ್ಕಾಚಾರಕ್ಕಿಂತ ಹೆಚ್ಚಾಗಿ ಮನೋವಿಜ್ಞಾನಕ್ಕೆ ಸಂಬಂಧಿಸಿದ ಕೆಲಸ. ಮಾರುಕಟ್ಟೆ ಏರುತ್ತಿರುವಾಗ ಎಲ್ಲರೂ ಉತ್ಸಾಹದಿಂದ ಹಣ ಹೂಡಿಕೆ ಮಾಡುತ್ತಾರೆ. ಆದರೆ ಮಾರುಕಟ್ಟೆ ಸ್ವಲ್ಪ ಕುಸಿದಾಗ, ಟಿ.ವಿ. ವಾಹಿನಿಗಳಲ್ಲಿ 'ಮಾರುಕಟ್ಟೆ ಪತನ' ಎಂಬ ಸುದ್ದಿಗಳು ಬಂದಾಗ ಭಯಗೊಂಡು ತಮ್ಮ ಹೂಡಿಕೆಯನ್ನು ನಷ್ಟದಲ್ಲಿ ಮಾರಾಟ ಮಾಡುತ್ತಾರೆ. ಆದರೆ ಯಶಸ್ವಿ ಹೂಡಿಕೆದಾರರು ಮಾತ್ರ ಬೆಲೆ ಕಡಿಮೆ ಇದ್ದಾಗ ಖರೀದಿಸುತ್ತಾರೆ ಮತ್ತು ಬೆಲೆ ಹೆಚ್ಚಾದಾಗ ಸುಮ್ಮನಿರುತ್ತಾರೆ. ಆದರೆ ಸಾಮಾನ್ಯರು ತದ್ವಿರುದ್ಧ ನಡೆ ಅನುಸರಿಸುವುದರಿಂದ ಹಣ ಕಳೆದುಕೊಳ್ಳುತ್ತಾರೆ.

2. ಹಳೆಯ ಲಾಭದ ಬೆನ್ನಟ್ಟುವಿಕೆ: ಹಲವರು ಫಂಡ್ ಆಯ್ಕೆ ಮಾಡುವಾಗ ಕಳೆದ ಒಂದು ವರ್ಷದಲ್ಲಿ ಯಾವ ಫಂಡ್ ಹೆಚ್ಚು ಲಾಭ ಕೊಟ್ಟಿದೆ ಎಂಬುದನ್ನು ನೋಡುತ್ತಾರೆ. ಆದರೆ ನೆನಪಿಡಿ, ಕಳೆದ ವರ್ಷ ಅತಿ ಹೆಚ್ಚು ವೇಗವಾಗಿ ಓಡಿದ ಕುದುರೆ ಈ ವರ್ಷವೂ ಗೆಲ್ಲುತ್ತದೆ ಎಂಬ ಗ್ಯಾರಂಟಿ ಇಲ್ಲ. ಮಾರುಕಟ್ಟೆಯೂ ಬದಲಾಗುತ್ತದೆ. ಹಿಂದಿನ ಲಾಭ ನೋಡಿ ಹೂಡಿಕೆ ಮಾಡುವುದು, ಕನ್ನಡಿಯ ಹಿಂಭಾಗ ನೋಡಿ ಕಾರು ಚಲಾಯಿಸಿದಂತೆ. ಒಂದು ನಿರ್ದಿಷ್ಟ ವಲಯ (ಉದಾಹರಣೆಗೆ ಐ.ಟಿ ಅಥವಾ ಫಾರ್ಮಾ) ಹಿಂದಿನ ವರ್ಷ ಚೆನ್ನಾಗಿ ಗಳಿಕೆ ತಂದಿರಬಹುದು, ಆದರೆ ಈಗ ಅದು ಕುಸಿಯುವ ಹಂತದಲ್ಲಿರಬಹುದು. ನೆನಪಿಡಿ ಹಳೆಯ ಗಳಿಕೆ ಭವಿಷ್ಯದ ಲಾಭಕ್ಕೆ ಖಾತರಿ ನೀಡುವುದಿಲ್ಲ. ಗೆದ್ದೆತ್ತಿನ ಬಾಲ ಹಿಡಿದು ಪ್ರಯೋಜನವಿಲ್ಲ.

3. ಎಕ್ಸ್‌ಪೆನ್ಸ್ ರೇಷಿಯೋ ಎಂಬ ಸದ್ದಿಲ್ಲದ ಶತ್ರು ಎದುರಿಸುವುದು ಹೇಗೆ?: ಮ್ಯೂಚುವಲ್ ಫಂಡ್‌ನಲ್ಲಿ ಎಕ್ಸ್‌ಪೆನ್ಸ್ ರೇಷಿಯೊ ಎನ್ನುವುದು ನಿಮ್ಮ ಹಣವನ್ನು ನಿರ್ವಹಿಸಲು ಫಂಡ್ ನಿರ್ವಹಣಾ ಕಂಪನಿಗಳು ಪಡೆಯುವ ವಾರ್ಷಿಕ ಶುಲ್ಕ. ನೀವು ಏಜೆಂಟ್ ಅಥವಾ ಮಧ್ಯವರ್ತಿ (ಬ್ರೋಕರ್) ಮೂಲಕ ಹೂಡಿಕೆ ಮಾಡಿದರೆ ಅದು ರೆಗ್ಯುಲರ್ ಪ್ಲಾನ್ ಎನಿಸಿಕೊಳ್ಳುತ್ತದೆ, ಇದರಲ್ಲಿ ಏಜೆಂಟ್‌ನ ಕಮಿಷನ್ ಸೇರಿರುವುದರಿಂದ ಶುಲ್ಕ ಹೆಚ್ಚಿರುತ್ತದೆ. ಅದೇ ನೀವು ನೇರವಾಗಿ ಹೂಡಿಕೆ ಮಾಡಿದರೆ ಅದು ಡೈರೆಕ್ಟ್ ಪ್ಲಾನ್ ಆಗಿರುತ್ತದೆ ಮತ್ತು ಇಲ್ಲಿ ಶುಲ್ಕ ಕಡಿಮೆ ಇರುತ್ತದೆ.

ಈ ಎರಡರ ನಡುವಿನ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳಲು ಒಂದು ಉದಾಹರಣೆ ನೋಡಿ. ನೀವು ಪ್ರತಿ ತಿಂಗಳು ₹10,000 ಮೊತ್ತವನ್ನು 20 ವರ್ಷ ಹೂಡಿಕೆ ಮಾಡುತ್ತೀರಿ ಎಂದು ಭಾವಿಸೋಣ. ಕೇವಲ ಶೇ 1ರಷ್ಟು ಹೆಚ್ಚುವರಿ ಶುಲ್ಕವಿರುವ ರೆಗ್ಯುಲರ್ ಪ್ಲಾನ್ ಆರಿಸಿಕೊಂಡರೆ, 20 ವರ್ಷಗಳ ನಂತರ ನಿಮ್ಮ ಕೈಗೆ ಸಿಗುವ ಲಾಭವು ಡೈರೆಕ್ಟ್ ಪ್ಲಾನ್‌ಗಿಂತ ಸುಮಾರು ₹17 ಲಕ್ಷದಷ್ಟು ಕಡಿಮೆ ಇರುತ್ತದೆ (ಡೈರೆಕ್ಟ್ ಪ್ಲಾನ್‌ನಲ್ಲಿ ₹1.32 ಕೋಟಿ ಸಿಕ್ಕರೆ, ರೆಗ್ಯುಲರ್‌ನಲ್ಲಿ ಕೇವಲ ₹ 1.15 ಕೋಟಿ ಸಿಗಬಹುದು). ಅಂದರೆ, ನಿಮ್ಮ ಹೂಡಿಕೆಯ ಅವಧಿ ಮತ್ತು ಮೊತ್ತ ಹೆಚ್ಚಾದಂತೆ, ಕಮಿಷನ್ ರೂಪದಲ್ಲಿ ನಿಮ್ಮ ಲಾಭದ ದೊಡ್ಡ ಭಾಗವು ಬೇರೆಯವರ ಪಾಲಾಗುತ್ತದೆ. ಆದ್ದರಿಂದ, ಈ ಸದ್ದುಮಾಡದ ಶತ್ರುವಿನಿಂದ ತಪ್ಪಿಸಿಕೊಳ್ಳಲು ಡೈರೆಕ್ಟ್ ಪ್ಲಾನ್ ಆರಿಸಿಕೊಳ್ಳುವುದು ಬುದ್ಧಿವಂತಿಕೆಯ ನಿರ್ಧಾರ.

4. ಹೆಚ್ಚು ವೈವಿಧ್ಯತೆ: ಎಲ್ಲ ಮೊಟ್ಟೆಗಳನ್ನು ಒಂದೇ ಬುಟ್ಟಿಯಲ್ಲಿ ಇಡಬೇಡಿ ಎಂಬ ಮಾತನ್ನು ಕೇಳಿ ಹೂಡಿಕೆದಾರರು 20-30 ಫಂಡ್‌ಗಳನ್ನು ಖರೀದಿಸುತ್ತಾರೆ. ಇದು ನಿಮ್ಮನ್ನು ಸುರಕ್ಷಿತವಾಗಿರಿಸುವ ಬದಲು ನಿಮ್ಮ ಲಾಭವನ್ನು ಕುಂಠಿತಗೊಳಿಸುತ್ತದೆ. ನೀವು ಹೆಚ್ಚು ಫಂಡ್‌ಗಳನ್ನು ಹೊಂದಿದಾಗ, ನೀವು ಪರೋಕ್ಷವಾಗಿ ಮಾರುಕಟ್ಟೆಯಲ್ಲಿರುವ ಎಲ್ಲ ಕಂಪನಿಗಳ ಷೇರುಗಳನ್ನು ಹೊಂದಿದಂತಾಗುತ್ತದೆ. ಇದರಿಂದ ನಿಮ್ಮ ಫಂಡ್ ಇಂಡೆಕ್ಸ್‌ಗಿಂತ (ಸೂಚ್ಯಂಕ) ಹೆಚ್ಚು ಲಾಭ ಕೊಡಲು ಸಾಧ್ಯವಾಗುವುದೇ ಇಲ್ಲ, ಜೊತೆಗೆ ಪ್ರತಿ ಫಂಡ್‌ಗೂ ನೀವು ಪ್ರತ್ಯೇಕ ಶುಲ್ಕ ನೀಡಬೇಕಾಗುತ್ತದೆ.

5. ತಾಳ್ಮೆಯ ಕೊರತೆ: ಮ್ಯೂಚುವಲ್ ಫಂಡ್ ಹೂಡಿಕೆ ಎನ್ನುವುದು ರಾತ್ರೋರಾತ್ರಿ ಹಣ ಮಾಡುವ ಯೋಜನೆ ಅಲ್ಲ, ಅದೊಂದು ದೀರ್ಘಕಾಲದ ಪ್ರಕ್ರಿಯೆ. ಇಂದಿನ ಮೊಬೈಲ್ ಆ್ಯಪ್‌ಗಳು ಹೂಡಿಕೆ ಮಾಡುವುದನ್ನು ಎಷ್ಟು ಸರಳವಾಗಿಸಿವೆ ಎಂದರೆ, ನಾವು ಬೆರಳ ತುದಿಯಲ್ಲೇ ಎಲ್ಲವನ್ನೂ ನಿಯಂತ್ರಿಸಬಹುದು. ಆದರೆ, ಈ ಸುಲಭ ಲಭ್ಯತೆಯಿಂದಾಗಿ ಹಲವರು ಪದೇ ಪದೇ ತಮ್ಮ ಪೋರ್ಟ್‌ಫೋಲಿಯೊ ಪರಿಶೀಲಿಸುತ್ತಾರೆ ಮತ್ತು ಮಾರುಕಟ್ಟೆಯ ಸಣ್ಣ ಏರಿಳಿತಗಳಿಗೆ ಗಾಬರಿಯಾಗುತ್ತಾರೆ. ಮ್ಯೂಚುವಲ್ ಫಂಡ್ ಒಂದು ಗಿಡವಿದ್ದಂತೆ. ಮೊಬೈಲ್ ಆ್ಯಪ್‌ಗಳು ನಮಗೆ ನೀರು ಹಾಕಲು (ಹೂಡಿಕೆ ಮಾಡಲು) ಸಹಾಯ ಮಾಡುತ್ತವೆಯೇ ಹೊರತು, ಗಿಡ ತಕ್ಷಣ ಮರವಾಗಲು ಅವು ಸಹಾಯ ಮಾಡುವುದಿಲ್ಲ, ಗಿಡವು ತಕ್ಷಣಕ್ಕೆ ಮರವಾಗುವುದೂ ಇಲ್ಲ. ಒಂದು ವರ್ಷ ಲಾಭ ಬರಲಿಲ್ಲ ಎಂಬ ಕಾರಣಕ್ಕೆ ಅಥವಾ ಸಣ್ಣ ಲಾಭದ ಆಸೆಗೆ ಪದೇ ಪದೇ ಹಣ ಹಿಂಪಡೆಯುವುದು ಅಥವಾ ಫಂಡ್ ಬದಲಾಯಿಸುವುದು, ಗಿಡವನ್ನು ಆಗಾಗ ಕಿತ್ತು ಬೇರೆಡೆ ನೆಟ್ಟಂತೆ. ಆ್ಯಪ್‌ಗಳನ್ನು ಹೂಡಿಕೆ ಬೆಳೆಸಲು ಬಳಸಬೇಕೇ ಹೊರತು, ಅನಗತ್ಯ ಗೊಂದಲಕ್ಕಲ್ಲ. ತಾಳ್ಮೆಯಿಂದ ಕುಳಿತರೆ ಮಾತ್ರ ಹೂಡಿಕೆಯ ಪೂರ್ಣ ಲಾಭ ನಿಮ್ಮದಾಗುತ್ತದೆ.

6. ತೆರಿಗೆ ಮತ್ತು ಎಕ್ಸಿಟ್ ಲೋಡ್ ಅರಿವಿಲ್ಲದಿರುವುದು: ಹಲವರು ಫಂಡ್‌ಗಳನ್ನು ಷೇರುಗಳಂತೆ ಆಗಾಗ ಖರೀದಿ ಮತ್ತು ಮಾರಾಟ ಮಾಡುತ್ತಾರೆ. ಆದರೆ ಪ್ರತಿ ಬಾರಿ ನೀವು ಫಂಡ್ ಮಾರಿದಾಗಲೂ ಅದಕ್ಕೆ ಅವಧಿಗೂ ಮುನ್ನ ಹೂಡಿಕೆ ಹಿಂಪಡೆಯುವಿಕೆ ಶುಲ್ಕ (ಎಕ್ಸಿಟ್ ಲೋಡ್) ಮತ್ತು ಬಂಡವಾಳ ಗಳಿಕೆ ತೆರಿಗೆ ಅನ್ವಯವಾಗುತ್ತದೆ. ಒಂದು ವರ್ಷದ ಒಳಗೆ ಹಣ ತೆಗೆದರೆ ಲಾಭಕ್ಕೆ ಶೇ 20ರವರೆಗೆ ತೆರಿಗೆ ಕಟ್ಟಬೇಕಾಗುತ್ತದೆ. ಈ ಸಣ್ಣ ಸಣ್ಣ ಶುಲ್ಕಗಳು ಮತ್ತು ತೆರಿಗೆಗಳು ಹೂಡಿಕೆದಾರರ ಅಂತಿಮ ಲಾಭವನ್ನು ಗಣನೀಯವಾಗಿ ಕಡಿಮೆ ಮಾಡುತ್ತವೆ.

7. ಎನ್‌ಎಫ್‌ಒ ಮತ್ತು ಅಗ್ಗದ ಬೆಲೆಯ ಭ್ರಮೆ: ಹೊಸ ಫಂಡ್ ಆಫರ್ (ಎನ್‌ಎಫ್‌ಒ) ಬಂದಾಗ ಅದರ ಎನ್‌ಎವಿ ಕೇವಲ ₹10 ಇದೆ ಎಂಬ ಕಾರಣಕ್ಕೆ ಹೂಡಿಕೆ ಮಾಡುವುದು ದೊಡ್ಡ ತಪ್ಪು. ಏಕೆಂದರೆ ನಿವ್ವಳ ಆಸ್ತಿ ಮೌಲ್ಯ (ಎನ್‌ಎವಿ) ಬೆಲೆ ಕಡಿಮೆ ಇದ್ದ ತಕ್ಷಣ ಅದು ಲಾಭದಾಯಕ ಎಂದು ಅರ್ಥವಲ್ಲ. ಉದಾಹರಣೆಗೆ, ₹10ರ ಎನ್‌ಎವಿ ಇರುವ ಹೊಸ ಫಂಡ್ ಮತ್ತು ₹100ರ ಎನ್‌ಎವಿ ಇರುವ ಹಳೆಯ ಫಂಡ್ ಎರಡೂ ಒಂದೇ ರೀತಿಯ ಷೇರುಗಳ ಮೇಲೆ ಹೂಡಿಕೆ ಮಾಡಿದ್ದರೆ, ಮಾರುಕಟ್ಟೆ ಬೆಳೆದಾಗ ಎರಡೂ ಫಂಡ್‌ಗಳು ನೀಡುವ ಲಾಭದ ಪ್ರಮಾಣ ಒಂದೇ ಆಗಿರುತ್ತದೆ. ಆದ್ದರಿಂದ ಎನ್‌ಎವಿ ಕಡಿಮೆ ಇದೆ ಎಂದು ಹೊಸ ಫಂಡ್‌ಗಳ ಹಿಂದೆ ಹೋಗುವ ಬದಲು, ಆ ಫಂಡ್‌ನ ಹೂಡಿಕೆಯ ತಂತ್ರ ಮತ್ತು ನಿರ್ವಾಹಕನ ಅನುಭವವನ್ನು ನೋಡಿ ನಿರ್ಧಾರ ತೆಗೆದುಕೊಳ್ಳುವುದು ಉತ್ತಮ.

ಕಾಡುವ ಫೋಟೊ ಮಾಂತ್ರಿಕ ರಘು ರಾಯ್ ಇನ್ನಿಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ಭಾರತದ ಛಾಯಾಚಿತ್ರ ಕ್ಷೇತ್ರದ ದಂತಕಥೆ, ಪ್ರಸಿದ್ಧ ಛಾಯಾಗ್ರಾಹಕ ರಘು ರಾಯ್(83) ಅವರು ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಭಾನುವಾರ ಬೆಳಿಗ್ಗೆ ನಿಧನರಾದರು.

ಮೃತರಿಗೆ ಪತ್ನಿ ಗುರ್ಮೀತ್, ಪುತ್ರ ನಿತಿನ್ ಮತ್ತು ಪುತ್ರಿಯರಾದ ಲಗನ್, ಅವನಿ ಮತ್ತು ಪೂರ್ವಾಯಿ ಇದ್ದಾರೆ. ಭಾನುವಾರ ಸಂಜೆ 4 ಗಂಟೆಗೆ ನಗರದ ಲೋಧಿ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಮೂಲಗಳು ತಿಳಿಸಿವೆ.

'ಎರಡು ವರ್ಷಗಳ ಹಿಂದೆ ಅಪ್ಪನಿಗೆ ಪ್ರಾಸ್ಟೇಟ್ ಕ್ಯಾನ್ಸರ್ ಇರುವುದು ಪತ್ತೆಯಾಯಿತು. ಆಗ ಅವರು ಗುಣಮುಖರಾದರು. ನಂತರ ಅದು ಹೊಟ್ಟೆಯ ಭಾಗಕ್ಕೆ ಹರಿಡಿತು. ಅದೂ ಗುಣವಾಯಿತು. ಇತ್ತೀಚೆಗೆ ಕ್ಯಾನ್ಸರ್ ಅವರ ಮಿದುಳಿಗೆ ಹರಡಿರುವುದು ಪತ್ತೆಯಾಗಿತ್ತು. ಜೊತೆಗೆ ಅವರಿಗೆ ವಯೋಸಹಜ ಆರೋಗ್ಯ ಸಮಸ್ಯೆಗಳೂ ಇದ್ದವು' ಎಂದು ರಘು ರಾಯ್ ಪುತ್ರ



ಹಳೆ ದೆಹಲಿಯ ಫತೇಪುರಿ ಮಸೀದಿ ಬಳಿ 1992ರಲ್ಲಿ ಫೋಟೊ ತೆಗೆಯುವುದರಲ್ಲಿ ರಘು ರಾಯ್ ನಿರತರಾಗಿದ್ದ ಕ್ಷಣ (ಪಿಟಿಐ ಚಿತ್ರ)

ಫೋಟೊಗ್ರಾಫರ್ ನಿತಿನ್ ರಾಯ್ ತಿಳಿಸಿದ್ದಾರೆ.

1942ರ ಡಿಸೆಂಬರ್ 18ರಂದು ಪಂಜಾಬ್‌ನ ಝಾಂಗ್‌ನಲ್ಲಿ (ಈಗಿನ ಪಾಕಿಸ್ತಾನ) ರಘು ಜನಿಸಿದರು. ದೇಶ ವಿಭಜನೆ ನಂತರ ಅವರ ಕುಟುಂಬ ಭಾರತಕ್ಕೆ ಬಂದಿತು. ಸಿವಿಲ್ ಎಂಜಿನಿಯರ್ ಪದವಿ ಮುಗಿಸಿ, 1996ರಲ್ಲಿ 'ದಿ ಸ್ಟೇಟ್ಸ್‌ಮನ್' ಪತ್ರಿಕೆಯ ಮುಖ್ಯ ಛಾಯಾಗ್ರಾಹಕರಾಗಿ ಸೇರಿದರು.

ಹೆನ್ರಿ ಕಾರ್ಟಿಯರ್-ಬ್ರೆಸನ್ ಅವರ ಶಿಷ್ಯರಾಗಿದ್ದ ರಘು ರಾಯ್, 1972ರ ಬಾಂಗ್ಲಾದೇಶ ನಿರಾಶ್ರಿತರ ಬಿಕ್ಕಟ್ಟು ಮತ್ತು 1984ರ ಭೋಪಾಲ್ ಅನಿಲ ದುರಂತ ಸೇರಿದಂತೆ ಭಾರತೀಯ ಆಧುನಿಕ ಇತಿಹಾಸದ ಮಹತ್ವದ ಘಟನೆಗಳನ್ನು ಕ್ಲಿಕ್ಕಿಸಿದ್ದಾರೆ.

ಇಂದಿರಾ ಗಾಂಧಿ, ದಲೈಲಾಮಾ, ಮದರ್ ತೆರೆಸಾ, ಸತ್ಯಜಿತ್ ರೇ, ಹರಿಪ್ರಸಾದ್ ಚೌರಾಸಿಯಾ, ಬಿಸ್ಮಿಲ್ಲಾ ಖಾನ್ ಸೇರಿದಂತೆ ದೇಶದ ಹಲವು ಮಹಾನ್ ಸಾಧಕರ ಫೋಟೊಗಳನ್ನು ಸೆರೆಹಿಡಿದಿದ್ದಾರೆ.

1977ರಲ್ಲಿ ಅಂತರರಾಷ್ಟ್ರೀಯ ಫೋಟೊ ಸಂಸ್ಥೆಯಾದ 'ಮ್ಯಾಗ್ನಮ್ ಫೋಟೋಸ್'ಗೆ ಆಯ್ಕೆಯಾದ ಮೊದಲ ಛಾಯಾಗ್ರಾಹಕ ಎಂಬ ಖ್ಯಾತಿಗೆ ರಘು ಪಾತ್ರರಾಗಿದ್ದಾರೆ. ಮೂರು ಬಾರಿ ನಡೆದ ಯುನೆಸ್ಕೊದ ಅಂತರರಾಷ್ಟ್ರೀಯ ಫೋಟೊ ಸ್ಪರ್ಧೆಯಲ್ಲಿ ಎರಡು ಬಾರಿ ತೀರ್ಪುಗಾರರಾಗಿ ಕಾರ್ಯನಿರ್ವಹಿಸಿದ್ದಾರೆ.

ಅವರಿಗೆ ಬಾಂಗ್ಲಾದೇಶ ಯುದ್ಧ ಮತ್ತು ಅದರ ನಂತರದ ವರದಿಗಾರಿಕೆಗಾಗಿ 1972ರಲ್ಲಿ ಪದ್ಮಶ್ರೀ ಪ್ರಶಸ್ತಿ ಸೇರಿದಂತೆ ಹಲವಾರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಶಸ್ತಿಗಳು ಸಂದಿವೆ.

ಕಡಿಮೆ ಬೆಲೆಯ ಮನೆ ಮಾರಾಟ ಇಳಿಕೆ

ಆಸ್ತಿ ಸಲಹಾ ಸಂಸ್ಥೆ ನೈಟ್ ಫ್ರ್ಯಾಂಕ್ ವರದಿಯಲ್ಲಿ ಉಲ್ಲೇಖ

ನವದೆಹಲಿ (ಪಿಟಿಐ): ₹50 ಲಕ್ಷಕ್ಕಿಂತ ಕಡಿಮೆ ಬೆಲೆಯ 'ಕೈಗೆಟುಕುವ ದರ'ದ ಮನೆಗಳ ಮಾರಾಟವು ಮಾರ್ಚ್ ತ್ರೈಮಾಸಿಕದಲ್ಲಿ ದೇಶದ ಎಂಟು ಪ್ರಮುಖ ನಗರಗಳಲ್ಲಿ ಶೇಕಡ 23ರಷ್ಟು ಇಳಿಕೆ ಕಂಡಿದೆ ಎಂದು ರಿಯಲ್ ಎಸ್ಟೇಟ್ ಆಸ್ತಿ ಸಲಹಾ ಸಂಸ್ಥೆ ನೈಟ್ ಫ್ರ್ಯಾಂಕ್ ಸಂಸ್ಥೆ ಸಿದ್ಧಪಡಿಸಿರುವ ವರದಿ ಹೇಳಿದೆ.

ಈ ವರ್ಗದ ಹೊಸ ಮನೆಗಳ ಲಭ್ಯತೆಯು ಕಡಿಮೆ ಆಗಿದ್ದುದು ಮಾರಾಟ

ಕಡಿಮೆ ಆಗಲು ಒಂದು ಪ್ರಮುಖ ಕಾರಣ ಎಂದು ವರದಿಯು ಹೇಳಿದೆ. ಕೋವಿಡ್ ಸಾಂಕ್ರಾಮಿಕದ ನಂತರದಲ್ಲಿ ಐಷಾರಾಮಿ ವರ್ಗದ ಮನೆಗಳಿಗೆ ಬೇಡಿಕೆ ಹೆಚ್ಚಾಗಿದೆ.

'ಕೈಗೆಟುಕುವ ದರ'ದ ಮನೆಗಳ ನಿರ್ಮಾಣ ಕೂಡ ಕಡಿಮೆ ಆಗುತ್ತಿದೆ, ಜಮೀನಿನ ಬೆಲೆ ಹೆಚ್ಚಳ ಹಾಗೂ ನಿರ್ಮಾಣದಲ್ಲಿ ಬಳಕೆಯಾಗುವ ಉತ್ಪನ್ನಗಳ ಬೆಲೆ ಹೆಚ್ಚಳ ಇದಕ್ಕೆ ಕಾರಣ ಎಂದು ಬಿಲ್ಡರ್‌ಗಳು ಹೇಳಿದ್ದಾರೆ.

ಕೈಗೆಟುಕುವ ದರದ ಮನೆಗಳ ಮಾರಾಟ ಪ್ರಮಾಣವು ಎಂಟೂ ನಗರಗಳಲ್ಲಿ ಇಳಿಕೆ ಕಂಡಿದೆ ಎಂದು ನೈಟ್ ಫ್ರ್ಯಾಂಕ್ ತಿಳಿಸಿದೆ. ಇಷ್ಟೇ ಅಲ್ಲ, ₹50 ಲಕ್ಷದಿಂದ ₹1 ಕೋಟಿವರೆಗಿನ ದರದ ಮನೆಗಳ ಮಾರಾಟ ಕೂಡ ಇಳಿಕೆ ಆಗಿದೆ. ಕಳೆದ ವರ್ಷದ ಮಾರ್ಚ್ ತ್ರೈಮಾಸಿಕ ಹಾಗೂ ಈ ವರ್ಷದ ಮಾರ್ಚ್ ತ್ರೈಮಾಸಿಕದ ಮಾರಾಟ ಸಂಖ್ಯೆ ಹೋಲಿಸಿದರೆ, ಈ ಬಾರಿ ಮಾರಾಟ ಪ್ರಮಾಣ ಶೇ 12ರಷ್ಟು ತಗ್ಗಿದೆ.

ಮುಂಬೈ, ದೆಹಲಿ-ಎನ್‌ಸಿಆರ್ ಪ್ರದೇಶ, ಪುಣೆ, ಬೆಂಗಳೂರು, ಹೈದರಾಬಾದ್, ಚೆನ್ನೈ, ಅಹಮದಾಬಾದ್ ಮತ್ತು ಕೋಲ್ಕತ್ತ ನಗರಗಳಲ್ಲಿನ ಮನೆಗಳ ಮಾರಾಟ ಸಂಖ್ಯೆಯನ್ನು ಸಂಸ್ಥೆಯು ಅಧ್ಯಯನಕ್ಕೆ ಪರಿಗಣಿಸಿದೆ.

₹1 ಕೋಟಿಯಿಂದ ₹2 ಕೋಟಿವರೆಗಿನ ಬೆಲೆಯ ಮನೆಗಳ ಮಾರಾಟವು ಮಾರ್ಚ್ ತ್ರೈಮಾಸಿಕದಲ್ಲಿ ಶೇ 10ರಷ್ಟು ಹೆಚ್ಚಾಗಿದೆ. ₹2 ಕೋಟಿಯಿಂದ ₹5 ಕೋಟಿವರೆಗಿನ ಬೆಲೆಯ ಮನೆಗಳ ಮಾರಾಟವು ಶೇ 17ರಷ್ಟು ಜಾಸ್ತಿ ಆಗಿದೆ. ₹5 ಕೋಟಿಯಿಂದ ₹10 ಕೋಟಿವರೆಗಿನ ಬೆಲೆಯ ಮನೆಗಳ ಮಾರಾಟದಲ್ಲಿ ಶೇ 3ರಷ್ಟು ಇಳಿಕೆ ಕಂಡುಬಂದಿದೆ.

ಎಲ್ಲ ಬೆಲೆ ವರ್ಗಗಳ ಮನೆಗಳ ಮಾರಾಟವನ್ನು ಪರಿಗಣಿಸಿದರೆ, ಮಾರಾಟದ ಪ್ರಮಾಣವು ಮಾರ್ಚ್ ತ್ರೈಮಾಸಿಕದಲ್ಲಿ ಶೇ 4ರಷ್ಟು ಇಳಿಕೆ ಕಂಡಿದೆ. ಬೇಡಿಕೆ ಕಡಿಮೆ ಇದ್ದುದು, ಬೆಲೆ ಹೆಚ್ಚಳ ಹಾಗೂ ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಕಾರಣದಿಂದಾಗಿ ಉಂಟಾದ ಅನಿಶ್ಚಿತತೆಯು ಮಾರಾಟ ಇಳಿಕೆಗೆ ಕಾರಣ ಎಂದು ವರದಿಯಲ್ಲಿ ಹೇಳಲಾಗಿದೆ.

ಎಎಪಿ ರಾಜ್ಯಸಭಾ ಸದಸ್ಯರ ಪಕ್ಷಾಂತರ ಪ್ರಜಾಪ್ರಭುತ್ವಕ್ಕೆ ಧಕ್ಕೆ
ಹೌದು ಇಲ್ಲ
ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

'ರಷ್ಯಾ ತೈಲ: ಮಾಹಿತಿ ನೀಡಲ್ಲ'

ಒಂದನೇ ಪುಟದಿಂದ...

ಮೊದಲ ಮೇಲ್ಮನವಿ ಪ್ರಾಧಿಕಾರವು ಈ ನಿಲುವನ್ನು ಎತ್ತಿ ಹಿಡಿಯಿತು.

ಆಯೋಗವು ಮಧ್ಯಂತರ ತೀರ್ಮಾನದಲ್ಲಿ 'ಕೋರಿದ ಮಾಹಿತಿಯನ್ನು ಬಹಿರಂಗಪಡಿಸುವುದರಿಂದ ದೇಶದ ಆರ್ಥಿಕ ಹಿತಾಸಕ್ತಿಯ ಮೇಲೆ ಕೆಟ್ಟ ಪರಿಣಾಮ ಆಗುತ್ತದೆ, ಬೇರೆ ದೇಶಗಳ ಜೊತೆ ಹೊಂದಿರುವ ಸಂಬಂಧದ ಮೇಲೆಯೂ ಪರಿಣಾಮ ಉಂಟಾಗುತ್ತದೆ' ಎಂದು ಹೇಳಿದೆ. ಅಲ್ಲದೆ, 'ಈ ಮಾಹಿತಿಯು ಜಾಗತಿಕ ಸಂಬಂಧಗಳ ಜೊತೆಯೂ ಬೆಸೆದುಕೊಂಡಿದೆ' ಎಂದು ತಿಳಿಸಿದೆ.

ಶಾಟ್‌ಗನ್, ಹ್ಯಾಂಡ್‌ಗನ್ ಹೊಂದಿದ್ದ ಶಂಕಿತ

ವಾಷಿಂಗ್ಟನ್ (ಎಎಫ್‌ಪಿ/ಪಿಟಿಐ): ಶ್ವೇತ ಭವನದ ವರದಿಗಾರರ ವಾರ್ಷಿಕ ಭೋಜನ ಕೂಟದ ವೇಳೆ ಹೋಟೆಲ್ ಲಾಬಿಯ ಹೊರಗಿನ ಭದ್ರತಾ ಚೆಕ್‌ಪಾಯಿಂಟ್ ಮೂಲಕ ನುಗ್ಗಿದ ಬಂದೂಕುಧಾರಿಯ ಬಳಿ ಶಾಟ್‌ಗನ್, ಹ್ಯಾಂಡ್‌ಗನ್ ಮತ್ತು ವಿವಿಧ ರೀತಿಯ ಚಾಕುಗಳು ಇದ್ದವು ಎಂದು ಅಮೆರಿಕದ ಭದ್ರತಾ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಈ ವ್ಯಕ್ತಿ ಚೆಕ್‌ಪಾಯಿಂಟ್‌ಗೆ ನುಗ್ಗಿದ ದೃಶ್ಯವನ್ನು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಂಚಿಕೊಂಡಿದ್ದಾರೆ. ಬಳಿಕ ಸೀಕ್ರೆಟ್ ಸರ್ವಿಸ್ ಮತ್ತು ಭದ್ರತಾ ಸಿಬ್ಬಂದಿ ಪ್ರತಿದಾಳಿ ನಡೆಸಿ, ದಾಳಿಕೋರನನ್ನು ಸೆರೆಹಿಡಿದಿದ್ದಾರೆ. ಈ ವೇಳೆ ಸೀಕ್ರೆಟ್ ಸರ್ವಿಸ್ ಅಧಿಕಾರಿಯೊಬ್ಬರಿಗೆ ಗುಂಡು ತಾಗಿದ್ದು, ಅವರನ್ನು ಆಸ್ಪತ್ರೆಗೆ ಸಾಗಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

'ದಾಳಿಕೋರನ ಮೇಲೆ ಗುಂಡು ಹಾರಿಸಲಾಗಿಲ್ಲ. ಆತನನ್ನು ಸೆರೆಹಿಡಿದು, ಆಸ್ಪತ್ರೆಗೆ ಕರೆದೊಯ್ಯಲಾಯಿತು. ನಂತರ ಬಂಧಿಸಲಾಯಿತು. ಸೋಮವಾರ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗುವುದು' ಎಂದು ಅವರು ತಿಳಿಸಿದ್ದಾರೆ.

'ಸದ್ಯಕ್ಕೆ ಈ ಬಂಧಿತ ವ್ಯಕ್ತಿಯನ್ನು ಈ ಪ್ರಕರಣದ ಏಕೈಕ ಶಂಕಿತ ಎಂದು ಭಾವಿಸಲಾಗಿದೆ. ಬಂದೂಕನ್ನು ಬಳಸಿ ಹಿಂಸಾಚಾರ ಅಪರಾಧ ಎಸಗಿದ್ದ ಮತ್ತು ಅಪಾಯಕಾರಿ ಆಯುಧ ಬಳಸಿ ಫೆಡರಲ್ ಅಧಿಕಾರಿ ಮೇಲೆ ಹಲ್ಲೆ ಮಾಡಿದ ಆರೋಪಗಳನ್ನು ಆ ವ್ಯಕ್ತಿಯ ಮೇಲೆ ಹೊರಿಸಲಾಗಿದೆ ಎಂದು ವಿವರಿಸಿದ್ದಾರೆ.

ಶಂಕಿತ ಮೆಕ್ಯಾನಿಕಲ್ ಎಂಜಿನಿಯರ್: ಶಂಕಿತ ಬಂದೂಕುಧಾರಿಯ ಫೋಟೊಗಳನ್ನು ಟ್ರಂಪ್ ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದಾರೆ. 31 ವರ್ಷದ ಕೋಲ್ ಥಮಸ್ ಅಲೆನ್ ಎಂದು ಆತನನ್ನು ಗುರುತಿಸಲಾಗಿದೆ. ಈತ ಕ್ಯಾಲಿಫೋರ್ನಿಯಾದ ಟೊರೆನ್ಸ್ ಮೂಲದವನಾಗಿದ್ದು, ಮೆಕ್ಯಾನಿಕಲ್ ಎಂಜಿನಿಯರ್ ಎಂದು ಸುದ್ದಿ ಸಂಸ್ಥೆಗಳು ವರದಿ ಮಾಡಿವೆ.



ಬಂದೂಕುಧಾರಿಯ ದಾಳಿ ಬೆನ್ನಲ್ಲೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ರಕ್ಷಿಸಲು ಧಾವಿಸಿದ ಭದ್ರತಾ ಸಿಬ್ಬಂದಿ –ಎಎಫ್‌ಪಿ ಚಿತ್ರ

'ಈ ಕೃತ್ಯದ ಹಿಂದೆ ಈತನೊಬ್ಬನೇ ಇರುವಂತೆ ಕಾಣುತ್ತಿದೆ. ಈತನ ಉದ್ದೇಶ ಸ್ಪಷ್ಟವಾಗಿಲ್ಲ' ಎಂದು ಟ್ರಂಪ್ ಹೇಳಿದ್ದಾರೆ.

ಲಿಂಕ್ಡ್‌ಇನ್ ಪ್ರೊಫೈಲ್‌ನಲ್ಲಿದ್ದ ಮಾಹಿತಿ ಪ್ರಕಾರ ಅಲೆನ್, ಮೆಕ್ಯಾನಿಕಲ್ ಎಂಜಿನಿಯರ್. ಕಂಪ್ಯೂಟರ್ ವಿಜ್ಞಾನಿ, ಗೇಮ್ ಡೆವಲಪರ್ ಮತ್ತು ಶಿಕ್ಷಕ ಎಂದು ಹೇಳಲಾಗಿದೆ. ಆತ 2017ರಲ್ಲಿ ಕ್ಯಾಲಿಫೋರ್ನಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಿಂದ ಪದವಿ ಪಡೆದಿದ್ದಾನೆ ಎಂದು ನ್ಯೂಯಾರ್ಕ್ ಟೈಮ್ಸ್ ಹೇಳಿದೆ.

ಫೆಡರಲ್ ಹಣಕಾಸು ದಾಖಲೆಗಳ ಪ್ರಕಾರ, 2024ರಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಕಮಲಾ ಹ್ಯಾರಿಸ್ ಅವರನ್ನು ಬೆಂಬಲಿಸಿ ಅಲೆನ್ ಡೆಮಾಕ್ರಟಿಕ್ ಪಕ್ಷದ ರಾಜಕೀಯ ಕ್ರಿಯಾ ಸಮಿತಿಗೆ 25 ಡಾಲರ್ ದೇಣಿಗೆ ನೀಡಿದ್ದ ಎನ್ನಲಾಗಿದೆ.

ಭದ್ರತಾ ವೈಫಲ್ಯದ ಸುತ್ತ: ಘಟನೆಯ ಬೆನ್ನಲ್ಲೇ ಭದ್ರತಾ ವೈಫಲ್ಯದ ಸುತ್ತ ಚರ್ಚೆಗಳು ನಡೆಯುತ್ತಿವೆ. ಶಂಕಿತನು ಹೋಟೆಲ್‌ಗೆ ಬಂದೂಕನ್ನು ಹೇಗೆ ತಂದ ಎಂಬ ಪ್ರಶ್ನೆಗಳು ಕಾಡಲಾರಂಭಿಸಿವೆ. ಬಾಲ್‌ರೂಂ ಹೊರಗೆ 'ಮ್ಯಾಗ್ನೆಟೋಮೀಟರ್' ಇರಿಸಲಾಗಿತ್ತು. ಆದರೆ ಅದಕ್ಕೂ ಮುನ್ನ ಅಥವಾ ಹೋಟೆಲ್‌ನ ಪ್ರವೇಶದ್ವಾರದಲ್ಲಿ ಅಂತಹ ಯಾವುದೇ ತಪಾಸಣೆ ಇರಲಿಲ್ಲ ಎಂಬುದನ್ನು ಸ್ಥಳದಲ್ಲಿದ್ದವರು ಗಮನಿಸಿದ್ದಾರೆ.

ಚೆಕ್‌ಪಾಯಿಂಟ್ ಸಮರ್ಪಕವಾಗಿ ಕೆಲಸ ಮಾಡುತ್ತಿದ್ದ ಕಾರಣ, ಘಟನೆಯಲ್ಲಿ ಯಾರೊಬ್ಬರಿಗೂ ಗಾಯಗಳಾಗಿಲ್ಲ. ಆದರೂ ಹೋಟೆಲ್ ಒಳಗೆ ಬಂದೂಕು ಹೇಗೆ ಬಂತು ಎಂಬುದರತ್ತಲೂ ತನಿಖೆ ನಡೆಸುತ್ತಿದ್ದೇವೆ. ಇದಕ್ಕಾಗಿ ಹೋಟೆಲ್‌ನ ವಿಡಿಯೊಗಳನ್ನು ಪರಿಶೀಲಿಸುತ್ತಿದ್ದೇವೆ ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ವಿದೇಶಿ ನಾಯಕರ ಖಂಡನೆ

ಜಗತ್ತಿನ ವಿವಿಧ ದೇಶಗಳ ನಾಯಕರು ಈ ದಾಳಿಯನ್ನು ಖಂಡಿಸಿ ಪ್ರತಿಕ್ರಿಯಿಸಿದ್ದಾರೆ.

'ಈ ಸುದ್ದಿ ಕೇಳಿ ತೀವ್ರ ಆಘಾತಕ್ಕೆ ಒಳಗಾಗಿದ್ದೇನೆ. ಅಧ್ಯಕ್ಷ ಟ್ರಂಪ್, ಅಮೆರಿಕದ ಪ್ರಥಮ ಮಹಿಳೆ ಸುರಕ್ಷಿತರಾಗಿರುವ ವಿಷಯ ತಿಳಿದು ನಿರಾಳವಾಯಿತು' ಎಂದು ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಹೇಳಿದ್ದಾರೆ.

ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ, 'ಇದು ಆತಂಕಕಾರಿ ಘಟನೆ. ಇಂತಹ ಹಿಂಸಾಚಾರಕ್ಕೆ ಪ್ರಜಾಪ್ರಭುತ್ವದಲ್ಲಿ ಸ್ಥಾನವಿಲ್ಲ' ಎಂದಿದ್ದಾರೆ. ಜಪಾನ್, ದಕ್ಷಿಣ ಕೊರಿಯಾ ಸೇರಿ ವಿವಿಧ ದೇಶಗಳ ನಾಯಕರು ಈ ದಾಳಿಯನ್ನು ಖಂಡಿಸಿದ್ದಾರೆ.

ಗುಂಡಿನ ದಾಳಿ: ಟ್ರಂಪ್ ಪಾರು

ಒಂದನೇ ಪುಟದಿಂದ...

'ಭೋಜನ ಕೂಟದ ವೇಳೆ ನನಗೆ ಒಂದು ಬಗೆಯ ಜೋರಾದ ಶಬ್ದ ಕೆಲವು ಬಾರಿ ಕೇಳಿಸಿತು. ಅದು ದೂರದಿಂದ ಬಂದಿತ್ತು. ದಾಳಿಕೋರ ನಾವಿದ್ದ ಪ್ರದೇಶದತ್ತ ಬರದಂತೆ ಭದ್ರತಾ ಪಡೆ ಸಿಬ್ಬಂದಿ ತಡೆದು, ಆತನನ್ನು ಬಂಧಿಸಿದ್ದಾರೆ' ಎಂದು ಶ್ಲಾಘಿಸಿದರು.

'ಬಂದೂಕುಧಾರಿಯು ಭದ್ರತಾ ಅಧಿಕಾರಿಯೊಬ್ಬರ ಮೇಲೆ ಗುಂಡು ಹಾರಿಸಿದ್ದಾನೆ. ಅದೃಷ್ಟವಶಾತ್ ಆ ಅಧಿಕಾರಿ ಗುಂಡು ನಿರೋಧಕ ಜಾಕೆಟ್ ಧರಿಸಿದ್ದರು. ಹೀಗಾಗಿ ಅವರು ಬದುಕುಳಿದಿದ್ದಾರೆ' ಎಂದು ವಿವರಿಸಿದರು. 'ಈ ಘಟನೆಯು ಇರಾನ್ ಜತೆಗಿನ ಯುದ್ಧಕ್ಕೆ ಸಂಬಂಧಿಸಿದೆ ಎಂದು ನಾನು ಭಾವಿಸುವುದಿಲ್ಲ' ಎಂದು ಅವರು ಪ್ರತಿಕ್ರಿಯಿಸಿದರು.

ಈ ಘಟನೆಯು ಅಮೆರಿಕದ ಅಧ್ಯಕ್ಷರ ಮೇಲೆ ಹೇಗೆ ಪರಿಣಾಮ ಬೀರಬಹುದು ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ನಾನು ಅಪಾಯಕಾರಿ ಸ್ಥಾನದಲ್ಲಿ ಕೆಲಸ ಮಾಡುತ್ತಿದ್ದೇನೆ. ಈ ಘಟನೆ ನಿರ್ಲಕ್ಷಿಸುವಂತಹದ್ದಲ್ಲ. ದಾಳಿ ಮಾಡಲು ಬಂದಿದ್ದ ವ್ಯಕ್ತಿಯ ಮಾನಸಿಕ ಸ್ಥಿತಿ ತಿಳಿದಿಲ್ಲ. ಆದಾಗ್ಯೂ ಇದರ ಬಗ್ಗೆ ಹೆಚ್ಚು ಯೋಚಿಸುವುದಿಲ್ಲ ಮತ್ತು ಎಂದಿನಂತೆಯೇ ಜೀವನ ನಡೆಸಲು ಇಚ್ಛಿಸುತ್ತೇನೆ' ಎಂದರು.

'ಹೆಚ್ಚುತ್ತಿರುವ ರಾಜಕೀಯ ಉದ್ವಿಗ್ನತೆ ಮತ್ತು ಹಿಂಸಾಚಾರದ ಹೊರತಾಗಿಯೂ ಅಮೆರಿಕನ್ನರು ತಮ್ಮ ನಡುವಿನ ಭಿನ್ನಾಭಿಪ್ರಾಯಗಳನ್ನು ಹೃದಯ ಶ್ರೀಮಂತಿಕೆಯಿಂದ ಪರಿಹರಿಸಿಕೊಳ್ಳಲು ಮುಂದಾಗಬೇಕು' ಎಂದರು.

ರಾಷ್ಟ್ರೀಯ ಏಕತೆಗೆ ಕರೆ

ಒಂದನೇ ಪುಟದಿಂದ...

ಬಳಿಕ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿರುವ ಟ್ರಂಪ್, '30 ದಿನಗಳಲ್ಲಿ ಭೋಜನ ಕೂಟವನ್ನು ಮರು ನಿಗದಿಪಡಿಸಲಾಗುವುದು' ಎಂದು ಹೇಳಿದ್ದಾರೆ.

ಡೊನಾಲ್ಡ್ ಟ್ರಂಪ್ ಅವರು ಇದಕ್ಕೂ ಮುನ್ನ ಎರಡು ಬಾರಿ ಹತ್ಯೆ ಯತ್ನದಿಂದ ಪಾರಾಗಿದ್ದಾರೆ. 2024ರ ಜುಲೈ 13ರಂದು ಪೆನ್ಸಿಲ್ವೇನಿಯಾದ ಬಟ್ಲರ್‌ನಲ್ಲಿ ನಡೆದ ಅಧ್ಯಕ್ಷೀಯ ಚುನಾವಣಾ ಪ್ರಚಾರ ರ‍್ಯಾಲಿ ವೇಳೆ ಅವರ ಮೇಲೆ ಗುಂಡಿನ ದಾಳಿ ನಡೆದಿತ್ತು. ಆಗ ಅವರ ಕಿವಿಯನ್ನು ಸವರಿಕೊಂಡು ಗುಂಡು ಹೋಗಿತ್ತು. ಕೂದಲೆಳೆ ಅಂತರದಲ್ಲಿ ಅವರು ಬದುಕುಳಿದರು. 2024ರ ಸೆಪ್ಟೆಂಬರ್ 15ರಂದು ಫ್ಲಾರಿಡಾದ ಪಾಮ್ ಬೀಚ್‌ನಲ್ಲಿ ಅವರ ಮೇಲೆ ದಾಳಿ ನಡೆಸಲು ಯತ್ನಿಸಿದ್ದ ವ್ಯಕ್ತಿಯನ್ನು ಭದ್ರತಾ ಪಡೆ ಸೆರೆಹಿಡಿದಿತ್ತು.

ಶೆಹಬಾಜ್–ಪೆಜೆಶ್ಕಿಯಾನ್ ಚರ್ಚೆ

ಒಂದನೇ ಪುಟದಿಂದ...

ಈ ಸಂದರ್ಭದಲ್ಲಿ ಶೆಹಬಾಜ್ ಷರೀಫ್ ಅವರು, ಶಾಂತಿ ಸ್ಥಾಪನೆಯ ನಿಟ್ಟಿನಲ್ಲಿ ಪ್ರಾಮಾಣಿಕ ಮಧ್ಯಸ್ಥಿಕೆ ವಹಿಸುವ ತಮ್ಮ ಬದ್ಧತೆಯ ಬಗ್ಗೆ ಒತ್ತಿ ಹೇಳಿದರು.

ಸುದೀರ್ಘ 50 ನಿಮಿಷ ಮಾತನಾಡಿದ ಉಭಯ ದೇಶಗಳ ನಾಯಕರು, ಪ್ರಸಕ್ತ ಪ್ರಾದೇಶಿಕ ಸ್ಥಿತಿಗತಿ ಮತ್ತು ಶಾಂತಿ, ಸ್ಥಿರತೆ ಕಾಪಾಡುವ ನಿಟ್ಟಿನಲ್ಲಿ ನಡೆಯುತ್ತಿರುವ ಪ್ರಯತ್ನಗಳ ಕುರಿತು ವಿಸ್ತೃತವಾಗಿ ಚರ್ಚಿಸಿದರು.

ಶಾಂತಿ ಸ್ಥಾಪನೆಗೆ ಸತತವಾಗಿ ಪ್ರಯತ್ನಿಸುತ್ತಿರುವ ಪಾಕಿಸ್ತಾನದ ಪ್ರಧಾನಿ ಶೆಹಬಾಜ್, ಫೀಲ್ಡ್ ಮಾರ್ಷಲ್ ಆಸೀಮ್ ಮುನೀರ್ ಮತ್ತು ಉಪಪ್ರಧಾನಿ ಇಶಾಕ್ ಡಾರ್ ಅವರಿಗೆ ಪೆಜೆಶ್ಕಿಯಾನ್ ಅವರು ಧನ್ಯವಾದ ತಿಳಿಸಿದರು.

ಶಾಂತಿ ಮಾತುಕತೆಗೆ ಸಂಬಂಧಿಸಿದಂತೆ ಇರಾನ್ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಅವರು, ಇರಾನ್–ಪಾಕಿಸ್ತಾನ ನಡುವಣ ಸಂಬಂಧವು ಭವಿಷ್ಯದಲ್ಲಿ ಮತ್ತಷ್ಟು ಬಲಗೊಳ್ಳಲಿದೆ ಎಂದು ಹೇಳಿದರು.

ಲೆಬನಾನ್ ಮೇಲೆ ಇಸ್ರೇಲ್ ದಾಳಿ: ಇರಾನ್ ಬೆಂಬಲಿತ ಹಿಜ್ಬುಲ್ಲಾ ಸಂಘಟನೆಯು ಕದನ ವಿರಾಮವನ್ನು ಉಲ್ಲಂಘಿಸಿದೆ ಎಂದು ಆರೋಪಿಸಿರುವ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಹಿಜ್ಬುಲ್ಲಾ ಮೇಲೆ ವೈಮಾನಿಕ ದಾಳಿಗೆ ಆದೇಶಿಸಿದ್ದಾರೆ.

ಇಸ್ರೇಲ್ ಕನಿಷ್ಠ ನಾಲ್ಕು ಕಡೆಗಳಲ್ಲಿ ವೈಮಾನಿಕ ದಾಳಿ ನಡೆಸಿದೆ. ದಾಳಿಯಲ್ಲಿ ಆರು ಮಂದಿ ಹತ್ಯೆಗೀಡಾಗಿದ್ದಾರೆ ಎಂದು ಲೆಬನಾನ್‌ನ ಆರೋಗ್ಯ ಇಲಾಖೆ ತಿಳಿಸಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

4ನೇ ವರ್ಷದ ಪುಣ್ಯ ತಿಥಿ

ರಾಮಕ್ಕ
ಲೇಟ್ ಬಿ. ಜಯರಾಂ ಧರ್ಮ ಪತ್ನಿ
ಮಾಜಿ ನಗರಸಭಾ ಸದಸ್ಯರು, ಮಲ್ಲೇಶ್ವರಂ
DOD: 27.04.2022
ಜೀವಾತ್ಮವು ಪರಮಾತ್ಮನಲ್ಲಿ ವಿಲೀನವಾಗುವುದೇ ಜೀವನದ ಸಾಕ್ಷಾತ್ಕಾರ
ದಿವಂಗತರ ಆತ್ಮಕ್ಕೆ ಶಾಂತಿ ಕೋರುವ ಕುಟುಂಬ ವರ್ಗದವರು
ದೂರವಾಣಿ: 9845344442, 9845091138, 23443118

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಉದ್ಯೋಗಾವಕಾಶ
General
Metro ರೈಲ್ವೆಗೆ ಟಾಮ್ ಆಪರೇಟರ್ಸ್ ಗುತ್ತಿಗೆ ಆಧಾರದ ಕೆಲಸ ನಿರ್ವಹಿಸಲು ಬೇಕಾಗಿದ್ದಾರೆ. ಕರ್ನಾಟಕ ಉದ್ಯೋಗ (ಸರ್ಕಾರಿ ನೋಂದಾಯಿತ) ಸಂಪರ್ಕಿಸಿ: 080-29909699, 9606155699
Part-Time Jobs
ಕರ್ನಾಟಕದಾದ್ಯಂತ ಮನೆಯಿಂದಲೇ ಕೆಲಸ. ಆಫೀಸ್‌ಗಳಿಗೆ, ಕಂಪನಿಗಳಿಗೆ ವಿದ್ಯಾರ್ಥಿನಿಯರು, ಮಹಿಳೆಯರು, ಯುವಕರು, ತಕ್ಷಣ ಬೇಕಾಗಿದ್ದಾರೆ ವಿದ್ಯಾರ್ಹತೆಯಿಲ್ಲದ ವರಿಗೂ. 20,000 / 25,000 ಕೊರಿಯರ್, 7090177446

56 ಗಿಗಾವಾಟ್ ವಿದ್ಯುತ್ ಉತ್ಪಾದನೆ; ಪ್ರಧಾನಿ ನರೇಂದ್ರ ಮೋದಿ ವಿಶ್ಲೇಷಣೆ

'ದೇಶದ ಅಭಿವೃದ್ಧಿಗೆ ಪವನ, ಸೌರಶಕ್ತಿ ಅಗತ್ಯ'

ಮನದ ಮಾತು

ನವದೆಹಲಿ (ಪಿಟಿಐ): 'ಸೌರ ಹಾಗೂ ಪವನ ವಿದ್ಯುತ್ ದೇಶದ ಅಭಿವೃದ್ಧಿಗೆ ಅಗತ್ಯವಾಗಿದೆ. ಇದು ಕೇವಲ ಪರಿಸರ ಸಂರಕ್ಷಣೆ ದೃಷ್ಟಿಯಿಂದ ಮಾತ್ರವಲ್ಲದೆ ದೇಶದ ಭವಿಷ್ಯ ರೂಪಿಸುವ ನಿಟ್ಟಿನಲ್ಲಿ ಮಹತ್ವದ ಪಾತ್ರ ವಹಿಸಲಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ.

ತಿಂಗಳ 'ಮನದ ಮಾತು' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ದೇಶದಲ್ಲಿ ಪ್ರತಿಯೊಬ್ಬರು ಕೂಡ ವಿದ್ಯುತ್ ಉಳಿಸಲು ಆದ್ಯತೆ ನೀಡುವ ಜೊತೆಗೆ ಶುದ್ಧ ಇಂಧನ ಬಳಕೆಗೆ ಹೆಚ್ಚಿನ ಆದ್ಯತೆ ನೀಡಬೇಕು' ಎಂದು ಹೇಳಿದ್ದಾರೆ.

'ಪವನಶಕ್ತಿಯಲ್ಲಿ ದೊಡ್ಡ ಯಶಸ್ಸು ಸಾಧಿಸಿದ್ದೇವೆ. ಕಳೆದ ವರ್ಷಾಂತ್ಯಕ್ಕೆ ದೇಶದಲ್ಲಿ 56 ಗಿಗಾವಾಟ್ ಪವನಶಕ್ತಿ ಉತ್ಪಾದನೆಯಾಗಿದ್ದರೆ, ಈಗ 6 ಮೆಗಾವಾಟ್ ಹೆಚ್ಚುವರಿಯಾಗಿ ಸೇರ್ಪಡೆಯಾಗಿದೆ. ಪವನಶಕ್ತಿ ಉತ್ಪಾದನೆಯಲ್ಲಿ ಜಾಗತಿಕವಾಗಿ ಭಾರತವು ನಾಲ್ಕನೇ ಸ್ಥಾನದಲ್ಲಿದೆ. ಹೆಚ್ಚುವರಿಯಾಗಿ 28 ಗಿಗಾವಾಟ್ ಪವನಶಕ್ತಿ ಉತ್ಪಾದನೆಯೂ ನಿರ್ಮಾಣ ಹಂತದಲ್ಲಿದೆ' ಎಂದು ವಿವರಿಸಿದ್ದಾರೆ.

'ಸುಮಾರು ಶೇಕಡ 45ರಷ್ಟು ವಿದ್ಯುತ್ ಹೆಚ್ಚು ಬೇಡಿಕೆ ಇರುವ ಸಮಯದಲ್ಲಿಯೇ ಉತ್ಪಾದನೆಯಾಗುತ್ತಿದೆ' ಎಂದು ಹೇಳಿದ್ದಾರೆ.

ಬಿದಿರಿನ ಉತ್ಪನ್ನ ಬಳಸಿ: ಈಶಾನ್ಯ ರಾಜ್ಯಗಳಿಂದ ಕನಿಷ್ಠ ಒಂದು ಬಿದಿರಿನ ಉತ್ಪನ್ನವನ್ನು ಖರೀದಿಸುವಂತೆ ಸಲಹೆ ನೀಡಿದ ಪ್ರಧಾನಿ, ಇದರಿಂದ ಅವರ ಶ್ರಮಕ್ಕೆ ಪ್ರೋತ್ಸಾಹ ನೀಡಿದಂತಾಗುತ್ತದೆ ಎಂದು ತಿಳಿಸಿದ್ದಾರೆ.

'ಬಿದಿರನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಕೊಂಡೊಯ್ಯುವುದು ಕಷ್ಟ. ಇದರಿಂದ ಈ ಉದ್ದಿಮೆಯಿಂದ ದೂರ ಸರಿಯಲು ಯತ್ನಿಸಿದರು. 2017ರಲ್ಲಿ ಬಿದಿರನ್ನು ಮರದ ವರ್ಗದಿಂದ ತೆಗೆದು ಹುಲ್ಲು ಎಂದು ಪರಿಗಣಿಸಲಾಯಿತು. ಇದರಿಂದ ಈಶಾನ್ಯ ರಾಜ್ಯದಾದ್ಯಂತ ಉದ್ಯಮವು ಮತ್ತೆ ಚೇತರಿಸಿಕೊಂಡಿದೆ' ಎಂದು ತಿಳಿಸಿದ್ದಾರೆ.

'ಮನದ ಮಾತಿನ' ಪ್ರಮುಖ ಅಂಶಗಳು

- ತಮಿಳುನಾಡಿನ ಕಲ್ಪಕಂ ಫಾಸ್ಟ್‌ಬ್ರೀಡ್ ರಿಯಾಕ್ಟರ್ ನಿರ್ಣಾಯಕ ಹಂತಕ್ಕೆ ತಲುಪಿದೆ
- ಇಡೀ ರಿಯಾಕ್ಟರ್ ಸ್ಥಳೀಯ ತಂತ್ರಜ್ಞಾನ ಬಳಸಿ ನಿರ್ಮಾಣ
- ಗಣಿತ ಒಲಿಂಪಿಯಾಡ್‌ನಲ್ಲಿ ಭಾರತದ ವಿದ್ಯಾರ್ಥಿನಿಯರಿಗೆ 6ನೇ ಸ್ಥಾನ
- ಗೌತಮ ಬುದ್ಧನ ಸಂದೇಶ ಇಂದಿಗೂ ಪ್ರಸ್ತುತ
- ಜಗತ್ತಿನಲ್ಲಿ ಉದ್ವಿಗ್ನತೆ ಹೆಚ್ಚುವ ವೇಳೆ ಬುದ್ಧನ ಬೋಧನೆ ಮಹತ್ವ ಪಡೆದಿದೆ
- ಭಾರತದ ಹೈನುಗಾರಿಕ ಉತ್ಪನ್ನ 'ಚೀಸ್'ಗೆ ಜಾಗತಿಕ ಮಾನ್ಯತೆ
- 'ವೇವ್ಸ್' ಒಟಿಟಿ ಫ್ಲ್ಯಾಟ್‌ಫಾರ್ಮ್‌ನಲ್ಲಿ 'ಬೀಟಿಂಗ್ ರಿಟ್ರೀಟ್' ಕೇಳಲು ಅವಕಾಶ
- ರವೀಂದ್ರನಾಥ ಟ್ಯಾಗೋರ್ ಅವರು ಚಿಂತಕ, ಬರಹಗಾರ ಮಾತ್ರವಲ್ಲ, ಹಲವು ಸಂಸ್ಥೆಗಳನ್ನು ರೂಪಿಸಿದ ಮಹಾನ್ ವ್ಯಕ್ತಿ

'2027ರ ಗಣತಿಯಲ್ಲಿ ಭಾಗಿಯಾಗಿ'

'ಈಗಾಗಲೇ ಆರಂಭಗೊಂಡಿರುವ ಗಣತಿಯು ಸರ್ಕಾರದ ಕೆಲಸವಷ್ಟೇ ಅಲ್ಲ, ದೇಶದ ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯವಾಗಿದ್ದು, ಭಾಗವಹಿಸುವುದು ಅತ್ಯಗತ್ಯವಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ.

'ಗಣತಿ ಪ್ರಕ್ರಿಯೆಯಲ್ಲಿ ಜನರು ನೀರುವ ಮಾಹಿತಿಯು ಸುರಕ್ಷಿತ ಹಾಗೂ ಗೋಪ್ಯವಾಗಿರಲಿದ್ದು, ಡಿಜಿಟಲ್ ಸುರಕ್ಷತೆಗೆ ಆದ್ಯತೆ ನೀಡಲಾಗಿದೆ. ಇದರ ಯಶಸ್ಸಿಗೆ ಪ್ರತಿಯೊಬ್ಬರು ಕೂಡ ಭಾಗಿಯಾಗಬೇಕು' ಎಂದು ಸಲಹೆ ನೀಡಿದ್ದಾರೆ.

ಬೈಲುಕುಪ್ಪೆ ಟಿಬೆಟಿಯನ್ ಕ್ಯಾಂಪ್, ಅಲ್ಲಿನ ಪ್ರಕೃತಿ ಶ್ಲಾಘಿಸಿದ ಮೋದಿ

ಪ್ರಜಾವಾಣಿ ವಾರ್ತೆ

ಮೈಸೂರು: ಪಿರಿಯಾಪಟ್ಟಣ ತಾಲ್ಲೂಕು ಬೈಲುಕುಪ್ಪೆಯಲ್ಲಿರುವ ಟಿಬೆಟಿಯನ್ ಕ್ಯಾಂಪ್‌ನಲ್ಲಿರುವ ಕರ್ಮ ಮಠದ ಬಗ್ಗೆ ಪ್ರಧಾನಿ ಮೋದಿ, ಭಾನುವಾರ 'ಮನ್ ಕಿ ಬಾತ್' ರೇಡಿಯೊ ಕಾರ್ಯಕ್ರಮದಲ್ಲಿ ಪ್ರಸ್ತಾಪಿಸಿದ್ದಾರೆ. 'ಅಲ್ಲಿ ಪ್ರಕೃತಿ ಸಂರಕ್ಷಣೆ ನಿಟ್ಟಿನಲ್ಲಿ ನಡೆದಿರುವ ಪ್ರಯತ್ನಗಳು ಗಮನಾರ್ಹವಾಗಿವೆ' ಎಂದು ಶ್ಲಾಘಿಸಿದ್ದಾರೆ.

ಬೌದ್ಧ ಸಂಪ್ರದಾಯ ಪ್ರಕೃತಿ ಜೊತೆಗೆ ಹೊಂದಿರುವ ಸಂಬಂಧವನ್ನು ಈ ಬೌದ್ಧವಿಹಾರ ತೋರಿಸುತ್ತಿದೆ. ಪ್ರಕೃತಿ ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದೆ. ಇದಕ್ಕೆ ಬೈಲುಕುಪ್ಪೆಯಲ್ಲಿರುವ ಟಿಬೆಟಿಯನ್ ಕ್ಯಾಂಪ್ ಉದಾಹರಣೆಯಾಗಿದೆ ಎಂದು ಹೇಳಿದ್ದಾರೆ.

'ಕರ್ನಾಟಕದ ಈ ಪ್ರದೇಶವು 100 ಎಕರೆಗಳಲ್ಲಿ ಹರಡಿದೆ. ಇದನ್ನು 700ಕ್ಕೂ ಹೆಚ್ಚು ಪ್ರಭೇದದ ಮರಗಳಿವೆ. ಧರ್ಮಗುರು ಸಮ್ಟೆನ್ಲಿಂಗ್ಪಾ ರಿನ್‌ಪೋಚೆ ಅವರ ಮಾರ್ಗದರ್ಶನದಲ್ಲಿ,

ಟಿಬೆಟಿಯನ್ ಕ್ಯಾಂಪ್‌ನಲ್ಲಿರುವ ಗೋಲ್ಡನ್ ಟೆಂಪಲ್‌ನ ಒಳನೋಟ
ಪ್ರಜಾವಾಣಿ ಚಿತ್ರ

ಬರಡಾಗಿದ್ದ ಭೂಮಿಯನ್ನು 100 ಎಕರೆ ಅರಣ್ಯ ಸಂರಕ್ಷಣಾ ವಲಯವಾಗಿ ನಿರ್ಮಾಣಗೊಂಡಿದೆ' ಎಂದು ಉಲ್ಲೇಖಿಸಿದ್ದಾರೆ.

1995ರಲ್ಲಿ ರಿನ್‌ಪೋಚೆ ಅವರು ಪರಿಸರ ಸಂರಕ್ಷಣೆ ಮತ್ತು ಪ್ರಕೃತಿ ಪುನರುಜ್ಜೀವನದ ಧ್ಯೇಯದೊಂದಿಗೆ ಸ್ಥಾಪಿಸಿದ ಬೋಧಿಸತ್ವ ಟ್ರಸ್ಟ್ ಅಡಿ ಕಾರ್ಯನಿರ್ವಹಿಸುತ್ತಿದೆ. ಈ ಟ್ರಸ್ಟ್ ನಳಂದ ಶಾಲೆಯನ್ನೂ ನಡೆಸುತ್ತಿದೆ. ಇದು ಸನ್ಯಾಸಿಗಳಿಗೆ ಸುಸ್ಥಿರ ಜೀವನ ಪದ್ಧತಿ ತರಬೇತಿ, ಶಿಕ್ಷಣ ನೀಡುವ ಗುರುಕುಲ ಪದ್ಧತಿಯ ಸಂಸ್ಥೆಯಾಗಿದೆ.

ವಿದ್ಯಾ ಬಾಲನ್

ಜೆರಾಕ್ಸ್‌ನಲ್ಲಿ ತದ್ರೂಪಿಗಳ ಆಟ

ಮಲಯಾಳದಲ್ಲಿ ‘ಮಿನ್ನಲ್ ಮುರುಳಿ’ ಎಂಬ ಸಿನಿಮಾ ತೆರೆಕಂಡಿತ್ತು. ಪ್ರತ್ಯೇಕವಾಗಿ ಒಂದೇ ರಾತ್ರಿ ಬಡಿದ ಸಿಡಿಲು ನಾಯಕ ಹಾಗೂ ಖಳನಾಯಕನಿಗೆ ತಾಗುತ್ತದೆ. ಅದು ಅವರಿಗೆ ಊಹಿಸಲಾಗದ ಶಕ್ತಿ ನೀಡುತ್ತದೆ. ಇದನ್ನು ಹಾಸ್ಯ ಮಿಶ್ರಿತ ಕಥೆಯಲ್ಲಿ ನಿರ್ದೇಶಕರು ತೆರೆಗೆ ತಂದಿದ್ದರು. ‘ಜೆರಾಕ್ಸ್’ ಇದೇ ಮಾದರಿಯ ಕಥೆ ಹೊಂದಿದೆ. ಇಲ್ಲಿ ನಾಯಕನಿಗೆ ಸಿಡಿಲು ಬಡಿಯುವುದಿಲ್ಲ. ಬದಲಾಗಿ ಆತ ಕಟ್ಟಿರುವ ತಾಯತದಲ್ಲಿ ಅಪರೂಪದ ಶಕ್ತಿ ಅಡಗಿರುತ್ತದೆ.

ಆರು ಸಂಚಿಕೆಗಳನ್ನು ಒಳಗೊಂಡ ಚಿಕ್ಕ ಸರಣಿ ಇದು. ಸಿನಿಮಾ ರೂಪದಲ್ಲಿ ಬಂದಿದ್ದರೆ ಸುಮಾರು ಎರಡು ಗಂಟೆಯ ಅವಧಿಯಲ್ಲಿರುತ್ತಿತ್ತು. ಮಳವಳ್ಳಿಯ ರಾಯದುರ್ಗದ ಪ್ರಕಾಶನಿಗೆ (ನಾಗಭೂಷಣ) ಬಾಲ್ಯದಲ್ಲಿ ಗುಣವಾಗದ ಹೊಟ್ಟೆನೋವು. ಆತನ ಹೆತ್ತವರು ಊರ ಮಾನಿದೇವರ ಗುಡಿಯಲ್ಲಿ ಆತನಿಗೊಂದು ತಾಯತ ಕಟ್ಟಿಸುತ್ತಾರೆ. ಕಟ್ಟುವ ಸಂದರ್ಭದಲ್ಲಿ ಅದಕ್ಕೆ ಬಡಿದ ಸಿಡಿಲು ಅದರೊಳಗೊಂದು ಶಕ್ತಿ ತುಂಬುತ್ತದೆ. ಇಂತಹ ತಾಯತ ಹೊಂದಿರುವ ಪ್ರಕಾಶ ಯುವಕನಾದಾಗ ‘ಜೆರಾಕ್ಸ್’ ಅಂಗಡಿಯಲ್ಲಿ ಕೆಲಸ ಮಾಡುತ್ತಿರುತ್ತಾನೆ. ಒಂದು ದಿನ ಆ ಜೆರಾಕ್ಸ್ ಯಂತ್ರಕ್ಕೆ ತಾಯತ ತಾಗಿದಾಗ ಕಥೆ ತೆರೆದುಕೊಳ್ಳುತ್ತದೆ. ಊರಲ್ಲಿ ತದ್ರೂಪಿಗಳ ಓಡಾಟ ಶುರುವಾಗುತ್ತದೆ.

ವೆಬ್‌ಸರಣಿಯಾಗಿ ‘ಜೆರಾಕ್ಸ್’ ಅವಧಿ ಬಹಳ ಸಣ್ಣದಿದೆ. ನಿರ್ದೇಶಕರು ಭಿನ್ನವಾದ ಕುತೂಹಲಕಾರಿ ವಿಷಯವನ್ನಿಟ್ಟು ಕಥೆ ಹೆಣೆದಿದ್ದಾರೆ. ಸರಣಿ ಕೊಲೆ, ಕೊಲೆಗಳ ತನಿಖೆಯ ಕಥೆಗಳಿದ್ದರಷ್ಟೇ ವೆಬ್‌ಸರಣಿಗಳನ್ನು ನೋಡುತ್ತಾರೆ ಎನ್ನುವ ಸಂದರ್ಭದಲ್ಲಿ ಹಾಸ್ಯ ಪ್ರಧಾನ ಫ್ಯಾಂಟಸಿ ಥ್ರಿಲ್ಲರ್ ಕಥೆ ಬರೆದಿರುವುದು ಸ್ವಾಗತಾರ್ಹ. ಸಂಚಿಕೆಗಳ ಮಿತಿಯು ತರಬಹುದಾಗಿದ್ದ ಹಲವು ವಿಷಯಗಳ ಸೇರ್ಪಡೆಗೂ ಅಡ್ಡಿಯಾದಂತೆ ‘ಜೆರಾಕ್ಸ್’ನಲ್ಲಿ ಭಾಸವಾಗುತ್ತದೆ.

ಜೆರಾಕ್ಸ್ (ಕನ್ನಡ ವೆಬ್‌ಸರಣಿ)

- **ನಿರ್ಮಾಣ:** ಧನಂಜಯ
- **ನಿರ್ದೇಶನ:** ಶ್ರೀನಿಧಿ ಬೆಂಗಳೂರು‘
- **ವೇದಿಕೆ:** ಜೀ5
- **ತಾರಾಗಣ:** ನಾಗಭೂಷಣ್, ಪಾಯಲ್ ಚಂಗಪ್ಪ, ಓಂ ಪ್ರಕಾಶ್‌ರಾವ್, ಮಂಜು ಪಾವಗಡ, ಶ್ರೀವತ್ಸ, ಯಶವಂತ ಶೆಟ್ಟಿ, ವಿಜಯ್ ಪ್ರಸಾದ್, ತುಕಾಲಿ ಸಂತು, ಜಗ್ಗಪ್ಪ, ಸಿದ್ದು ಮಂಡ್ಯ, ಸುಧಾಕರ್ ಗೌಡ ಮತ್ತಿತರರು.

ಪಟ್ಟಣದಲ್ಲಿ ನಡೆಯುವ ಕುತೂಹಲಕಾರಿ ರಾಜಕೀಯ ಮಾತುಕತೆ, ಚರ್ಚೆಗಳು, ಆಚರಣೆ, ಕಟ್ಟೆ ಪಂಚಾಯ್ತಿ, ಜನರ ಜೀವನವನ್ನು ಇನ್ನಷ್ಟು ಕಟ್ಟಿಕೊಡಲು ಅವಕಾಶವಿತ್ತು. ಪಾತ್ರಗಳನ್ನಷ್ಟೇ ಕೇಂದ್ರೀಕರಿಸಿರುವ ಕಾರಣದಿಂದ ಅವುಗಳ ಸುತ್ತಮುತ್ತಲಿನ ಜನಜೀವನ ಸರಣಿಯಲ್ಲಿ ಸೆರೆಯಾಗಿಲ್ಲ. ‘ಜೆರಾಕ್ಸ್’ ಪಾತ್ರಗಳನ್ನಿಟ್ಟುಕೊಂಡು ಇನ್ನಷ್ಟು ಹಾಸ್ಯ ಸನ್ನಿವೇಶಗಳನ್ನು ಸೃಷ್ಟಿಸಬಹುದಿತ್ತು. ಕಥೆಯ ಸೂಕ್ಷ್ಮ ಭಾಗವನ್ನು ರಿಲೀಸ್‌ಗೂ ಮೊದಲೇ ಬಿಟ್ಟುಕೊಟ್ಟಿರುವ ಕಾರಣ ಕಥೆಯು ಕುತೂಹಲ ಉಳಿಸಿಕೊಳ್ಳುವುದಿಲ್ಲ. ‘ಜೆರಾಕ್ಸ್’ ಗುಟ್ಟುಬಿಟ್ಟುಕೊಡದೆ ಇಡೀ ಕಥೆಯನ್ನು ರಿವರ್ಸ್ ಸ್ಕ್ರೀನ್‌ಪ್ಲೇಯಲ್ಲಿ ಹೇಳುವ ಅವಕಾಶವಿತ್ತು.

ಕಥೆ ಭಿನ್ನವಾಗಿದ್ದರೂ ಅದನ್ನು ಸೂಕ್ತ ರೀತಿಯಲ್ಲಿ ಬೆಳೆಸುವಲ್ಲಿ ತಂಡ ಎಡವಿದಂತಿದೆ. ಕಥೆಯ ಅಂತ್ಯದ ಬಗ್ಗೆ ಇನ್ನಷ್ಟು ಯೋಚನೆ, ಕೆಲಸ ಮಾಡಬಹುದಿತ್ತು. ಕಥೆಯು ಹಠಾತ್ ಕೊನೆಗೊಳ್ಳುವುದು ಇದಕ್ಕೆ ಸಾಕ್ಷಿ. ಜನರನ್ನು ನಗಿಸುವ ಸಾಮರ್ಥ್ಯ ಹೊಂದಿರುವ ನಾಗಭೂಷಣ್ ಹಾಗೂ ಶ್ರೀವತ್ಸ ಕಾಂಬಿನೇಷನ್ ದೃಶ್ಯಗಳನ್ನು ಮತ್ತಷ್ಟು ಅಳವಡಿಸಿಕೊಳ್ಳಬೇಕಿತ್ತು. ರಾಜ್‌ಕುಮಾರ್ ಅವರ ‘ಜೆರಾಕ್ಸ್’ ರೂಪಕ್ಕೆ ಮಾತ್ರ ಜೀವ ಇರುವುದು, ಏಕೆ ಕೊನೆಯಲ್ಲಿ ಆ ಪಾತ್ರವಿರುವುದಿಲ್ಲ ಎನ್ನುವುದಕ್ಕೆ ಉತ್ತರವಿಲ್ಲ.

ನಟನೆಯಲ್ಲಿ ನಾಗಭೂಷಣ್ ‘ಪ್ರಕಾಶ’ನಾಗಿ ಜೀವಿಸಿದ್ದಾರೆ. ರಾಜ್‌ಕುಮಾರ್ ಅವರ ಅಭಿಮಾನಿಯಾಗಿ ಮಿಂಚಿದ್ದಾರೆ. ‘ದೊಡ್ಡಪ್ಪ’ನ ಪಾತ್ರದಲ್ಲಿ ಓಂಪ್ರಕಾಶ್ ರಾವ್ ನಗಿಸುತ್ತಾರೆ. ಮಂಜು ಪಾವಗಡ, ಪಾಯಲ್ ಚಂಗಪ್ಪ, ತುಕಾಲಿ ಸಂತೋಷ್ ಎರಡು ಶೇಡ್‌ಗಳ ಪಾತ್ರವನ್ನು ಚೆನ್ನಾಗಿ ನಿಭಾಯಿಸಿದ್ದಾರೆ. ವಿಜಯ್ ಪ್ರಸಾದ್, ಸುಧಾಕರ್ ಗೌಡ, ಜಗಪ್ಪ, ಯಶವಂತ ಶೆಟ್ಟಿ ತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ.

ಅಭಿಲಾಷ್ ಪಿ.ಎಸ್.

ಪವನ್ ಒಡೆಯರ್, ಶಿವರಾಜ್‌ಕುಮಾರ್, ಕೆ.ವೆಂಕಟ್ ನಾರಾಯಣ್

ಬೇಲ್‌ನಲ್ಲಿ ಶಿವರಾಜ್‌ಕುಮಾರ್

ಹಲವು ತಿಂಗಳ ಹಿಂದೆಯೇ ಶಿವರಾಜ್‌ಕುಮಾರ್ ಅವರಿಗೆ ಪವನ್ ಒಡೆಯರ್ ಆ್ಯಕ್ಷನ್ ಕಟ್ ಹೇಳಲಿದ್ದಾರೆ ಎನ್ನುವ ಸುದ್ದಿ ಹೊರಬಿದ್ದಿತ್ತು. ಇದೀಗ ಆ ಸಿನಿಮಾದ ಫಸ್ಟ್‌ಲುಕ್ ಬಿಡುಗಡೆಯಾಗಿದ್ದು, ಶೀರ್ಷಿಕೆಯನ್ನೂ ಅನಾವರಣಗೊಳಿಸಲಾಗಿದೆ.

ಪ್ರತಿಷ್ಠಿತ ನಿರ್ಮಾಣ ಸಂಸ್ಥೆ ಕೆವಿಎನ್ ಮೊದಲ ಬಾರಿಗೆ ಶಿವರಾಜ್‌ಕುಮಾರ್ ಅವರ ಸಿನಿಮಾವನ್ನು ನಿರ್ಮಾಣ ಮಾಡುತ್ತಿದೆ. ವೆಂಕಟ್ ಕೆ.ನಾರಾಯಣ್, ಶಿವರಾಜ್‌ಕುಮಾರ್ ಹಾಗೂ ಪವನ್ ಒಡೆಯರ್ ಕಾಂಬಿನೇಷನ್‌ನಲ್ಲಿ ಬರುತ್ತಿರುವ ಸಿನಿಮಾಗೆ ‘ಬೇಲ್’ ಎಂಬ ಶೀರ್ಷಿಕೆ ಇಡಲಾಗಿದೆ. ಕೆಂಬಣ್ಣದ ಹಿನ್ನೆಲೆಯಲ್ಲಿ ಮಳೆಯಲ್ಲಿ ಕೊಡೆ ಹಿಡಿದು ಶಿವರಾಜ್‌ಕುಮಾರ್ ನಿಂತಿರುವ ಪೋಸ್ಟರ್ ಕುತೂಹಲ ಮೂಡಿಸಿದೆ.

‘ಗೂಗ್ಲಿ’, ‘ರಣವಿಕ್ರಮ’, ‘ನಟಸಾರ್ವಭೌಮ’, ‘ರೇಮೋ’ ಸೇರಿದಂತೆ ಹಲವು ಹಿಟ್‌ಗಳನ್ನು ಕೊಟ್ಟಿರುವ ಪವನ್ ಮೊದಲ ಬಾರಿಗೆ ಶಿವರಾಜ್‌ಕುಮಾರ್ ಅವರಿಗೆ ನಿರ್ದೇಶನ ಮಾಡಲಿದ್ದಾರೆ. ‘ಇದು ನನಗೂ ಮತ್ತು ನಿರ್ಮಾಣ ಸಂಸ್ಥೆಗೂ ಅತ್ಯಂತ ವಿಶೇಷವಾದ ಸಿನಿಮಾ. ಶೀಘ್ರದಲ್ಲೇ ಟೀಸರ್ ಬಿಡುಗಡೆಗೊಳಿಸಲಿದ್ದೇವೆ. ಶಿವಣ್ಣ ಅವರೊಂದಿಗೆ ಕೆಲಸ ಮಾಡುವ ನನ್ನ ಕನಸು ನನಸಾಗಿದೆ. ಹಿಂದೆಂದೂ ಕಾಣಿಸಿಕೊಳ್ಳದ ರೀತಿಯಲ್ಲಿ ಅವರನ್ನು ಪ್ರಸ್ತುತಪಡಿಸುತ್ತಿರುವುದು ನನಗೆ ಸಂತೋಷ’ ಎಂದಿದ್ದಾರೆ ಪವನ್.

ಸದ್ಯ ಕನ್ನಡದಲ್ಲಿ ಹೇಮಂತ್ ಎಂ.ರಾವ್ ನಿರ್ದೇಶನದ ‘666 ಆಪರೇಷನ್ ಡ್ರೀಮ್ ಥಿಯೇಟರ್’, ಶ್ರೀನಿ ನಿರ್ದೇಶನದ ‘ಎ ಫಾರ್ ಆನಂದ್’ ಹಾಗೂ ಪವನ್ ಒಡೆಯರ್ ನಿರ್ದೇಶನದ ‘ಬೇಲ್’ ಪ್ರಾಜೆಕ್ಟ್‌ಗಳು ಶಿವರಾಜ್‌ಕುಮಾರ್ ಅವರ ಕೈಯಲ್ಲಿದೆ.

ಅಕ್ಕಿ ಜೊತೆ ವಿದ್ಯಾ ಬಾಲನ್

ಅನೀಸ್ ಬಜ್ಮೀ ನಿರ್ದೇಶನದ ಹೊಸ ಸಿನಿಮಾದಲ್ಲಿ ವಿದ್ಯಾ ಬಾಲನ್ ಅವರ ಜೊತೆ ಅಕ್ಷಯ್ ಕುಮಾರ್ ಮತ್ತೊಮ್ಮೆ ತೆರೆಹಂಚಿಕೊಳ್ಳಲಿದ್ದಾರೆ. ತಮ್ಮ ಹೊಸ ಸಿನಿಮಾ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ಅಕ್ಷಯ್ ಕುಮಾರ್ ಮಾಹಿತಿ ನೀಡಿದ್ದಾರೆ.

ಈ ಹಿಂದೆ ‘ಹೇ ಬೇಬಿ’, ‘ಭೂಲ್ ಭುಲಯ್ಯ’ ಹಾಗೂ ‘ಮಿಷನ್ ಮಂಗಲ್’ ಸಿನಿಮಾದಲ್ಲಿ ಅಕ್ಷಯ್–ವಿದ್ಯಾ ಬಾಲನ್ ಜೊತೆಯಾಗಿ ನಟಿಸಿದ್ದರು. ಇದು ಅವರಿಬ್ಬರ ನಾಲ್ಕನೇ ಸಿನಿಮಾ ಆಗಿರಲಿದೆ. ಸಿನಿಮಾದ ಶೀರ್ಷಿಕೆ ಮತ್ತು ಕಥಾಹಂದರದ ಬಗ್ಗೆ ಚಿತ್ರತಂಡ ಇನ್ನಷ್ಟೇ ಮಾಹಿತಿ ನೀಡಬೇಕಿದೆ. ಇದೊಂದು ಕಾಮಿಡಿ ಥ್ರಿಲ್ಲರ್ ಸಿನಿಮಾವಾಗಿರಲಿದ್ದು, ದಿಲ್ ರಾಜು ನಿರ್ಮಾಣ ಮಾಡಲಿದ್ದಾರೆ ಎನ್ನಲಾಗಿದೆ. ‘ಸಿಂಗ್ ಈಸ್ ಕಿಂಗ್’, ‘ವೆಲ್‌ಕಮ್’ ಹಾಗೂ ‘ಥ್ಯಾಂಕ್ಯೂ’ ಬಳಿಕ ಬಜ್ಮೀ ಜೊತೆಗಿನ ಹೊಸ ಪ್ರಾಜೆಕ್ಟ್ ಇದಾಗಿದೆ. ಇತ್ತೀಚೆಗೆ ತೆರೆಕಂಡ ಅಕ್ಷಯ್ ಕುಮಾರ್ ನಟನೆಯ ಪ್ರಿಯದರ್ಶನ್ ನಿರ್ದೇಶನದ ‘ಭೂತ್ ಬಂಗ್ಲಾ’ ವಿಶ್ವದಾದ್ಯಂತ ₹100 ಕೋಟಿ ಗಳಿಸಿದೆ. ಇದರ ಬೆನ್ನಲ್ಲೇ ಅಕ್ಷಯ್ ಹೊಸ ಸಿನಿಮಾ ಘೋಷಿಸಿದ್ದಾರೆ.

‘ಮಹಿಳೆಯರ ಸುರಕ್ಷತೆಗೆ ಬಿಜೆಪಿ ಬದ್ಧ’

ಆರ್.ಜಿ.ಕರ್ ಪ್ರಕರಣದ ಸಂತ್ರಸ್ತೆ ತಾಯಿ ಬಿಜೆಪಿಯಿಂದ ಕಣಕ್ಕೆ: ಪ್ರಧಾನಿ ಮೋದಿ

ಬಂಗಾಂವ್, (ಪಶ್ಚಿಮ ಬಂಗಾಳ) (ಪಿಟಿಐ): ‘ಮಹಿಳೆಯರನ್ನು ಹಿಂಸಿಸುವ ಗೂಂಡಾಗಳಿಗೆ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷವು ಆಶ್ರಯ ನೀಡುತ್ತಿದ್ದು, ಸಂದೇಶ್‌ಖಾಲಿಯ ಸಂತ್ರಸ್ತೆಗೆ ಮತ್ತು ಆರ್.ಜಿ.ಕರ್ ಸಂತ್ರಸ್ತೆಯ ತಾಯಿಗೆ ಬಿಜೆಪಿ ಟಿಕೆಟ್ ನೀಡುವ ಮೂಲಕ ಮಹಿಳೆಯರ ಸುರಕ್ಷತೆಯನ್ನು ಖಾತರಿಪಡಿಸುವ ಪಕ್ಷದ ಬದ್ಧತೆಗೆ ಸಾಕ್ಷಿಯಾಗಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ.

ಉತ್ತರ 24 ಪರಗಣ ಜಿಲ್ಲೆಯ ಬಂಗಾಂವ್‌ನ ಠಾಕೂರ್ ನಗರದಲ್ಲಿ ಭಾನುವಾರ ಮತುವಾ ಸುಮದಾಯವನ್ನು ಉದ್ದೇಶಿಸಿ ಮಾತನಾಡಿದ ಅವರು, ‘ನೆರೆಯ ದೇಶದಲ್ಲಿ ಧಾರ್ಮಿಕ ಕಿರುಕುಳಕ್ಕೆ ತುತ್ತಾಗಿ ಭಾರತದಲ್ಲಿ ಆಶ್ರಯ ಪಡೆದವರಿಗೆ ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಅಡಿಯಲ್ಲಿ ಪೌರತ್ವ ನೀಡಲಾಗುವುದು’ ಎಂದರು.

ಹಿಂಗಲ್‌ಗಂಜ್ ಕ್ಷೇತ್ರದಿಂದ ಸಂತ್ರಸ್ತೆಗೆ ಹಾಗೂ ಪಾನೀಹಾಟಿ ಕ್ಷೇತ್ರದಿಂದ ಆರ್.ಜಿ.ಕರ್ ಸಂತ್ರಸ್ತೆಯ ತಾಯಿಗೆ ಬಿಜೆಪಿ ಟಿಕೆಟ್ ನೀಡಿದೆ.

2024ರಲ್ಲಿ ಸ್ಥಳೀಯ ಟಿಎಂಸಿ ನಾಯಕರಿಂದ ಮಹಿಳೆಯರ ಮೇಲೆ ನಡೆದ ಸಾಮೂಹಿಕ ಲೈಂಗಿಕ ದೌರ್ಜನ್ಯದಿಂದ ಸಂದೇಶ್‌ಖಾಲಿ ರಾಷ್ಟ್ರಮಟ್ಟದಲ್ಲಿ ಗಮನಸೆಳೆದಿತ್ತು. ಅದೇ ವರ್ಷ ಆರ್.ಜಿ.ಕರ್ ಆಸ್ಪತ್ರೆಯಲ್ಲಿ ವೈದ್ಯೆಯ ಮೇಲೆ ಅತ್ಯಾಚಾರವೆಸಗಿ ಹತ್ಯೆ ಮಾಡಲಾಗಿತ್ತು.

‘ತೃಣಮೂಲ ಕಾಂಗ್ರೆಸ್ ಸರ್ಕಾರದ ಅಡಿಯಲ್ಲಿ ಸಣ್ಣ ಪ್ರಮಾಣದ ರಾಜಕಾರಣಿ ಕೂಡ ಗೂಂಡಾನಂತೆ ವರ್ತಿಸುತ್ತಿದ್ದಾನೆ. ಟಿಎಂಸಿಯು ಅತ್ಯಂತ ಕ್ರೂರವಾದ ಸರ್ಕಾರ ನಡೆಸುತ್ತಿದ್ದು, ಗೂಂಡಾಗಳ ಮೂಲಕ ಮಹಿಳೆಯರಿಗೆ ಹಿಂಸೆ ನೀಡುತ್ತಿದೆ. ಈ ಬಾರಿ ಬದಲಾವಣೆ ಸಮಯ ಬಂದಿದ್ದು, ಸಂತ್ರಸ್ತ ಮಹಿಳೆಯರಿಗೆ ಮೇ 4ರಂದು ರಾಜ್ಯದಲ್ಲಿ ರಚನೆಯಾಗಲಿರುವ ಬಿಜೆಪಿ ಸರ್ಕಾರವು ನ್ಯಾಯ ಒದಗಿಸಲಿದೆ’ ಎಂದು ಮೋದಿ ಭರವಸೆ ನೀಡಿದ್ದಾರೆ.

ಎರಡನೇ ಹಂತದ ಮತದಾನದ ಬಹಿರಂಗ ಪ್ರಚಾರವು ಸೋಮವಾರ ಸಂಜೆ ಮುಕ್ತಾಯಗೊಳ್ಳಲಿದೆ.

ಪ್ರಜಾಮತ
ಜನತಂತ್ರದ ಹಬ್ಬ

ಮತದಾರರಿಗೆ ಬೆದರಿಕೆ: ತನಿಖೆಗೆ ಆದೇಶ

ಕೋಲ್ಕತ (ಪಿಟಿಐ): ಪಶ್ಚಿಮ ಬಂಗಾಳದ ಡೈಮಂಡ್ ಹಾರ್ಬರ್ ಕ್ಷೇತ್ರದಲ್ಲಿ ಬೈಕ್ ಸವಾರರು ಮತದಾರರನ್ನು ಬೆದರಿಸಿರುವ ವಿಡಿಯೊ ಹರಿದಾಡಿದ್ದು, ಚುನಾವಣಾ ಆಯೋಗವು ಪ್ರಕರಣದ ಕುರಿತು ತನಿಖೆಗೆ ಆದೇಶಿಸಿದೆ.

ಡೈಮಂಡ್ ಹಾರ್ಬರ್ ಕ್ಷೇತ್ರದ ಮತದಾನವು (ಎರಡನೇ ಹಂತ) ಇದೇ 29ರಂದು ನಡೆಯಲಿದೆ.

ವಿಡಿಯೊ ಬಹಿರಂಗಗೊಳ್ಳುತ್ತಿದ್ದಂತೆಯೇ ಚುನಾವಣಾ ಆಯೋಗವು ಡೈಮಂಡ್ ಹಾರ್ಬರ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದೆ. ಇದಕ್ಕೆ ಸಂಬಂಧಿಸಿದಂತೆ ತನಿಖೆ ನಡೆಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಶ್ಚಿಮ ಬಂಗಾಳದ ಬಂಗಾಂವ್‌ನಲ್ಲಿ ಭಾನುವಾರ ಚುನಾವಣಾ ಪ್ರಚಾರ ರ್‍ಯಾಲಿಯಲ್ಲಿ ಭಾಗವಹಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ಅಭ್ಯರ್ಥಿಗಳ ಕೈ ಹಿಡಿದು ಮೇಲಕ್ಕೆತ್ತಿ ಬೆಂಬಲಿಸುವಂತೆ ಮನವಿ ಮಾಡಿದರು –ಪಿಟಿಐ ಚಿತ್ರ

ಭವಾನಿಪುರದಲ್ಲಿ ಮಮತಾ ಪಾದಯಾತ್ರೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ದಕ್ಷಿಣ ಕೋಲ್ಕತ್ತದ ಭವಾನಿಪುರ ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷದ ಅಪಾರ ಸಂಖ್ಯೆಯ ಬೆಂಬಲಿಗರೊಂದಿಗೆ ಭಾನುವಾರ ಪಾದಯಾತ್ರೆ ನಡೆಸಿದರು.

‘ನೀವು ಎಷ್ಟು ಬಾರಿ ದಾಳಿ ಮಾಡಿದರೂ ಬಂಗಾಳ ವಿಜಯಶಾಲಿಯಾಗುತ್ತದೆ’ ಎಂಬ ಹಾಡಿನ ನಡುವೆ ಮಮತಾ ಅವರು ಲ್ಯಾನ್ಸ್‌ಡೌನ್ ಕ್ರಾಸ್‌ನಿಂದ ಕಾಳಿಘಾಟ್‌ನ ಅಗ್ನಿಶಾಮಕದಳದ ಠಾಣೆಯವರೆಗಿನ ಒಂದು ಕಿ.ಮೀ ಉದ್ದಕ್ಕೂ ಜನರೊಂದಿಗೆ ಸಂವಾದ ನಡೆಸಿದರು.

ನೆರೆದಿದ್ದ ಜನರು ‘ದೀದಿ... ದೀದಿ’ ಘೋಷಣೆ ಮೊಳಗಿಸಿದರು. ಅಭಿಮಾನಿಗಳು ಕಾಲಿಗೆ ನಮಸ್ಕರಿಸಲು ಮುಗಿಬಿದ್ದರು. ಮಮತಾ ಹಲವರಿಗೆ ಹಸ್ತಲಾಘವ ನೀಡಿ, ಹೂಮಾಲೆಗಳನ್ನು ಸ್ವೀಕರಿಸಿದರು. ಸಾಂಪ್ರದಾಯಿಕ ನೃತ್ಯವು ರೋಡ್ ಶೋ ಅನ್ನು ವರ್ಣರಂಜಿತವಾಗಿಸಿತ್ತು.

ಅನರ್ಹತೆ ಕೋರಿ ಎಎಪಿ ಮನವಿ

ಪ್ರಜಾವಾಣಿ ವಾರ್ತೆ

ಸಂಜಯ್ ಸಿಂಗ್

ನವದೆಹಲಿ: ಬಿಜೆಪಿ ಸೇರಿರುವ ತನ್ನ ಏಳು ಸಂಸದರನ್ನು ಮೇಲ್ಮನೆಯಿಂದ ಅನರ್ಹಗೊಳಿಸುವಂತೆ ಕೋರಿ ಆಮ್ ಆದ್ಮಿ ಪಾರ್ಟಿಯು (ಎಎಪಿ) ರಾಜ್ಯಸಭಾ ಸಭಾಪತಿಗೆ ಭಾನುವಾರ ಮನವಿ ಸಲ್ಲಿಸಿತು.

ಮನವಿ ಸಲ್ಲಿಸಿದ ನಂತರ ಎಎಪಿ ನಾಯಕ ಸಂಜಯ್ ಸಿಂಗ್ ಸುದ್ದಿಗಾರರ ಜತೆ ಮಾತನಾಡಿ, ‘ಸಂವಿಧಾನದ ಹತ್ತನೇ ಅನುಸೂಚಿಯ ಪ್ರಕಾರ ಬಿಜೆಪಿ ಸೇರಲು ನಿರ್ಧರಿಸಿರುವ ಎಎಪಿಯ ಏಳು ಸಂಸದರ ನಡೆ ‘ಅಸಾಂವಿಧಾನಿಕ’ ಮತ್ತು ‘ಕಾನೂನುಬಾಹಿರ’ವಾಗಿದೆ. ಸಂವಿಧಾನ ಪರಿಣತರ ಜೊತೆ ಸಮಾಲೋಚನೆ ನಡೆಸಿ, ಕಪಿಲ್ ಸಿಬಲ್ ಅವರ ಸಲಹೆಯನ್ನೂ ಪಡೆದು ಈ ಅರ್ಜಿ ಸಲ್ಲಿಸಲಾಗಿದೆ’ ಎಂದು ಮಾಹಿತಿ ನೀಡಿದರು.

ಎಎಪಿಯ ರಾಜ್ಯಸಭಾ ಸದಸ್ಯರಾದ ರಾಘವ್ ಚಡ್ಡಾ, ಸಂದೀಪ್ ಪಾಠಕ್, ಅಶೋಕ್ ಮಿತ್ತಲ್, ದೆಹಲಿ ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಸ್ವಾತಿ ಮಾಲಿವಾಲ್, ಮಾಜಿ ಕ್ರಿಕೆಟಿಗ ಹರಭಜನ್ ಸಿಂಗ್, ರಾಜಿಂದರ್ ಗುಪ್ತಾ ಮತ್ತು ವಿಕ್ರಂ ಸಾಹ್ನಿ ಅವರು ಬಿಜೆಪಿ ಸೇರುವುದಾಗಿ ಶುಕ್ರವಾರ ಘೋಷಿಸಿದ್ದರು.

‘ಕಾನೂನಿನ ಪ್ರಕಾರ ಪಕ್ಷಾಂತರ ಮಾಡಿರುವ ಸದಸ್ಯರನ್ನು ಅನರ್ಹಗೊಳಿಸಬಹುದಾಗಿದೆ’ ಎಂದು ಸಂಜಯ್ ಸಿಂಗ್ ಪುನರುಚ್ಚರಿಸಿದರು.

ಪಕ್ಷವೊಂದರ ಸಂಸತ್ ಸದಸ್ಯರಲ್ಲಿ ಮೂರನೇ ಎರಡರಷ್ಟು ಮಂದಿ ಪಕ್ಷಾಂತರ ಮಾಡಿದರೆ ಕಾನೂನಾತ್ಮಕವಾಗಿ ಅನರ್ಹಗೊಳಿಸಲಾಗುವುದಿಲ್ಲ ಎಂದು ರಾಘವ್ ಚಡ್ಡಾ ಮತ್ತಿತರರು ವಾದಿಸುತ್ತಾ ಬಂದಿದ್ದಾರೆ.

ಚಡ್ಡಾ ನಿವಾಸದ ಬಳಿ ಪ್ರತಿಭಟನೆ

ಮುಂಬೈ (ಪಿಟಿಐ): ಆಮ್ ಆದ್ಮಿ ಪಕ್ಷ (ಎಎಪಿ) ತೊರೆದು ಬಿಜೆಪಿಗೆ ಸೇರಿದ ರಾಜ್ಯಸಭಾ ಸದಸ್ಯ ರಾಘವ್ ಚಡ್ಡಾ ಅವರ ಮುಂಬೈನಲ್ಲಿನ ನಿವಾಸದ ಮುಂಭಾಗ ಪ್ರತಿಭಟಿಸಿದ ಹಲವು ಕಾರ್ಯಕರ್ತರನ್ನು ಪೊಲೀಸರು ಭಾನುವಾರ ಬಂಧಿಸಿದರು.

ಎಎಪಿಯ ಸ್ಥಳೀಯ ನಾಯಕರಾದ ರುಬೆನ್ ಮಸ್ಕರೇನಸ್ ಸೇರಿ ಇತರ ಹೋರಾಟಗಾರರನ್ನು ಬಂಧಿಸಿ ಪೊಲೀಸ್ ಠಾಣೆಗೆ ಕರೆದೊಯ್ದು ನಂತರ ಬಿಡುಗಡೆ ಮಾಡಲಾಯಿತು ಎಂದು ಖಾರ್ ಪೊಲೀಸರು ತಿಳಿಸಿದ್ದಾರೆ.

‘ಪಕ್ಷ ದ್ರೋಹಿ’ ಚಡ್ಡಾ ನಿವಾಸದ ಎದುರು ಎಎಪಿ ಕಾರ್ಯಕರ್ತರು ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದರೆ ಪೊಲೀಸರು ಅಡ್ಡಿಪಡಿಸಿದರು ಎಂದು ಮುಂಬೈ ಘಟಕದ ಅಧ್ಯಕ್ಷರಾದ ಪ್ರೀತಿ ಶರ್ಮಾ ಮೆನನ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಟಿಎಂಸಿ ಭಯೋತ್ಪಾದನೆ: ರಾಹುಲ್ ಖಂಡನೆ

ನವದೆಹಲಿ (ಪಿಟಿಐ): ತಮ್ಮ ಪಕ್ಷದ ಕಾರ್ಯಕರ್ತ ದೇವದೀಪ್ ಚಟರ್ಜಿ ಅವರನ್ನು ಶಂಕಿತ ಟಿಎಂಸಿ ಗೂಂಡಾಗಳು ಬರ್ಬರವಾಗಿ ಹತ್ಯೆ ಮಾಡಿದ್ದಾರೆ ಎಂದಿರುವ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ, ಈ ಘಟನೆಯನ್ನು ಖಂಡಿಸಿದ್ದಾರೆ.

ರಾಹುಲ್ ಗಾಂಧಿ

ಪಶ್ಚಿಮ ಬಂಗಾಳದಲ್ಲಿ ಮೊದಲ ಹಂತದ ಮತದಾನ ನಡೆದ ನಂತರ ಆಸಾನ್‌ಸೋಲ್ ಎಂಬಲ್ಲಿ ದೇವದೀಪ್ ಅವರ ಹತ್ಯೆಯಾಯಿತು. ಅದಕ್ಕೂ ಮೊದಲು, ಉತ್ತರ ಆಸಾನ್‌ಸೋಲ್ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಪ್ರಸೇನ್‌ಜಿತ್ ಪುಯಿತಾಂಡಿ ಅವರೊಟ್ಟಿಗೆ ಚುನಾವಣಾ ಪ್ರಚಾರದಲ್ಲಿ ದೇವದೀಪ್ ತೊಡಗಿಕೊಂಡಿದ್ದರು ಎಂದು ಪಕ್ಷ ತಿಳಿಸಿದೆ.

‘ಪಶ್ಚಿಮ ಬಂಗಾಳದಲ್ಲಿ ಈಗ ಪ್ರಜಾಪ್ರಭುತ್ವ ಇಲ್ಲ. ಟಿಎಂಸಿ ನೇತೃತ್ವದ ಉಗ್ರವಾದ ತಾಂಡವವಾಡುತ್ತಿದೆ. ಪ್ರಶ್ನಿಸುವ ಯಾರದೇ ದನಿಯನ್ನು ಉಡುಗಿಸುವುದು, ಪ್ರಶ್ನಿಸುವವರನ್ನು ಮುಗಿಸಿಹಾಕುವುದು ಟಿಎಂಸಿ ಜಾಯಮಾನವಾಗಿಬಿಟ್ಟಿದೆ. ದೇವದೀಪ್ ಹತ್ಯೆ ಖಂಡನಾರ್ಹ. ಅವರ ದುಃಖತಪ್ತ ಕುಟುಂಬಕ್ಕೆ ಸಾಂತ್ವನ ಹೇಳುವೆ’ ಎಂದು ರಾಹುಲ್ ಗಾಂಧಿ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಕಾಂಗ್ರೆಸ್ ಎಂದಿಗೂ ಹಿಂಸಾ ರಾಜಕೀಯವನ್ನು ಮಾಡಿಲ್ಲ, ಮಾಡುವುದೂ ಇಲ್ಲ’ ಎಂದು ಪಶ್ಚಿಮ ಬಂಗಾಳ ಕಾಂಗ್ರೆಸ್ ಪ್ರತ್ಯೇಕವಾಗಿ ‘ಎಕ್ಸ್’ ಪೋಸ್ಟ್ ಹಾಕಿದ್ದು, ಪಶ್ಚಿಮ ಬಂಗಾಳದಲ್ಲಿ ಕಾನೂನು–ಸುವ್ಯವಸ್ಥೆ ಇಲ್ಲವಾಗಿದೆ ಎನ್ನುವುದಕ್ಕೆ ಈ ಹತ್ಯೆಯೇ ಉದಾಹರಣೆ ಎಂದು ಟೀಕಿಸಿದೆ.

‘ಸಾಹ್ನಿ ನೀಡಿದ್ದ ಆಹ್ವಾನ ತಿರಸ್ಕರಿಸಿದ್ದೆ’

ಚಂಡೀಗಢ (ಪಿಟಿಐ): ‘ರಾಜ್ಯಸಭಾ ಸದಸ್ಯ ವಿಕ್ರಮ್‌ಜಿತ್ ಸಿಂಗ್ ಸಾಹ್ನಿ ‘ಆಜಾದ್ ಸಮೂಹ’ಕ್ಕೆ ಸೇರ್ಪಡೆಯಾಗುವಂತೆ ಕರೆದರು. ಆದರೆ, ಅದಕ್ಕೆ ನಾನು ಒಪ್ಪಲಿಲ್ಲ’ ಎಂದು ಆಮ್ ಆದ್ಮಿ ಪಾರ್ಟಿ (ಎಎಪಿ) ರಾಜ್ಯಸಭಾ ಸದಸ್ಯ ಬಲಬೀರ್ ಸಿಂಗ್ ಸೀಚೆವಾಲ್ ಭಾನುವಾರ ಹೇಳಿದ್ದಾರೆ.

ಅರವಿಂದ ಕೇಜ್ರಿವಾಲ್ ನೇತೃತ್ವದ ಎಎಪಿ ತೊರೆದು, ರಾಜ್ಯಸಭೆಯ ಏಳು ಸದಸ್ಯರು ಅಚ್ಚರಿಯ ರೀತಿಯಲ್ಲಿ ಬಿಜೆಪಿಗೆ ಸೇರ್ಪಡೆಯಾದ ವಿದ್ಯಮಾನದ ಕುರಿತು ಆಕ್ರೋಶ ವ್ಯಕ್ತಪಡಿಸಿರುವ ಬಲಬೀರ್, ‘ಪಕ್ಷಕ್ಕೆ ಅವರೆಲ್ಲ ದ್ರೋಹ ಬಗೆದರು. ಪಂಜಾಬ್‌ನ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಲಿ ಎಂಬ ಉದ್ದೇಶದಿಂದ ಅವರೆಲ್ಲರನ್ನೂ ಮೇಲ್ಮನೆಗೆ ಎಎಪಿ ಆಯ್ಕೆ ಮಾಡಿ ಕಳುಹಿಸಿತ್ತು’ ಎಂದಿದ್ದಾರೆ.

‘ಏಪ್ರಿಲ್ 24ರಂದು ಸಾಹ್ನಿ ನನಗೆ ಕರೆ ಮಾಡಿದರು.

ಬಲಬೀರ್ ಸಿಂಗ್ ಸೀಚೆವಾಲ್

ಪಂಜಾಬ್ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಉದ್ದೇಶದಿಂದ ‘ಆಜಾದ್ ಸಮೂಹ’ ರಚಿಸಲಾಗುತ್ತಿದ್ದು, ಈಗಾಗಲೇ ಆರೇಳು ಸದಸ್ಯರು ಸೇರ್ಪಡೆಯಾಗಿದ್ದಾರೆ ಎಂದರು. ನನ್ನನ್ನೂ ಆ ಸಮೂಹಕ್ಕೆ ಸೇರಿಕೊಳ್ಳುವಂತೆ ಆಹ್ವಾನಿಸಿದರು. ನಾನು ಒಪ್ಪಲಿಲ್ಲ. ಆಮೇಲೆ ನೋಡಿದರೆ ಅವರೆಲ್ಲ ಬಿಜೆಪಿಗೆ ಜಿಗಿದರು’ ಎಂದು ಪರಿಸರವಾದಿಯೂ ಆಗಿರುವ ಬಲಬೀರ್ ತಿಳಿಸಿದ್ದಾರೆ.

ಎಎಪಿ ತೊರೆದು, ಬಿಜೆಪಿ ಸೇರಿದ ಏಳು ರಾಜ್ಯಸಭಾ ಸದಸ್ಯರಲ್ಲಿ ಆರು ಮಂದಿ ಪಂಜಾಬ್‌ನವರು.

‘ರಾಘವ್ ಚಡ್ಡಾ ಹಾಗೂ ಸಂದೀಪ್ ಪಾಠಕ್ ಪಂಜಾಬ್‌ನಲ್ಲಿ ಅಧಿಕಾರವನ್ನು ಚೆನ್ನಾಗಿಯೇ ಅನುಭವಿಸಿದವರು. ಅವರೆಲ್ಲ ಈಗ ಪಕ್ಷಕ್ಕೇ ದ್ರೋಹ ಬಗೆದರು’ ಎಂದು ಬಲಬೀರ್ ಟೀಕಿಸಿದ್ದಾರೆ.

ಟಿಸಿಎಸ್ ವಿಶ್ವ ಟೆನ್‌ಕೆ ಓಟ: ಹರ್ಮನ್‌ಜ್ಯೋತ್ ಮಿಂಚು, ಸಂಜೀವನಿ ಹ್ಯಾಟ್ರಿಕ್

ಬುರುಂಡಿಯ ರೋಡ್ರಿಗ್ ಹೊಸ ದಾಖಲೆ

• ಪ್ರದೀಶ್ ಎಚ್.ಮರೋಡಿ

ಬೆಂಗಳೂರು: ಬುರುಂಡಿಯ ರೋಡ್ರಿಗ್ ಕ್ವಿಜೆರಾ ಮತ್ತು ರುವಾಂಡಾದ ಫ್ಲಾರೆನ್ಸ್ ನಿಯೋಂಕುರು ಅವರು ಭಾನುವಾರ ಸಿಲಿಕಾನ್ ಸಿಟಿಯ ರಸ್ತೆಗಳಲ್ಲಿ ಮಿಂಚು ಹರಿಸಿದರು. ಟಿಸಿಎಸ್ ವಿಶ್ವ ಟೆನ್‌ಕೆ ಓಟದ ಎಲೀಟ್ ಪುರುಷರ ವಿಭಾಗದಲ್ಲಿ ರೋಡ್ರಿಗ್ ‘ಕೋರ್ಸ್ ದಾಖಲೆ’ಯೊಂದಿಗೆ ಪ್ರಶಸ್ತಿ ಮುಡಿಗೇರಿಸಿಕೊಂಡರೆ, ಫ್ಲಾರೆನ್ಸ್ ಮಹಿಳಾ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಸೂರ್ಯ ಉದಯಿಸುವ ಮುನ್ನವೇ ಕಬ್ಬನ್ ರಸ್ತೆಯಲ್ಲಿ ವೃತ್ತಿಪರ ಮತ್ತು ಹವ್ಯಾಸಿ ಓಟಗಾರರು ಉತ್ಸಾಹದಿಂದ ಜಮಾಯಿಸಿದ್ದರು. ‘ಎಂದೆಂದಿಗೂ ಬೆಂಗಳೂರು’ ಪರಿಕಲ್ಪನೆಯಲ್ಲಿ ನಡೆದ 18ನೇ ಆವೃತ್ತಿಯ ಓಟದಲ್ಲಿ 33 ಸಾವಿರಕ್ಕೂ ಅಧಿಕ ಮಂದಿ ಪಾಲ್ಗೊಂಡು ಸಂಭ್ರಮಿಸಿದರು.

ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ, ಸಂಸದರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ತೇಜಸ್ವಿ ಸೂರ್ಯ ಸೇರಿದಂತೆ ಗಣ್ಯರೂ ಹೆಜ್ಜೆ ಹಾಕಿದರು. ವಿಶ್ವ ಅಥ್ಲೆಟಿಕ್ಸ್‌ನಿಂದ ‘ಗೋಲ್ಡ್ ಲೇಬಲ್ ರೇಸ್’ ಮಾನ್ಯತೆ ಪಡೆದಿರುವ ಈ ಓಟದಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ತಾರೆಯರು ಕಣದಲ್ಲಿದ್ದರು.

26 ವರ್ಷದ ಕ್ವಿಜೆರಾ 10 ಕಿಲೋ ಮೀಟರ್ ದೂರವನ್ನು 27 ನಿಮಿಷ 31 ಸೆಕೆಂಡುಗಳಲ್ಲಿ ಕ್ರಮಿಸಿ ಇತಿಹಾಸ ಬರೆದರು. ಇದರೊಂದಿಗೆ 2022ರಲ್ಲಿ ಕೆನ್ಯಾದ ನಿಕೋಲಸ್ ಕಿಪ್ಕೊರಿರ್ ಕಿಮೆಲಿ (27ನಿ.38ಸೆ) ನಿರ್ಮಿಸಿದ್ದ ಕೋರ್ಸ್ ದಾಖಲೆಯನ್ನು ತನ್ನ ಹೆಸರಿಗೆ ವರ್ಗಾಯಿಸಿಕೊಂಡರು. ಪ್ರಥಮ ಬಹುಮಾನ ₹24.50 ಲಕ್ಷದೊಂದಿಗೆ ಈ ದಾಖಲೆಗಾಗಿ ಹೆಚ್ಚುವರಿಯಾಗಿ ₹7.54 ಲಕ್ಷ ಬೋನಸ್ ಜೇಬಿಗಿಳಿಸಿಕೊಂಡರು. ಕಳೆದ ಆವೃತ್ತಿಯ ಚಾಂಪಿಯನ್ ಉಗಾಂಡಾದ ಜೋಷುವಾ ಚೆಪ್ಟೆಗಿ (ಪ್ಯಾರಿಸ್ ಒಲಿಂಪಿಕ್ಸ್ ಚಾಂಪಿಯನ್) ಅವರಿಗೆ 15 ಸೆಕೆಂಡ್‌ಗಳ ಅಂತರದಲ್ಲಿ ಈ ದಾಖಲೆ ಕೈತಪ್ಪಿತ್ತು. ಅವರು ಈ ಬಾರಿ ಭಾಗವಹಿಸಿರಲಿಲ್ಲ.

> ಓಟದ ಹಾದಿ ಮತ್ತು ಸೆಕೆಯ ವಾತಾವರಣ ಸವಾಲಿನಿಂದ ಕೂಡಿತ್ತು. ಅದರ ನಡುವೆ ಕೋರ್ಸ್ ದಾಖಲೆಯೊಂದಿಗೆ ಪ್ರಶಸ್ತಿ ಗೆದ್ದಿರುವುದು ಖುಷಿ ತಂದಿದೆ. ಆಹ್ವಾನ ನೀಡಿದ್ದಕ್ಕೆ ಆಭಾರಿಯಾಗಿದ್ದೇನೆ
> **ರೋಡ್ರಿಗ್ ಕ್ವಿಜೆರಾ,** ಎಲೀಟ್ ಪುರುಷರ ಚಾಂಪಿಯನ್

ಕ್ವಿಜೆರಾ ಅವರಿಗೆ ಉಗಾಂಡಾದ ಹರ್ಬರ್ಟ್ ಕಿಬೆಟ್ ಮತ್ತು ಕೆನ್ಯಾದ ಗಿಲ್ಬರ್ಟ್ ಕಿಪ್ಕೋಸ್ಗೆಯ್ಕಿಪ್ರೊಟಿಚ್ ಅವರಿಂದ ಪ್ರಬಲ ಪೈಪೋಟಿ ಎದುರಾಯಿತು. 5 ಕಿಲೋ ಮೀಟರ್ ದೂರದವರೆಗೆ ಉಳಿದ ಸ್ಪರ್ಧಿಗಳೊಂದಿಗೆ ಒಟ್ಟಾಗಿ ಸಾಗಿದರು. ಆದರೆ, ಕೊನೆಯ ಎರಡೂವರೆ ಕಿ.ಮೀ. ಅಂತರದಲ್ಲಿ ಬುರುಂಡಿಯ ಓಟಗಾರ ವೇಗ ಹೆಚ್ಚಿಸಿಕೊಂಡರು. 20 ವರ್ಷದ ಕಿಬೆಟ್ ಮತ್ತು 25 ವರ್ಷದ ಗಿಲ್ಬರ್ಟ್ ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನ ಪಡೆದರು. ಮೊದಲ ಎಂಟು ಸ್ಥಾನ ಪಡೆದವರೆಲ್ಲರೂ 28 ನಿಮಿಷದೊಳಗೆ ಗುರಿ ತಲುಪಿದ್ದು ಸ್ಪರ್ಧೆಯ ತೀವ್ರತೆಗೆ ಸಾಕ್ಷಿಯಾಗಿತ್ತು.

25 ವರ್ಷದ ಫ್ಲಾರೆನ್ಸ್ 30 ನಿಮಿಷ 45 ಸೆಕೆಂಡ್‌ಗಳಲ್ಲಿ ಸ್ಪರ್ಧೆಯನ್ನು ಮುಗಿಸಿದರು. ಅವರು ಕೇವಲ 10 ಸೆಕೆಂಡ್ ಅಂತರದಲ್ಲಿ ಕೋರ್ಸ್ ದಾಖಲೆಯ (30ನಿ.35ಸೆ) ಅವಕಾಶ ಕಳೆದುಕೊಂಡಿರು. ಅವರಿಗೆ ಕೆನ್ಯಾದಬ್ರೆಂಡಾ ಜೆಪ್ಚಿರ್ಚಿರ್ ಅವರಿಂದ ತೀವ್ರ ಪೈಪೋಟಿ ಎದುರಾಯಿತು. ಅವರಿಬ್ಬರೂ ಆರಂಭದಿಂದ7.5 ಕಿ.ಮೀ. ವರೆಗೆ ಒಟ್ಟಾಗಿ ಸಾಗಿದರು. ಆದರೆ, ಫ್ಲಾರೆನ್ಸ್ 14 ಸೆಕೆಂಡ್ ಮುಂಚಿತವಾಗಿ ಗುರಿಮುಟ್ಟಿದರು. ಬ್ರೆಂಡಾ ಬೆಳ್ಳಿ ಪದಕ ಗೆದ್ದರೆ, ಇಥಿಯೋಪಿಯಾದ ಚಾಲ್ತು ದಿದಾ ದಿರಿಬಾ ಕಂಚಿನ ಪದಕ ತಮ್ಮದಾಗಿಸಿಕೊಂಡರು. ಕಳೆದ ಬಾರಿಯ ಚಾಂಪಿಯನ್, ಉಗಾಂಡಾದ ಸಾರಾ ಚೆಲಂಗತ್ 15ನೇ ಸ್ಥಾನಕ್ಕೆ ತಳ್ಳಲ್ಪಟ್ಟರು.

ಹರ್ಮನ್‌ಜ್ಯೋತ್, ಸಂಜೀವನಿಗೆ ಕಿರೀಟ: ಭಾರತೀಯ ಎಲೀಟ್ ಪುರುಷರ ವಿಭಾಗದಲ್ಲಿ ಉತ್ತರಾಖಂಡದ ಹರ್ಮನ್‌ಜ್ಯೋತ್ ಸಿಂಗ್ ಪ್ರಶಸ್ತಿ ಗೆದ್ದರೆ, ಮಹಿಳೆಯರ ವಿಭಾಗದಲ್ಲಿ ಮಹಾರಾಷ್ಟ್ರದ ಸಂಜೀವನಿ ಜಾಧವ್ ಹ್ಯಾಟ್ರಿಕ್ ಸಾಧನೆ ಮೆರೆದರು. 29 ನಿಮಿಷ 13 ಸೆಕೆಂಡ್‌ಗಳಲ್ಲಿ ಗುರಿ ತಲುಪಿದ ಹರ್ಮನ್‌ಜ್ಯೋತ್ ಅವರು ಕೇವಲ ಒಂದು ಸೆಕೆಂಡ್ ಅಂತರದಿಂದ ಕೋರ್ಸ್ ದಾಖಲೆಯ ಅವಕಾಶ ಕಳೆದುಕೊಂಡರು.

ಕಳೆದ ಆವೃತ್ತಿಯಲ್ಲಿ ಅಭಿಷೇಕ್ ಪಾಲ್ (29ನಿ.12ಸೆ) ಕೋರ್ಸ್ ದಾಖಲೆ ನಿರ್ಮಿಸಿದ್ದರು. ಆದರೆ, ಅವರು ಈ ಬಾರಿ ಆರನೇ ಸ್ಥಾನಕ್ಕೆ ಕುಸಿದರು. ಪದಕ ನಿರೀಕ್ಷೆ ಮೂಡಿಸಿದ್ದ ನಾಸಿಕ್‌ನ ಡಾ.ಕಾರ್ತಿಕ್ ಕರ್ಕೇರ ಅವರು ಅಗ್ರ ಹತ್ತರಲ್ಲಿ ಸ್ಥಾನ ಪಡೆಯಲು ವಿಫಲರಾದರು. ಕರ್ನಾಟಕದ ಅಥ್ಲೀಟ್ ಶೈಲೇಶ್ ಕುಶ್ವಾಹ ಕೇವಲ 8 ಸೆಕೆಂಡುಗಳ ಅಂತರದಲ್ಲಿ ಚಿನ್ನ ತಪ್ಪಿಸಿಕೊಂಡರು.

29 ವರ್ಷದಸಂಜೀವನಿ (35ನಿ.01ಸೆ) ಗುರಿ ತಲುಪಲು ಕಳೆದ ವರ್ಷಕ್ಕಿಂತ ಈ ಬಾರಿ 45 ಸೆಕೆಂಡ್ ಹೆಚ್ಚು ತೆಗೆದುಕೊಂಡರು. ಆರಂಭದಿಂದಲೇ ಏಕಾಂಗಿಯಾಗಿ ಮುನ್ನಡೆ ಸಾಧಿಸಿದ್ದ ಅವರು ಕೊನೆಯವರೆಗೂ ಪಾರಮ್ಯ ಸಾಧಿಸಿ, ಸತತ ಮೂರನೇ ಬಾರಿ ಪ್ರಶಸ್ತಿಗೆ ಮುತ್ತಿಕ್ಕಿದರು.

ವಿಶ್ವ ಟೆನ್‌ಕೆ ಓಟದ ಪುರುಷರ ಎಲೀಟ್ ವಿಭಾಗದಲ್ಲಿ ಚಿನ್ನ ಗೆದ್ದ ಬುರುಂಡಿಯ ರೋಡ್ರಿಗ್ ಕ್ವಿಜೆರಾ ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ಫ್ಲಾರೆನ್ಸ್ ನಿಯೋಂಕುರು

ಸಂಜೀವನಿ ಜಾಧವ್

ಕರ್ನಾಟಕದ ನಾಗಿಣಿಗೆ ಚಿನ್ನದ ಪದಕ

ಪ್ರಜಾವಾಣಿ ವಾರ್ತೆ

ತುಮಕೂರು: ಇಲ್ಲಿನ ಜಿಲ್ಲಾ ಕ್ರೀಡಾಂಗಣ ದಲ್ಲಿ ಭಾನುವಾರ ಮುಕ್ತಾಯವಾದ 24ನೇ ರಾಷ್ಟ್ರೀಯ ಜೂನಿಯರ್ (20 ವರ್ಷದೊಳಗಿನವರ) ಅಥ್ಲೆಟಿಕ್ಸ್ ಕ್ರೀಡಾಕೂಟದ ಮಹಿಳೆಯರ 800 ಮೀಟರ್ ಓಟದಲ್ಲಿ ಯಾದಗಿರಿ ಜಿಲ್ಲೆ ಶಹಾಪುರದ ನಾಗಿಣಿ ಚಿನ್ನದ ಪದಕ ಜಯಿಸಿದರು. 2.12 ಸೆಕೆಂಡ್‌ಗಳಲ್ಲಿ ಗುರಿ ತಲುಪಿದ ನಾಗಿಣಿ ಸ್ವರ್ಣ ಪದಕಕ್ಕೆ ಕೊರಳೊಡ್ಡಿದರು.

ನಾಗಿಣಿ

ಮಹಿಳೆಯರ 400 ಮೀ. ಹರ್ಡಲ್ಸ್‌ನಲ್ಲಿ ರಾಜ್ಯದ ಅಪೂರ್ವ ಆನಂದ್ ನಾಯ್ಕ್ 1.01 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಬೆಳ್ಳಿ ಪದಕ ಪಡೆದರು. ಉತ್ತರ ಪ್ರದೇಶದ ತನು ಚೌಧರಿ (59.38 ಸೆ) ಚಿನ್ನದ ಪದಕ ತಮ್ಮದಾಗಿಸಿಕೊಂಡರು. ಜಾವಲಿನ್ ಥ್ರೋನಲ್ಲಿ ಜೆಎಸ್‌ಡಬ್ಲ್ಯೂನ ಪೂನಮ್ (51.64 ಮೀ) ಚಿನ್ನದ ಪದಕ ಮತ್ತು ಕರ್ನಾಟಕದ ಸಿ.ಜೆ.ಭವ್ಯಾ 47.23 ಮೀ. ಎಸೆತದೊಂದಿಗೆ ಕಂಚು ಗೆದ್ದರು.

ಪುರುಷರ 3 ಸಾವಿರ ಮೀಟರ್ ಸ್ಟೀಪಲ್ ಚೇಸ್ ಓಟದಲ್ಲಿ ಕರ್ನಾಟಕದ ಓಟಗಾರ ಸಿ.ನಿಖಿಲ್ ಕಂಚಿನ ಪದಕ ಪಡೆದರು. 9.35 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ಹರಿಯಾಣದ ಸುಮಿತ್ ರಾಠಿ (9.28 ಸೆ) ಬಂಗಾರದ ಪದಕಕ್ಕೆ ಕೊರಳೊಡ್ಡಿದರು.

ಅಭಯ್‌ಗೆ ಎರಡು ಚಿನ್ನ: ಪುರಷರ 100 ಮೀ. ಓಟದಲ್ಲಿ ಚಿನ್ನ ಗೆದ್ದಿದ್ದ ರಿಲಯನ್ಸ್ ಸಂಸ್ಥೆಯ ಅಭಯ್ ಸಿಂಗ್ ಮತ್ತೊಮ್ಮೆ ಗಮನ ಸೆಳೆದರು. 200 ಮೀ. ಓಟದಲ್ಲಿ 20.82 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಚಿನ್ನದ ಪದಕ ಸಾಧಿಸಿದರು. ಜತೆಗೆ ಕೂಟದ ದಾಖಲೆ ಬರೆದರು.

ಡೋಪಿಂಗ್ ಶಂಕೆ: ಉತ್ತರ ಪ್ರದೇಶದ ಮೂವರು ಅಥ್ಲೀಟ್‌ಗಳು ವಾಸವಿದ್ದ ಹೋಟೆಲ್ ಕೊಠಡಿಯಲ್ಲಿ ಸಿರಿಂಜ್‌ಗಳು ತುಂಬಿದ್ದ ಬ್ಯಾಗ್ ಶನಿವಾರ ಪತ್ತೆಯಾಗಿದೆ. ಮೂವರಲ್ಲಿ ಇಬ್ಬರು ಅಪ್ರಾಪ್ತ ವಯಸ್ಸಿನವರು ಎನ್ನಲಾಗಿದ್ದು, ಉದ್ದೀಪನ ಮದ್ದು ಸೇವನೆ ಮಾಡಿರುವ ಬಗ್ಗೆ ಶಂಕೆ ವ್ಯಕ್ತವಾಗಿದೆ.

ಚುರುಮುರಿ ವ್ಯಾಪಾರಿ ಮಗಳ ‘ಚಿನ್ನ’ ಸಾಧನೆ

24ನೇ ರಾಷ್ಟ್ರೀಯ ಜೂನಿಯರ್ (20 ವರ್ಷದೊಳಗಿನವರ) ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ರಾಜ್ಯಕ್ಕೆ ಏಕೈಕ ಚಿನ್ನ ತಂದುಕೊಟ್ಟ ನಾಗಿಣಿ ಬಡತನದಲ್ಲಿ ಅರಳಿದ ಪ್ರತಿಭೆ.

ನಾಗಿಣಿ ಅವರ ತಂದೆ ಯಂಕಪ್ಪ ಶಹಾಪುರದಲ್ಲಿ ಚುರುಮುರಿ ವ್ಯಾಪಾರ ಮಾಡುತ್ತಾರೆ. ಕುಟುಂಬದ ನಿರ್ವಹಣೆಗೆ ಇದೇ ಕೆಲಸವನ್ನು ನೆಚ್ಚಿಕೊಂಡಿದ್ದಾರೆ. ಬಡ ಕುಟುಂಬದಲ್ಲಿ ಹುಟ್ಟಿ, ಬೆಳೆದ ನಾಗಿಣಿ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಚಿನ್ನದ ಪದಕಕ್ಕೆ ಕೊರಳೊಡ್ಡಿದ್ದಾರೆ. ಪ್ರಸ್ತುತ ಮೂಡುಬಿದಿರೆಯ ಆಳ್ವಾಸ್ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಓದುತ್ತಿದ್ದಾರೆ.

‘ನಮ್ಮ ತಂದೆ ತುಂಬಾ ಕಷ್ಟಪಟ್ಟು ನಮ್ಮನ್ನು ಇಲ್ಲಿಯ ತನಕ ಕರೆದುಕೊಂಡು ಬಂದಿದ್ದಾರೆ. ಅಭ್ಯಾಸಕ್ಕೂ ಆರ್ಥಿಕ ನೆರವು ನೀಡಿದ್ದಾರೆ. ಅವರಿಗೆ ಒಳ್ಳೆಯ ಹೆಸರು ತರುವ ಕೆಲಸ ಮಾಡುತ್ತೇನೆ’ ಎಂದು ನಾಗಿಣಿ ಭಾವುಕರಾದರು.

ಊಬರ್ ಕಪ್: ಭಾರತಕ್ಕೆ ಗೆಲುವು

ಹಾರ್ಸೆನ್ಸ್, ಡೆನ್ಮಾರ್ಕ್ (ಪಿಟಿಐ): ಅಮೋಘ ಆಟವಾಡಿದ ಭಾರತದ ಮಹಿಳಾ ಶಟ್ಲರ್‌ಗಳು ಊಬರ್ ಕಪ್ ಬ್ಯಾಡ್ಮಿಂಟನ್ ಫೈನಲ್ಸ್ ಟೂರ್ನಿಯ ಎ ಗುಂಪಿನ ಪಂದ್ಯದಲ್ಲಿ ಶನಿವಾರ 4–1ರಿಂದ ಉಕ್ರೇನ್ ತಂಡವನ್ನು ಸೋಲಿಸಿತು. ಅದರೊಂದಿಗೆ ಕ್ವಾರ್ಟರ್ ಫೈನಲ್ ಪ್ರವೇಶಿಸುವ ಅವಕಾಶವನ್ನು ಜೀವಂತವಾಗಿಟ್ಟುಕೊಂಡಿತು.

ಉದಯೋನ್ಮುಖ ಆಟಗಾರ್ತಿ ಉನ್ನತಿ ಹೂಡಾ ಅವರು ಸಿಂಗಲ್ಸ್‌ನ ಮೊದಲ ಪಂದ್ಯದಲ್ಲಿ 21–19, 22–20ರಿಂದ ಪೊಲಿನಾ ಬುಹ್ರೊವಾ ವಿರುದ್ಧ ಗೆದ್ದು 1–0 ಮುನ್ನಡೆ ಒದಗಿಸಿದರು. ಸಿಂಗಲ್ಸ್‌ನ ಎರಡನೇ ಪಂದ್ಯದಲ್ಲಿ ತನ್ವಿ ಶರ್ಮಾ21–12, 17–21, 21–10ರಿಂದ ಯೆವ್‌ಹೆನಿಯಾ ಕಾಂಟೆಮಿರ್ ಅವರನ್ನು ಮಣಿಸಿ, ಮುನ್ನಡೆಯನ್ನು 2–0ಗೆ ಹಿಗ್ಗಿಸಿದರು. ದೇವಿಕಾ ಸಿಹಾಗ್ ಅವರು ಸಿಂಗಲ್ಸ್‌ನ ಮೂರನೇ ಪಂದ್ಯದಲ್ಲಿ 23–21, 21–13ರಿಂದ ಮರಿಯಾ ಸ್ಟೊಲಿಯಾರೆಂಕೊ ವಿರುದ್ಧ ಜಯಿಸಿದರು.

ಆದರೆ, ಡಬಲ್ಸ್‌ನ ಮೊದಲ ಪಂದ್ಯದಲ್ಲಿ ಕವಿಪ್ರಿಯಾ ಸೆಲ್ವಂ– ಸಿಮ್ರನ್ ಸಿಂಘಿ ಜೋಡಿ 11–21, 17–21ರಿಂದ ಬುಹ್ರೊವಾ– ಕಾಂಟೆಮಿರ್ ವಿರುದ್ಧ ಪರಾಭವಗೊಂಡಿತು. ಡಬಲ್ಸ್ ಎರಡನೇ ಪಂದ್ಯದಲ್ಲಿ ಪಿ.ವಿ.ಸಿಂಧು ಅವರು ತನಿಷಾ ಕ್ರಾಸ್ಟೊ ಜೊತೆಗೂಡಿ ಆಡಿದರು. ಈ ಜೋಡಿ 21–18, 21–15ರಿಂದ ನೇರ ಗೇಮ್‌ಗಳಲ್ಲಿ ಸೋಫಿಯಾ ಲವರೋವಾ–ಸ್ಟೊಲಿಯಾರೆಂಕೊ ಅವರನ್ನು ಸೋಲಿಸಿತು.

ಭಾರತ ಮೊದಲ ಪಂದ್ಯದಲ್ಲಿ 2–3ರಿಂದ ಡೆನ್ಮಾರ್ಕ್ ವಿರುದ್ಧ ಪರಾಭವಗೊಂಡಿತ್ತು. ಭಾರತವು ಸೋಮವಾರ ನಡೆಯಲಿರುವ ಗುಂಪು ಹಂತದ ಕೊನೆಯ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಚೀನಾ ತಂಡವನ್ನು ಎದುರಿಸಲಿದೆ.

ಬ್ಯಾಡ್ಮಿಂಟನ್ ಪಾಯಿಂಟ್ ಪದ್ಧತಿ ಬದಲಾವಣೆಗೆ ಬಿಡಬ್ಲ್ಯುಎಫ್ ನಿರ್ಧಾರ

ನವದೆಹಲಿ (ಪಿಟಿಐ): ಬ್ಯಾಡ್ಮಿಂಟನ್ ಪಂದ್ಯಗಳಲ್ಲಿ ಅಂಕಗಳನ್ನು ನೀಡುವ ಪದ್ಧತಿಯನ್ನು ಬದಲಾವಣೆ ಮಾಡಲು ಶನಿವಾರ ನಡೆದ ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ (ಬಿಡಬ್ಲ್ಯುಎಫ್) ಸರ್ವಸದಸ್ಯರ ಸಭೆಯಲ್ಲಿ ಅನುಮೋದಿಸಲಾಯಿತು.

ಹಾರ್ಸೆನ್ಸ್‌ನಲ್ಲಿ ನಡೆದ ಸಭೆಯಲ್ಲಿ, ಹಾಲಿ ಇರುವ 21 ಪಾಯಿಂಟ್‌ಗಳ ವ್ಯವಸ್ಥೆ ಬದಲಿಸಿ 15 ಪಾಯಿಂಟ್‌ಗಳಿಗೆ ಸೀಮಿತಗೊಳಿಸಲು ನಿರ್ಧರಿಸಲಾಗಿದೆ. ಮುಂದಿನ ವರ್ಷದ ಜನವರಿ 4ರಿಂದ ಇದು ಜಾರಿಯಾಗಲಿದೆ. ಆದರೆ ಈ ತೀರ್ಮಾನಕ್ಕೆ ಭಾರತ ತಂಡದ ಮಾಜಿ ಮುಖ್ಯ ಕೋಚ್ ವಿಮಲ್ ಕುಮಾರ್ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಬಿಡಬ್ಲ್ಯುಎಫ್ ನಿರ್ಧಾರದಿಂದ ಬೇಸರವಾಗಿದೆ. ಸಮಿತಿಯ ಸದಸ್ಯರಿಂದ ನಿಯಮ ಪರಿಷ್ಕರಣೆಗೆ ವ್ಯಕ್ತವಾಗಿರುವ ಬೆಂಬಲವೂ ಅಚ್ಚರಿ ಮೂಡಿಸುತ್ತಿದೆ. ಆದರೆ ಈ ಕ್ರೀಡೆಯನ್ನು ಪ್ರೀತಿಸುವವರಿಗೆ ಆಘಾತವಾಗಿದೆ. ಅದರಲ್ಲೂ ಏಷ್ಯಾ ಖಂಡಕ್ಕೆ ವ್ಯಾಪಕ ಬೇಸರವಾಗಿದೆ. ಈ ಬದಲಾವಣೆಯಿಂದ ಕ್ರೀಡೆಯು ಎದುರಿಸುತ್ತಿರುವ ನಿಜವಾದ ಸಮಸ್ಯೆಗಳಿಗೆ ಪರಿಹಾರ ಸಿಗುವುದಿಲ್ಲ’ ಎಂದೂ ಹೇಳಿದ್ದಾರೆ.

‘ಹೊಸ ಪದ್ಧತಿ ಬರುವುದರಿಂದ ಪಂದ್ಯದ ಅವಧಿ ಕಡಿತಗೊಳ್ಳಲಿದೆ. ಒಟ್ಟು 18 (ಮೂರು ಗೇಮ್ ಸೇರಿ) ಅಂಕ ಕಡಿಮೆಯಾಗಲಿವೆ. ಆರಂಭದಲ್ಲಿ ಇದು ರೋಚಕತೆ ಹುಟ್ಟಿಸಬಹುದೇನೋ, ಆದರೆ ಅಲ್ಪಾಯುಷಿಯಾಗುವ ಸಾಧ್ಯತೆಯೇ ಹೆಚ್ಚು’ ಎಂದಿದ್ದಾರೆ.

ಡೆಲ್ಲಿ ಕ್ಯಾಪಿಟಲ್ಸ್– ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಣಾಹಣಿ ಇಂದು

ಮುಯ್ಯಿ ತೀರಿಸುವ ಛಲದಲ್ಲಿ ಆರ್‌ಸಿಬಿ

ನವದೆಹಲಿ (ಪಿಟಿಐ): ಪಂಜಾಬ್ ಕಿಂಗ್ಸ್ ತಂಡವು ಈಚೆಗೆ ಕೊಟ್ಟ 'ವಜ್ರಾಘಾತ'ದಿಂದ ಚೇತರಿಸಿಕೊಳ್ಳಲು ಡೆಲ್ಲಿ ಕ್ಯಾಪಿಟಲ್ಸ್ ಪ್ರಯತ್ನಿಸುತ್ತಿದೆ. ಇದೇ ಹೊತ್ತಿನಲ್ಲಿ ಡೆಲ್ಲಿಗೆ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಸವಾಲು ಎದುರಾಗಿದೆ.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಸೋಮವಾರ ಅಕ್ಷರ್ ಪಟೇಲ್ ನಾಯಕತ್ವದ ಡೆಲ್ಲಿ ಮತ್ತು ಎಲ್ಲ ವಿಭಾಗಗಳಲ್ಲಿಯೂ ಸಮತೋಲನ ಹೊಂದಿರುವ ಆರ್‌ಸಿಬಿ ಮುಖಾಮುಖಿ ಯಾಗಲಿವೆ. ಅದ್ಭುತ ಫಾರ್ಮ್‌ನಲ್ಲಿರುವ ಕನ್ನಡಿಗ ಕೆ.ಎಲ್. ರಾಹುಲ್ ಮತ್ತು ಬೆಂಗಳೂರಿನ ತಂಡದ ನಡುವಣ ಪ್ರತಿಷ್ಠೆಯ ಪೈಪೋಟಿಯಾಗುವ ಎಲ್ಲ ಸಾಧ್ಯತೆಗಳೂ ಇವೆ. ಮೊದಲ ಸುತ್ತಿನಲ್ಲಿ ಡೆಲ್ಲಿ ತಂಡವು ಆರ್‌ಸಿಬಿಯನ್ನು ತವರಿನಲ್ಲಿ (ಚಿನ್ನಸ್ವಾಮಿ ಕ್ರೀಡಾಂಗಣ)ಯೇ ಹಣಿದಿತ್ತು. ಅದರ ಮುಯ್ಯಿ ತೀರಿಸಿಕೊಳ್ಳುವ ಛಲದಲ್ಲಿ ರಜತ್ ಪಾಟೀದಾರ್ ಪಡೆ ಇದೆ. ಆರ್‌ಸಿಬಿ ಅಭಿಮಾನಿಗಳ ಕಣ್ಮಣಿ ವಿರಾಟ್ ಕೊಹ್ಲಿ ಅವರಿಗೆ ದೆಹಲಿ ತವರೂರು ಎಂಬುದೂ ವಿಶೇಷ.



ಆರ್‌ಸಿಬಿ ತಂಡದ ವಿರಾಟ್ ಕೊಹ್ಲಿ

ಇದೇ ಕ್ರೀಡಾಂಗಣದಲ್ಲಿ ಡೆಲ್ಲಿ ತಂಡವು ಶನಿವಾರ ನಡೆದ ಪಂದ್ಯದಲ್ಲಿ 264 ರನ್‌ಗಳ ಬೃಹತ್ ಗುರಿ ಒಡ್ಡಿತ್ತು. ಆದರೆ ಶ್ರೇಯಸ್ ಅಯ್ಯರ್ ನಾಯಕತ್ವದ ಪಂಜಾಬ್ ತಂಡವು ಈ ಗುರಿಯನ್ನು ಸಾಧಿಸಿದಾಗ ಇನಿಂಗ್ಸ್‌ನಲ್ಲಿ ಇನ್ನೂ ಏಳು ಎಸೆತಗಳು ಬಾಕಿ ಇದ್ದವು. ಪಂಜಾಬ್ ಬ್ಯಾಟರ್‌ಗಳ ಪ್ರಹಾರಕ್ಕೆ ಬೌಲರ್‌ಗಳು ನಡುಗಿದರು. ಅಷ್ಟೇ ಅಲ್ಲ. ಆ ಪಂದ್ಯದಲ್ಲಿ ತಂಡದ ಪ್ರಮುಖ ಬೌಲರ್ ಲುಂಗಿ ಎನ್‌ಗಿಡಿ ಅವರು ಫೀಲ್ಡಿಂಗ್ ಮಾಡುವಾಗ ತಲೆಗೆ ಪೆಟ್ಟು ಮಾಡಿಕೊಂಡು ಆಸ್ಪತ್ರೆಗೆ ಸೇರಿದ್ದರು. ಅದರಿಂದಾಗಿ ಬೌಲಿಂಗ್ ವಿಭಾಗ ಮತ್ತಷ್ಟು ದುರ್ಬಲವಾಗಿತ್ತು. ಜೊತೆಗೆ ಕರುಣ್ ನಾಯರ್ ಕೈಚೆಲ್ಲಿದ ಎರಡು ಕ್ಯಾಚ್ ದುಬಾರಿಯಾದವು. ಆ ಪಂದ್ಯದಲ್ಲಿ ಕೆ.ಎಲ್. ರಾಹುಲ್ ಶತಕ ಮತ್ತು ನಿತೀಶ್ ರಾಣಾ ಅವರ ಅಮೋಘ ಬ್ಯಾಟಿಂಗ್ ಮಾತ್ರ ಡೆಲ್ಲಿ ಪಾಲಿಗೆ ಅವಿಸ್ಮರಣೀಯವಾದವು.

ಅಂಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿರುವ ಆರ್‌ಸಿಬಿಯನ್ನು ಎದುರಿಸಲು ಡೆಲ್ಲಿ ತಂಡವು ಪಂಜಾಬ್ ಎದುರಿನ ಸೋಲನ್ನು ಮರೆತು, ಎಲ್ಲ ವಿಭಾಗಗಳಲ್ಲಿ ಸುಧಾರಣೆಗಳೊಂದಿಗೆ ಕಣಕ್ಕಿಳಿಯುವ ಸವಾಲು ಇದೆ.



ವಿರಾಟ್– ರಾಹುಲ್ ಬಲಾಬಲ
(ಪ್ರಸಕ್ತ ಟೂರ್ನಿ)

ಆಟಗಾರ	ಕೊಹ್ಲಿ	ರಾಹುಲ್
ಪಂದ್ಯಗಳು	7	7
ರನ್	328	357
ಅರ್ಧಶತಕ	3	2
ಶತಕ	-	1
ಶ್ರೇಷ್ಠ	81	152
ಬೌಂಡರಿ	36	36
ಸಿಕ್ಸರ್	12	19

ಆರಂಭಿಕ ಬ್ಯಾಟರ್ ವಿರಾಟ್ ಕೊಹ್ಲಿ, ದೇವದತ್ತ ಪಡಿಕ್ಕಲ್, ನಾಯಕ ರಜತ್, ಟಿಮ್ ಡೇವಿಡ್, ಜಿತೇಶ್ ಶರ್ಮಾ, ಕೃಣಾಲ್ ಪಾಂಡ್ಯ, ರೊಮಾರಿಯೊ ಶೆಫರ್ಡ್ ಅವರು ರನ್‌ಗಳ ಹೊಳೆ ಹರಿಸುತ್ತಲೇ ಇದ್ದಾರೆ. ಒಬ್ಬರು ವಿಫಲರಾದರೂ ಇನ್ನೊಬ್ಬರು ಮಿಂಚುತ್ತಿರುವುದು ತಂಡದ ಬ್ಯಾಟಿಂಗ್ ಬಲ ಹೆಚ್ಚಿಸಿದೆ. ಆರ್‌ಸಿಬಿಯು ಇದುವರೆಗೆ ಆಡಿರುವ ಏಳು ಪಂದ್ಯಗಳ ಪೈಕಿ ಐದರಲ್ಲಿ ಇನ್ನೂರಕ್ಕೂ ಹೆಚ್ಚು ಮೊತ್ತದ ಸ್ಕೋರ್ ದಾಖಲಿಸಿದೆ.

ಕೆ.ಎಲ್. ರಾಹುಲ್

ಆದ್ದರಿಂದ ಡೆಲ್ಲಿ ತಂಡದ ವೇಗಿ ಅಕೀಬ್ ನಬಿ ದಾರ್, ಟಿ. ನಟರಾಜನ್, ಮುಕೇಶ್ ಚೌಧರಿ ಹಾಗೂ ಸ್ಪಿನ್ನರ್ ಕುಲದೀಪ್ ಯಾದವ್ ಅವರು ತಮ್ಮ ಅಸ್ತ್ರಗಳಿಗೆ ಸಾಣೆ ಹಿಡಿಯಲೇಬೇಕಿದೆ. ಇಲ್ಲದಿದ್ದರೆ ದಂಡನೆಗೊಳಗಾಗುವ ಸಾಧ್ಯತೆಗಳಿವೆ.

ಆರ್‌ಸಿಬಿ ಬೌಲಿಂಗ್ ಪಡೆಯೂ ಬಲಿಷ್ಠವಾಗಿದೆ. ಭುವನೇಶ್ವರ್ ಕುಮಾರ್, ಜೋಷ್ ಹ್ಯಾಜಲ್‌ವುಡ್, ಸುಯಶ್ ಶರ್ಮಾ ಹಾಗೂ ಕೃಣಾಲ್ ಅವರು ಸಮರ್ಥರಾಗಿದ್ದಾರೆ. ಆದರೆ ರೊಮಾರಿಯೊ ಅವರು ಬೌಲಿಂಗ್‌ನಲ್ಲಿ ಮಿಂಚುತ್ತಿಲ್ಲ. ಆದ್ದರಿಂದ ಅವರ ಬದಲು ಆಲ್‌ರೌಂಡರ್ ವೆಂಕಟೇಶ್ ಅಯ್ಯರ್ ಅವರನ್ನು ಪರಿಗಣಿಸುವ ಸಾಧ್ಯತೆ ಇದೆ. ಕಳೆದ ಪಂದ್ಯದಲ್ಲಿ ಫಿಲ್ ಸಾಲ್ಟ್ ಗಾಯಗೊಂಡು ಹೊರಗುಳಿದಿದ್ದರಿಂದ ಜೇಕಬ್ ಬೆಥೆಲ್ ಆಡಿದ್ದರು.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಕೆಕೆಆರ್‌ಗೆ 'ಸೂಪರ್ ಓವರ್' ಜಯ

ರಿಂಕು ಸಿಂಗ್, ಸುನಿಲ್ ನಾರಾಯಣ್ ಮಿಂಚು • ರಹಾನೆ ಪಡೆಗೆ ಎರಡನೇ ಗೆಲುವು

ಲಖನೌ (ಪಿಟಿಐ): ಈ ಬಾರಿಯ ಐಪಿಎಲ್‌ನಲ್ಲಿ ಮೊದಲ ಬಾರಿಗೆ ಸೂಪರ್ ಓವರ್‌ವರೆಗೆ ಸಾಗಿದ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಲಖನೌ ಸೂಪರ್ ಜೈಂಟ್ಸ್ ತಂಡದ ವಿರುದ್ಧ ರೋಚಕ ಜಯ ಸಾಧಿಸಿತು.

ಏಕನಾ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಐಪಿಎಲ್ ಪಂದ್ಯದಲ್ಲಿ ಎಡಗೈ ವೇಗಿ ಮೊಹ್ಸಿನ್ ಖಾನ್ ಅವರು ಐದು ವಿಕೆಟ್ ಗೊಂಚಲು ಸಾಧನೆ ಮೆರೆದರು. ಛಲ ಬಿಡದೆ ಆಡಿದ ಕೆಕೆಆರ್‌ನ ರಿಂಕು ಸಿಂಗ್ (ಔಟಾಗದೇ 83; 51ಎ, 4x7, 6x5) ಅರ್ಧಶತಕ ಗಳಿಸಿ, ತಂಡಕ್ಕೆ ಆಸರೆಯಾದರು. ಇದರಿಂದಾಗಿ, ಕೆಕೆಆರ್ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 155 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಲಖನೌ ತಂಡದ ಏಡನ್ ಮರ್ಕರಂ (31; 27ಎ) ಹಾಗೂ ರಿಷಭ್ ಪಂತ್ (42; 38ಎ) ಹೋರಾಟ ತೋರಿದ್ದು ಬಿಟ್ಟರೆ, ಉಳಿದ ಬ್ಯಾಟರ್‌ಗಳು ನಿರೀಕ್ಷಿತ ಕಾಣಿಕೆ ನೀಡಲಿಲ್ಲ. ಕೊನೆಯ ಎಸೆತದಲ್ಲಿ ಗೆಲುವಿಗೆ 7 ರನ್ ಅಗತ್ಯವಿದ್ದಾಗ ಮೊಹಮ್ಮದ್ ಶಮಿ ಸಿಕ್ಸರ್ ಸಿಡಿಸಿದರು. ಹೀಗಾಗಿ, ಪಂದ್ಯವು ಸೂಪರ್ ಓವರ್‌ಗೆ ಸಾಗಿತು.

ಕೆಕೆಆರ್ ತಂಡದ ನಾಯಕ ಅಜಿಂಕ್ಯ ರಹಾನೆ ಅವರು ವೆಸ್ಟ್ ಇಂಡೀಸ್‌ನ ದಿಗ್ಗಜ ಸ್ಪಿನ್ನರ್ ಸುನಿಲ್ ನಾರಾಯಣ್ ಅವರಿಗೆ ಚೆಂಡನ್ನು ನೀಡಿದರು.

ರಿಂಕು ಸಿಂಗ್ 'ಎಕ್ಸ್' ಚಿತ್ರ

ಸುನಿಲ್ ಅವರು ಸೂಪರ್ ಓವರ್‌ನ ಮೊದಲ ಎಸೆತದಲ್ಲಿ ನಿಕೊಲಸ್ ಪೂರನ್ ಅವರನ್ನು ಕ್ಲೀನ್ ಬೌಲ್ಡ್ ಮಾಡಿದರು. ಎರಡನೇ ಎಸೆತದಲ್ಲಿ ಪಂತ್ ಒಂದು ರನ್ ತೆಗೆದುಕೊಂಡರು. ಮೂರನೇ ಎಸೆತದಲ್ಲಿ ಏಡನ್ ಮರ್ಕರಂ ಅವರು ರೋವ್ಮನ್ ಪೊವೆಲ್– ರಿಂಕು ಹಿಡಿದ ಕ್ಯಾಚ್‌ಗೆ ಬಲಿಯಾದರು.

2 ರನ್ ಗುರಿ ಬೆನ್ನಟ್ಟಿದ ಕೋಲ್ಕತ್ತ ತಂಡದ ರಿಂಕು ಮೊದಲ ಎಸೆತದಲ್ಲಿಯೇ ಬೌಂಡರಿ ಗಳಿಸಿ, ಗೆಲುವು ತಂದಿತ್ತರು.

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಪಿಬಿಕೆಎಸ್	7	6	0	1	13	1.333
ಆರ್‌ಸಿಬಿ	7	5	2	0	10	1.101
ಎಸ್‌ಆರ್‌ಎಚ್	8	5	3	0	10	0.815
ಆರ್ ಆರ್	8	5	3	0	10	0.602
ಜಿ ಟಿ	8	4	4	0	8	- 0.475
ಸಿಎಸ್‌ಕೆ	8	3	5	0	6	- 0.121
ಡಿ ಸಿ	7	3	4	0	6	- 0.184
ಕೆಕೆಆರ್	8	2	5	1	5	- 0.751
ಎಂ ಐ	7	2	5	0	4	- 0.736
ಎಲ್‌ಎಸ್‌ಜಿ	8	2	6	0	4	- 1.106
ಆರೆಂಜ್ ಕ್ಯಾಪ್–ಅಭಿಷೇಕ್ ಶರ್ಮಾ, ಎಸ್‌ಆರ್‌ಎಚ್ (380 ರನ್)						
ಪರ್ಪಲ್ ಕ್ಯಾಪ್–ಅನ್ಷುಲ್ ಕಂಬೋಜ್ , ಸಿಎಸ್‌ಕೆ (14 ವಿಕೆಟ್)						

ಸತತ ಐದು ಪಂದ್ಯ ಸೋತ ಲಖನೌ ಅಂಕ ಪಟ್ಟಿಯಲ್ಲಿ ಕೊನೆಯ ಸ್ಥಾನಕ್ಕೆ ಸರಿಯಿತು.

ಇದಕ್ಕೆ ಮೊದಲು, ಟಾಸ್ ಗೆದ್ದ ಲಖನೌ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೊಹ್ಸಿನ್ (4–1–23–5) ದಾಳಿಯ ಮುಂದೆ 93 ರನ್‌ಗಳಿಗೇ 7 ವಿಕೆಟ್ ಕಳೆದುಕೊಂಡಿದ್ದ ತಂಡವು ಮತ್ತಷ್ಟು ಕುಸಿಯದಂತೆ ರಿಂಕು ಸಿಂಗ್ ನೋಡಿಕೊಂಡರು. ರಿಂಕು ಏಕಾಂಗಿ ಹೋರಾಟ ನಡೆಸಿದರು. ಅದರಿಂದಾಗಿ ತಂಡದ ಮೊತ್ತ ಹೆಚ್ಚಿತು. ರಿಂಕು ಬಿಟ್ಟರೆ ಕ್ಯಾಮರಾನ್ ಗ್ರೀನ್ (34 ರನ್) ಅವರೊಬ್ಬರೇ ಎರಡಂಕಿ ಗಳಿಸಿದವರು.

ಸಂಕ್ಷಿಪ್ತ ಸ್ಕೋರು: ಕೋಲ್ಕತ್ತ ನೈಟ್ ರೈಡರ್ಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 155 (ಕ್ಯಾಮರಾನ್ ಗ್ರೀನ್ 34, ರಿಂಕು ಸಿಂಗ್ ಔಟಾಗದೇ 83, ಮೊಹ್ಸಿನ್ ಖಾನ್ 23ಕ್ಕೆ5). ಲಖನೌ ಸೂಪರ್ ಜೈಂಟ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 155 (ಏಡನ್ ಮರ್ಕರಂ 31, ರಿಷಭ್ ಪಂತ್ 42, ಆಯುಷ್ ಬಡೋನಿ 24; ವೈಭವ್ ಅರೋರಾ 24ಕ್ಕೆ2, ವರುಣ್ ಚಕ್ರವರ್ತಿ 33ಕ್ಕೆ2).
ಸೂಪರ್ ಓವರ್: ಲಖನೌ ಸೂಪರ್ ಜೈಂಟ್ಸ್: 0.3 ಓವರ್‌ನಲ್ಲಿ 2 ವಿಕೆಟ್‌ಗಳಿಗೆ 1; ಕೋಲ್ಕತ್ತ ನೈಟ್ ರೈಡರ್ಸ್: 0.1 ಓವರ್‌ನಲ್ಲಿ ವಿಕೆಟ್ ನಷ್ಟವಿಲ್ಲದೆ 4.
ಫಲಿತಾಂಶ: ಕೋಲ್ಕತ್ತ ನೈಟ್ ರೈಡರ್ಸ್ ತಂಡಕ್ಕೆ ಸೂಪರ್ ಓವರ್‌ನಲ್ಲಿ ಗೆಲುವು.
ಪಂದ್ಯದ ಆಟಗಾರ: ರಿಂಕು ಸಿಂಗ್.

ದೀಪ್ತಿಗೆ 5 ವಿಕೆಟ್; ಭಾರತಕ್ಕೆ ಜಯ

ಜೊಹಾನೆಸ್‌ಬರ್ಗ್ (ಪಿಟಿಐ): ಆಲ್‌ರೌಂಡರ್ ದೀಪ್ತಿ ಶರ್ಮಾ ಅವರು ಟಿ20 ಕ್ರಿಕೆಟ್ ಮಾದರಿಯಲ್ಲಿ ಮೊದಲ ಬಾರಿಗೆ ಐದು ವಿಕೆಟ್ ಗೊಂಚಲಿನ ಸಾಧನೆ ಮಾಡಿದರು. ಅವರ ಆಟದ ಬಲದಿಂದ ಭಾರತ ಮಹಿಳಾ ತಂಡವು ದಕ್ಷಿಣ ಆಫ್ರಿಕಾ ವಿರುದ್ಧದ ಟಿ20 ಸರಣಿಯ ನಾಲ್ಕನೇ ಪಂದ್ಯದಲ್ಲಿ 14 ರನ್‌ಗಳ ಗೆಲುವು ಸಾಧಿಸಿತು.

ಶನಿವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಹರ್ಮನ್‌ಪ್ರೀತ್ ಕೌರ್ ಪಡೆ ನಿಗದಿತ ಓವರ್‌ಗಳಲ್ಲಿ 5 ವಿಕೆಟ್‌ಗೆ 185 ರನ್ ಪೇರಿಸಿತು.

ಸವಾಲಿನ ಗುರಿ ಬೆನ್ನಟ್ಟಿದ ಲಾರಾ ವೋಲ್ವಾರ್ಟ್ ಪಡೆಯು ದೀಪ್ತಿ (19ಕ್ಕೆ5) ಅವರ ಕೈಚಳಕದ ಎದುರು 9 ವಿಕೆಟ್‌ಗೆ 171 ರನ್ ಗಳಿಸಿ, ಓವರ್ ಪೂರೈಸಿತು. ಆರಂಭ ಆಟಗಾರ್ತಿ ಸುನೆ ಲ್ಯೂಸ್ (40; 24ಎ) ಹಾಗೂ ಬಲಗೈ ಬ್ಯಾಟರ್ ತಾಜ್ಮಿನ್ ಬ್ರಿಟ್ಸ್ (30; 23ಎ) ಹೋರಾಟ ತೋರಿದರಾದರೂ, ಉಳಿದವರಿಂದ ಬೆಂಬಲ ಸಿಗಲಿಲ್ಲ.

ಇದಕ್ಕೆ ಮೊದಲು, ಜೆಮಿಮಾ ರಾಡ್ರಿಗಸ್ (43; 29ಎ), ದೀಪ್ತಿ (ಔಟಾಗದೇ 36; 26ಎ) ಹಾಗೂ ವಿಕೆಟ್ ಕೀಪರ್–ಬ್ಯಾಟರ್ ರಿಚಾ ಘೋಷ್ (ಔಟಾಗದೇ 34; 18ಎ) ಅವರ ಸಾಹಸದ ಬಲದಿಂದ ಭಾರತ ತಂಡವು 180ರ ಗಡಿ ದಾಟಿತು. ದೀಪ್ತಿ ಹಾಗೂ ರಿಚಾ ಮುರಿಯದ ಆರನೇ ವಿಕೆಟ್ ಜೊತೆಯಾಟದಲ್ಲಿ 38 ಎಸೆತಗಳಲ್ಲಿ 65 ರನ್ ಸೇರಿಸಿದರು.

5 ಪಂದ್ಯಗಳ ಈ ಸರಣಿಯ ಮೊದಲ ಮೂರೂ ಪಂದ್ಯಗಳಲ್ಲಿ ದಕ್ಷಿಣ ಆಫ್ರಿಕಾ ತಂಡವು ಗೆಲುವು ಸಾಧಿಸಿದೆ.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 5 ವಿಕೆಟ್‌ಗೆ 185 (ಜೆಮಿಮಾ ರಾಡ್ರಿಗಸ್ 43, ದೀಪ್ತಿ ಶರ್ಮಾ ಔಟಾಗದೇ 36, ರಿಚಾ ಘೋಷ್ ಔಟಾಗದೇ 34; ಎಲಿಝ್‌ಮರಿ ಮಾರ್ಕ್ಸ್ 28ಕ್ಕೆ2, ಕಾಯ್ಲಾ ರೆನೆಕೆ 10ಕ್ಕೆ2). ದಕ್ಷಿಣ ಆಫ್ರಿಕಾ: 20 ಓವರ್‌ಗಳಲ್ಲಿ 9 ವಿಕೆಟ್‌ಗೆ 171 (ಸುನೆ ಲ್ಯೂಸ್ 40, ತಾಜ್ಮಿನ್ ಬ್ರಿಟ್ಸ್ 30; ದೀಪ್ತಿ ಶರ್ಮಾ 19ಕ್ಕೆ5). ಪಂದ್ಯದ ಆಟಗಾರ್ತಿ: ದೀಪ್ತಿ ಶರ್ಮಾ.

ಹೇಮಂತ್‌ಗೆ ಬೆಳ್ಳಿ

ಕೈರೊ (ಪಿಟಿಐ): ಭಾರತದ ಹೇಮಂತ್ ಬರ್ಮನ್ ಅವರು ಇಲ್ಲಿ ಭಾನುವಾರ ಮುಕ್ತಾಯಗೊಂಡ ಐಎಸ್‌ಎಸ್‌ಎಫ್ ಜೂನಿಯರ್ ಶೂಟಿಂಗ್ ವಿಶ್ವಕಪ್‌ನ ಪುರುಷರ 50 ಮೀ. ರೈಫಲ್ ತ್ರೀ ಪೊಸಿಷನ್ಸ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಜಯಿಸಿದರು. ಜುಹೇರ್ ಖಾನ್– ಆದ್ಯಾ ಕತ್ಯಾಳ್ ಜೋಡಿ ಟ್ರ್ಯಾಪ್ ಮಿಶ್ರ ತಂಡ ವಿಭಾಗದಲ್ಲಿ ರಜತ ಜಯಿಸಿತು.

ಒಟ್ಟು 16 ಪದಕಗಳನ್ನು (5 ಚಿನ್ನ, 6 ಬೆಳ್ಳಿ, 5 ಕಂಚು) ಜಯಿಸಿದ ಭಾರತ ತಂಡವು ಪದಕಪಟ್ಟಿಯಲ್ಲಿ ಅಗ್ರಸ್ಥಾನದೊಂದಿಗೆ ನಗೆ ಬೀರಿತು.

ಪುರುಷರ 50 ಮೀ. ರೈಫಲ್ ತ್ರೀ ಪೊಸಿಷನ್ಸ್ ಸ್ಪರ್ಧೆಯಲ್ಲಿ ಕಜಾಕಸ್ತಾನದ ಒಲೆಗ್ ನೊಸ್ಕೊವ್ (355.6 ಅಂಕ) ವಿಶ್ವದಾಖಲೆಯೊಂದಿಗೆ ಸ್ವರ್ಣ ಜಯಿಸಿದರು.

ರಬಾಡ, ಸಾಯಿ ಮಿಂಚು: ಟೈಟನ್ಸ್ ಗೆಲುವು

ಚೆನ್ನೈ (ಪಿಟಿಐ): ಬ್ಯಾಟರ್‌ಗಳ ಆರ್ಭಟವೇ ತುಂಬಿರುವ ಐಪಿಎಲ್ ಟೂರ್ನಿಯಲ್ಲಿ ಭಾನುವಾರ ಗುಜರಾತ್ ಟೈಟನ್ಸ್ ಬೌಲರ್‌ಗಳು ಮೆರೆದರು. ಅದರಲ್ಲೂ ದಕ್ಷಿಣ ಆಫ್ರಿಕಾದ ಕಗಿಸೊ ರಬಾಡ ಅವರ ಅಮೋಘ ಬೌಲಿಂಗ್ ಮುಂದೆ ಚೆನ್ನೈ ಸೂಪರ್ ಕಿಂಗ್ಸ್ ತಂಡವು ತವರಿನ ಅಂಗಳದಲ್ಲಿ ಸೋಲಿನ ಕಹಿಯುಂಡಿತು.

ಚೆಪಾಕ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 158 ರನ್ ಸಾಧಾರಣ ಮೊತ್ತ ಗಳಿಸಿತು. ಕಗಿಸೊ (25ಕ್ಕೆ3) ಮತ್ತು ಅರ್ಷದ್ ಖಾನ್ (43ಕ್ಕೆ2) ಅಮೋಘ ಬೌಲಿಂಗ್ ಮಾಡಿದರು.

ಸಾಧಾರಣ ಗುರಿ ಬೆನ್ನಟ್ಟಿದ ಗುಜರಾತ್ ತಂಡವು 16.4 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 162 ರನ್ ಗಳಿಸಿತು. ಆರಂಭಿಕ ಬ್ಯಾಟರ್ ಸಾಯಿ ಸುದರ್ಶನ್ (87; 46ಎ, 4x4, 6x7) ಹಾಗೂ ಶುಭಮನ್ ಗಿಲ್ (33; 23ಎ) ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 58 ರನ್ ಸೇರಿಸಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ ಸಾಯಿ ಮತ್ತು ಜೋಸ್ ಬಟ್ಲರ್ 97 ರನ್ ಗಳಿಸಿ ತಂಡದ ಜಯವನ್ನು ಸುಲಭಗೊಳಿಸಿದರು..

ಕಗಿಸೊ ರಬಾಡ ಪಿಟಿಐ ಚಿತ್ರ

ಋತುರಾಜ್ ಮಿಂಚು: ಚೆನ್ನೈ ತಂಡದ ನಾಯಕ ಋತುರಾಜ್ ಗಾಯಕವಾಡ (ಅಜೇಯ74; 60ಎ, 4x6, 6x4) ಅವರು ಲಯ ಕಂಡುಕೊಂಡರು. ಸಂಜು ಸ್ಯಾಮ್ಸನ್ (11 ; 15ಎ) ಅವರನ್ನು ನಾಲ್ಕನೇ ಓವರ್‌ನಲ್ಲಿ ಔಟ್ ಮಾಡುವ ಮೂಲಕ ರಬಾಡ ಖಾತೆ ತೆರೆದರು. ನಂತರ ಊರ್ವಿಲ್ ಪಟೇಲ್ (4 ರನ್) ಮತ್ತು ಕಾರ್ತಿಕ್ ಶರ್ಮಾ (15 ರನ್) ಅವರ ವಿಕೆಟ್ ಕೂಡ ತಮ್ಮ ಬುಟ್ಟಿಗೆ ಹಾಕಿಕೊಂಡರು. ಮೊಹಮ್ಮದ್ ಸಿರಾಜ್ ಅವರು ಸರ್ಫರಾಜ್ ಖಾನ್ ಅವರಿಗೆ ಖಾತೆ ತೆರೆಯುವ ಅವಕಾಶವನ್ನೇ ನೀಡಲಿಲ್ಲ. ಶಿವಂ ದುಬೆ ಮತ್ತು ಜೆಮಿ ಒವರ್ಟನ್ ಅವರ ವಿಕೆಟ್ ಗಳಿಸಿದ ಅರ್ಷದ್ ಖಾನ್ ಮಿಂಚಿದರು.

ಸಂಕ್ಷಿಪ್ತ ಸ್ಕೋರು: ಚೆನ್ನೈ ಸೂಪರ್‌ಕಿಂಗ್ಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 158 (ಋತುರಾಜ್ ಗಾಯಕವಾಡ ಔಟಾಗದೇ 74, ಶಿವಂ ದುಬೆ 22, ಜೆಮಿ ಒವರ್ಟನ್ 18, ಕಗಿಸೊ ರಬಾಡ 25ಕ್ಕೆ3, ಅರ್ಷದ್ ಖಾನ್ 43ಕ್ಕೆ2) ಗುಜರಾತ್ ಟೈಟನ್ಸ್: 16.4 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 162 (ಸಾಯಿ ಸುದರ್ಶನ್ 87, ಶುಭಮನ್ ಗಿಲ್ 33, ಜೋಸ್ ಬಟ್ಲರ್ ಔಟಾಗದೇ 39, ಅಕೀಲ್ ಹುಸೇನ್ 46ಕ್ಕೆ1, ನೂರ್ ಅಹಮದ್ 29ಕ್ಕೆ1)
ಫಲಿತಾಂಶ:ಗುಜರಾತ್ ಟೈಟನ್ಸ್ 8 ವಿಕೆಟ್‌ಗಳ ಜಯ.
ಪಂದ್ಯದ ಆಟಗಾರ: ಕಗಿಸೊ ರಬಾಡ.

*₹ 10.99 lakh for e VITARA Delta. Battery EMI: ₹ 3.99/km (subject to financier terms). Taxes and statutory charges are extra. Visit dealership for full T&Cs. | *As certified by Kantar IMRB for an OEM platform for end-to-end usage as on November 28, 2025. | *543 km range: Certified range; actual results may vary by driving conditions and usage. | *ADAS features are for driver assistance only. Driver is responsible for safe and attentive driving. | *Always wear your seatbelt. | *Mentioned ownership plan is for e VITARA Delta variant. Calculation is done assuming vehicle is running 60 km per day, excluding charging cost. Valid on retail sales for the e VITARA till 30th April '26, capped at 1 000 units of electricity (kWh) per customer or 1 Year from the purchase of the vehicle, whichever is earlier. Assured buyback plan is available on payment basis with the option of 3 years/45 000 km or 4 years/60 000 km ownership plans (whichever is earlier). The program is offered through an Insurance company. e VITARA comes with standard warranty of 3 years/1 00 000 km with an option of extending the same on payment basis to 5 years/1 40 000 km and service activated coverage for 6th to 8th year for EV related components.